ಶ್ರೀವಿಜಯನ

ಕವಿರಾಜಮಾರ್ಗಂ

ಪದಚ್ಛೇದ, ತಾತ್ಪರ್ಯ, ಲಘುಟಿಪ್ಪಣಿ ಮತ್ತು ಇಂಗ್ಲಿಷ್ ಅನುವಾದ

Śrīvijaya's
KAVIRĀJAMĀRGAṀ

[The Way of the King of Poets]

English Translation with notes



ಆರ್ವಿಯಸ್ ಸುಂದರಂ R.V.S.SUNDARAM

ದೇವೇನ್ ಎಂ.ಪಟೇಲ್ DEVEN M. PATEL

ಕವಿರಾಜಮಾರ್ಗಂ
KAVIRĀJAMĀRGAṀ

ಪ್ರಥಮಪರಿಚ್ಛೇದಂ
CHAPTER ONE

ದೋಷಾದೋಷಾನುವರ್ಣನನಿರ್ಣಯಂ
Determining Faults (*doṣa*) and Non-Faults (*adoṣa*) in Poetry

ಮಂಗಳಾಚರಣೆ
INVOCATION

ಕಂ. ಶ್ರೀ ತಳ್ತುರದೊಳ್ ಕೌಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ
ಪ್ರೀತಿಯಿನಾವನನಗಲಳ್
ನೀತಿನಿರಂತರನುದಾರನಾ ನೃಪತುಂಗಂ ೧

ಕೃತಕೃತ್ಯಮಲ್ಲನಪ್ರತಿ
ಹತವಿಕ್ರಮನೊಸೆದು ವೀರನಾರಾಯಣನ
ಪ್ಪತಿಶಯಧವಳಂ ನಮಗೀ
ಗತರ್ಕಿತೋಪಸ್ಥಿತಪ್ರತಾಪೋದಯಮಂ ೨

ಶ್ರೀ ತಳ್ತ ಉರದೊಳ್ ಕೌಸ್ತುಭಜಾತ ದ್ಯುತಿ ಬಳಸಿ ಕಾಂಡಪಟದಂತೆ ಇರೆ ಸಂಪ್ರೀತಿಯಿನ್ ಆವನನ್ ಅಗಲಳ್, ನೀತಿ ನಿರಂತರನ್, ಉದಾರನ್, ಆ ನೃಪತುಂಗನ್

ಕೃತಕೃತ್ಯ ಮಲ್ಲನ್, ಅಪ್ರತಿಹತ ವಿಕ್ರಮನ್, ಒಸೆದು ವೀರ ನಾರಾಯಣನಪ್ಪ ಅತಿಶಯ ಧವಳನ್, ನಮಗೆ ಈಗೆ ಅತರ್ಕಿತ ಉಪಸ್ಥಿತ ಪ್ರತಾಪ ಉದಯಮನ್

ಕೌಸ್ತುಭದಿಂದ ಉಂಟಾದ ಕಾಂತಿ ಸುತ್ತುವರಿದು ತೆರೆಯಂತಿರಲು, ಲಕ್ಷ್ಮಿ ವಕ್ಷಸ್ಥಲದಲ್ಲಿ ನೆಲಸಿ ಪ್ರೀತಿಯಿಂದ ಯಾರನ್ನು ಅಗಲದೆ ಇರುವಳೋ, ಆ ನೀತಿನಿರಂತರನು, ಉದಾರನು ಆದ ನೃಪತುಂಗನು, ಕೃತಕೃತ್ಯಮಲ್ಲನು, ಅಪ್ರತಿಹತವಿಕ್ರಮನು, ವೀರನಾರಾಯಣನು ಆದ ಅತಿಶಯಧವಳನು ಸಂತೋಷದಿಂದ ನಮಗೆ ನಿಸ್ಸಂಶಯವಾದ ಸಾಹಸದ ಏಳ್ಗೆಯನ್ನು ಒದಗಿಸಲಿ

ಕವಿರಾಜಮಾರ್ಗದ ಮೊದಲ ಎರಡು ಪದ್ಯಗಳು ರಾಷ್ಟ್ರಕೂಟ ರಾಜ ನೃಪತುಂಗನಿಗೂ ವಿಷ್ಣುವಿಗೂ ಅಭೇದವನ್ನು ಕಲ್ಪಿಸುತ್ತವೆ. ರಾಜ್ಯಲಕ್ಷ್ಮಿಯನ್ನು ಧರಿಸಿದ ನೃಪತುಂಗನಿಗೂ ಶ್ರೀದೇವಿಯನ್ನು ಧರಿಸಿದ ವಿಷ್ಣುವಿಗೂ ಇಲ್ಲಿ ಹೇಳಿರುವ ಎಲ್ಲ ಬಿರುದುಗಳೂ ಸರಿಹೊಂದುತ್ತವೆ. ಕೌಸ್ತುಭ ವಿಷ್ಣುವಿಗೆ ಅಲಂಕಾರ. ಭೂಪತಿ ವಿಷ್ಣುವಿಗೆ ಸಮಾನನಾದುದರಿಂದ ನೃಪತುಂಗನಿಗೂ ಇದು ಅಲಂಕಾರವೇ ಆಗುತ್ತದೆ.

ಸಾಹಿತ್ಯ ಕೃತಿಯನ್ನು ಶ್ರೀಕಾರದಿಂದ ಪ್ರಾರಂಭ ಮಾಡುವ ಸಂಪ್ರದಾಯವನ್ನು ಇಲ್ಲಿ ಅನುಸರಿಸಲಾಗಿದೆ. ಲಕ್ಷಣಗ್ರಂಥಗಳಿಗೆ ಚಿಕ್ಕದಾದ ಮತ್ತು ಚೊಕ್ಕವಾದ ಕಂದಪದ್ಯವನ್ನು ಬಳಸುವ ಸಂಪ್ರದಾಯವೂ ಕವಿರಾಜಮಾರ್ಗದ ಕಾಲದಿಂದಲೇ ಕಾಣುತ್ತದೆ.

1. Nṛpatuṅga, always ethical (*nīti-nirantara*) and liberal (*udāra*), has Lakṣmī, the goddess of wealth, seated on his chest, surrounded by a curtain of light emitting out from the *kaustubha* gem. Out of love, she does not part from him.

2. That king is an accomplished wrestler *(kṛtakṛtya-malla)* and no one can challenge his valor. Let the heroic Vīranārāyaṇa, bright with whiteness (*atiśaya-dhavaḷa)*, bestow upon us a blazing might that is beyond question.

The first two verses of the invocation identify the Rāṣṭrakūṭa king Nṛpatuṅga with Viṣṇu and give epithets of the king. The tradition of beginning any work of art with Śrī (a symbol of auspiciousness and also Lakṣmi, the goddess of wealth) is followed here. *Kavirājamārgam,* as any other treatise in Kannada, uses *kanda* meter, one of the shortest meters used in the language, to maintain brevity and crispness.

ಶ್ರೀ ವಿಶದವರ್ಣೆ ಮಧುರಾ
ರಾವೋಚಿತೆ ಚತುರರುಚಿರಪದರಚನೆ ಚಿರಂ
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ ೩

ಶ್ರೀ ವಿಶದವರ್ಣೆ, ಮಧುರ ಆರಾವ ಉಚಿತೆ, ಚತುರ ರುಚಿರ ಪದರಚನೆ, ಚಿರಂದೇವಿ, ಸರಸ್ವತಿ ಹಂಸೀಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್

ಶ್ರೀಯುತಳು, ಸ್ವಚ್ಛವಾದ ಬಣ್ಣವುಳ್ಳವಳು, ಮಧುರವಾದ ಶಬ್ದದವಳು, ಚತುರವಾದ ಮತ್ತು ಸುಂದರವಾದ ಪದರಚನೆಯುಳ್ಳವಳು, ಶಾಶ್ವತತ್ವ ವುಳ್ಳವಳು ಆದ ಸರಸ್ವತಿ ನನ್ನ ಮಾನಸದಲ್ಲಿ ಹಂಸಿಯಂತೆ ನೆಲೆಗೊಳ್ಳಲಿ.

ಸರಸ್ವತಿಯ ಪ್ರಾರ್ಥನೆ ಕಾವ್ಯಾದರ್ಶದ ಶ್ಲೋಕವನ್ನು ಅನುಸರಿಸುತ್ತದೆ (೧.೧): ಚತುರ್ಮುಖ ಮುಖಾಂಭೋಜವನಹಂಸವಧೂರ್ಮಮ।ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ ॥

ಸಂಸ್ಕೃತದಲ್ಲಿರುವ 'ಚತುರ್ಮುಖ'ನನ್ನು ಬಿಟ್ಟು ಶ್ರೀವಿಜಯನು ಮಧುರಾ ರಾವೋಚಿತೆ, ಚತುರರುಚಿರಪದರಚನೆ, ಚಿರಂದೇವಿ ಎಂಬ ವಿಶೇಷಣಗಳನ್ನು ಸೇರಿಸಿದ್ದಾನೆ.

3. May the sacred and eternal Sarasvatī – with her clear complexion, her appealing sounds, and her clever and beautiful words – be seated firmly in my mind in the form of the swan (*haṁsa*).

The prayer to Sarasvatī here follows the verse in *Kāvyādarśa* (1.1): *catur-mukha-mukhāmbhōja-vana-hamsa-*

vadhūr mama / mānasē ramatām nityam sarva-śuklā sarasvatī // The *haṃsa* is often translated as "swan" but is probably referring to the Indian goose. The *haṃsa*, usually invoked as a sacred bird, represents the quality of discrimination (*viveka*), imagined to be able to separate milk from water and, by extension, the "real" from the "unreal."

ಪೂರ್ವಕವಿಪ್ರಶಂಸೆ

Appreciation of Ancient Poets

ಪರಮಾಲಂಕಾರೋಚಿತ
ವಿರಚನೆಗಳ್ ನೆಗಱ್ದುಮಾರ ವದನೋದರದೊಳ್
ನೆರಮಕ್ಕಾಪರಮಕವೀ
ಶ್ವರರೆಮಗೀ ಕೃತಿಯೊಳಕೃತಕಾಚಾರಪರರ್ ೪

ಪರಮ ಅಲಂಕಾರ ಉಚಿತ ವಿರಚನೆಗಳ್ ನೆಗಱ್ದುಮ್ ಆರ ವದನ ಉದರದೊಳ್ ನೆರಮಕ್ಕೆ ಆ ಪರಮ ಕವೀಶ್ವರರ್ ಎಮಗೆ ಈ ಕೃತಿಯೊಳ್ ಅಕೃತಕ ಆಚಾರಪರರ್

ಉತ್ತಮ ಅಲಂಕಾರವೆಂದೆನಿಸುವ ಶ್ರೇಷ್ಠರಚನೆಗಳು ಯಾರ ಬಾಯಲ್ಲಿ ಮೆರೆಯುವುವೋ ಕೃತ್ರಿಮವಲ್ಲದ ಸಂಪ್ರದಾಯಗಳನ್ನು ಅನುಸರಿಸುವ ಆ ಉತ್ತಮ ಕವಿಗಳು ನಮಗೆ ಈ ಕೃತಿಯಲ್ಲಿ ನೆರವಾಗಲಿ.

"ಪರಮಾಲಂಕಾರೋಚಿತ ವಿರಚನೆಗಳ್" ಎಂದಾಗ ಆಲಂಕಾರಿಕರಿಂದ ನಿರ್ದೇಶಿತವಾದ ಮಾರ್ಗದಲ್ಲಿ ರಚಿತವಾದ ಶ್ರೇಷ್ಠರಚನೆಗಳೆಂಬ ಸೂಚನೆ ಇದೆ. ದಂಡಿಯ ಶ್ಲೋಕವನ್ನು ನೋಡಿದರೆ ಈ ಅರ್ಥ ಸರಿಯೆನಿಸುತ್ತದೆ (೧.೨) : ಪೂರ್ವಶಾಸ್ತ್ರಾಣಿ ಸಂಹೃತ್ಯ ಪ್ರಯೋಗಾನುಪಲಕ್ಷ್ಯಚ । ಯಥಾ ಸಾಮರ್ಥ್ಯ ಮಸ್ಮಾಭಿಃ ಕ್ರಿಯತೇ ಕಾವ್ಯಲಕ್ಷಣಮ್॥ (ಹಿಂದಿನ ಶಾಸ್ತ್ರಗ್ರಂಥಗಳನ್ನು ಸ್ವೀಕರಿಸಿ, ಪ್ರಯೋಗಗಳನ್ನು ಗಮನಿಸಿ ಕಾವ್ಯಲಕ್ಷಣವನ್ನು ಯಥಾಶಕ್ತಿ ಹೇಳುತ್ತೇನೆ).

4. May the best poets – possessing a depth of expression, because of their skillful use of figures of speech (*alaṅkāra*) – help us with our poetry compositions.

This opinion suggests that the best among the poets create works that are based on their own aesthetic experience, gained from studying the works of eminent poets. Daṇḍin, on the other hand, declares that he wishes to elucidate the characteristics of poetry by taking into consideration the treatises and suggested usages of earlier scholars of poetry and poetics (1.2).

ನೃಪತುಂಗನ ಆಸ್ಥಾನ
The Court of Nṛpatuṅga

ಶ್ರುತದೊಳ್ ಭಾವಿಸಿ ನೋಟಿಕ್ಕೊಡೆ
ಸತತಂ ಕವಿವೃಷಭರಾ ಪ್ರಯೋಗಂಗಳೊಳಂ
ಕೃತಪರಿಚಯಬಲನಪ್ಪನ
ನತಿಶಯಧವಳನ ಸಭಾಸದರ್ ಮನ್ನಿಸುವರ್ ೫

ಶ್ರುತದೊಳ್ ಭಾವಿಸಿ ನೋಟಿಕ್ಕೊಡೆ ಸತತಮ್ ಕವಿವೃಷಭರಾ ಪ್ರಯೋಗಂಗಳೊಳಮ್ ಕೃತ ಪರಿಚಯಬಲನಪ್ಪನನ್ ಅತಿಶಯ ಧವಳನ ಸಭಾಸದರ್ ಮನ್ನಿಸುವರ್

ಯೋಚನೆಮಾಡಿ ನೋಡಿದರೆ, ಕವಿಶ್ರೇಷ್ಠರ ಪ್ರಯೋಗಗಳಲ್ಲಿ ಹೆಚ್ಚಿನ ಪರಿಚಯ ಬಲವಿರುವವನನ್ನು ಮಾತ್ರ ಯಾವಾಗಲೂ ಅತಿಶಯಧವಳನ (ನೃಪತುಂಗನ) ಸಭಾಸದರು ಮನ್ನಿಸುವರು.

5. To our knowledge, it is heard that people in the court of Nṛpatunga (*atiśayadhavaḷa*), whose power is well known, always respect those who have a strong familiarity with the usages of the best poets.

The expression *atiśaya-dhavaḷa*, which means "bright with whiteness" or "excessively white or pure," is an epithet of Nṛpatuṅga.

ವ್ಯಾಕರಣ ಕಾವ್ಯನಾಟಕ
ಲೋಕಕಳಾಸಮಯಮಾದಳಂಕೃತಿಗಳೊಳಂ
ವ್ಯಾಕುಳನಲ್ಲದನೇಕೆ ವಿ
ವೇಕಬೃಹಸ್ಪತಿಯ ನಗರಮಂ ಪುಗುತರ್ಪಂ ೬

ವ್ಯಾಕರಣ, ಕಾವ್ಯ, ನಾಟಕ, ಲೋಕಕಳಾಸಮಯಮ್ ಆದ ಅಳಂಕೃತಿಗಳೊಳಮ್ ವ್ಯಾಕುಳನ್ ಅಲ್ಲದನ್ ಏಕೆ ವಿವೇಕ ಬೃಹಸ್ಪತಿಯ ನಗರಮನ್ ಪುಗುತರ್ಪನ್

ವ್ಯಾಕರಣ, ಕಾವ್ಯ, ನಾಟಕ, ಲೋಕಕಲಾವಿದ್ಯೆಗಳ ಸೌಂದರ್ಯದಲ್ಲಿ ಮನಸ್ಸಿಲ್ಲದವನು ವಿವೇಕ ಬೃಹಸ್ಪತಿಯ (ನೃಪತುಂಗನ) ನಗರದಲ್ಲಿ ಏಕೆ ಪ್ರವೇಶಿಸುತ್ತಾನೆ?

6. How can those who are not interested in ornamentation – which includes grammar, poetry, drama, and the conventions of the worldly arts – enter the city of the connoisseur Bṛhaspati, priest of the gods?

Mānyakhēṭa, the political capital of Nṛpatuṅga, was also a center of scholarship. This verse refers to the kind of scholars who could get entry into the court of Nṛpatuṅga.

ಅಪಂಡಿತರ ಸ್ವಭಾವ

The Unscholarly Nature of People

ಮೃಗಪಶುಶಕುನಿಗಣಂಗಳೊ
ಳಗಣಿತನಿಜಜಾತಿಜನಿತಭಾಷೆಗಳೆಂದುಂ
ನೆಗಟ್ಟಿಂತಿರೆ ನರರೊಳಮ
ಪ್ರಗಲ್ಭವಚನಪ್ರವೃತ್ತಿನೆಗಟ್ಟುಂ ಸಹಜಂ ೭

ಮೃಗ, ಪಶು, ಶಕುನಿಗಣಂಗಳೊಳ್ ಅಗಣಿತ ನಿಜ ಜಾತಿ ಜನಿತ ಭಾಷೆಗಳ್ ಎಂದುಮ್ ನೆಗಟ್ಟು ಅಂತು ಇರೆ ನರರೊಳಮ್ ಅಪ್ರಗಲ್ಭ ವಚನ ಪ್ರವೃತ್ತಿ ನೆಗಟ್ಟುಮ್ ಸಹಜಮ್

ವನ್ಯಮೃಗಗಳು, ಇತರ ಪ್ರಾಣಿಗಳು ಮತ್ತು ಹಕ್ಕಿಗಳಲ್ಲಿ ತಮ್ಮ ತಮ್ಮ ಜಾತಿಗೆ ಅನುಗುಣವಾದ ಲೆಕ್ಕಕ್ಕೆ ಮೀರಿದ ಭಾಷೆಗಳಿರುವುದು ಪ್ರಸಿದ್ಧ. ಅದರಂತೆಯೇ ಮಾನವರಲ್ಲಿಯೂ ಪ್ರೌಢಿಮೆಯಿಲ್ಲದ ಮಾತುಗಳಿರುವುದು ಸ್ವಾಭಾವಿಕ.

7. As there are countless languages native to wild animals and other animals, as to with birds, so too is there a natural tendency among human beings toward unsophisticated speech.

ಗುಣಮಿದು ದೋಷಮಿದೆಂಬೀ
ಗಣಿದಮನೆತ್ತಱಿಗುಮಶ್ರುತಪ್ರಕೃತಿಜನಂ
ತೃಣಸಸ್ಯಘಾಸವಿಷಯ
ಪ್ರಣಯಂ ಸಮವೃತ್ತಿಯಪ್ಪವೋಲ್ ಮೃಗಗಣದೊಳ್ ೮

ಗುಣಮ್ ಇದು, ದೋಷಮ್ ಇದು ಎಂಬ ಈ ಗಣಿದಮನ್ ಎತ್ತ ಅಱಿಗುಮ್ ಅಶ್ರುತ ಪ್ರಕೃತಿ ಜನಮ್, ತೃಣ, ಸಸ್ಯ, ಘಾಸ ವಿಷಯ ಪ್ರಣಯಮ್ ಸಮವೃತ್ತಿಯಪ್ಪವೋಲ್ ಮೃಗಗಣದೊಳ್

ಮೃಗಸಮೂಹದಲ್ಲಿ ಹುಲ್ಲು, ಸಸ್ಯ, ಮೇವು– ಇವುಗಳ ವಿಷಯದಲ್ಲಿ ಸಮಾನವಾದ ಆಸೆ ಇರುವಂತೆಯೇ ಅವಿದ್ಯಾವಂತರಾದ ಮುಗ್ಧ ಜನರಲ್ಲಿ ಇದು ಗುಣ, ಇದು ದೋಷ ಎಂಬ ವಿವೇಚನೆ ಹೇಗಿರುತ್ತದೆ?

ದಂಡಿ ಅವಿದ್ಯಾವಂತರನ್ನು ಅಂಧರೊಂದಿಗೆ ಹೋಲಿಸಿದ್ದಾನೆ. (೧.೮). ಶ್ರೀವಿಜಯ ಅವರನ್ನು ವಿವೇಚನೆ ಇಲ್ಲದ ಪ್ರಾಣಿಗಳಿಗೆ ಹೋಲಿಸಿದ್ದಾನೆ.

8. How can unlearned people discriminate between correct and incorrect usages? It is akin to animals that, in the same manner, love to indiscriminately eat grass, plants, and fodder.

Daṇḍin identifies unscholarly people with the blind (1.8). Śrīvijaya identifies them with undiscriminating animals.

ಕಾವ್ಯಾಭ್ಯಾಸ
Poetic Exercise

ಅದಱಿಂ ಪರಮಾಗಮಕೋ
ವಿದನಪ್ಪುದು ಪೂರ್ವಕಾವ್ಯ ರಚನೆಗಳಂ ತಾಂ
ಮೊದಲೊಳ್ ಕಲ್ತಂಗಲ್ಲದೆ
ಪದದೊಳ್ ಜಾಣುಂ ಬೆಡಂಗುಮಕ್ಕುಮೆ ಕೃತಿಯೊಳ್ ೯

ಅದಱಿನ್ ಪರಮ ಆಗಮ ಕೋವಿದನ್ ಅಪ್ಪುದು. ಪೂರ್ವಕಾವ್ಯ ರಚನೆಗಳನ್ ತಾನ್ ಮೊದಲೊಳ್ ಕಲ್ತಂಗೆ ಅಲ್ಲದೆ ಪದದೊಳ್ ಜಾಣುಮ್ ಬೆಡಂಗುಮ್ ಅಕ್ಕುಮೆ ಕೃತಿಯೊಳ್

ಆದುದರಿಂದ, ಕವಿ ಶ್ರೇಷ್ಠ ಶಾಸ್ತ್ರಗಳಲ್ಲಿ ನುರಿತವನಾಗಬೇಕು. ಪೂರ್ವಕಾವ್ಯರಚನೆಗಳನ್ನು ತಾನು ಮೊದಲು ಕಲಿತವನಿಗಲ್ಲದೆ ಕೃತಿಯ ಪದಗಳಲ್ಲಿ ಜಾಣ್ಮೆ ಮತ್ತು ಸೊಬಗು ಬರುತ್ತದೆಯೇ?

9. One has to be a master of the best treatises of tradition. Without first being well-versed in earlier compositions, how can one create a work of art with words used with skill and sparkle?

ಜಡಜನಮುಮೆಲ್ಲನೋದಂ
ತಡೆಯದೆ ಕಲ್ಗುಂ ಗುರೂಪದೇಶಕ್ರಮದಿಂ
ನುಡಿವಲ್ಮೆಯಲ್ತದೇಂ ಕ
ಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ ೧೦

ಜಡಜನಮುಮ್ ಎಲ್ಲನ್ ಓದನ್ ತಡೆಯದೆ ಕಲ್ಗುಮ್ ಗುರೂಪದೇಶ ಕ್ರಮದಿನ್ ನುಡಿ ಬಲ್ಮೆ ಅಲ್ತು ಅದು ಏನ್ ಕಲ್ತೊಡಮ್ ಓದುವುವು ಅಲ್ತೆ ಗಿಳಿಗಳುಮ್ ಪುರುಳಿಗಳುಮ್

ಮಂದಬುದ್ಧಿಯವರು ಕೂಡ ಗುರುಗಳ ಉಪದೇಶದಿಂದ ಬೇಗನೆ ಎಲ್ಲ ವಿದ್ಯೆಗಳನ್ನೂ ಕಲಿಯಬಹುದು. ಆದರೆ ಅದು ಪಾಂಡಿತ್ಯವೆನಿಸಿಕೊಳ್ಳು ವುದಿಲ್ಲ. ಗಂಡು ಮತ್ತು ಹೆಣ್ಣು ಗಿಳಿಗಳು ಕಲಿತ ಮಾತುಗಳನ್ನು ಹಾಗೆಯೇ ಉಚ್ಚರಿಸುವುದಿಲ್ಲವೆ?

10. Even the dull-witted learn quickly from a teacher, through instruction. Parrots too, both male and female ones, learn and repeat what they hear. But this does not lead to mastery in speech.

Śrīvijaya follows Bhāmaha in referring to dull-witted people (1.5). But, Śrīvijaya adds the example of a parrot to support his view.

ಕಾವ್ಯಹೇತುಗಳು

Motivations for Composing Poetry

ಪ್ರತಿಭಾವತ್ತ್ವಮುಮಕೃತಕ
ಚತುರತೆಯುಂ ಪರಮಬುಧಜನೋಪಾಸನಮುಂ
ಶ್ರುತಪರಿಚಯಮುಂ ತರ್ಕುಂ
ಪ್ರತೀತಿಯಂ ವಾಗ್ವಿದಗ್ಧತಾನಿಪುಣತೆಯೊಳ್ ೧೧

ಪ್ರತಿಭಾವತ್ತ್ವಮುಮ್ ಅಕೃತಕ ಚತುರತೆಯುಮ್ ಪರಮ ಬುಧಜನ ಉಪಾಸನಮುಮ್ ಶ್ರುತಪರಿಚಯಮುಮ್ ತರ್ಕುಮ್ ಪ್ರತೀತಿಯನ್ ವಾಗ್ವಿದಗ್ಧತಾ ನಿಪುಣತೆಯೊಳ್

ಪ್ರತಿಭೆ, ಕೃತಕವಲ್ಲದ ಚತುರತೆ, ಶ್ರೇಷ್ಠಪಂಡಿತರ ಸೇವೆ, ಶಾಸ್ತ್ರಗಳ ಪರಿಚಯ, ವಾಕ್ಪ್ರೌಢಿಮೆಯ ನಿಪುಣತೆಯನ್ನು ಪ್ರಸಿದ್ಧವಾಗುವಂತೆ ಮಾಡುತ್ತವೆ.

ಕಾವ್ಯಾದರ್ಶದಲ್ಲಿ ಸಹಜವಾದ ಪ್ರತಿಭೆ, ನಿರ್ದುಷ್ಟವಾದ ಶಾಸ್ತ್ರಪಾಂಡಿತ್ಯ, ನಿರಂತರ ಅಭ್ಯಾಸ ಕಾವ್ಯಹೇತುಗಳೆಂದು ಹೇಳಲಾಗಿದೆ (೧.೧೦೩): ನೈಸರ್ಗಿಕೀ ಚ ಪ್ರತಿಭಾ ಶ್ರುತಂ ಚ ಬಹುನಿರ್ಮಲಮ್ । ಅಮಂದಶ್ಚಾಭಿಯೋಗೋಸ್ಯಾಃ ಕಾರಣಂ ಕಾವ್ಯಸಂಪದಃ ॥ ಶ್ರೀವಿಜಯ ಕೃತಕವಲ್ಲದ ಚತುರತೆಯನ್ನು ಸೇರಿಸಿರುವುದನ್ನು ಗಮನಿಸಬಹುದು.

11. The skill of polished expression is brought about through creativity, un-artificial technique, training with supremely learned scholars, and acquaintance with authoritative texts.

Śrīvijaya follows *Kāvyādarśa* while mentioning the motivations for composing poetry (1-103): *naisargikī ca pratibhā śrutam ca bahu-nirmalam / amandaś cābhiyōgō ‘syāḥ kāraṇaṁ kāvya-sampadaḥ* // It is to be noted that Śrīvijaya adds “un-artificial technique” and “training with learned supremely scholars” as motivations [Compare Bhāmaha’s words [1.10]: *śabdābhidhēyē vijñāya kṛtvā tad-vid upāsanām*].

ಸುಕವಿ–ಕುಕವಿ

Good and Bad Poets

ಪಸರಿಸಿದಾ ಬಗೆ ಮನಮಂ
ಪೊಸತಾಗೆ ನೆಗಟ್ಚಲಱಿಯನಾ ರಚನೆಯೊಳೇಂ
ಬಸನಂ ತನಗಿನಿತಱ ಬೇ
ವಸಮೇಂ ಕವರ್ದರುಮೊಳರೆ ಕವಿಯಲ್ಲದರಂ ೧೨

ಪಸರಿಸಿದ ಆ ಬಗೆ ಮನಮನ್ ಪೊಸತಾಗೆ ನೆಗಟ್ಚಿಲ್ ಅಱಿಯನ್ ಆ ರಚನೆಯೊಳ್ ಏನ್ ಬಸನಮ್ ತನಗೆ ಇನಿತಱ ಬೇವಸಮ್ ಏನ್ ಕವರ್ದರುಮ್ ಒಳರೆ ಕವಿ ಅಲ್ಲದರಮ್

ಮನಸ್ಸಿನಲ್ಲಿ ವಿಸ್ತರಿಸಿದ ಆಲೋಚನೆ ಹೊಸದಾಗಿ ಮೆರೆಯುವಂತೆ ಮಾಡಲಾರದವನಿಗೆ ಅಂಥ ರಚನೆಯನ್ನು ಮಾಡುವ ಚಟ ಏಕೆ? ಕವಿಯಲ್ಲದವರಿಂದ ಯಾರಾದರೂ ಏನಾದರೂ ಕಿತ್ತುಕೊಳ್ಳುವರೇ?

ಭಾಮಹ ಇದೇ ವಿಷಯವನ್ನು ಸ್ಪಷ್ಟಪಡಿಸುತ್ತಾ “ಕವಿತ್ವ ಬರೆಯದಿದ್ದರೆ ಯಾವ ಪಾಪವೂ ಇಲ್ಲ, ವ್ಯಾಧಿ ಬರುವುದಿಲ್ಲ, ಯಾರೂ ಶಿಕ್ಷೆ ವಿಧಿಸುವುದಿಲ್ಲ. ಆದರೆ ಕೆಟ್ಟ ಕವಿತ್ವ ಮರಣಕ್ಕೆ ಸಮಾನ” ಎಂದಿದ್ದಾನೆ (೧.೧೨) : ನಾಕವಿತ್ವಮ ಧರ್ಮಾಯ ವ್ಯಾಧಯೇ ದಂಡನಾಯವಾ । ಕುಕವಿತ್ವಂ ಪುನಃ ಸಾಕ್ಷಾನ್ಮೃತಿಮಾ ಹುರ್ಮನೀಷಿಣಃ ॥

12. If one is not able to present fresh perspectives, why should he compose a poem? Why should he strive to do such a thing? Nobody will blame such a “non-poet” for not writing a poem.

Bhāmaha is more clear when he says that it is not a sin if poetry is not created, but bad poetry is comparable to death (1.12): *nākavitvam adharmāyā vyādhayē daṇḍanāya vā / kukavitvam punaḥ sākṣān mṛtim āhur manīṣinaḥ //*

ಬಗೆಬಗೆದು ಕೇಳ್ದುಬುಧರೊಲ
ವೊಗೆದಿರೆ ಹೃದಯದೊಳೆ ತಾಳ್ದಮಣಿಹಾರಂಬೋಲ್
ಸೊಗಯಿಸುವ ವಚನವಿರಚನೆ
ನೆಗಳ್ದುಂ ಭಾವಿಸುವೊಡದಱ ಪೆಂಪತಿಸುಲಭಂ ೧೩

ಬಗೆಬಗೆದು ಕೇಳ್ದು ಬುಧರ್ ಒಲವು ಒಗೆದು ಇರೆ ಹೃದಯದೊಳೆ ತಾಳ್ದ ಮಣಿಹಾರಂಬೋಲ್ ಸೊಗಯಿಸುವ ವಚನ ವಿರಚನೆ ನೆಗಳ್ದುಮ್ ಭಾವಿಸುವೊಡೆ ಅದರ ಪೆಂಪು ಅತಿ ಸುಲಭಮ್

ಮತ್ತೆ ಮತ್ತೆ ಕೇಳುವವರಲ್ಲಿ ಪ್ರೀತಿ ಹುಟ್ಟಲು ಹೃದಯದಲ್ಲಿ ತಳೆದ ಮಣಿಹಾರದಂತೆ ಸೊಗಯಿಸುವ ಕಾವ್ಯರಚನೆ ಪ್ರಶಂಸಾರ್ಹವಾದುದು. ಭಾವಿಸಿದರೆ ಅದರ ಹಿರಿಮೆ ತುಂಬ ಸುಲಭ ಸಾಧ್ಯ.

13. When scholars listen to a beautiful composition and take it to heart, it glitters like a bejeweled necklace. When one thinks about it, the greatness of such compositions is easily understood.

ನೆನೆನೆನೆದು ಪೆಱರ ಮಾತುಗ
ಳನೆ ನೆಗಟ್ದಿರೆ ಕೃತಿಯೊಳಿಡುವವಂ ನಗದ ಗುಹಾ
ಧ್ವನಿಯವೊಲನರ್ಥವಚನಂ
ತನಗಾಗಿಸಲಱೆಯನುಚಿತವಾಕ್ಚತುರತೆಯಂ ೧೪

ನೆನೆನೆನೆದು ಪೆಱರ ಮಾತುಗಳನೆ ನೆಗಟ್ದಿರೆ, ಕೃತಿಯೊಳ್ ಇಡುವವನ್ ನಗದ ಗುಹಾಧ್ವನಿಯವೊಲ್ ಅನರ್ಥ ವಚನನ್, ತನಗಾಗಿಸಲ್ ಅಱೆಯನ್ ಉಚಿತ ವಾಕ್ ಚತುರತೆಯಮ್

ಬೇರೆಯವರ ಪ್ರಸಿದ್ಧವಾದ ಮಾತುಗಳನ್ನೇ ನೆನೆನೆನೆದು ತನ್ನ ಕೃತಿಯಲ್ಲಿ ಬಳಸುವವನು ಪರ್ವತಗುಹೆಯ ಮಾರ್ದನಿಯಂತೆ ಅರ್ಥವಿಲ್ಲದ

ಮಾತುಗಳನ್ನು ಆಡುತ್ತಾನೆ. ಅವನಿಗೆ ಸಮಂಜಸವಾದ ವಾಕ್ಚಾತುರ್ಯವನ್ನು ತನಗಾಗಿಸಿಕೊಳ್ಳುವುದು ಹೇಗೆಂದು ತಿಳಿಯದು.

14. The composition of a poet who is constantly thinking about and using the expressions of others becomes meaningless, like an echo in a mountain cave. Such a poet does not develop his own skill for appropriate expression.

ಕುಱಿತಂತು ಪೆಱರ ಬಗೆಯಂ
ತೆಱಿದಿರೆ ಪೆಱರ್ಗಱಿಪಲಾರ್ಪವಂ ಮಾತಱಿವಂ
ಕಿಱಿದಱೊಳೆ ಪಿರಿದುಮರ್ಥಮ
ನಱಿಪಲ್ ನೆಱೆವಾತನಾತನಿಂದಂ ನಿಪುಣಂ ೧೫

ಕುಱಿತು ಅಂತು ಪೆಱರ ಬಗೆಯನ್ ತೆಱಿದಿರೆ ಪೆಱರ್ಗೆ ಅಱಿಪಲ್ ಆರ್ಪವನ್ ಮಾತು ಅಱಿವನ್, ಕಿಱಿದಱೊಳೆ ಪಿರಿದುಮ್ ಅರ್ಥಮನ್ ಅಱಿಪಲ್ ನೆಱೆವಾತನ್ ಆತನಿಂದಮ್ ನಿಪುಣನ್

ತನ್ನಲ್ಲಿ ಮೂಡಿಬಂದ ಅಭಿಪ್ರಾಯವನ್ನು ಬೇರೆಯವರಿಗೆ ತಿಳಿಸಲು ಬಲ್ಲವನು ಮಾತನ್ನು ಅರಿತವನು. ಕಿರಿದರಲ್ಲಿ ಹಿರಿಯ ಅರ್ಥವನ್ನು ಅಡಗಿಸಿ ತಿಳಿಸಬಲ್ಲವನು ಅವನಿಗಿಂತಲೂ ನಿಪುಣನು.

ಕಿರಿದರಲ್ಲಿ ಹೆಚ್ಚಿನ ಅರ್ಥವನ್ನು ಮೂಡಿಸುವುದು ಮಹಾಕವಿಯ ಲಕ್ಷಣ. ಹಿತಮಿತವಾದ ವಚನದಿಂದ ಗಂಭೀರವಾದ ಅರ್ಥವನ್ನು ನೀಡಿದ ಪಂಪಾದಿ ಕವಿಗಳು ಶಾಶ್ವತ ಕೀರ್ತಿಯನ್ನು ಪಡೆದಿದ್ದಾರೆ.

15. If anyone can deliver to others what he thinks, that one is called knowledgeable. If one can impart a wider range of meaning in fewer words, he is said to be even more knowledgeable.

Communicating a wider range of meaning in fewer words seems to be one of the contributions of the *Kavirājamārgaṁ* to the broader field of poetics. Pampa and other great poets in Kannada exemplified this quality in their literary works.

ನುಡಿಯಂ ಛಂದದೊಳೊಂದಿರೆ
ತೊಡರ್ಚಲಱಿವಾತನಾತನಿಂದಂ ಜಾಣಂ
ತಡೆಯದೆ ಮಹಾಧ್ವಕೃತಿಗಳ
ನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ ೧೬

ನುಡಿಯನ್ ಛಂದದೊಳ್ ಒಂದಿರೆ ತೊಡರ್ಚಲ್ ಅರಿವ ಆತನ್ ಆತನಿಂದನ್ ಜಾಣನ್, ತಡೆಯದೆ ಮಹಾಧ್ವ ಕೃತಿಗಳನ್ ಒಡರಿಸಲ್ ಆರ್ಪ ಆತನ್ ಎಲ್ಲರಿಂದಮ್ ಬಲ್ಲನ್

ನುಡಿಯನ್ನು ಛಂದೋಬಂಧದಲ್ಲಿ ತೊಡಗಿಸಬಲ್ಲವನು ಆತನಿಗಿಂತಲೂ ಜಾಣ. ತಡೆಯದೆ ಮಹಾಕಾವ್ಯಗಳನ್ನು ಬರೆಯಬಲ್ಲವನು ಎಲ್ಲರಿಗಿಂತಲೂ ಬಲ್ಲವನಾಗಿರುತ್ತಾನೆ.

16. One who can deliver his expression in meters is even more skilled, and one who can compose epic poems without interruption is considered more learned than anyone else.

ಮಾತಱಿವರ್ ಕೆಲಬರ್ ಜಗ
ತೀತಳಗತಮನುಜರೊಳಗೆ ಮಾತಱಿವವರೊಳ್
ನೀತಿವಿದರಮಳಕವಿತಾ
ನೀತಿಯುತರ್ ಕೆಲರೆ ಪರಮಕವಿವೃಷಭರ್ಕಳ್ ೧೭

ಮಾತು ಅಱಿವರ್ ಕೆಲಬರ್, ಜಗತೀತಳ ಗತ ಮನುಜರೊಳಗೆ, ಮಾತಱಿವ ಅವರೊಳ್, ನೀತಿವಿದರ್, ಅಮಳ ಕವಿತಾ ನೀತಿಯುತರ್, ಕೆಲರೆ ಪರಮ ಕವಿವೃಷಭರ್ಕಳ್

ಜಗತ್ತಿನಲ್ಲಿರುವ ಮನುಷ್ಯರಲ್ಲಿ ಮಾತನ್ನು ಅರಿತವರು ಕೆಲವರು ಮಾತ್ರ. ಮಾತನ್ನು ಅರಿತವರಲ್ಲಿ ನೀತಿಯನ್ನು ಬಲ್ಲವರು, ಸ್ವಚ್ಛವಾದ ಕವಿತಾನೀತಿ ತಿಳಿದ ಪರಮಕವಿ ಶ್ರೇಷ್ಠರು ಕೆಲವರು ಮಾತ್ರ.

17. Among people in the world, only a few know how to skillfully use speech. Among them, only a very few are aware of ethics. Those best poets can connect ethics with poetry.

ಕಾವ್ಯಪ್ರಯೋಜನಗಳು
The Ideals of Poetry

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದಱಿಪುಗು
ಮಾ ಪರಮಕವಿಪ್ರಧಾನರಾ ಕಾವ್ಯಂಗಳ್ ೧೮

ಪಾಪಮ್ ಇದು, ಪುಣ್ಯಮ್ ಇದು, ಹಿತರೂಪಮ್ ಇದು, ಅಹಿತ ಪ್ರಕಾರಮ್ ಇದು, ಸುಖಮ್ ಇದು, ದುಃಖ ಉಪಾತ್ತಮ್ ಇದು ಎಂದು ಅಱಿಪುಗುಮ್ ಆ ಪರಮ ಕವಿ ಪ್ರಧಾನರಾ ಕಾವ್ಯಂಗಳ್

ಇದು ಪಾಪ, ಇದು ಪುಣ್ಯ, ಇದು ಹಿತವಾದ ರೂಪ, ಇದು ಅಹಿತವಾದುದು, ಇದು ಸುಖ, ಇದು ದುಃಖವನ್ನು ಉಂಟು ಮಾಡುವುದು ಎಂದು ಆ ಪರಮಕವಿಮುಖ್ಯರ ಕಾವ್ಯಗಳು ತಿಳಿಸಿ ಕೊಡುತ್ತವೆ.

18. The epics of the best poets reveal human sins and virtues, what is pleasant and unpleasant, what is joyful and sorrowful.

ಲೌಕಿಕ ಸಾಮಯಿಕೋರುವಿ
ವೇಕಮುಮಭ್ಯುದಯಪರಮನಿಃಶ್ರೇಯಸಮುಂ
ಪ್ರಾಕಟಮಕ್ಕುಂ ವಿದಿತಾ
ನೇಕಕವೀಶಪ್ರಯೋಗಪದಪದ್ಧತಿಯೊಳ್ ೧೯

ಲೌಕಿಕ, ಸಾಮಯಿಕ ಉರು ವಿವೇಕಮುಮ್, ಅಭ್ಯುದಯ ಪರಮ ನಿಃಶ್ರೇಯಸಮುಮ್, ಪ್ರಾಕಟಮ್ ಅಕ್ಕುಮ್ ವಿದಿತ ಅನೇಕ ಕವೀಶ ಪ್ರಯೋಗ ಪದ ಪದ್ಧತಿಯೊಳ್

ಲೌಕಿಕ ಮತ್ತು ಆಧ್ಯಾತ್ಮಿಕ ವಿವೇಕ, ಅಭ್ಯುದಯ, ಪರಮ ಪುರುಷಾರ್ಥವಾದ ಮೋಕ್ಷ ಎಂಬುವು ಅನೇಕ ಕವಿಶ್ರೇಷ್ಠರ ಪ್ರಯೋಗ ಪದ್ಧತಿಗಳಲ್ಲಿ ಪ್ರಕಟವಾಗುತ್ತವೆ.

19. The well-known practices of the best poets exhibit things secular and sacred as well as what is wise and conductive towards prosperity and ultimate salvation.

ಅಧಿಕೃತಸತ್ಪುರುಷಾರ್ಥ
ಪ್ರಧಾನಧರ್ಮಾರ್ಥಕಾಮಮೋಕ್ಷಂಗಳವಾ
ಬುಧಜನವಿವಿಕ್ತಕಾವ್ಯ
ಪ್ರಧಾರಿತಾರ್ಥಂಗಳಖಿಳಭುವನಹಿತಂಗಳ್ ೨೦

ಅಧಿಕೃತ ಸತ್ ಪುರುಷಾರ್ಥ ಪ್ರಧಾನ ಧರ್ಮ ಅರ್ಥ ಕಾಮ ಮೋಕ್ಷಂಗಳ್ ಅವು ಆ ಬುಧಜನ ವಿವಿಕ್ತ ಕಾವ್ಯ ಪ್ರಧಾರಿತ ಅರ್ಥಂಗಳ್ ಅಖಿಳ ಭುವನ ಹಿತಂಗಳ್

ಸಮಸ್ತ ಲೋಕಕ್ಕೆ ಹಿತಕರವಾದ ಪ್ರಸಿದ್ಧ ಸತ್ಪುರುಷಾರ್ಥಗಳೆಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಅವು ಬುಧಜನರು ರಚಿಸಿದ ಕಾವ್ಯಗಳಿಂದ ವಿಶದವಾಗುತ್ತವೆ.

ಕಾವ್ಯಗಳಲ್ಲಿ ಧರ್ಮಾರ್ಥಕಾಮ ಮೋಕ್ಷಗಳಿಗೆ ಇರುವ ಪ್ರಾಧಾನ್ಯವನ್ನು ಕುರಿತು ಭಾಮಹ ಹೇಳಿದ ಶ್ಲೋಕ (೧.೨) ಶ್ರೀವಿಜಯನ ಪದ್ಯಕ್ಕೆ ಪ್ರೇರಣೆಯಾಗಿರಬಹುದು: "ಧರ್ಮಾರ್ಥಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ । ಪ್ರೀತಿಮ್ ಕರೋತಿ ಕೀರ್ತಿಂಚ ಸಾಧುಕಾವ್ಯ ನಿಷೇವಣಮ್ ॥"

20. The poems of the learned deal with the ultimate goals of human beings: righteousness; a meaningful life; sensual pleasure; and salvation. These poems are for the welfare of the entire world.

The opinion of Bhāmaha (1.2) might have inspired Śrīvijaya: *dharmārtha-kāma-mōkṣēṣu vaicakṣaṇyaṁ kalāsu ca /prītiṁ karōti kīrtim ca sādhu-kāvya niṣēvaṇaṁ //*

ಲೋಕದೊಳದಱಿಂ ಕಾವ್ಯ
ಸ್ವೀಕರಣೋದ್ಯುಕ್ತನಕ್ಕೆ ಕವಿ ತನ್ನಱಿವಂ

ತಾಕಲ್ಪಾಂತಸ್ಥಾಯಿ
ಶ್ರೀಕೀರ್ತಿವಧೂಪ್ರಧಾನವಲ್ಲಭನಕ್ಕುಂ ೨೦

ಲೋಕದೊಳ್ ಅದಱಿನ್ ಕಾವ್ಯ ಸ್ವೀಕರಣ ಉದ್ಯುಕ್ತನ್ ಅಕ್ಕೆ ಕವಿ ತನ್ನ ಅಱಿವಂತೆ ಆಕಲ್ಪಾಂತ ಸ್ಥಾಯಿ ಶ್ರೀ ಕೀರ್ತಿವಧೂ ಪ್ರಧಾನ ವಲ್ಲಭನ್ ಅಕ್ಕುಮ್

ಆದುದರಿಂದ ಲೋಕದಲ್ಲಿ ಕವಿ ತನ್ನ ಅರಿವಿಗೆ ಅನುಗುಣವಾಗಿ ಕಾವ್ಯರಚನೆಗೆ ತೊಡಗಬೇಕು. ಅದರಿಂದ ಕಲ್ಪಾಂತರದವರೆಗೂ ಶ್ರೀಕೀರ್ತಿ ವಧುವಿಗೆ ಅವನು ಪತಿಯಾಗಿರುವನು.

ಭೂಮಿ ಇರುವವರೆಗೂ ಉಳಿಯುವ ಕೀರ್ತಿಯನ್ನು ಬಯಸುವ ಬುದ್ಧಿವಂತನು ಕಾವ್ಯರಚನೆಗೆ ತೊಡಗಬೇಕೆಂಬ ಭಾಮಹನ ಶ್ಲೋಕವನ್ನು ಶ್ರೀವಿಜಯನು ಅನುಸರಿಸಿದ್ದಾನೆ (೧-೮): ಅತೋಭಿವಾಂಛತಾ ಕೀರ್ತಿಂ ಸ್ಥೇಯ ಸೀಮಾ ಭುವಃ ಸ್ಥಿತೇಃ । ಯತ್ನೋ ವಿದಿತವೇದ್ಯೇನ ವಿಧೇಯಃ ಕಾವ್ಯಲಕ್ಷಣಃ ॥

21. A poet who is ready to take up the writing of poetry has to write about what he knows. Thus, until the end of time, he becomes the beloved of the auspicious lady Fame.

Śrīvijaya follows Bhāmaha's words that the fame of a poet is permanent: *atō'bhivaṁchatā kīrtiṁ sthēya-sīmā bhuvaḥ sthitēḥ* (*1.8*).

ಕಾವ್ಯಲಕ್ಷಣ
The Characteristics of Poetry

ಕವಿಭಾವಕೃತಾನೇಕ
ಪ್ರವಿಭಾಗವಿವಿಕ್ತಸೂಕ್ತಮಾರ್ಗಂ ಕಾವ್ಯಂ
ಸವಿಶೇಷಶಬ್ದರಚನಂ
ವಿವಿಧಾರ್ಥವ್ಯಕ್ತಿವರ್ತಿತಾಲಂಕಾರಂ ೨೨

ಕವಿಭಾವಕೃತ ಅನೇಕ ಪ್ರವಿಭಾಗ ವಿವಿಕ್ತ ಸೂಕ್ತ ಮಾರ್ಗಮ್ ಕಾವ್ಯಮ್ ಸವಿಶೇಷ ಶಬ್ದ ರಚನಮ್ ವಿವಿಧ ಅರ್ಥವ್ಯಕ್ತಿ ವರ್ತಿತ ಅಲಂಕಾರಮ್

ಕವಿಯ ಭಾವದಲ್ಲಿ ಅಂದವಾಗಿ ಮೂಡಿಬಂದ ಅನೇಕ ರೀತಿಯ ಮಾರ್ಗವೇ ಕಾವ್ಯ. ಅದು ವಿಶೇಷವಾದ ಶಬ್ದಗಳಿಂದ ರಚಿತವಾದುದು. ವಿವಿಧ ಅರ್ಥಗಳ ಅಭಿವ್ಯಕ್ತಿಯಿಂದ ಅಲಂಕೃತವಾದುದು.

ಸರಿಯಾದ ಶಬ್ದ ಮತ್ತು ಅರ್ಥಗಳನ್ನು ಅಂದವಾಗಿ ರೂಪಿಸಿದ ಮಾರ್ಗವೇ ಕಾವ್ಯವೆಂದು ಲೇಖಕ ಅಭಿಪ್ರಾಯಪಟ್ಟಿದ್ದಾನೆ. ಶಬ್ದ, ಅರ್ಥ ಮತ್ತು ಅಲಂಕಾರ ಸುಂದರ ಕಾವ್ಯರಚನೆಗೆ ಆಧಾರ. ದಂಡಿ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾನೆ (೧.೧೦): ತೈ ಶರೀರಂ ಚ ಕಾವ್ಯಾನಾಮಲಂಕಾರಾಶ್ಚ ದರ್ಶಿತಾಃ । ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ ॥ ಭಾಮಹನೂ ಇದೇ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾನೆ (೧.೧೬) : ಶಬ್ದಾರ್ಥೌಸಹಿತೌ ಕಾವ್ಯಂ.

22. A poem results from the combination of a poet’s imagination and multiple ways of fine expression, a special crafting of correct speech and meaning with verbal ornamentation.

The *Kavirājamārgaṁ* suggests that the essential element of poetry involves the careful combination of correct speech (*śabda)*, meaning (*artha)* and figures of speech (*alaṅkāra*). In this regard, Śrīvijaya follows the words of Bhāmaha (*śabdārthau sahitaṁ kāvyaṁ*) [1.16] and also of Danḍin (*taiḥ śarīraṁ ca kāvyānām alaṅkāraś ca darśitāḥ śarīraṁ tāvad iṣṭārtha-vyavacchinnā padāvalī*) [1.10]

ನರಲೋಕಚಂದ್ರಮತದಿಂ
ಪರಮಾಲಂಕಾರಮುಂ ಶರೀರಮುಮೆಂದಿಂ
ತೆರಡಕ್ಕುಂ ಭೇದಂ ಬಹು
ಪರಿಕರಮಾ ಕಾವ್ಯವಸ್ತುಪುರುಷಂಗೆಂದುಂ ೨೩

ನರಲೋಕ ಚಂದ್ರ ಮತದಿನ್ ಪರಮ ಅಲಂಕಾರಮುಮ್ ಶರೀರಮುಮ್ ಎಂದು ಇಂತು ಎರಡಕ್ಕುಮ್ ಭೇದಮ್ ಬಹುಪರಿಕರಮ್ ಆ ಕಾವ್ಯ ವಸ್ತು ಪುರುಷಂಗೆ ಎಂದುಮ್

ನರಲೋಕ ಚಂದ್ರನಾದ ನೃಪತುಂಗನ ಮತದಲ್ಲಿ ಕಾವ್ಯ ವಸ್ತು ಒಬ್ಬ ಪುರುಷ. ಅವನಿಗೆ ಅಲಂಕಾರ ಮತ್ತು ಶರೀರ ಎಂಬ ಎರಡು ಅಂಶಗಳಿರುತ್ತವೆ. ಇವೆರಡರಲ್ಲಿ ಅನೇಕ ಪ್ರಭೇದಗಳಿರುತ್ತವೆ.

ಕಾವ್ಯವನ್ನು ಸಾಮಾನ್ಯವಾಗಿ ಕನ್ಯೆಗೆ ಹೋಲಿಸುವುದುಂಟು. ಕಾವ್ಯ ವಸ್ತುವನ್ನು ಪುರುಷನೆಂದು ಹೇಳಿರುವುದನ್ನು ಗಮನಿಸಬೇಕು.

23. In the opinion of Nṛpatuṅga, the best in the world of men, poetry is a human being, as it were, with a body and the best ornaments. Each of these aspects manifests variously.

The expression *nara-lōka-candra* ("the best in the world of men") is an epithet of Nṛpatuṅga.

ಅವಱೊಳ್ ಶರೀರಮೆಂಬುದು
ಕವಿಪ್ರಧಾನಪ್ರಯೋಗಪದಪದ್ಧತಿಯೊಳ್
ದ್ವಿವಿಧಮೆನಿಕ್ಕುಮದತಿಶಯ
ಧವಳೋಕ್ತಕ್ರಮದೆ ಗದ್ಯಪದ್ಯಾಖ್ಯಾತಂ **೨೪**

ಅವಱೊಳ್ ಶರೀರಮ್ ಎಂಬುದು ಕವಿಪ್ರಧಾನ ಪ್ರಯೋಗ ಪದ ಪದ್ಧತಿಯೊಳ್ ದ್ವಿವಿಧಮ್ ಎನಿಕ್ಕುಂ ಅದು ಅತಿಶಯ ಧವಳ ಉಕ್ತಕ್ರಮದೆ ಗದ್ಯ ಪದ್ಯ ಆಖ್ಯಾತಮ್

ಅವುಗಳಲ್ಲಿ ಶರೀರ ಎಂಬುದು ಮಹಾಕವಿಗಳ ಪ್ರಯೋಗ ಮಾರ್ಗದಲ್ಲಿ ಎರಡು ತೆರನಾಗಿರುತ್ತದೆ. ಅತಿಶಯಧವಳನಾದ ನೃಪತುಂಗನ ಅಭಿಪ್ರಾಯದಲ್ಲಿ ಅವೆರಡರ ಹೆಸರು ಗದ್ಯ ಮತ್ತು ಪದ್ಯ.

ಗದ್ಯ ಮತ್ತು ಪದ್ಯ ಎಂಬುವು ಕಾವ್ಯದ ಶರೀರ ಎಂದು ಹೇಳಿರುವುದು ವಿಶೇಷ. ಭಾಮಹನು ಶಬ್ದಾರ್ಥಗಳಿಂದ ಕೂಡಿದ್ದು ಕಾವ್ಯವೆಂದೂ ಅದರಲ್ಲಿ ಗದ್ಯ ಮತ್ತು ಪದ್ಯ ಎಂಬ ಎರಡು ಪ್ರಭೇದಗಳಿವೆ ಎಂದೂ ಹೇಳಿದ್ದಾನೆ (೧.೧೬): ಶಬ್ದಾರ್ಥೌ ಸಹಿತೌ ಕಾವ್ಯಂ ಗದ್ಯಂ ಪದ್ಯಂ ಚ ತದ್ ದ್ವಿಧಾ.

24. According to Nṛpatuṅga, bright with whiteness (*atiśaya-dhavaḷa*), the first of the two (the body of a poem) takes two forms in the usage of poets: prose and verse.

It is interesting to note that the *Kavirājamārgaṁ* refers to the "body" of a poem as prose and metrical verse.

Bhāmaha, however, calls prose and metrical verse *kāvya* (a poem) in 1.16.

ಪದಪಾದನಿಯತನಿಯಮಾ
ಸ್ಪದಮಲ್ಲದಳಂಕೃತಂ ಕ್ರಿಯಾಕಾರದೊಳ್
ಪುದಿದರ್ಥವ್ಯಕ್ತಿಯನೀ
ವುದು ಗದ್ಯಮನೇಕರೂಪಭೇದವಿವಿಕ್ತಂ ೨೫

ಪದ ಪಾದ ನಿಯತ ನಿಯಮ ಆಸ್ಪದಮ್ ಅಲ್ಲದ ಅಳಂಕೃತಮ್ ಕ್ರಿಯಾಕಾರಕದೊಳ್ ಪುದಿದು ಅರ್ಥವ್ಯಕ್ತಿಯನ್ ಈವುದು ಗದ್ಯಮ್ ಅನೇಕ ರೂಪ ಭೇದ ವಿವಿಕ್ತಮ್

ಪದ–ಪಾದಗಳ ನಿರ್ದಿಷ್ಟ ನಿಯಮಕ್ಕೆ ಒಳಗಾಗದಿದ್ದರೂ ಅಲಂಕೃತವಾಗಿ, ಕ್ರಿಯಾಕಾರಕಗಳಿಗೆ ಅನ್ವಯವಾಗುತ್ತಿದ್ದು ಅರ್ಥವನ್ನು ವ್ಯಕ್ತಮಾಡುವುದು ಗದ್ಯ. ಇದರಲ್ಲಿ ಅನೇಕ ಪ್ರಭೇದಗಳಿರುತ್ತವೆ.

ದಂಡಿ ಗದ್ಯವನ್ನು ಪಾದರಹಿತವೆಂದೂ ಪದಗಳಿಂದ ಕೂಡಿದ್ದೆಂದೂ ಹೇಳಿರುವುದು ಶ್ರೀವಿಜಯನಿಗೆ ಪ್ರೇರಣೆಯಾಗಿರಬಹುದು (೧–೨೩): ಅಪಾದಃ ಪದಸಂತಾನೋಗದ್ಯಮ್.

ಸಂಸ್ಕೃತ ಭಾಷೆಯ ಮಧುರವಾದ ಶಬ್ದಾರ್ಥಗಳಿಂದ ಕೂಡಿದ್ದು ಗದ್ಯವೆಂದು ಭಾಮಹನು ಹೇಳಿದ್ದಾನೆ (೧–೨೫): ಸಂಸ್ಕೃತಾನಾಕುಲಶ್ರವ್ಯ ಶಬ್ದಾರ್ಥಪದ ವೃತ್ತಿನಾ।ಗದ್ಯೇನ ಯುಕ್ತೋದಾತ್ತಾರ್ಥಾಸೋಚ್ಛ್ವಾಸಾಖ್ಯಾಯಿಕಾ ಮತಾ॥

25. Prose is literary ornamentation without the regulated use of word (*pada*) and metrical feet (*pāda*). The relationship of nouns, with their various case-endings, and the verb in a sentence gives meaning in prose. Prose takes many forms.

Daṇḍin's definitions seem to be the inspiration here (*apādaḥ pada-santānō gadyaṁ*) [1-23]. Bhāmaha says that beautiful prose comprises of lucid and pleasant words meaningfully joined (1.25).

ಸದಮಳ ಸಮಸಂಸ್ಕೃತಕಾ
ವ್ಯದ ಹೃದಯಂ ಹರ್ಷಚರಿತ ಕಾದಂಬರಿಗಳ್
ಮೊದಲಾಗಿ ನೆಗೞ್ದುವಿದಱೊಳ್
ಸದಳಂಕಾರಂಗಳಖಿಳಕವಿವಿದಿತಂಗಳ್ ೨೬

ಸದಮಳ ಸಮಸಂಸ್ಕೃತ ಕಾವ್ಯದ ಹೃದಯಮ್ ಹರ್ಷಚರಿತ ಕಾದಂಬರಿಗಳ್ ಮೊದಲಾಗಿ ನೆಗೞ್ದುವು ಇದಱೊಳ್ ಸದಳಂಕಾರಂಗಳ್ ಅಖಿಳ ಕವಿ ವಿದಿತಂಗಳ್

ಸ್ವಚ್ಛವಾದ ಸಂಸ್ಕೃತ ಕಾವ್ಯದ ಹೃದಯದಂತೆ ಮೆರೆಯುವಂಥವು ಹರ್ಷಚರಿತ, ಕಾದಂಬರಿ ಮೊದಲಾದವು. ಇವುಗಳಲ್ಲಿರುವ ಸದಳಂಕಾರಗಳು ಎಲ್ಲಾ ಕವಿಗಳಿಗೂ ಪರಿಚಿತವಾಗಿವೆ.

'ಸಮಸಂಸ್ಕೃತ' ಎಂಬುದನ್ನು ಕನ್ನಡದಲ್ಲಿ 'ತತ್ಸಮ' ಎಂಬ ಅರ್ಥದಲ್ಲಿ ಬಳಸುತ್ತಾರೆ. ಆದರೆ ಇಲ್ಲಿ ಸಂಸ್ಕೃತವನ್ನೇ ಸಮಸಂಸ್ಕೃತವೆಂದು ಕರೆದಿರುವುದು ವಿಶೇಷ.

26. Such works as *Harṣacaritam* and *Kādambarī* famously form the heart of unblemished Sanskrit literary compositions. These are skillfully ornamented works that are well known among poets.

The term *sama-saṁskṛta* is used in Kannada to mean *tat-sama* (borrowings from Sanskrit with few, if any, phonetic changes). But, the meaning of *sama-saṁskṛta* in this context is not clear. It seems to refer to prose works in Sanskrit.

ಗದ್ಯಕಥಾ

Prose-Narrative (*gadya-kathā*)

ಮಿಗೆ ಕನ್ನಡಗಬ್ಬಂಗಳೊ
ಳಗಣಿತಗುಣಗದ್ಯಪದ್ಯಸಮ್ಮಿಶ್ರಿತಮಂ

ನಿಗದಿಸುವರ್ ಗದ್ಯಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ ೨೭

ಮಿಗೆ ಕನ್ನಡ ಕಬ್ಬಂಗಳೊಳ್ ಅಗಣಿತ ಗುಣ ಗದ್ಯ ಪದ್ಯ ಸಮ್ಮಿಶ್ರಿತಮಮ್ ನಿಗದಿಸುವರ್ ಗದ್ಯ ಕಥಾ ಪ್ರಗೀತಿಯಿನ್ ತತ್ ಚಿರಂತನ ಆಚಾರ್ಯರ್ಕಳ್

ಹೆಚ್ಚಾಗಿ ಕನ್ನಡ ಕಾವ್ಯಗಳಲ್ಲಿ ಅಸಂಖ್ಯಾತ ರೀತಿಯ ಗದ್ಯಪದ್ಯಗಳ ಮಿಶ್ರಣವನ್ನು ಗದ್ಯಕಥೆ ಎಂಬ ಸಾಂಪ್ರದಾಯಿಕವಾದ ಹೆಸರಿನಿಂದ ಪೂರ್ವಾಚಾರ್ಯರು ಕರೆಯುತ್ತಾರೆ.

ದಂಡಿ ಗದ್ಯ ಮತ್ತು ಪದ್ಯ ಸೇರಿದ ಕಾವ್ಯವನ್ನು 'ಚಂಪೂ' ಎಂದು ಸ್ಪಷ್ಟವಾಗಿ ಹೇಳಿದ್ದಾನೆ (೧.೩೧): ಗದ್ಯ-ಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ. ಕನ್ನಡದಲ್ಲಿ ಇದನ್ನು ಗದ್ಯಕಥೆ ಎಂದು ಕರೆಯುವುದೇಕೆ ಎಂಬುದು ಸ್ಪಷ್ಟವಾಗಿಲ್ಲ.

27. In Kannada mostly, poems of mixed prose and verse are called by the name of *gadyakathe.* They exhibit innumerable good qualities and are deemed superior by scholars of old.

Daṇḍin clearly identifies a mixture of prose and poetry with the designation *campū* (1-31). It is not clear in the *Kavirājamārgaṁ* why this type of poem is called *gadya-kathe.*

ಪಾಂಡಿತ್ಯ
Scholarship

ಸಕಳಕಳಾಭಾಷಾಲೌ
ಕಿಕಸಾಮಯಿಕಾದಿ ವರ್ಣನಾನಿರ್ಣಿಕ್ತ
ಪ್ರಕಟತರವಸ್ತುವಿಸ್ತರ
ವಿಕಲ್ಪವಿದನಲ್ಲದಾಗದಾಗದು ಪೇಟಲ್ ೨೮

ಸಕಳ ಕಳಾ ಭಾಷಾ ಲೌಕಿಕ ಸಾಮಯಿಕಾದಿ ವರ್ಣನಾ ನಿರ್ಣಿಕ್ತ ಪ್ರಕಟತರ ವಸ್ತು ವಿಸ್ತರ ವಿಕಲ್ಪವಿದನ್ ಅಲ್ಲದೆ ಆಗದು ಆಗದು ಪೇಟಲ್

ಸಕಲ ಕಲೆಗಳು, ಭಾಷೆಗಳು, ಲೌಕಿಕ ಮತ್ತು ಆಧ್ಯಾತ್ಮಿಕ ವಿದ್ಯೆಗಳಲ್ಲಿ ವಿವರಿಸಲ್ಪಟ್ಟಿರುವ ಎಲ್ಲ ವಸ್ತುಗಳ ವಿಸ್ತಾರವಾದ ಮತ್ತು ವೈವಿಧ್ಯದ ಅರಿವು ಇಲ್ಲದೆ ಕಾವ್ಯವನ್ನು ರಚಿಸಲು ಸಾಧ್ಯವಿಲ್ಲ.

ಆಲಂಕಾರಿಕರು ಕವಿಗೆ ಬೇಕಾದ ಪಾಂಡಿತ್ಯವನ್ನು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಶ್ರೀವಿಜಯನು ಮಹಾಕವಿಯ ಗುಣಗಳನ್ನು ಹೆಸರಿಸಿದ್ದಾನೆ.

28. One unacquainted with the various arts, classical languages, and knowledge of worldly and philosophical thought, along with their discourses on themes and descriptions, cannot be a poet.

Along the lines of qualities prescribed for a poet by ancient authors on poetics (*ālaṅkārikas*), Śrīvijaya defines here an ideal of the scholarly poet.

ಗದ್ಯ–ಪದ್ಯ ಕವಿಗಳು

Writers of Prose and Poetry

ವಿಮಳೋದಯ ನಾಗಾರ್ಜುನ
ಸಮೇತ ಜಯಬಂಧು ದುರ್ವಿನೀತಾದಿಗಳೀ
ಕ್ರಮದೊಳ್ ನೆಗಟ್ಚಿ ಗದ್ಯಾ
ಶ್ರಮಪದಗುರುತಾಪ್ರತೀತಿಯಂ ಕೆಯ್ಕೊಂಡರ್ ೨೯

ವಿಮಳೋದಯ ನಾಗಾರ್ಜುನ ಸಮೇತ ಜಯಬಂಧು ದುರ್ವಿನೀತಾದಿ ಗಳ್ ಈ ಕ್ರಮದೊಳ್ ನೆಗಟ್ಚಿ ಗದ್ಯಾಶ್ರಮ ಪದ ಗುರುತಾ ಪ್ರತೀತಿಯಂ ಕೆಯ್ಕೊಂಡರ್

ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮತ್ತು ಇತರರು ಗದ್ಯಮಾರ್ಗದಲ್ಲಿ ಹೆಸರು ಪಡೆದು ಪೀಠಾಚಾರ್ಯರೆಂಬ ಗೌರವವನ್ನು ಪಡೆದರು.

ಗದ್ಯಕವಿಗಳು ಮತ್ತು ಪದ್ಯಕವಿಗಳು ಸಾಹಿತ್ಯವನ್ನು ಸಂಪದ್ಭರಿತವನ್ನಾಗಿ ಮಾಡಿದ್ದನ್ನು ಹೇಳುವಾಗ ಶ್ರೀವಿಜಯನು ಈ ಪದ್ಯದಲ್ಲಿ ಸಂಸ್ಕೃತ ಗದ್ಯಕವಿಗಳನ್ನು ಹೆಸರಿಸಿದಂತಿದೆ. ಗಂಗ ದುರ್ವಿನೀತ (ಕ್ರಿ.ಶ. ೬೦೦) ಗುಣಾಢ್ಯನ ಬೃಹತ್ಕಥೆ

ಯನ್ನು ಸಂಸ್ಕೃತಕ್ಕೆ ಅನುವಾದ ಮಾಡಿದನೆಂದೂ ಕೆಲವು ವ್ಯಾಖ್ಯಾನಗಳನ್ನು ಬರೆದನೆಂದೂ ಭಾವಿಸಲಾಗಿದೆ.

29. In order, Vimalōdaya, Nāgārjuna, Jayabandhu, Durvinīta (and others) obtained fame as teachers who headed the sacred-hermitages-of-prose (*gadyāśrama*).

It may be that the aforementioned are prose writers in Sanskrit, as the *Kavirājamārgaṁ* refers to verse and epic writers in the next two verses. Durvinīta, the Gaṅgā king (c.600) is said to have written commentaries on and translated Guṇāḍhya's *Bṛhatkathā* into Sanskrit.

ಪದ್ಯಂ ಸಮಸ್ತ ಜನತಾ
ಹೃದ್ಯಂ ಪದವಿದಿತಪಾದನಿಯಮನಿವೇದ್ಯಂ
ವಿದ್ಯಾಪಾರಪರಾಯಣ
ಮಾದ್ಯಂ ಸದ್ವೃತ್ತಿವೃತ್ತಜಾತ್ಯಾಯತ್ತಂ ೩೦

ಪದ್ಯಮ್ ಸಮಸ್ತ ಜನತಾ ಹೃದ್ಯಮ್ ಪದ ವಿದಿತ ಪಾದ ನಿಯಮ ನಿವೇದ್ಯಮ್ ವಿದ್ಯಾ ಪಾರಪರಾಯಣಮ್ ಆದ್ಯಮ್ ಸದ್ವೃತ್ತಿ ವೃತ್ತ ಜಾತಿ ಆಯತ್ತಮ್

ಪದ್ಯ ಸಮಸ್ತ ಜನತೆಯ ಹೃದಯವನ್ನು ಸೂರೆಗೊಳ್ಳುತ್ತದೆ. ಅದು ಪದ ಮತ್ತು ಪಾದನಿಯಮಕ್ಕೆ ಒಳಪಟ್ಟಿರುತ್ತದೆ. ಅದು ಛಂದೋವಿದ್ಯೆಯನ್ನು ಅನುಸರಿಸುವ ಈ ಮೂಲಭೂತ ಅಭಿವ್ಯಕ್ತಿ ವೃತ್ತಗಳಿಂದ ಜಾತಿಪದ್ಯಗಳಿಂದ ಕೂಡಿರುತ್ತದೆ.

ಪದ್ಯರಚನೆಯ ಬಗ್ಗೆ ಲೇಖಕನಿಗೆ ಇರುವ ಒಲವು ಸ್ಪಷ್ಟವಾಗಿದೆ. 'ಪದ್ಯಂ ಸಮಸ್ತ ಜನತಾ ಹೃದ್ಯಂ' ಎಂಬುದು ಈ ಒಲವನ್ನು ಅಂದವಾದ ಹೇಳಿಕೆಯ ರೂಪದಲ್ಲಿ ವ್ಯಕ್ತಪಡಿಸಿದೆ.

30. Verse compositions that conform to the regulated use of word (*pada*) and metrical feet (*pāda*) appeal to everybody because they are primordial, invite devotion to comprehensive learning, deal

with edifying topics, and use *vṛtta* (Sanskrit-derived) as well as *jāti* (native-derived) meters.

In his characterization of metrical compositions, Śrīvijaya's special regard for versified poetry is evident.

ಪ್ರಣುತ ಗುಣಸೂರಿ ನಾರಾ
ಯಣ ಭಾರವಿ ಕಾಳಿದಾಸ ಮಾಘಾದಿಗಳೀ
ಗಣಿದದೊಳೆ ಮಹಾಕಾವ್ಯ
ಪ್ರಣಯಮನಾಗಿಸಿದರಮಳಕವಿವೃಷಭರ್ ೩೧

ಪ್ರಣುತ ಗುಣಸೂರಿ ನಾರಾಯಣ ಭಾರವಿ ಕಾಳಿದಾಸ ಮಾಘಾದಿಗಳ್ ಈ ಗಣಿದದೊಳೆ ಮಹಾಕಾವ್ಯ ಪ್ರಣಯಮನ್ ಆಗಿಸಿದರ್ ಅಮಳ ಕವಿವೃಷಭರ್

ಖ್ಯಾತಿವೆತ್ತ ಗುಣಸೂರಿ, ನಾರಾಯಣ, ಭಾರವಿ, ಕಾಳಿದಾಸ, ಮಾಘ ಮೊದಲಾದವರು ಈ ರೀತಿಯಲ್ಲಿ ಮಹಾಕಾವ್ಯದ ವಿಶಿಷ್ಟ ಕ್ರಮವನ್ನು ಹಾಕಿಕೊಟ್ಟ ಶ್ರೇಷ್ಠಕವಿಗಳು.

31. Counted among those unblemished great poets who made others fall in love with grand and elaborate poems (*mahākāvya*) are Guṇasūri, Nārāyaṇa, Bhāravi, Kāḷidāsa, Māgha, as well as others.

ಪರಮ ಶ್ರೀವಿಜಯಕವೀ
ಶ್ವರ ಪಂಡಿತಚಂದ್ರ ಲೋಕಪಾಲಾದಿಗಳಾ
ನಿರತಿಶಯವಸ್ತುವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ ೩೨

ಪರಮ ಶ್ರೀವಿಜಯ ಕವೀಶ್ವರ, ಪಂಡಿತ ಚಂದ್ರ, ಲೋಕಪಾಲಾದಿಗಳ್ ಆ ನಿರತಿಶಯ ವಸ್ತು ವಿಸ್ತರ ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆ ಎಂದುಂ

ಶ್ರೇಷ್ಠರಾದ ಶ್ರೀವಿಜಯಕವೀಶ್ವರ, ಪಂಡಿತಚಂದ್ರ, ಲೋಕಪಾಲ ಮೊದಲಾದವರ ನಿರುಪಮ ವಸ್ತು ವಿಸ್ತರ ರಚನೆಗಳು ಹಿಂದೆ ಹೇಳಿದ ಆದ್ಯ ಕಾವ್ಯಕ್ಕೆ ಉದಾಹರಣೆಗಳು.

ಈ ಪದ್ಯದಲ್ಲಿ ಉಲ್ಲೇಖಗೊಂಡಿರುವ ಕವಿಗಳು ಕನ್ನಡ ಕವಿಗಳೇ ಅಥವಾ ಪ್ರಾಕೃತ ಕವಿಗಳೇ ಎಂಬುದು ಸ್ಪಷ್ಟವಾಗಿಲ್ಲ. 'ಆದ್ಯಕಾವ್ಯ' ಎಂಬುದು ಪ್ರಾಚೀನ ಕನ್ನಡ ಕಾವ್ಯವನ್ನು ಸೂಚಿಸುತ್ತಿರಬಹುದು.

32. Among the ancient poems, the unparalleled writings of the great Śrīvijaya Kavīśvara, Paṇḍitacandra, Lōkapāla and others, are the best examples, in terms of theme (*vastu*) and description (*vistara*).

It is not clear whether the author is referring to ancient Kannada poets or to Prakrit poets. *Ādya-kāvya* may mean "earlier" Kannada poetry.

ಚತ್ತಾಣ–ಬೆದಂಡೆ

Cattāṇa and Bedaṇḍe

ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ
ಗಡಿನ ನೆಗಟ್ತೆಯ ಕಬ್ಬದೊ
ಳೊಡಂಬಡಂಮಾಡಿದರ್ ಪುರಾತನಕವಿಗಳ್ ೩೩

ನುಡಿಗೆಲ್ಲಮ್ ಸಲ್ಲದ ಕನ್ನಡದೊಳ್ ಚತ್ತಾಣಮುಮ್ ಬೆದಂಡೆಯುಮ್ ಎಂದು ಈ ಗಡಿನ ನೆಗಟ್ತೆಯ ಕಬ್ಬದೊಳ್ ಒಡಂಬಡನ್ ಮಾಡಿದರ್ ಪುರಾತನ ಕವಿಗಳ್

ಬೇರೆ ಭಾಷೆಗಳಿಗಿಂತ ಭಿನ್ನವಾದ ಕನ್ನಡದಲ್ಲಿ ಪ್ರಸಿದ್ಧವಾಗಿರುವ ಚತ್ತಾಣ ಮತ್ತು ಬೆದಂಡೆ ಎಂಬುವು ಪ್ರಸಿದ್ಧ ಕಾವ್ಯಗಳಲ್ಲಿ ಸೇರುವಂತೆ ಪುರಾತನ ಕವಿಗಳು ಮಾಡಿದರು.

ಚತ್ತಾಣ ಮತ್ತು ಬೆದಂಡೆ ಬಗ್ಗೆ ಅನೇಕ ರೀತಿಯ ಅಭಿಪ್ರಾಯಗಳು ವ್ಯಕ್ತವಾಗಿವೆಯಾದರೂ ಅವುಗಳ ಸ್ವರೂಪದ ಬಗ್ಗೆ ಸ್ಪಷ್ಟವಾಗಿಲ್ಲ. ಚಿತ್ರಾಯತನ, ವೈದಂಡಿಕಾ ಎಂಬ ಸಂಸ್ಕೃತ ಮೂಲದ ಸಾಹಿತ್ಯ ಪ್ರಕಾರಗಳೇ ಕನ್ನಡದಲ್ಲಿ

ಚತ್ತಾಣ, ಬೆದಂಡೆ ಆಗಿವೆ ಎಂಬುದು ಒಂದು ಊಹೆ. ಆದರೆ ಈ ಹೆಸರಿನ ಪ್ರಕಾರಗಳು ಎಲ್ಲೂ ಉಕ್ತವಾಗಿಲ್ಲ.

33. In Kannada, which is different from other languages, ancient poets held *cattāṇa* and *bedaṇḍe*, poetic forms current in the present day, to be comparable to other forms of well-known poetry.

The names *bedaṇḍe* and *cattāṇa* seem to be derivatives of *vaidaṇḍikā* and *citrāyatana.*
The name *bedaṇḍe* suggests performance accompanied by musical instruments.

ಕಂದಮುಮಮಳಿನವೃತ್ತಮು
ವೊಂದೊಂದೆಡೆಗೊಂದು ಜಾತಿ ಜಾಣೆಸೆಯೆ ಬೆಡಂ
ಗೊಂದಿವಱೊಳಮರೆ ಪೇೞಲ್
ಸುಂದರರೂಪಂ ಬೆದಂಡೆಗಬ್ಬಮದಕ್ಕುಂ ೩೪

ಕಂದಮುಮ್ ಅಮಳಿನ ವೃತ್ತಮುಮ್ ಒಂದೊಂದು ಎಡೆಗೆ ಒಂದು ಜಾತಿ ಜಾಣ್ ಎಸೆಯೆ ಬೆಡಂಗು ಒಂದಿ ಇವಱೊಳ್ ಅಮರೆ ಪೇೞಲ್ ಸುಂದರರೂಪಮ್ ಬೆದಂಡೆ ಕಬ್ಬಂ ಅದು ಅಕ್ಕುಮ್

ಕಂದಪದ್ಯ, ಸ್ವಚ್ಛವಾದ ವೃತ್ತ ಮತ್ತು ಜಾತಿಪದ್ಯಗಳು ಸೇರಿ ಅಂದವಾಗಿರುವಂತೆ ಹೇಳಿದರೆ ಅದು ಬೆದಂಡೆ ಕಾವ್ಯವಾಗುತ್ತದೆ.

ಈ ವಿವರಣೆಯಿಂದ ಬೆದಂಡೆಯ ಸ್ವರೂಪ ತಿಳಿಯುವುದಿಲ್ಲ. ಛಂದಸ್ಸಿನ ವಿಷಯ ಮಾತ್ರ ಹೇಳಿರುವುದರಿಂದ ಇದು ಮಾತ್ರಾಛಂದಸ್ಸಿನ ಕಂದ, ಅಕ್ಷರ ಛಂದಸ್ಸಿನ ವೃತ್ತ ಮತ್ತು ಅಂಶ ಛಂದಸ್ಸಿನ ಪದ್ಯಗಳು ಸೇರಿದ ವಿಶಿಷ್ಟ ಕಾವ್ಯಪ್ರಕಾರವೆಂದು ಊಹಿಸಬಹುದು.

34. The beautiful *bedaṇḍe* mixes *kanda* meter and a pure *vṛtta* (Sanskrit) meter with an understanding of native poetic practices.

ಕಂದಂಗಳ್ ಪಲವಾಗಿರೆ
ಸುಂದರವೃತ್ತ್ತಂಗಳಕ್ಕರಂ ಚೌಪದಿ ಮ
ತ್ತ್ತಂ ದಲ್ ಗೀತಿಕೆ ತಿವದಿಗ
ಳಂದಂಬತ್ತೆಸೆಯೆ ಪೇೞ್ದೊಡದು ಚತ್ತಾಣಂ ೩೫

ಕಂದಂಗಳ್ ಪಲವಾಗಿರೆ ಸುಂದರ ವೃತ್ತಂಗಳ್ ಅಕ್ಕರಮ್ ಚೌಪದಿ ಮತ್ತಮ್ ದಲ್ ಗೀತಿಕೆ ತಿವದಿಗಳ್ ಅಂದಮ್ ಬೆತ್ತೆಸೆಯೆ ಪೇೞ್ದೊಡೆ ಅದು ಚತ್ತಾಣಮ್

ಕಂದಪದ್ಯಗಳು ಹಲವಿದ್ದು, ಅವುಗಳ ಜತೆಗೆ ಸುಂದರ ವೃತ್ತಗಳು, ಅಕ್ಕರ, ಚೌಪದಿ, ಗೀತಿಕೆ ಮತ್ತು ತಿವದಿಗಳು ಅಂದವಾಗಿ ಸೇರುವಂತೆ ಹೇಳಿದರೆ ಅದು ಚತ್ತಾಣಂ.

ಹೀಗೆ ವಿವಿಧ ರೀತಿಯ ಛಂದೋಬಂಧಗಳಿಂದ ಕೂಡಿದ ಕಾವ್ಯಪ್ರಕಾರ ಚತ್ತಾಣ ಎಂಬ ಹೆಸರಿನಲ್ಲಿ ಯಾವುದೂ ಕಂಡುಬಂದಿಲ್ಲ. ಆದರೆ ಕವಿರಾಜಮಾರ್ಗದ ಪೂರ್ವಕಾಲದಲ್ಲೇ ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸು ಮತ್ತು ದೇಶಿಛಂದಸ್ಸು ವಿಸ್ತಾರವಾಗಿ ಬಳಕೆಯಾಗುತ್ತಿದ್ದುವೆಂದೂ ಅವೆಲ್ಲ ಸೇರಿ ಕೆಲವು ಕಾವ್ಯಪ್ರಕಾರಗಳು ರೂಪುಗೊಂಡಿದ್ದುವೆಂದೂ ಸ್ಪಷ್ಟವಾಗುತ್ತದೆ.

35. If something is uttered beautifully with several *kanda* verses, some lovely *vṛttas,* and various native meters such as *akkara, caupadi, gītike,* and *tivadi*, it is called *cattāṇa.*

ಕನ್ನಡನಾಡು–ಜನ

The Kannada Country and Its People

ಕಾವೇರಿಯಿಂದಮಾ ಗೋ
ದವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯವಿಲೀನವಿಶದವಿಷಯವಿಶೇಷಂ ೩೬

ಕಾವೇರಿಯಿಂದಮ್ ಆ ಗೋದಾವರಿವರಮ್ ಇರ್ದ ನಾಡು ಅದು, ಆ ಕನ್ನಡದೊಳ್ ಭಾವಿಸಿದ ಜನಪದಮ್ ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷಮ್

ಕಾವೇರಿಯಿಂದ ಆ ಗೋದಾವರಿವರೆಗೂ ಇದ್ದ ನಾಡದು. ಆ ಕನ್ನಡ ನಾಡಿನಲ್ಲಿ ಸೇರಿದ ಜನಪದ (ಜನರ ವಾಸಪ್ರದೇಶ) ಭೂಮಂಡಲದ ಪ್ರಸಿದ್ಧ ಪ್ರದೇಶವಾಗಿದೆ.

ಇಲ್ಲಿ 'ಇದ್ದ ನಾಡು' ಎಂಬುದಕ್ಕೆ 'ಇದ್ದು ಬಂದ ನಾಡು' ಎಂದು ಅರ್ಥಹೇಳಬೇಕು. ಎರಡು ನದಿಗಳು ಗಡಿಪ್ರದೇಶವಾಗಿರುವ ಭಾಷಾ ಪ್ರದೇಶವನ್ನು ಇಷ್ಟು ಸ್ಪಷ್ಟವಾಗಿ ಸೂಚಿಸಿರುವುದು ಒಂದು ವಿಶೇಷ.

36. The Kannada country extends from the river Kāvēri to the Godāvarī. This wide countryside is a special location in the world.

It is a significant contribution of Śrīvijaya's to mark the geographical boundaries of the Kannada-speaking country. It is especially to be noted that two important rivers of South India, the Kāvēri and the Gōdāvari, were recognized in the ninth century as boundaries for the Kannada land.

ಅದಱೊಳಗಂ ಕಿಸುವೊೞಲಾ
ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ೩೭

ಅದಱೊಳಗಮ್ ಕಿಸುವೊೞಲಾ ವಿದಿತ ಮಹಾಕೊಪಣ ನಗರದಾ ಪುಲಿಗೆಱೆಯಾ ಸತ್ ಅಭಿಸ್ತುತಮಪ್ಪ ಒಂಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್

ಅದರಲ್ಲಿ (ಆ ಕನ್ನಡನಾಡಿನಲ್ಲಿ) ಕಿಸುವೊೞಲ, ಪ್ರಸಿದ್ಧ ಮಹಾಕೊಪಣ ನಗರದ, ಪುಲಿಗೆಱೆಯ, ಸ್ತುತ್ಯವಾದ ಒಂಕುಂದದ ನಡುವೆ ಇರುವ ನಾಡೇ ತಿರುಳ್ಗನ್ನಡನಾಡಾಗಿದೆ.

ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ತಿರುಳ್ಗನ್ನಡ ನಾಡನ್ನು ಗುರುತಿಸುವ ಪ್ರಯತ್ನ ೯ನೆಯ ಶತಮಾನದಲ್ಲೇ ನಡೆದಿರುವುದು ಒಂದು ವಿಶೇಷವೇ ಸರಿ. ಕಿಸುವೊೞಲ್ ಪಟ್ಟದಕಲ್ಲು, ಕೊಪಣ ಈಗಿನ ಕೊಪ್ಪಳ, ಪುಲಿಗೆಱೆ ಈಗಿನ ಲಕ್ಷ್ಮೇಶ್ವರ, ಒಂಕುಂದ ಈಗ ಒಕ್ಕುಂದ ಆಗಿವೆ.

37. There, the heartland of the Kannada language is in the midst of *Kisuvoḷal,* the famous *Kopaṇa* city, *Puligere*, and the praise-worthy *Oṅkunda.*

This is another significant verse locating places in the midst of which the core Kannada-speaking area existed. The author seems to be aware of the standard Kannada dialect of the day as spoken in that area. *Kisuvoḷal* (presently *Paṭṭadakal)*, *Koppaṇa (Koppaḷa), Puligere (Lakṣmīśvara), Oṅkunda (Okkunda)* are now in North Karnataka.

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ೩೮

ಪದನ್ ಅಱಿದು ನುಡಿಯಲುಮ್ ನುಡಿದುದನ್ ಅಱಿದು ಆರಯಲುಮ್ ಆರ್ಪರ್ ಆ ನಾಡವರ್ಗಳ್. ಚದುರರ್, ನಿಜದಿನ್ ಕುಱಿತು ಓದದೆಯುಮ್ ಕಾವ್ಯ ಪ್ರಯೋಗ ಪರಿಣತ ಮತಿಗಳ್

ಹದವರಿತು ಹೇಳಲು, ಹೇಳಿದುದನ್ನು ತಿಳಿದು ಶೋಧಿಸಬಲ್ಲವರು ಆ ನಾಡಿನವರು. ಅವರು ಚತುರರು. ಉದ್ದೇಶಪೂರ್ವಕವಾಗಿ ಓದದಿದ್ದರೂ ಕಾವ್ಯಪ್ರಯೋಗ ಮಾಡುವಷ್ಟು ಪರಿಣತಬುದ್ಧಿ ಇರುವಂಥವರು.

ಸಾಮಾನ್ಯವಾಗಿ ಪಂಡಿತರು ಅನಕ್ಷರಸ್ಥರನ್ನು ತಿರಸ್ಕಾರದಿಂದ ನೋಡುತ್ತಾರೆ. ಆದರೆ ಶ್ರೀವಿಜಯನು ವಿದ್ಯಾವಂತರಲ್ಲದಿದ್ದರೂ ಕನ್ನಡ ಜಾನಪದರು ಕಾವ್ಯಪ್ರಯೋಗ ಮಾಡಬಲ್ಲರೆಂದು ಪ್ರಶಂಸಿಸಿದ್ದಾನೆ.

38. The people of that land know how to express themselves appropriately and they have full awareness of what they say. Even without targeted training, they are skillful and their proficient intellects are disposed toward creating poetry.

This and the following two verses give a positive impression of the people of the Kannada country. They speak very highly of Kannada people, who are described as having noteworthy literary powers to create and to be discriminating.

ಕುಱಿತವರಲ್ಲದೆ ಮತ್ತಂ
ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿಱುವಕ್ಕಳುಮಾ ಮೂಗರು
ಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ ೩೯

ಕುಱಿತವರಲ್ಲದೆ ಮತ್ತಮ್ ಪೆಱರುಮ್ ತಂತಮ್ಮ ನುಡಿಯೊಳ್ ಎಲ್ಲರ್ ಜಾಣರ್, ಕಿಱುವಕ್ಕಳುಮ್ ಆ ಮೂಗರುಮ್ ಅಱಿಪಲ್ಕೆ ಅಱಿವರ್ ವಿವೇಕಮನ್ ಮಾತುಗಳನ್

ಕಲಿತವರು ಮಾತ್ರವಲ್ಲದೆ ಬೇರೆಯವರು ಕೂಡ ತಮ್ಮ ತಮ್ಮ ಮಾತುಗಳಲ್ಲಿ ಜಾಣರು. ಚಿಕ್ಕಮಕ್ಕಳು, ಮೂಗರು ಕೂಡ ವಿವೇಕದಿಂದ ಕೂಡಿದ ಮಾತುಗಳನ್ನಾಡಬಲ್ಲರು.

39. It is not only the learned, but also others, who are skillful in using their own language. Even children and the mute, by birth, display a deep understanding of speech and an ability to communicate.

ಜಾಣರ್ಕಳಲ್ಲದವರುಂ
ಪೂಣೆಗರಱಿಯದೆಯುಮಱಿವವೋಲವಗುಣದಾ
ತಾಣಮನಿನಿಸೆಡೆವೆತ್ತೊಡೆ
ಮಾಣದೆ ಪಿಡಿದದನೆ ಕೃತಿಗಳಂ ಕೆಡೆನುಡಿವರ್ ೪೦

ಜಾಣರ್ಕಳ್ ಅಲ್ಲದ ಅವರುಮ್ ಪೂಣೆಗರ್, ಅಱಿಯದೆಯುಮ್ ಅಱಿವವೋಲ್ ಅವಗುಣದಾ ತಾಣಮನ್ ಇನಿಸು ಎಡೆವೆತ್ತೊಡೆ ಮಾಣದೆ ಪಿಡಿದು, ಅದನೆ ಕೃತಿಗಳನ್ ಕೆಡೆ ನುಡಿದರ್

ಜಾಣರಲ್ಲದವರು ಕೂಡ ಕಾರ್ಯಸಾಧಕರು. ತಿಳಿಯದಿದ್ದರೂ ತಿಳಿದವರಂತೆ, ಅವಗುಣ ಸ್ವಲ್ಪವಾಗಿದ್ದರೂ ಅದನ್ನೇ ಹಿಡಿದು ಕೃತಿಗಳಲ್ಲಿ ದೋಷವನ್ನು ಎಣಿಸುತ್ತಾರೆ.

40. And even those who are not skillful (in using the language) make an effort. Even though not knowledgeable, they pretend to be so. Without hesitation, they comment badly on literary works.

ಸಕ್ಕದಮುಂ ಪಾಗದಮುಮ
ದಕ್ಕುಂ ಬಗೆದಂತೆ ಸಮಱಿ ಪೇೞಲ್ ಮುನ್ನಂ
ನಿಕ್ಕುವಮೊಳವಪ್ಪುದಱಿಂ
ತಕ್ಕಂತವಱವಱ ಲಕ್ಷ್ಯಮುಂ ಲಕ್ಷಣಮುಂ ೪೧

ಸಕ್ಕದಮುಮ್ ಪಾಗದಮುಮ್ ಅದು ಅಕ್ಕುಮ್ ಬಗೆದಂತೆ ಸಮಱಿ ಪೇೞಲ್ ಮುನ್ನಮ್ ನಿಕ್ಕುವಮ್ ಒಳವು ಅಪ್ಪುದಱಿನ್ ತಕ್ಕಂತೆ ಅವಱವಱ ಲಕ್ಷ್ಯಮುಮ್ ಲಕ್ಷಣಮುಮ್

ಸಂಸ್ಕೃತದಲ್ಲಿ ಮತ್ತು ಪ್ರಾಕೃತದಲ್ಲಿ ಲಕ್ಷ್ಯಲಕ್ಷಣಗಳು ನಿರ್ದಿಷ್ಟವಾಗಿ ಇರುವುದರಿಂದ ಯಥೇಚ್ಛವಾಗಿ ಕಾವ್ಯ ರಚನೆ ಮಾಡಲು ಸಾಧ್ಯ.

41. Sanskrit and Prakrit are well-established languages, with their characteristic features and examples. It is easier to create poetry in those languages.

ಅರಿದಾದಂ ಕನ್ನಡದೊಳ್
ತಿರಿಕೊಱಿಗೊಂಡಱಿಯೆ ಪೇೞ್ವೆನೆಂಬುದಿದಾರ್ಗಂ
ಪರಮಾಚಾರ್ಯರ ವೋಲ್ ಸ
ಯ್ತಿರಲಱಿಯರ್ ಕನ್ನಡಕ್ಕೆ ನಾಡವರೋಜರ್ ೪೨

ಅರಿದಾದಮ್ ಕನ್ನಡದೊಳ್ ತಿರಿಕೊಱಿಗೊಂಡು ಅಱಿಯೆ ಪೇೞ್ವೆನ್ ಎಂಬುದು ಇದು ಆರ್ಗಮ್ ಪರಮಾಚಾರ್ಯರವೋಲ್ ಸಯ್ತು ಇರಲ್ ಅಱಿಯರ್ ಕನ್ನಡಕ್ಕೆ ನಾಡವರ್ ಓಜರ್

ಅರಿದಾದ ಕನ್ನಡದಲ್ಲಿ ಅಲ್ಲಿ, ಇಲ್ಲಿ ಭಿಕ್ಷೆ ಬೇಡಿ, ಆ ರೀತಿ ತಿಳಿದ ವಿಷಯವನ್ನು ಪರಮಾಚಾರ್ಯರಂತೆ ಹೇಳಲು (ಈ ನಾಡಿನವರಿಗೆ) ತಿಳಿಯದು. ಆದರೆ ಕನ್ನಡದಲ್ಲಿ ಆ ನಾಡಿನವರೇ ಗುರುಗಳು.

ಸಂಸ್ಕೃತ ಮತ್ತು ಪ್ರಾಕೃತದ ಪರಮಾಚಾರ್ಯರಿಗೆ ಲಕ್ಷ್ಯಲಕ್ಷಣಗಳು ಸಮೃದ್ಧವಾಗಿ ಇರುವುದರಿಂದ ಅವರಿಗೆ ಕಾವ್ಯರಚನೆ ಕಷ್ಟವೆನಿಸದು. ಆದರೆ ಕನ್ನಡ ಕವಿಗಳಿಗೆ ಆ ಸೌಲಭ್ಯವಿಲ್ಲ. ಆದರೆ ಕನ್ನಡದಲ್ಲಿ ಆ ನಾಡಿನವರೇ ಗುರುಗಳೆಂಬುದನ್ನು ಕವಿ ಇಲ್ಲಿ ಸೂಚಿಸುವಂತಿದೆ.

42. It is difficult to create poetry in Kannada. Those who collect pieces from here and there and then claim to have composed poetry have not created poetry. Native scholars do not create poetry the way the supreme masters (Sanskrit and Prakrit poets) do. But, in the Kannada language, they are the masters.

Indirectly, Śrīvijaya speaks about the limitations in creating Kannada poetry without knowledge of Sanskrit and Prakrit poetry.

ಕಾವ್ಯದೋಷಗಳು
Faults in Poetry

ಅವಗುಣಮಿನಿತಾದೊಡಮಾ
ಕವಿತಾಬಂಧಮನಶೇಷಮುಂ ದೂಷಿಸುಗುಂ
ಸವಿಳಾಸಲೋಲಲೋಚನ
ವಿವರಮನೆಡೆವೆತ್ತ ಕಸದ ವೋಲನವರತಂ **೪೩**

ಅವಗುಣಮ್ ಇನಿತು ಆದೊಡಮ್ ಆ ಕವಿತಾಬಂಧಮನ್ ಅಶೇಷಮನ್ ದೂಷಿಸುಗುಮ್ ಸವಿಳಾಸಲೋಲ ಲೋಚನ ವಿವರಮಮ್ ಎಡೆವೆತ್ತ ಕಸದವೋಲ್ ಅನವರತಮ್

ವಿಲಾಸದಿಂದ ಚಲಿಸುವ ಕಣ್ಣಿನಲ್ಲಿ ಕಸ ಸೇರಿದರೆ ಹೇಗೋ ಹಾಗೆ ಒಂದಿಷ್ಟು ದೋಷವಿದ್ದರೂ ಕವಿತಾಬಂಧವನ್ನು ಸಂಪೂರ್ಣವಾಗಿ ಅದು ಕೆಡಿಸುತ್ತದೆ.

43. Even a minor flaw completely hampers a poetic composition – every time – like a particle of dust in eyes that are flitting gracefully.

ಅದಱಿಂದಲಸದೆ ಪೀನಂ
ಪದೆಯದೆ ಪಾಂಗಱಿದು ದೋಷಮಂ ಪಿಂಗಿಸಿ ತ
ಪ್ಪದೆ ಬಗೆದು ಪೇೞ್ವುದಾಗಮ
ಮುದಾರನೃಪತುಂಗದೇವವಿದಿತಕ್ರಮದಿಂ ೪೪

ಅದಱಿಂದ ಅಲಸದೆ ಪೀನಮ್ ಪದೆಯದೆ ಪಾಂಗು ಅಱಿದು ದೋಷಮಮ್ ಪಿಂಗಿಸಿ ತಪ್ಪದೆ ಬಗೆದು ಪೇೞ್ವುದು ಆಗಮಮನ್ ಉದಾರ ನೃಪತುಂಗದೇವ ವಿದಿತ ಕ್ರಮದಿನ್

ಅದರಿಂದ ಉದಾಸೀನ ಮಾಡದೆ, ವಿಶೇಷವೆಂದು ಭಾವಿಸದೆ, ಅದರ ಸ್ವರೂಪವನ್ನು ತಿಳಿದುಕೊಂಡು, ಉದಾರನಾದ ನೃಪತುಂಗನು ಹೇಳಿದ ನಿಯಮದಂತೆ ದೋಷರಹಿತವಾಗಿ ಹೇಳತಕ್ಕದ್ದು.

44. Therefore, after removing poetic faults without fail, according to Nṛpatuṅgadēva one should express anything one wishes, without indifference or obligation.

ಗೀತಿಕೆ ಕಾಣನೇಗೆಯ್ದುಂ ತನ್ನ ದೋಷಮಂ
ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ
ಪೂಣಿಗನಾದುದಱಿಂ ಪೆಱರಿಂ
ಜಾಣರಿನೋದಿಸಿ ಪೇೞ್ವುದು ಕಬ್ಬಮಂ ೪೫

ಕಾಣನ್ ಏಗೆಯ್ದುಮ್ ತನ್ನ ದೋಷಮನ್ ಕಾಣದಂತೆ ಎಂದುಮ್ ಕಣ್ಗಳ್ ತಮ್ಮ ಕಾಡಿಗೆಯನ್ ಪೂಣಿಗನ್ ಆದುದಱಿನ್ ಪೆಱರಿನ್ ಜಾಣರಿನ್ ಓದಿಸಿ ಪೇೞ್ವುದು ಕಬ್ಬಮನ್

ಕಣ್ಣುಗಳು ಎಂದೂ ತಮ್ಮ ಕಾಡಿಗೆಯನ್ನು ಕಾಣದಂತೆ ಯಾವ ಮನುಷ್ಯನೂ ತನ್ನ ದೋಷವನ್ನು ತಾನೇ ಕಾಣಲಾರನು. ಆದುದರಿಂದ ಅಭ್ಯಾಸಶೀಲನಾದವನು ಜಾಣರಾದ ಇತರರಿಂದ ತನ್ನ ಕಾವ್ಯವನ್ನು ಓದಿಸಿ ಆಮೇಲೆ ಪ್ರಕಟಿಸಬೇಕು.

ಜಾಣರಾದ ಓದುಗರಿಂದ ಅಭಿಪ್ರಾಯವನ್ನು ಸ್ವೀಕರಿಸಬೇಕೆಂಬ ಅಪೂರ್ವ ಯೋಚನೆಯನ್ನು ಮುಂದಿಟ್ಟಿರುವುದು ಕವಿರಾಜಮಾರ್ಗದ ವೈಶಿಷ್ಟ್ಯ.

45. Just as eyes cannot see the lamp black (cosmetic) inside of them, one cannot see one's own faults. Therefore, one interested in perfection should ask an intelligent scholar to read his work before he brings it to light.

ಕನ್ನಡ ದೇಸಿ

Kannada Nativity

ದೋಸಮಿನಿತಂದು ಬಗೆದು
ದ್ಭಾಸಿಸೆತಱಿಸಂದು ಕನ್ನಡಂಗಳೊಳೆಂದುಂ
ವಾಸುಗಿಯುಮಱಿಯಲಾಱದೆ
ಬೇಸಱುಗುಂ ದೇಸಿ ಬೇಱೆವೇಱಪ್ಪುದಱಿಂ ೪೬

ದೋಸಮ್ ಇನಿತು ಎಂದು ಉದ್ಭಾಸಿಸೆ ತಱೆಸಂದು ಕನ್ನಡಂಗಳೊಳ್ ಎಂದುಮ್ ವಾಸುಗಿಯುಮ್ ಅಱೆಯಲಾಱದೆ ಬೇಸಱುಗುಮ್ ದೇಸಿ ಬೇಱೆ ಬೇಱೆ ಅಪ್ಪುದಱೆನ್

ದೇಸಿ ಬೇರೆಬೇರೆಯಾಗಿರುವುದರಿಂದ ಆದಿಶೇಷನು ಕೂಡ ದೋಷ ಈ ರೀತಿಯದೆಂದು ಸ್ಪಷ್ಟವಾಗಿ ಹೇಳಲಾಗದೆ ಬೇಸರಗೊಳ್ಳುತ್ತಾನೆ.

ಕನ್ನಡದ ದೇಸಿಯಲ್ಲಿರುವ ಬಗೆಗಳನ್ನು ಗುರುತಿಸಿ, ಅವುಗಳಲ್ಲಿ ವ್ಯತ್ಯಾಸ ಇರುವುದನ್ನು ಹೇಳಿದ್ದು ಕವಿರಾಜಮಾರ್ಗದ ಇನ್ನೊಂದು ವಿಶೇಷ.

46. With the native language having so many variations, even Vāsuki would become frustrated, unable to identify and fix the faults in the usage of Kannada dialects.

Vāsuki, with his one-thousand hoods, is considered by tradition to be a paragon of scholarship.

ಅಂತುಂ ಪುರಾಣಕವಿಗಳ
ಸಂತತ ಮಾರ್ಗಗತಗದಿತ ದೋಷಂಗಳುಮಂ

ಚಿಂತಿಸಿ ಮತ್ತೆನ್ನಱಿವುದು
ಮಂ ತಱಿಸಲೆ ಬುಧಜನಕ್ಕೆ ಕೆಲವಂ ಪೇೞ್ವೆಂ ೪೭

ಅಂತುಮ್ ಪುರಾಣಕವಿಗಳ ಸಂತತ ಮಾರ್ಗಗತಗದಿತ ದೋಷಂಗಳುಮನ್ ಚಿಂತಿಸಿ ಮತ್ತೆ ಎನ್ನ ಅಱಿವುದುಮನ್ ತಱಿಸಲೆ ಬುಧಜನಕ್ಕೆ ಕೆಲವನ್ ಪೇೞ್ವೆನ್

ಆದರೂ ಪೂರ್ವಕವಿಗಳ ಪರಂಪರಾಗತ ಮಾರ್ಗದಲ್ಲಿ ಹೇಳಲಾಗಿರುವ ದೋಷಗಳ ಬಗ್ಗೆ ಚಿಂತಿಸಿ, ನನಗೆ ತಿಳಿದಿರುವುದನ್ನೂ ಸೇರಿಸಿ, ವಿದ್ವಾಂಸರಿಗಾಗಿ ಕೆಲವನ್ನು ಈಗ ಹೇಳುತ್ತೇನೆ.

47. Therefore, considering the faults mentioned, with respect to the expressions of the ancient poets, I have decided to address only a few of them.

ನೆಲಸಿದ ಕಾವ್ಯಂ ಕಾವ್ಯ
ಕ್ಕೆ ಲಕ್ಷಣಂ ಸತತಮೆಂದೆ ಪೞಗನ್ನಡಮಂ
ಪೊಲಗಿಡಿಸಿ ನುಡಿವರಾಗಮ
ಬಲಹೀನರ್ ದೇಸಿಯಲ್ಲದೆಂದಱಿದಿರ್ದುಂ ೪೮

ನೆಲಸಿದ ಕಾವ್ಯಮ್ ಕಾವ್ಯಕ್ಕೆ ಲಕ್ಷಣಮ್ ಸತತಮ್ ಎಂದೆ ಪೞಗನ್ನಡಮನ್ ಪೊಲಗೆಡಿಸಿ ನುಡಿವರ್ ಆಗಮ ಬಲಹೀನರ್ ದೇಸಿ ಅಲ್ಲ ಅದು ಎಂದು ಅಱಿದಿರ್ದುಮ್

ರೂಢಿಯಲ್ಲಿರುವ ಕಾವ್ಯವೇ ಕಾವ್ಯಕ್ಕೆ ಲಕ್ಷಣವೆಂದು ಭಾವಿಸಿ ಶಾಸ್ತ್ರಜ್ಞಾನವಿಲ್ಲದವರು ಹಳಗನ್ನಡವೆಲ್ಲಾ ದೇಸಿ ಅಲ್ಲವೆಂದು ತಿಳಿದಿದ್ದರೂ ಅದೇ ಹಳಗನ್ನಡವನ್ನೇ ಕೆಡಿಸಿ ಹೇಳುವರು.

48. Those weak in scholarship think that only older poetry reveals the sum of poetry's characteristics. Thinking something as not native to Kannada, they use a version of Old Kannada that spoils their compositions.

ಪೊಡವಿಪತಿಗೊರೆವೆನೆನೆ ಪೇ
ೞ್ವೊಡೆಯದುವದುಕರಿಸಿ ಕಬ್ಬಿಗರ್ ದೂಱಿನೆಯುಂ

ಹಡುವಸುಮಱಿಸೆಟ್ಟಿಸುಗಿ
ಮ್ಮುಡಿಯೊಳಮಾರ್ಗೆಂದು ನುಡಿವ ಪೞಗನ್ನಡ ಮುಂ (?) ೪೯

ಪೊಡವಿಪತಿಗೆ ಒರೆವೆನೆನೆ ಪೇೞ್ವೊಡೆ ಅದುವದುಕರಿಸಿ ಕಬ್ಬಿಗರ್ ದೂಱಿನೆಯುಮ್ ಹಡುವಸು ಮಱಿಸು ಎಟ್ಟಿಸುಗೆ ಇಮ್ಮುಡಿಯೊಳಮ್ ಆರ್ಗೆ ಎಂದು ನುಡಿವ ಪೞಗನ್ನಡಮುಮ್

ಹಳಗನ್ನಡ ಪದಗಳನ್ನು 'ಪೊಲಗೆಡಿಸಿ' ಹೇಳುವುದಕ್ಕೆ ಉದಾಹರಣೆಯಾಗಿರುವುದರಿಂದ ಇಲ್ಲಿ ಅರ್ಥ ಸ್ಪಷ್ಟವಾಗಿಲ್ಲ.

49. ***'Poḍavipatige oreven', 'pēl̲voḍe', 'aduvadukarisi', 'kabbigar dūr', 'haḍuvasu', 'mar̲esu', 'eṭṭisu', 'emmuḍiyoḷaṁ', 'ārge'*- are old Kannada expressions.**

These Old Kannada words are probably collected from contemporary works but their meaning is not clear.

ದೊರೆಕೊಂಡಿರೆ ಸೊಗಯಿಸುಗುಂ
ಪುರಾಣಕಾವ್ಯಪ್ರಯೋಗದೊಳ್ ತತ್ಕಾಲಂ
ವಿರಸಂ ಕರಮವು ದೇಸಿಗೆ
ಜರದ್ವಧೂವಿಷಯಸುರತರಸರಸಿಕತೆವೋಲ್ ೫೦

ದೊರೆಕೊಂಡಿರೆ ಸೊಗಯಿಸುಗುಮ್ ಪುರಾಣ ಕಾವ್ಯ ಪ್ರಯೋಗದೊಳ್ ತತ್ಕಾಲಮ್. ವಿರಸಮ್ ಕರಮ್ ಅವು ದೇಸಿಗೆ ಜರದ್ವಧೂ ವಿಷಯ ಸುರತ ರಸ ರಸಿಕತೆವೋಲ್

ಪ್ರಾಚೀನ ಕಾವ್ಯಗಳಲ್ಲಿ ಇಂಥವು ಬಂದಾಗ ತತ್ಕಾಲಕ್ಕೆ ಸೊಗಸಾಗಿರುತ್ತದೆ. ಮುದುಕಿಯ ಜತೆ ಸಂಗವನ್ನು ಬಯಸುವ ರಸಿಕತೆಯಂತೆ ಅವು ದೇಸಿಗೆ ವಿರಸ ಎನ್ನಬಹುದು.

ಸಮಂಜಸವಲ್ಲದ ಪ್ರಾಚೀನ ಪದಗಳ ಬಗ್ಗೆ ಲೇಖಕನಿಗಿರುವ ಅಭಿಪ್ರಾಯವನ್ನು ಈ ಪದ್ಯ ಸ್ಪಷ್ಟಪಡಿಸುತ್ತದೆ.

50. Archaic words look appealing for a moment, when they are used by ancient poets, akin to

having a taste for making love with an old woman. Using archaic words is definitely not palatable to native poets.

ಸಂಸ್ಕೃತ ಪದಗಳ ಬೆರಕೆ
Mixing of Sanskrit Words

ಸಮಸಂಸ್ಕೃತಂಗಳೊಳ್ ಸ
ಯ್ತಮರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ
ಗಮಕೋವಿದನಿಗದಿತಮಾ
ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ ೫೧

ಸಮಸಂಸ್ಕೃತಂಗಳೊಳ್ ಸಯ್ತು ಅಮರ್ದಿರೆ ಕನ್ನಡಮನ್ ಅಱಿದು ಪೇೞ್ಗೆ ಎಂಬುದು ಇದು ಆಗಮ ಕೋವಿದ ನಿಗದಿತ ಮಾರ್ಗಮ್ ಇದನ್ ಬೆರಸಲ್ಕಮ್ ಆಗದು ಈ ಸಕ್ಕದದೊಳ್

ಸಮಸಂಸ್ಕೃತಗಳ ಜತೆ ಚೆನ್ನಾಗಿ ಹೊಂದಿಕೊಳ್ಳುವಂತಿದ್ದರೆ ಮಾತ್ರ ಕನ್ನಡವನ್ನು ತಿಳಿದುಕೊಂಡು ಹೇಳಬೇಕು. ಇದು ಶಾಸ್ತ್ರಕಾರರು ನಿಶ್ಚಯಿಸಿದ ಮಾರ್ಗ. ಇದನ್ನು ಸಂಸ್ಕೃತದೊಂದಿಗೆ ಬೆರಸಲು ಸಾಧ್ಯವಿಲ್ಲ.

ಸಮಸಂಸ್ಕೃತಗಳ ಜತೆ ಹೊಂದಿಕೊಳ್ಳುವುದನ್ನು ತಿಳಿದುಕೊಳ್ಳಬೇಕೆಂದು, ಮುಂದಿನ ಉದಾಹರಣೆಯಲ್ಲಿರುವ ಅವ್ಯಯಗಳನ್ನು ಬೆರಸಬಾರದೆಂದು ಸೂಚಿಸಲಾಗಿದೆ. ತನ್ನ ಕಾಲದ ಕಾವ್ಯರಚನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕವಿರಾಜಮಾರ್ಗಕಾರನು ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಮಾಡಿರಬಹುದು.

51. Traditional scholars prescribe only a harmonious usage of words identical with Sanskrit (*sama-saṁskṛta*), where Sanskrit words are used in Kannada with little change. Kannada words cannot be mixed with Sanskrit in the following ways.

Like any other grammarian, Śrīvijaya discusses in detail the implications of mixing Kannada and Sanskrit words. The structure of Kannada in the 9th century might have

demanded the author to comment on the process of creating literary works.

ಅಹರಹರುಚ್ಚೈರ್ನೀಚೈ
ರ್ಮುಹುರ್ಮುಹುರಿತಸ್ತತಂ ಪುನಃ ಪುನರಂತ
ರ್ಬಹಿರಾದಿಹ ಪ್ರಾದುರಹೋ
ಸಹಸಾದಿಗಳವ್ಯಯಂಗಳಸಹಾಯಂಗಳ್ ೫೨

ಅಹರಹಃ, ಉಚ್ಚೈಃ, ನೀಚೈಃ, ಮುಹುರ್ಮುಹುಃ, ಇತಸ್ತತಮ್, ಪುನಃಪುನಃ, ಅಂತರ್, ಬಹಿರ್, ಆತ್ (ಆ), ಇಹ, ಪ್ರಾದುರ್, ಅಹೋ, ಸಹಸಾ ಆದಿಗಳ್ ಅವ್ಯಯಂಗಳ್ ಅಸಹಾಯಂಗಳ್

ಅಹರಹಃ, ಉಚ್ಚೈಃ, ನೀಚೈಃ, ಮುಹುರ್ಮುಹುಃ, ಇತಸ್ತತಮ್, ಪುನಃಪುನಃ, ಅಂತರ್, ಬಹಿರ್, ಆತ್ (ಆ), ಇಹ, ಪ್ರಾದುರ್, ಅಹೋ, ಸಹಸಾ ಮೊದಲಾದವು ಅವ್ಯಯಗಳು, ಅವು ಅಸಹಾಯಕವಾಗಿರುತ್ತವೆ.

ಇಲ್ಲಿ ಹೆಸರಿಸಿರುವ ಅವ್ಯಯಗಳು ಅಸಹಾಯಕ ಎಂದು ಹೇಳಿದಾಗ, ಅವುಗಳಿಗೆ ಕನ್ನಡ ಪ್ರತ್ಯಯಗಳು ಸೇರುವುದಿಲ್ಲವೆಂದು ಸೂಚಿಸಿದಂತಾಯಿತು.

52. Indeclinables such as *'aharaḥ'* (everyday), *'uccaiḥ'* (up), *'nīcaiḥ'* (down), *'muhur muhuḥ'* (repeatedly)),*'itastatam'* (this way and that way), *'punaḥ punah'* (again and again), *'antar'* (inside), *'bahir'* (outside), *'ā', iha', 'prādur', 'sahasā'* etc. are not used with Kannada cases.

In this and the following verses, Śrīvijaya gives examples of Sanskrit words that are not to be mixed with Kannada words, and the ways in which they can be used properly.

ಬೆರಸಿರೆ ಕನ್ನಡದೊಳ್ ಬಂ
ಧುರಮಾಗದು ಕಾವ್ಯರಚನೆ ಪೇೞ್ದೊಡೆ ಪೀನಂ
ಪರುಷತರಮಕ್ಕುಮೊತ್ತುಂ
ಗರಡೆಯ ಮದ್ದಳೆಯ ಜರ್ಝರಧ್ವನಿಗಳ ವೋಲ್ ೫೩

ಬೆರಸಿರೆ ಕನ್ನಡದೊಳ್ ಬಂಧುರಮ್ ಆಗದು ಕಾವ್ಯ ರಚನೆ ಪೇಟಿಕ್ಕೊಡೆ ಪೀನಮ್ ಪುರುಷತರಮ್ ಅಕ್ಕುಮ್ ಒತ್ತುಮ್ ಕರಡೆಯ ಮದ್ದಳೆಯ ಜರ್ಝರ ಧ್ವನಿಗಳವೋಲ್

ಇವನ್ನು ಕನ್ನಡದಲ್ಲಿ ಬೆರಸಿ ಕಾವ್ಯರಚನೆ ಮಾಡಿದರೆ ಅದು ಸುಂದರ ವಾಗಿರುವುದಿಲ್ಲ. ಹಾಗೆ ಹೇಳಿದರೆ ಅದು ಒತ್ತಿ ಬಾರಿಸುವ ಕರಡೆ ಮತ್ತು ಮದ್ದಳೆಯ ಕರ್ಕಶ ಧ್ವನಿಯಂತಿರುತ್ತದೆ.

ಕರಡೆ ಮತ್ತು ಮದ್ದಳೆಗಳ ಧ್ವನಿ ಕರ್ಕಶವಾಗಿರುತ್ತದೆಂಬುದು ಕವಿರಾಜ–ಮಾರ್ಗಕಾರನ ಅಭಿಪ್ರಾಯವೆಂದು ಭಾವಿಸಬೇಕು.

53. If these (Sanskrit or Prakrit) words are mixed with Kannada poetic compositions, the effect is not pleasing but harsh, like the splashing sounds of *karaḍe* and *maddaḷe.*

Saying that the sounds of *karaḍe* and *maddaḷe* – popular percussion instruments – are harsh is the personal view of the author.

ಬಹಿರಂತರುಪವನಂಗಳೊ
ಳಹರಹಮಾ ಪರಭೃತಂಗಳುಲಿವ ರವಂಗಳ್
ಸಹಸಾ ತಳಮಳಗೊಳಸಿದ
ವಹೋ ಮನಂಗಳನಿತಸ್ತತಂ ವಿರಹಿಗಳಾ ೫೪

ಬಹಿರ್ ಅಂತರ್ ಉಪವನಂಗಳೊಳ್ ಅಹರಹಮ್ ಆ ಪರಭೃತಂಗಳ್ ಉಲಿವ ರವಂಗಳ್ ಸಹಸಾ ತಳಮಳಗೊಳಿಸಿದುವು ಅಹೋ ಮನಂಗಳನ್ ಇತಸ್ತತಮ್ ವಿರಹಿಗಳಾ

"ಹೊರಗೆ ಮತ್ತು ಒಳಗೆ ಇರುವ ಉಪವನಗಳಲ್ಲಿ ಕೋಗಿಲೆಗಳು ಯಾವಾಗಲೂ ಉಲಿಯುವ ಧ್ವನಿಗಳು ವಿರಹಿಗಳ ಮನಸ್ಸುಗಳನ್ನು ಒಮ್ಮೆಲೆ ತಳಮಳಗೊಳಿಸಿದುವು."

ಸಂಸ್ಕೃತ ಅವ್ಯಯಗಳನ್ನು ನೇರವಾಗಿ ಬಳಸಿದಾಗ ಕನ್ನಡದ ಬಳಕೆ ಅಸಹಜವಾಗುತ್ತದೆ. ಬಹಿರ್, ಅಂತರ್, ಅಹರಹಮ್, ಸಹಸಾ, ಇತಸ್ತತಮ್ ಎಂಬುವು ಕನ್ನಡ ರಚನೆಗೆ ಹೊಂದಿಕೆಯಾಗುತ್ತಿಲ್ಲ.

54. ***"bahirantarupavanaṅgaḷo
ḷaharahamā parabhṛtaṅgaḷuliva ravaṅgaḷ
sahasā taḷamaḷagoḷisida
vahō manaṅgaḷanitastatam virahigaḷā"***

All of these phrases convey the sounds of cuckoo birds, which disturb the minds of separated lovers: '*bahirantarupavanagaḷoḷ*', '*aharaham*', '*parabhṛtamgaḷu liva ravaṅgaḷ*', '*sahasātaḷamaḷagoḷisidavahō', 'manaṅga-ḷanitastataṁ*', and *virahigaḷā.* Here, the author seems to be against the artificial mixing of Sanskrit and Kannada words and case suffixes.

ವಿದಿತಸಮಸಂಸ್ಕೃತೋದಿತ
ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್
ಮುದಮನವು ತರ್ಕುಮತಿಶಯ
ಮೃದಂಗಸಂಗೀತಕಾದಿ ಮಧುರರವಂಬೋಲ್ ೫೫

ವಿದಿತ ಸಮಸಂಸ್ಕೃತ ಉದಿತ ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್ ಮುದಮನ್ ಅವು ತರ್ಕುಮ್ ಅತಿಶಯ ಮೃದಂಗ ಸಂಗೀತಕಾದಿ ಮಧುರ ರವಂಬೋಲ್

ಪ್ರಸಿದ್ಧವಾದ ಸಮಸಂಸ್ಕೃತ ಪದಗಳಿಗೆ ಹೊಂದಿಕೊಳ್ಳುವಂತೆ ಕನ್ನಡ ಪದಗಳು ಬೆರಸಿ ಬರುವುದಾದರೆ ಅತಿಶಯವಾದ ಮೃದಂಗ ಸಂಗೀತದ ಮಧುರ ಧ್ವನಿಯಂತೆ ಅವು ಸಂತೋಷವನ್ನು ಉಂಟುಮಾಡುತ್ತವೆ.

ಸಂಸ್ಕೃತ ಪದಗಳನ್ನು ಬಳಸುವುದಾದರೆ ಅವ್ಯಯಗಳನ್ನು ನೇರವಾಗಿ ಬಳಸದೆ, ಸಮಸಂಸ್ಕೃತ ಪದಗಳನ್ನು ಯಾವರೀತಿ ಬಳಸಬಹುದೆಂಬುದನ್ನು ಶ್ರೀವಿಜಯ ಸ್ಪಷ್ಟಪಡಿಸಿದ್ದಾನೆ. ಅಲ್ಲದೆ, ಈ ರೀತಿ ಮಾಡಿದರೆ ಅದು ಮೃದಂಗ ಧ್ವನಿಯಂತೆ ಮಧುರವಾಗಿರುತ್ತದೆಂದು ಅಭಿಪ್ರಾಯಪಟ್ಟಿದ್ದಾನೆ.

55. If these Sanskrit words, however, are used in conformity with Kannada words, the effect will bring happiness, like the pleasing sound of the *mṛdaṅga.*

The *mṛdaṅga* is a percussion instrument used as an accompaniment in Karnatak music.

ಬಹಿರುದ್ಯಾನಾಂತರದೊಳ್
ಸಹಸೋದಿತ ಮತ್ತಕೋಕಿಲೋಚ್ಚೈರ್ಧ್ವಾನಂ
ಮುಹುರಾಕರ್ಣಿಸೆ ಪಡೆದ
ತ್ತಹರ್ನಿಶಂ ಪೆರ್ಚನಂತರಂಗಕ್ಕೆನ್ನಾ ೫೬

ಬಹಿರ್ ಉದ್ಯಾನ ಅಂತರದೊಳ್ ಸಹಸಾ ಉದಿತ ಮತ್ತಕೋಕಿಲಾ ಉಚ್ಚೈಃ ಧ್ವಾನಮ್ ಮುಹುರ್ ಆಕರ್ಣಿಸೆ ಪಡೆದತ್ತು ಅಹರ್ನಿಶಮ್ ಪೆರ್ಚನ್ ಅಂತರಂಗಕ್ಕೆ ಎನ್ನಾ

"ಬಹಿರುದ್ಯಾನದಲ್ಲಿ ಒಮ್ಮಲೆ ಉಂಟಾದ ಮತ್ತಕೋಕಿಲಾಧ್ವನಿ ಮತ್ತೆ ಮತ್ತೆ ಕೇಳಿ ಬಂದು ಹಗಲುರಾತ್ರಿ ನನ್ನ ಅಂತರಂಗಕ್ಕೆ ಅತಿಶಯವಾದ ಹರ್ಷವನ್ನುಂಟುಮಾಡಿತು".

ಈ ಉದಾಹರಣೆಯಿಂದ 'ಬಹಿರ್', 'ಸಹಸಾ' ಮುಂತಾದವನ್ನು ಕನ್ನಡದಲ್ಲಿ ಹೇಗೆ ಬಳಸಬಹುದೆಂಬುದನ್ನು ಶ್ರೀವಿಜಯ ತೋರಿಸಿದ್ದಾನೆ.

56. ***"bahirudyānāntaradoḷ***
sahasōdita mattakōkilōlōccairdhvānam
muhurākarṇise paḍeda
ttaharniśam percanantaraṅgakkennā"

"In the garden outside, the lofty noise made by cuckoos was heard again and again and it made me happy everyday." In the above example, the author is suggesting that words like '*bahir'*, '*antar'*, '*sahasā*', '*muhur'* etc. should be used in accordance with Kannada grammatical rules. When this is the case, the effect is pleasing.

ನೆಗಟ್ದಿರ್ದ ಕನ್ನಡಂಗಳೊ
ಳಗಣಿತಗುಣವಿದಿತಸಂಸ್ಕೃತೋಕ್ತಿಕ್ರಮಮಂ
ಬಗೆದೊಂದುಮಾಡಿ ಪೇೞ್ದೊಡೆ
ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ ೫೭

ನೆಗೞ್ದ ಇರ್ದ ಕನ್ನಡಂಗಳೊಳ್ ಅಗಣಿತ ಗುಣ ವಿದಿತ ಸಂಸ್ಕೃತ ಉಕ್ತಿ ಕ್ರಮಮನ್ ಬಗೆದು ಒಂದು ಮಾಡಿ ಪೇೞ್ದೊಡೆ ಸೊಗಯಿಸುಗುಮ್ ಕಾವ್ಯ–ಬಂಧಮ್ ಎಂದುಮ್ ಅನಿಂದ್ಯಮ್

ಅಸಂಖ್ಯಾತಗುಣಗಳಿಂದ ಪ್ರಖ್ಯಾತವಾದ ಸಂಸ್ಕೃತ ಉಕ್ತಿ ಮಾರ್ಗವನ್ನು ಕುರಿತು ಯೋಚಿಸಿ ಪ್ರಸಿದ್ಧವಾಗಿರುವ ಕನ್ನಡ ಪದಗಳೊಂದಿಗೆ ಹೊಂದಿಸಿಕೊಂಡು ಹೇಳಿದರೆ ಕಾವ್ಯರಚನೆ ನಿರ್ದುಷ್ಟವಾಗಿ ಮತ್ತು ಸೊಗಸಾಗಿ ಮೂಡಿಬರುತ್ತದೆ.

57. If one thinks about the way in which Sanskrit words are to be used, and follows these prescriptions properly, a composition becomes pleasing and will be beyond reproach.

ತಱಿಸಂದಾ ಸಕ್ಕದಮುಮು
ನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್
ಕುಱಿತು ಬೆರಸಿದೊಡೆ ವಿರಸಂ
ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದ ವೋಲ್ ೫೮

ತಱಿಸಂದು ಆ ಸಕ್ಕದಮುಮನ್ ಅಱಿಯದೆ ಕನ್ನಡಮುಮನ್ ಸಮಾಸೋಕ್ತಿಗಳೊಳ್ ಕುಱಿತು ಬೆರಸಿದೊಡೆ ವಿರಸಮ್. ಮಱುಗುವ ಪಾಲ್ಗೆ ಅಳೆಯ ಪನಿಗಳಂ ಬೆರಸಿದವೋಲ್

ಸಂಸ್ಕೃತವನ್ನೂ ಕನ್ನಡವನ್ನೂ ಅರಿಯದೆ ಬೇಕೆಂದೇ ತಂದು ಸಮಾಸಗಳಲ್ಲಿ ಬೆರಸಿದರೆ ಕುದಿಯುವ ಹಾಲಿಗೆ ಮಜ್ಜಿಗೆಯ ಹನಿಗಳನ್ನು ಬೆರಸಿದಂತೆ ವಿರಸವಾಗುತ್ತದೆ.

58. If Sanskrit words are introduced without knowledge and mixed with Kannada in compounds, it will be like mixing buttermilk with boiling milk.

ಅರಸುಕುಮಾರನನಾಯತ
ತರಕಡೆಗಣ್ಣಿಂದೆ ನೋಡಿ ಕೆಳದಿಸಮೇತಂ
ಪರಿಗತನಗೆಯಿಂದಿರ್ದಂ
ಗುರುನಾಣ್ಬರದಿಂದಮೆಱಗಿ ಮುಖತಾವರೆಯಂ ೫೯

ಅರಸು ಕುಮಾರನನ್ ಆಯತತರ ಕಡೆಗಣ್ಣಿಂದೆ ನೋಡಿ ಕೆಳದಿ ಸಮೇತಂ ಪರಿಗತ ನಗೆಯಿಂದೆ ಇರ್ದೆನ್ ಗುರು ನಾಣ್ ಭರದಿಂದಮ್ ಎಱಗಿ ಮುಖ ತಾವರೆಯನ್

"ಗೆಳತಿಯ ಜತೆ ಇದ್ದ ನಾನು ಅರಳಿದ ಕಡೆಗಣ್ಣಿಂದ ರಾಜಕುಮಾರನನ್ನು ನೋಡಿ ಹೆಚ್ಚಿನ ನಾಚಿಕೆಯಿಂದ ನನ್ನ ಮುಖಕಮಲವನ್ನು ಕೆಳಗಿ ಬಾಗಿಸಿ ತುಂಬಿದ ನಗೆಯಿಂದಿದ್ದೆನು."

ಅರಿಸಮಾಸಗಳು ದೋಷವೆಂದು ತಿಳಿಸಲು ಶ್ರೀವಿಜಯ ಇಲ್ಲಿ ಉದಾಹರಣೆಗಳನ್ನು ನೀಡಿದ್ದಾನೆ. 'ಅರಸುಕುಮಾರ', 'ಆಯತತರಕಡೆಗಣ್ಣು', 'ಕೆಳದಿಸಮೇತಮ್', 'ಪರಿಗತನಗೆ', 'ಗುರುನಾಣ್ಭರ', 'ಮುಖತಾವರೆ' ಅರಿಸಮಾಸಗಳು.

59. ***"arasukumārananāyata tarakaḍegaṇṇinde nōḍi keḷadisamētam Parigatanageyindirdem gurunāṇbharadindameṟagi mukhatāvareyam"***

"When I was with my lady-companion, I looked at her from the corner of my wideopen eyes, her lotus face lowered and with a smile filled with bashfulness." In this verse, the author gives a series of examples with Sanskrit and Kannada words which are not compatible: *'arasukumāra'*, '*āyatatarakaḍegaṇṇu', 'keḷadisamētaṁ', 'parigatanage' 'gurunāṇbharadindaṁ', 'mukhatāvare'*. For example, Śrīvijaya is suggesting that one should not mix '*arasu*' (a Kannada word) with '*kumāra'* (a Sanskrit word) in a compound.

ನರಪತಿತನಯನನಾಯತ
ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ
ಪರಿಗತಹಾಸ್ಯದೊಳಿರ್ದೆಂ
ಗುರುಲಜ್ಜಾಭರದಿನೆಱಗಿ ಮುಖಸರಸಿಜಮಂ ೬೦

ನರಪತಿ ತನಯನನ್ ಆಯತ ತರಳ ಅಪಾಂಗದೊಳೆ ನೋಡಿ ಕೆಳದಿಯರೊಡನ್ ಆನ್ ಪರಿಗತ ಹಾಸ್ಯದೊಳ್ ಇರ್ದೆನ್ ಗುರು ಲಜ್ಜಾಭರದಿನ್ ಎಱಗಿ ಮುಖ ಸರಸಿಜಮನ್

ಇದರಲ್ಲಿರುವ ಪದಗಳು ಬೇರೆಯಾದರೂ ಅರ್ಥ ೫೯ನೆಯ ಪದ್ಯದ್ದೇ ಆಗಿದೆ. 'ಅರಸುಕುಮಾರ'ನಂಥ ಅರಿಸಮಾಸಗಳನ್ನು ಸರಿಪಡಿಸಲಾಗಿದೆ. 'ನರಪತಿ ತನಯನು', 'ಆಯತತರಳಾಪಾಂಗದೊಳ್', 'ಪರಿಗತಹಾಸ್ಯದೊಳ್', 'ಗುರುಲಜ್ಜಾ ಭರದಿಂ', 'ಮುಖಸರಸಿಜಮಂ' ಎಂಬುವು ಸಂಸ್ಕೃತಸಮಾಸಗಳಾಗಿದ್ದು ಕನ್ನಡದಲ್ಲಿ ಬಳಸಲು ಯೋಗ್ಯವಾಗಿವೆ.

60. ***narapatitanayananāyata, taraḷapāṅgadoḷe nōḍi keḷadiyaroḍanāṁ parigatahāsyadoḷirdeṁ, guru-lajjābharadineṟagi mukhasarasijamaṁ.***

This verse is virtually the same as v. 59, except that he replaces all Kannada words with Sanskrit words. The author sets right the faults of mixing words and shows how they can be used by borrowing the entire compound.

ಎಂದಿಂತು ಸಮಾಸೋಕ್ತಿಯೊ
ಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ
ಸುಂದರಮಕ್ಕುಂ ಕವಿಪದ
ವೊಂದಿದ ವೋಲ್ ಕನಕರಚನೆಯೊಳ್ ಮಣಿನಿಕರಂ ೬೧

ಎಂದು ಇಂತು ಸಮಾಸೋಕ್ತಿಯೊಳ್ ಒಂದಾಗಿರೆ ಸಕ್ಕದಂಗಳುಮ್ ಕನ್ನಡಮುಮ್ ಸುಂದರಮ್ ಅಕ್ಕುಮ್, ಕವಿ ಪದಮ್ ಒಂದಿದ ವೋಲ್ ಕನಕ ರಚನೆಯೊಳ್ ಮಣಿ ನಿಕರಮ್

ಈ ರೀತಿ ಸಮಾಸಗಳ ರೂಪದಲ್ಲಿ ಒಂದಾಗಿದ್ದರೆ ಸಂಸ್ಕೃತ ಮತ್ತು ಕನ್ನಡ ಕವಿ ಪದಪ್ರಯೋಗಗಳು ಚಿನ್ನದ ಆಭರಣದಲ್ಲಿ ಮಣಿಗಳಂತೆ ಸುಂದರ ವೆನಿಸುತ್ತವೆ.

61. If Sanskrit and Kannada are used in compounds like this, they look beautiful, like jewels in a gold ornament.

ಕಾವ್ಯದೋಷಗಳು

Faults in Poetry

ಶ್ರುತದುಷ್ಟಮರ್ಥದುಷ್ಟಂ
ಶ್ರುತಿಕಷ್ಟಂ ಕಲ್ಪನೋಕ್ತಿಕಷ್ಟಮುಮೆಂದೀ

ಕೃತಕೃತ್ಯಮಲ್ಲವಲ್ಲಭ
ಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ ೬೨

ಶ್ರುತಿದುಷ್ಟಮ್ ಅರ್ಥದುಷ್ಟಮ್ ಶ್ರುತಿಕಷ್ಟಮ್ ಕಲ್ಪನೋಕ್ತಿಕಷ್ಟಮುಮ್ ಎಂದು ಈ ಕೃತಕೃತ್ಯ ಮಲ್ಲ ವಲ್ಲಭ ಮತದಿನ್ ನಾಲ್ಕು ಅಕ್ಕುಮ್ ಇಲ್ಲಿ ಕೃತಿ ದೋಷಂಗಳ್

ಕೃತಕೃತ್ಯಮಲ್ಲವಲ್ಲಭನೆಂದು ಹೆಸರಾದ ನೃಪತುಂಗನ ಮತದಲ್ಲಿ ಶ್ರುತಿದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿಕಷ್ಟ ಎಂಬ ನಾಲ್ಕು ಕೃತಿದೋಷಗಳು.

ಕೃತಿದೋಷಗಳನ್ನು ಹೆಸರಿಸುವಾಗ ಶ್ರೀವಿಜಯ ಭಾಮಹನನ್ನು ಅನುಸರಿಸಿದ್ದಾನೆ: *ಶ್ರುತಿದುಷ್ಟಾರ್ಥದುಷ್ಟೇ ಚ ಕಲ್ಪನಾದುಷ್ಟಮಿತ್ಯಪಿ ಶ್ರುತಿಕಷ್ಟಂ ತಥೈವಾಹುರ್ವಾಚಾಂ ದೋಷಂ ಚತುರ್ವಿಧಂ* (೧.೪೭) ಶ್ರುತಿದುಷ್ಟ (ಕೇಳಲು ಅಹಿತವಾದುದು), ಅರ್ಥದುಷ್ಟ (ಅಹಿತವಾದ ಅರ್ಥ), ಕಲ್ಪನಾದುಷ್ಟ (ಅಹಿತವಾದ ಕಲ್ಪಿತವಚನ) ಮತ್ತು ಶ್ರುತಿ ಕಷ್ಟ (ಕಿವಿಗೆ ಇಂಪಾಗಿಲ್ಲದಿರುವುದು) ಎಂಬ ನಾಲ್ಕು ದೋಷಗಳನ್ನು ಭಾಮಹ ಹೆಸರಿಸಿದ್ದಾನೆ.

62. According to the king, an accomplished wrestler *(kṛtakṛtya-malla-vallabha)*, there are four flaws in literary works: sounds unpalatable to the ear (*śruti-duṣṭa*), faulty meanings (*artha-duṣṭa*), sounds that are harsh to listen to (*śruti-kaṣṭa*), and difficulty in comprehending the intended speech (*kalpanōkti-kaṣṭa*).

Śrīvijaya follows Bhāmaha in naming poetic flaws: *śruti-duṣṭārtha-duṣṭē ca kalpanā-duṣṭam ity api / śruti-kaṣṭaṁ tathaivāhur vācāṁ dōṣaṁ catur-vidhaṁ* (1.3.47)

ನಿಲ್ಲೋಳಂ ಬರ್ಪುದು ಸ
ಯ್ತಲ್ಲೂರುಂ ದೂರಮೆಡೆಯ ತುಡುಗಪ್ಪೂಱಿಂ
ಕಲ್ತುಲ್ಲಿಂದೋಡುವಮಿಂ
ಬಲ್ತುಣ್ಣಿಂ ತಂದ ಕೂಟನೂ ಸಂಗಮದೊಳ್ ೬೩

ನಿಲ್ ತೋೞಮ್ ಬರ್ಪುದು, ಸಯ್ತು ಅಲ್ತು, ಊರುಮ್ ದೂರಮ್, ಎಡೆಯ ತುಡುಗರ್ ಪೋಱಮ್ ಕಲ್ತು ಉಲ್ಲಿಂದೆ ಓಡುವಮ್ ಇಂಬು ಅಲ್ತುಮ್ ಉಣ್ಣಿನ್ ತಂದ ಕೂಟನ್ ಊ ಸಂಗಮದೊಳ್

"ನಿಲ್ಲು! ತೋೞ ಬರುತ್ತಿದೆ. ಯಾವುದೂ ಸರಿಯಾಗಿಲ್ಲ. ಊರು ಕೂಡ ದೂರದಲ್ಲಿದೆ. ಇಲ್ಲೆಲ್ಲ ದಾರಿಗಳ್ಳರಿದ್ದಾರೆ. ಓಡುವುದನ್ನು ಕಲಿಯೋಣ. ಇದು ಸರಿಯಾದ ಸ್ಥಳವಲ್ಲ. ತಂದಿರುವ ಅನ್ನವನ್ನು ಆ ಸಂಗಮದಲ್ಲಿ ತಿನ್ನಿ."

ಇದು 'ಶ್ರುತಿದುಷ್ಟ'ಕ್ಕೆ ಉದಾಹರಣೆ. ಇಲ್ಲಿ ಸಂಧಿಯನ್ನು ಸರಿಯಾಗಿ ಬಿಡಿಸದಿದ್ದರೆ 'ಕಲ್ತುಲ್ಲಿಂ', 'ಬಲ್ತುಣ್ಣಿಂ' ಮೊದಲಾದವು ಅಸಭ್ಯವೆನಿಸುತ್ತವೆ. 'ಉಲ್ಲಿ' ಎನ್ನುವ ಪ್ರಯೋಗ 'ಅಲ್ಲಿ' ಮತ್ತು 'ಇಲ್ಲಿ' ಮಧ್ಯಭಾಗವನ್ನು, 'ಊ' ಎಂಬುದು 'ಆ' ಮತ್ತು 'ಈ' ಮಧ್ಯಭಾಗವನ್ನು ಸೂಚಿಸುವುದನ್ನು ಗಮನಿಸಬೇಕು.

63. "Stop! The wolf is approaching. The village is far away and there are robbers around. You can not escape. Understand this and let us run away. Eat the food you brought at the place of the river's junction."

In the original Kannada verse, splitting the words wrongly gives an obscene meaning. The words *'kaltulli'* and *'imbaltuṇṇiṁ',* when wrongly split (*kal* + *tulli, imbal* + *tuṇṇiṁ)* refer to male and female genital organs. It is suggested that such compounds are unwarranted. The special linguistic forms *'ulli' and 'ū'* indicate 'the midst of something' (*alli* = there, *illi* = here, *ulli* = in the middle, *ā* = that, *ī* = this, *ū* = in the midst).

ನೆರೆದೂರ್ಧ್ವರೇತನೊಳ್ ಪುರು
ಹಿರಣ್ಯರೇತೋತಿತೀವ್ರನೊಳ್ ಮುನಿವರನೊಳ್
ಪರಮಭಗಸಹಿತೆ ಮುದದಿರೆ
ಪರಿಶ್ರಮಕ್ಕೆನ್ನ ನಿರ್ವಿಶೇಷನೊಳಾಗಳ್ ೬೪

ನೆರೆದು ಊರ್ಧ್ವ ರೇತನೊಳ್ ಪುರು ಹಿರಣ್ಯ ರೇತ ಅತಿ ತೀವ್ರನೊಳ್ ಮುನಿವರನೊಳ್ ಪರಮ ಭಗ ಸಹಿತೆ ಮುದದಿ ಇರೆ ಪರಿಶ್ರಮಕ್ಕೆ ಎನ್ನ ನಿರ್ವಿಶೇಷನೊಳ್ ಆಗಳ್

> **ಊರ್ಧ್ವರೇತನು, ಮಹಾಹಿರಣ್ಯರೇತನು, ಅತಿತೀವ್ರನು ನಿರತಿಶಯನು ಆದ ಮುನಿವರನಲ್ಲಿ ನೆರೆದು ಪರಮಭಗಸಹಿತೆ ಸಂತೋಷದಿಂದಿರಲು ನನ್ನ ಪರಿಶ್ರಮ (ಫಲಿಸಿತು).**

ಪುರಾಣಗಳಲ್ಲಿ ಊರ್ಧ್ವರೇತ (ಮೇಲಕ್ಕೆ ಹೋಗುವ ವೀರ್ಯವುಳ್ಳವನು), ಹಿರಣ್ಯ ರೇತ (ಚಿನ್ನದ ವೀರ್ಯವುಳ್ಳವನು), ಪರಮಭಗಸಹಿತೆ (ಶ್ರೇಷ್ಠವಾದ ಯೋನಿ ಉಳ್ಳವಳು) ಮೊದಲಾದವು ಕಂಡುಬರುತ್ತವಾದರೂ ಪದಗಳ ಅರ್ಥ ಅಹಿತಕರವಾಗಿರುತ್ತದೆ. ಇಲ್ಲಿ 'ಪರಮಭಗಸಹಿತೆ' ಮೇನಕೆಯನ್ನು, 'ಊರ್ಧರೇತ' ಮೊದಲಾದವು ವಿಶ್ವಾಮಿತ್ರನನ್ನು ಸೂಚಿಸುತ್ತಿರಹುದು. 'ಪರಿಶ್ರಮ' ಇಂದ್ರನದು.

64. "When the lady (*parama-bhaga-sahite,* one who has the choicest genital organs*)* happily joined with the sage who is *ūrdhva-rēta* (one who has an upward flow of semen) and *hiraṇya-rēta* (one who has golden semen), I felt that my effort was fulfilled."

Words in this verse have a faulty or obscene meaning: *'parama-bhaga-sahite'* seems to suggest the divine damsel Mēnakā; *'ūrdhvarēta'* and *'hiraṇyarēta'* may refer to the great sage Viśvāmitra; and the joy could be that of the Lord of Heaven, Dēvēndra.

> **ಪರದರ್ಗಾ ಪಾರ್ವರ್ಗಾ**
> **ಯರಸರ್ಗಾ ಕುಡಿಯರಪ್ಪ ನಾಲ್ವರ್ಗಾಗಳ್**
> **ಸ್ಥಿರಗೋಪಾಧ್ಯಾಯಕ್ಷ್ಮಾ**
> **ಪರಿಪಾಲ್ಯಕ್ಷೇತ್ರಕರ್ಷಣಂಗಳ್ ಕ್ರಿಯೆಗಳ್ ೬೫**

> **ಪರದರ್ಗೆ ಆ ಪಾರ್ವರ್ಗೆ ಆ ಅರಸರ್ಗೆ ಆ ಕುಡಿಯರಪ್ಪ ನಾಲ್ವರ್ಗೆ ಆಗಳ್ ಸ್ಥಿರ ಗೋಪ ಅಧ್ಯಾಯ ಕ್ಷ್ಮಾ ಪರಿಪಾಲ ಕ್ಷೇತ್ರ ಕರ್ಷಣಂಗಳ್ ಕ್ರಿಯೆಗಳ್**

> **ವ್ಯಾಪಾರಿಗಳಿಗೆ, ಬ್ರಾಹ್ಮಣರಿಗೆ, ಅರಸರಿಗೆ, ಬೇಸಾಯಗಾರರೆಂಬ ನಾಲ್ವರಿಗೆ ಪಶುಪಾಲನೆ, ಅಧ್ಯಯನ, ಭೂಪಾಲನೆ, ಹೊಲವನ್ನು ಉಳುವುದು ಕ್ರಿಯೆಗಳಾಗಿರುತ್ತವೆ.**

ಇಲ್ಲಿ ಅರ್ಥ ಸರಿಯಾಗಿದ್ದರೂ 'ರ'ಕಾರವನ್ನು ಮತ್ತೆ ಮತ್ತೆ ಬಳಸುವುದರಿಂದ ಕೇಳಲು ಅಹಿತವೆನಿಸುತ್ತದೆ.

65. “Vaiśyas, brahmins, kings, and agriculturists respectively take on the professions of animal husbandry, scriptural study, governance and land cultivation.”

In this verse, the repeated combination of ‘r’ and ‘g’ makes the sound of the verse harsh to listen to *(paradargāpāvargāytarasaga kuḍiyarappanālvargāgal)*.

ಮಸಗಿ ಬೆಸೆದಿರ್ದು ವಿವರಮ
ನಸಿಯದಱೆಡೆಯೊತ್ತಿ ಪೊಕ್ಕು ಕೆಲನಂ ಕೊರ್ಬು
ತ್ತೊಸೆದು ಬಿದಿರ್ದಾರ್ದುಮೆೞ್ದ
ೞ್ದಸಮಂಜಸನಿಕ್ಕಿ ಮಿಕ್ಕನರಿವಾಹಿನಿಯಂ ೬೬

ಮಸಗಿ, ಬೆಸೆದಿರ್ದು, ವಿವರಮನ್ ಅಸಿ ಅದಱ ಎಡೆಯೊತ್ತಿ ಪೊಕ್ಕು ಕೆಲನನ್ ಕೊರ್ಬುತ್ತ ಒಸೆದು ಬಿದಿರ್ದು ಆರ್ದುಮ್ ಎೞ್ದ್ದು ಅಸಮಂಜಸನ್ ಇಕ್ಕಿ ಮಿಕ್ಕನ್ ಅರಿ ವಾಹಿನಿಯನ್

ಉದ್ರೇಕಗೊಂಡು, ಗರ್ವಿಸಿ, ತೂತನ್ನು ಕತ್ತಿಯ ಕಡೆಗೊತ್ತಿ, ಕೆಲಬಲವನ್ನು ಕೊಬ್ಬುತ್ತ, ಸಂತೋಷದಿಂದ ಬಿಸಾಡಿ, ಅಬ್ಬರಿಸಿ ಎದ್ದೆದ್ದು ಅಸಮಂಜಸನು ಶತ್ರುಸೈನ್ಯವನ್ನು ಅತಿಕ್ರಮಿಸಿದನು.

ಇಲ್ಲಿ ಕ್ರಿಯೆಗಳ ಅನ್ವಯ ಸರಿಯಾಗಿಲ್ಲ. ಕಲ್ಪನೆಯಲ್ಲಿ ಔಚಿತ್ಯವಿಲ್ಲ. ಆದುದರಿಂದ ಕಲ್ಪನೋಕ್ತಿಕಷ್ಟಕ್ಕೆ ಉದಾಹರಣೆಯಾಗಿದೆ.

66. “With anger, he united, pierced his sword, pushed with arrogance, dispersed, and shouted aloud. The unbecoming person excelled in fighting with the enemy's army.”

The poet is at fault here according to the maxim of “difficulty in comprehending the intended speech” (*kalapanōkti-kaṣṭa*).

ಕುಱಿತಂತೆ ಪೇೞ್ದ ನಾಲ್ಕುಂ
ಕುಱಿಪುಗಳಿಂದಱಿದು ಪರರ ದೋಷಂಗಳುಮಂ

ಪೆಱವುಮನೀ ಮಾಟ್ಕಿಯೊಳಂ
ತೊಱೆವುದು ತೊಱೆವಂತಸಾಧುಜನಸಂಗತಿಯಂ ೬೭

ಕುಱಿತಂತೆ ಪೇೞ್ದ ನಾಲ್ಕುಮ್ ಕುಱಿಪುಗಳಿಂದ ಅಱಿದು ಪರರ ದೋಷಂಗಳುಮನ್ ಪೆಱವುಮನ್ ಈ ಮಾಟ್ಕಿಯೊಳಮ್ ತೊಱೆವುದು ತೊಱೆವಂತೆ ಅಸಾಧು ಜನ ಸಂಗತಿಯನ್

ಹಿಂದೆ ಹೇಳಿದಂತೆ ನಾಲ್ಕು ಲಕ್ಷಣಗಳನ್ನು ತಿಳಿದು ಇತರರ ದೋಷಗಳನ್ನು, ಮಿಕ್ಕ ದೋಷಗಳನ್ನು ಕೂಡ ದುರ್ಜನರ ಸಹವಾಸವನ್ನು ತೊರೆಯುವಂತೆ ತೊರೆಯಬೇಕು.

67. As mentioned earlier, one should understand the faults in other matters as well. All faults should be avoided, as we avoid friendship with a bad person.

ಮಿಗೆ ದುಷ್ಕರಕಾವ್ಯಂಗಳೊ
ಳಗರ್ಹಿತಪ್ರಾಯಮಕ್ಕುಮಾ ಶ್ರುತಿಕಷ್ಟಂ
ಪಗರಣದೊಳುೞಿದ ಮೂಱುಂ
ನಗಿಸುಗುಮಪ್ಪುದಱಿನಲ್ಲಿಗಂತವದೋಷಂ ೬೮

ಮಿಗೆ ದುಷ್ಕರ ಕಾವ್ಯಂಗಳೊಳ್ ಅಗರ್ಹಿತ ಪ್ರಾಯಮ್ ಅಕ್ಕುಮ್ ಆ ಶ್ರುತಿಕಷ್ಟಮ್, ಪಗರಣದೊಳ್ ಉೞಿದ ಮೂಱುಮ್ ನಗಿಸುಗುಮ್ ಅಪ್ಪುದಱಿನ್ ಅಲ್ಲಿಗಂತು ಅವು ಅದೋಷಮ್

ತುಂಬ ದುಷ್ಕರವಾದ ಕಾವ್ಯಗಳಲ್ಲಿ ಆ ಶ್ರುತಿಕಷ್ಟ ನಿಂದ್ಯವಾಗುವುದಿಲ್ಲ. ಉಳಿದ ಮೂರು ದೋಷಗಳು ಪಗರಣದಲ್ಲಿ ನಗಿಸುವುದರಿಂದ ಅವು ದೋಷವೆನಿಸುವುದಿಲ್ಲ.

'ದುಷ್ಕರ ಕಾವ್ಯ' ಎಂಬುದು ಚಿತ್ರಕಾವ್ಯವನ್ನು ಸೂಚಿಸುತ್ತಿರಬಹುದು. ಚಿತ್ರಕಾವ್ಯದಲ್ಲಿ ಗೂಢತೆ ಪ್ರಧಾನವಾಗಿರುವುದರಿಂದ ಶ್ರುತಿಕಷ್ಟ ನಿಂದ್ಯವಾಗುವುದಿಲ್ಲ. ಪ್ರಕರಣದ ತದ್ಭವ ಪಗರಣ. ಸಂಸ್ಕೃತ ದಶರೂಪಕಗಳಲ್ಲಿ ಒಂದಾದ ಪ್ರಕರಣ ಹಾಸ್ಯರಸ ಪ್ರಧಾನವಲ್ಲ. ಇಲ್ಲಿ ಉಲ್ಲೇಖಗೊಂಡಿರುವ ಪಗರಣ ಯಕ್ಷಗಾನ ಬಯಲಾಟಗಳಂಥ ದೇಶೀರೂಪಕವಾಗಿರಬೇಕು. ಅದು ಹಾಸ್ಯಪ್ರಧಾನವಾದುದ ರಿಂದ ಕಾವ್ಯದೋಷಗಳನ್ನು ಪರಿಗಣಿಸುವ ಹಾಗಿಲ್ಲ.

68. In the most difficult poems, *śruti-kaṣṭa* (sounds unpalatable to the ear) is not blamable. As the other three faults induce laughter in the *pagaraṇa* (or *prakaraṇa,* one of ten types of plays, like the *nāṭaka*), they are not considered faults there.

By "difficult to compose" (*duṣkara*)*,* the author may be referring to "figurative poetry" (*citra-kāvya*) or "double meaning-poetry" (*slēṣa-kāvya*). The reference to *pagaraṇa* suggests that native plays, of a humorous type, were being staged at the time of the author.

ಇತರ ದೋಷಗಳು(ಹದಿನಾರು)

The Other Sixteen Faults

ಯತಿಭಂಗಮರ್ಥಶೂನ್ಯಂ
ಸತತ ವಿರುದ್ಧಾರ್ಥಮುಕ್ತಪುನರುಕ್ತಾರ್ಥಂ
ಚ್ಯುತಯಾಥಾಸಂಖ್ಯಂ ವ್ಯವ
ಹಿತಮಚ್ಛಂದಂ ವಿಸಂಧಿಕಂ ನೇಯಾರ್ಥಂ ೬೯

ಆಗಮಸಮಯನ್ಯಾಯವಿ
ಭಾಗ ಕಳಾಕಾಲಲೋಕದೇಶವಿರುದ್ಧಂ
ಭೋಗಿವಿಷಂಬೋಲ್ ಪ್ರಾಣ
ತ್ಯಾಗಮನಾಗಿಸುಗುಮಮಳಕೃತಿವಧುಗಿನಿತುಂ ೭೦

ಯತಿಭಂಗಮ್, ಅರ್ಥಶೂನ್ಯಮ್, ಸತತ ವಿರುದ್ಧಾರ್ಥಮ್, ಉಕ್ತ ಪುನರುಕ್ತಾರ್ಥಮ್, ಚ್ಯುತಯಾಥಾಸಂಖ್ಯಮ್, ವ್ಯವಹಿತಮ್, ಅಚ್ಛಂದಮ್, ವಿಸಂಧಿಕಮ್, ನೇಯಾರ್ಥಮ್

ಆಗಮ ಸಮಯ ನ್ಯಾಯ ವಿಭಾಗ ಕಳಾಕಾಲ ಲೋಕದೇಶ ವಿರುದ್ಧಮ್ ಭೋಗಿ ವಿಷಂಬೋಲ್ ಪ್ರಾಣ ತ್ಯಾಗಮಮ್ ಆಗಿಸುಗುಮ್ ಅಮಳ ಕೃತಿ ವಧುಗೆ ಇನಿತುಮ್.

'ಯತಿಭಂಗ', 'ಅರ್ಥಶೂನ್ಯ', 'ವಿರುದ್ಧಾರ್ಥ', 'ಉಕ್ತಪುನರುಕ್ತಾರ್ಥ', 'ಚ್ಯುತಯಾಥಾಸಂಖ್ಯ', 'ವ್ಯವಹಿತ', 'ಅಚ್ಛಂದ', 'ವಿಸಂಧಿ', 'ನೇಯಾರ್ಥ',

'ಆಗಮವಿರುದ್ಧ', 'ಸಮಯವಿರುದ್ಧ', 'ನ್ಯಾಯವಿರುದ್ಧ', 'ಕಲಾವಿರುದ್ಧ', 'ಕಾಲವಿರುದ್ಧ', ಲೋಕವಿರುದ್ಧ', 'ದೇಶವಿರುದ್ಧ'– ಎಂಬ ದೋಷಗಳು ಒಂದಿಷ್ಟು ಸೇರಿದರೂ ಹಾವಿನ ವಿಷದಂತೆ ಕಾವ್ಯ ವಧುವಿನ ಪ್ರಾಣವನ್ನು ತೆಗೆಯುತ್ತವೆ.

ಇಲ್ಲಿ ಕೊಟ್ಟಿರುವ ಕಾವ್ಯದೋಷಗಳಲ್ಲಿ ಹಲವು ಭಾಮಹನ ಕಾವ್ಯಾಲಂಕಾರದಲ್ಲಿ ಉಲ್ಲೇಖಗೊಂಡಿವೆ (೪.೨).

69-70. The other faults include: *yati-bhaṅga* (improper breaking of the caesura), *artha-śūnya* (empty of meaning), *viruddhārtha* (contradictory meaning), *punar-uktārtha* (repetition of the meaning), *cyuta-yāthā-saṅkhya* (problem with sequence), *vyavahita* (concealed meaning), *acchanda* (faulty meter), *visandhika* (faulty *sandhi), nēyārtha* (using a different word to convey the meaning), and *āgama-samaya-nyāya-kaḷā-kāla-lōka-dēśa-viruddha* (incompatibility with traditional doctrines, literary conventions, logic, artistic skill, time, space, and regional context). All of these flaws, like the poison of a snake, kill the unblemished Lady Literature (*amaḷa-kṛti-vadhu*).

Śrīvijaya follows Bhāmaha in naming most of the poetic faults (4.1.2)

ಯತಿ

Yati

ಯತಿಯೆಂಬುದುಸಿರ್ವ ತಾಣಂ
ಕೃತಾಸ್ಪದಂ ವೃತ್ತಜಾತಿಪದಪದ್ಧತಿಯೊಳ್
ಸತತಂ ಛಂದೋವಿದಿತ
ಪ್ರತೀತಶಾಸ್ತ್ರೋಕ್ತಮಾರ್ಗದಿಂದಱಿವುದದಂ ೭೧

ಯತಿ ಎಂಬುದು ಉಸಿರ್ವ ತಾಣಮ್, ಕೃತ ಆಸ್ಪದಮ್ ವೃತ್ತ ಜಾತಿ ಪದ ಪದ್ಧತಿಯೊಳ್ ಸತತಮ್ ಛಂದೋವಿದಿತ ಪ್ರತೀತ ಶಾಸ್ತ್ರೋಕ್ತ ಮಾರ್ಗ ದಿಂದೆ ಅಱಿವುದು ಅದನ್

'ಯತಿ' ಎಂಬುದು ಉಸಿರು ನಿಲ್ಲಿಸುವ ಸ್ಥಾನ. ವೃತ್ತ ಮತ್ತು ಜಾತಿಗಳ ಪದ ಪದ್ಧತಿಯಲ್ಲಿ ಇದು ಇರುತ್ತದೆ. ಇದನ್ನು ಯಾವಾಗಲೂ ಛಂದಶ್ಶಾಸ್ತ್ರದಲ್ಲಿ ಹೇಳಿರುವ ಲಕ್ಷಣ ನಿಯಮಾನುಸಾರವಾಗಿ ಅರಿಯಬೇಕು.

'ಯತಿ'ಯ ಲಕ್ಷಣ ಹೇಳುವಾಗ ಶ್ರೀವಿಜಯ ದಂಡಿಯನ್ನು ಅನುಸರಿಸಿದ್ದಾನೆ (೪.೨೯) : "*ಶ್ಲೋಕೇಷು ನಿಯತಸ್ಥಾನಂ ಪದಚ್ಛೇದಂ ಯತಿಂವಿದುಃ*". ದಂಡಿ ಹೇಳಿದ 'ಪದಚ್ಛೇದ'ವನ್ನು ಹೇಳದೆ ಶ್ರೀವಿಜಯ ಯತಿ 'ಉಸಿರ್ವ ತಾಣಂ' ಎಂದು ಹೇಳಿದ್ದಾನೆ.

71. *Yati* (caesura) is the place to take breath. It is used in various types of meters borrowed from Sanskrit (*vṛtta*) and native meters (*jāti*). It is to be understood in the way it is defined in the treatises on prosody.

For defining *yati*, the author follows Daṇḍin's definition: *ślōkēṣu niyata-sthānaṁ pada-cchēdaṁ yatiṁ viduḥ* (4.29). But, instead of saying that it is *pada-cchēda* (splitting of the words), the author says that it is "the place to take breath."

ಕೇಡಡಸಿದಂದು ಬಗೆಯುಂ
ಕೂಡದು ಕೂಡಿದುದುಮಱಿದು ವಿಪರೀತಮುಮಂ
ಮಾಡುಗುಮದಱಿಂ ಕರ್ಮ
ಕ್ಕೋಡಿ ಬರ್ದುಂಕಲ್ಕಮಱಿವರಾರ್ ಭೂತಳದೊಳ್ ೭೨

ಕೇಡು ಅಡಸಿದಂದು ಬಗೆಯುಮ್ ಕೂಡದು. ಕೂಡಿದುದಮ್ ಅಱಿದು ವಿಪರೀತಮುಮನ್ ಮಾಡುಗುಮ್, ಅದಱಿನ್ ಕರ್ಮಕ್ಕೆ ಓಡಿ ಬರ್ದುಂಕಲ್ಕಮ್ ಅಱಿವರಾರ್ ಭೂತಳದೊಳ್

"ಕೇಡು ಮೇಲೆ ಬಿದ್ದಾಗ ಆಲೋಚನೆ ಬರುವುದಿಲ್ಲ. ಕೂಡಿಬಂದುದನ್ನೂ ಅಳಿದು ವಿಪರೀತ ಪರಿಣಾಮ ಉಂಟಾಗುವುದು, ಅದರಿಂದ ಕರ್ಮವನ್ನು ತಪ್ಪಿಸಿಕೊಂಡು ಓಡಿ ಬದುಕಲು ಭೂಮಿಯ ಮೇಲೆ ಯಾರಿಗೆ ತಾನೆ ಸಾಧ್ಯ?"

ಇಲ್ಲಿ ನಾಲ್ಕನೆಯ ಪಾದದಲ್ಲಿ ಬರ್ದುಂಕ'ಲ್ಕಮಜಿವ'ರಾರ್ ಎಂದಾಗ ಆರನೆಯ ಗಣದ ಮೊದಲ ಲಘುವಾದ ಮೇಲೆ ಯತಿ ಬರಬೇಕಾಗಿತ್ತು. ಇದನ್ನು ೭೪ನೆಯ ಪದ್ಯದಲ್ಲಿ ಸರಿಪಡಿಸಲಾಗಿದೆ.

72. "The process of thought stops when there is destruction. What is gained also gets destroyed and leads to adversity. Who is there in the world that avoids fate?"

In the original Kannada verse, the meter *kanda* should have *yati* at the beginning of the sixth *gaṇa* (metrical sub-division), which is not followed here.

ತಡತಡಿಸಿ ಯತಿಯನಿಂತಿರೆ
ತೊಡರ್ಚೆ ಕೆಡೆ ಪೇೞ್ದೊಡಕ್ಕುಮದು ಯತಿಭಂಗಂ
ಸಡಿಲಿಸದಲಸದದಂ ಪೇ
ೞ್ವೆಡೆಯೊಳ್ ನಿಲೆ ಪೇೞಲಾರ್ಪೊಡಂತದದೋಷಂ ೭೩

ತಡತಡಿಸಿ ಯತಿಯನ್ ಇಂತಿರೆ ತೊಡರ್ಚೆ ಕೆಡೆ ಪೇೞ್ದೊಡೆ ಅಕ್ಕುಮ್ ಅದು ಯತಿಭಂಗಮ್. ಸಡಿಲಿಸದೆ ಅಲಸದೆ ಅದನ್ ಪೇೞ್ವ ಎಡೆಯೊಳ್ ನಿಲೆ ಪೇೞಲಾರ್ಪೊಡೆ ಅಂತು ಅದು ಅದೋಷಮ್

ತಡವರಿಸುತ್ತ ಯತಿಯನ್ನು ಈ ರೀತಿ ತೊಡರಿಕೊಳ್ಳುವಂತೆ ಕೆಟ್ಟದಾಗಿ ಹೇಳಿದರೆ ಅದು ಯತಿಭಂಗ. ಸಡಿಲಿಸದೆ, ಎಚ್ಚರ ತಪ್ಪದೆ ಅದನ್ನು ನಿಯತ ಸ್ಥಾನದಲ್ಲಿ ನಿಲ್ಲುವಂತೆ ಹೇಳಿದರೆ ಆಗ ಅದು ದೋಷರಹಿತವಾಗುತ್ತದೆ.

73. In this way, if *yati* is confusedly used, it is called *yati-bhaṅga* or "the breaking of the caesura." If it is used without slackness and indolence and in a prescribed place, breaking the caesura is not considered a fault.

Here the author is referring to the general feature of *yati* and suggesting that it should be used without any confusion.

ಕೇಡಡಸಿದೊಡಾ ಬಗೆಯುಂ
ಕೂಡದು ಕೂಡಿದುದುಮಱಿದು ವಿಪರೀತಮುಮಂ
ಮಾಡುಗುಮದಱಿಂ ಕರ್ಮ
ಕ್ಕೋಡಿ ಬರ್ದುಂಕಲ್ಕೆ ಕಲ್ತರಾರ್ ಬಿನ್ನಣಮಂ ೭೪

ಕೇಡು ಅಡಸಿದೊಡೆ ಆ ಬಗೆಯುಂ ಕೂಡದು. ಕೂಡಿದುದನ್ ಅಱಿದು ವಿಪರೀತಮುಮನ್ ಮಾಡುಗುಮ್. ಅದಱಿನ್ ಕರ್ಮಕ್ಕೆ ಓಡಿ ಬರ್ದುಂಕಲ್ಕೆ ಕಲ್ತರ್ ಆರ್ ಬಿನ್ನಣಮನ್

ಕೇಡು ಮೇಲೆ ಬಿದ್ದಾಗ ಆಲೋಚನೆ ಬರುವುದಿಲ್ಲ. ಕೂಡಿಬಂದುದನ್ನೂ ಅಳಿದು ವಿಪರೀತ ಪರಿಣಾಮ ಉಂಟಾಗುವುದು. ಅದರಿಂದ ಕರ್ಮವನ್ನು ತಪ್ಪಿಸಿಕೊಂಡು ಓಡಿ ಬದುಕುವ ವಿಜ್ಞಾನವನ್ನು ಕಲಿತಿರುವವರು ಯಾರು?

ಇದು ೭೨ನೆಯ ಪದ್ಯದ ಯತಿ ಭಂಗವನ್ನು ಸರಿಮಾಡಿದ ಪದ್ಯ. ಇಲ್ಲಿ ನಾಲ್ಕನೆಯ ಪಾದವನ್ನು ಸರಿಪಡಿಸಿ 'ಕಲ್ತರ್ ಆರ್ ಬಿನ್ನಣಮಂ' ಎಂದು ಹೇಳಿರುವುದರಿಂದ ಯತಿಭಂಗವನ್ನು ತಪ್ಪಿಸಿದಂತಾಯಿತು.

74. "Thought-process stops when there is destruction. What is gained also gets destroyed and leads to adversity. Who knows the technique of avoiding ill-fate?"

Here, the author has corrected the *yati-bhaṅga* in the original verse (cited above, number 72).

ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್
ದೇಸಿಯೆನೆ ನಿಱಿಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ ೭೫

ದೋಸಮನೆ ಗುಣದವೋಲ್ ಉದ್ಭಾಸಿಸಿ ಕನ್ನಡದೊಳ್ ಒಲ್ದು ಪೂರ್ವ ಆಚಾರ್ಯರ್ ದೇಸಿಯೆನೆ ನಿಱಿಸಿ ಖಂಡ ಪ್ರಾಸಮನ್ ಅತಿಶಯಮ್ ಇದು ಎಂದು ಯತಿಯನ್ ಮಿಕ್ಕರ್

ಪೂರ್ವಾಚಾರ್ಯರು ಯತಿಭಂಗವೆಂಬ ದೋಷವನ್ನೇ ಗುಣವೆನ್ನುವಂತೆ ಪ್ರತಿಪಾದಿಸಿ, ಕನ್ನಡದಲ್ಲಿ ದೇಸಿಯನ್ನು ಮೆಚ್ಚಿ ಖಂಡಪ್ರಾಸವನ್ನು ವಿಶೇಷವೆಂದು ಕಡ್ಡಾಯ ಮಾಡಿ ಯತಿಯನ್ನು ಮೀರಿದರು.

ಯತಿಭಂಗ ದೋಷವಾದರೂ ಪೂರ್ವಾಚಾರ್ಯರು ದೇಸಿಯಲ್ಲಿ ಯತಿಭಂಗ ಆಗಿರುವುದನ್ನು ಕಂಡು ಯತಿವಿಲಂಘನವನ್ನು ಒಪ್ಪಿಕೊಂಡು ಕನ್ನಡದಲ್ಲಿ ಖಂಡಪ್ರಾಸವನ್ನು ಅತಿಶಯವೆಂದು ಅದನ್ನು ನೆಲೆಗೊಳಿಸಿದರು. ಕೇಶಿರಾಜನೂ 'ಯತಿವಿಲಂಘನದಿಂದರಿದಲ್ತೆ ಕನ್ನಡಂ' ಎಂದು ಹೇಳಿರುವುದನ್ನು ನೆನೆಯ ಬಹುದು.

75. Ancient masters proposed a poetic "fault" as a merit, appreciated native artistry, used "*khaṇḍa-prāsa*" as a special feature, and left out *yati.*

In this verse, Śrīvijaya makes it clear that *yati* is not mandatory in Kannada. By *khaṇḍa prāsa,* the author may be suggesting that Kannada poets left out *yati* because of *prāsa* (repetition of a consonant as the second letter of each metrical line).

ನಿರತಿಶಯಮಕ್ಕುಮದು ಬಂ
ಧುರಕವಿಜನತಾಪ್ರಯೋಗಸಂಬಂಧನದಿಂ
ಗುರುಜಘನಸ್ತನಭರಮಂ
ಥರಲೀಲಾಲಸವಿಲಾಸಿನೀಚಲಿತಂಬೋಲ್ ೭೬

ನಿರತಿಶಯಮ್ ಅಕ್ಕುಮ್ ಅದು ಬಂಧುರ ಕವಿ ಜನತಾ ಪ್ರಯೋಗ ಸಂಬಂಧನದಿನ್ ಗುರು ಜಘನ ಸ್ತನಭರ ಮಂಥರಲೀಲಾಲಸ ವಿಲಾಸಿನೀ ಚಲಿತಂಬೋಲ್

ಘನವಾದ ಜಘನ ಮತ್ತು ಸ್ತನಗಳ ಭಾರದಿಂದ ಮಂದಗಮನೆಯಾಗಿರುವ ಕೋಮಲೆಯ ನಡಿಗೆಯಂತೆ ಕವಿಜನರ ಪ್ರಯೋಗದಲ್ಲಿ ಸುಂದರವಾಗಿ ಮೂಡಿಬಂದಾಗ ಖಂಡಪ್ರಾಸ ಹೆಚ್ಚಿನ ಅತಿಶಯವನ್ನು ಪಡೆಯುತ್ತದೆ.

76. It *(khaṇḍa-prāsa)* becomes unsurpassable in its beauty when it is used by great poets. It appears like the graceful gait of a lady with heavy buttocks and breasts.

ಅಂತುಂ ಯತಿಯಂ ಪೇೞ್ಗಾ
ರ್ಪಂತಾದ್ಯದೊಳಲಸದಾರ್ಯೆಯೊಳ್ ಕಂದದೊಳಂ
ಸಂತಂ ದ್ವಿತೀಯಪಾದಗ
ತಾಂತದೊಳಕ್ಕದು ಚತುಷ್ಪದೀಪದವಿಗಳೊಳ್ ೭೭

ಅಂತುಮ್ ಯತಿಯನ್ ಪೇೞ್ಗೆ ಆರ್ಪಂತೆ ಆದ್ಯದೊಳ್ ಅಲಸದೆ ಆರ್ಯೆಯೊಳ್ ಕಂದದೊಳಮ್ ಸಂತಮ್ ದ್ವಿತೀಯ ಪಾದಗತ ಅಂತದೊಳ್ ಅಕ್ಕೆ ಅದು ಚತುಷ್ಪದೀ ಪದವಿಗಳೊಳ್

ಆದರೂ ಸಾಧ್ಯವಾದ ಮಟ್ಟಿಗೆ ಆರ್ಯೆಯಲ್ಲಿ ಹಾಗೂ ಕಂದದಲ್ಲಿ ಮೊದಲ ಅರ್ಧದ ಕಡೆಗೆ ಯತಿಯನ್ನು ಹೇಳಬೇಕು. ನಾಲ್ಕು ಸಾಲಿನ ಪದ್ಯಗಳಲ್ಲಿ ಯತಿಯು ಎರಡನೆಯ ಪಾದದ ಕಡೆಗೆ ಬರಬೇಕು.

77. Generally, *yati* is to be used at the end of a half of the verse in *āryā* and *kanda* meters. In four-lined meters, it occurs at the end of the second line.

It is interesting to note that the author prescribes *yati* for *aryā* and *kanda.* The *āryā* meter is not used in Kannada. The *kanda* meter is said to have originated from *āryā.* Generally, Kannada poets have been following the conventions of *yati* in *kanda* meter.

ಅರ್ಥಶೂನ್ಯ ಮತ್ತು ಇತರ ದೋಷಗಳು

Artha-śūnya (Empty of Meaning) and other Faults

ಸಮುದಾಯಾರ್ಥಮನಾರಯೆ
ಸಮನಿಸುವರ್ಥಪ್ರತೀತಿ ತೋಱದೊಡೆಲ್ಲಂ
ಕ್ರಮಮಕ್ಕುಮರ್ದ‌ಶೂನ್ಯಂ
ಸಮಸ್ತ ಕವಿವೃಷಭದೂರದೂಷಿತಮಾರ್ಗಂ ೭೮

ಸಮುದಾಯ ಅರ್ಥಮನ್ ಆರಯೆ ಸಮನಿಸುವ ಅರ್ಥ ಪ್ರತೀತಿ ತೋಱದೊಡೆ ಎಲ್ಲಮ್ ಕ್ರಮಮ್ ಅಕ್ಕುಮ್ ಅರ್ಥ ಶೂನ್ಯಮ್ ಸಮಸ್ತ ಕವಿವೃಷಭ ದೂರ ದೂಷಿತ ಮಾರ್ಗಮ್

ಒಟ್ಟು ಅರ್ಥವನ್ನು ವಿಚಾರಿಸಿದಾಗ, ಎಲ್ಲ ಕಡೆ ಅರ್ಥಪ್ರತೀತಿ ತೋರಿದರೂ ಒಟ್ಟು ಅರ್ಥ ಶೂನ್ಯವಾದರೆ ದೋಷ. ಇದನ್ನು ಸಮಸ್ತ ಕವಿಶ್ರೇಷ್ಠರೂ ದೂರ ಮಾಡುತ್ತಾರೆ.

ಅಂತರ್ಗತವಾದ ಪ್ರತಿ ವಾಕ್ಯಕ್ಕೂ ಅರ್ಥವಿದ್ದರೂ ಒಟ್ಟು ಅರ್ಥ ತಿಳಿಯದಿದ್ದರೆ ಅದನ್ನು, ಅರ್ಥಶೂನ್ಯ ಎಂದು ಹೇಳುವರು. ಭಾಮಹ (೪.೧) ಮತ್ತು ದಂಡಿ (೩.೧೨೫) ಇದನ್ನು 'ಅಪಾರ್ಥ' ಎಂದಿದ್ದಾರೆ.

78. Even though all of the utterances hold some meaning, the overall sense is not achieved. The fault here is known as *artha-śūnya* (empty of meaning), which is not liked by the best among poets.

Bhāmaha (4.1) and Daṇḍin (3.125) call this poetic fault *apārtha*.

ಮುನಿ ವೀತರಾಗನೆಂದುಂ
ಬನಮಂ ಸಾರ್ತರ್ಕುಮಾವ ತೆಱದಿಂ ಪೋಪಂ
ಮನಮಂಜುಗುಮಱೆಯದವಂ
ಮುನಿಗುಂ ಪಗೆವಂಗೆ ಪಾಪಕರ್ಮಂ ಪೊಲ್ಲಂ ೭೯

ಮುನಿ ವೀತರಾಗನ್ ಎಂದುಮ್ ಬನಮನ್ ಸಾರ್ತರ್ಕುಮ್ ಆವ ತೆಱದಿಂ ಪೋಪನ್ ಮನಮ್ ಅಂಜುಗುಮ್ ಅಱೆಯದವನ್ ಮುನಿಗುಮ್ ಪಗೆವಂಗೆ ಪಾಪಕರ್ಮಮ್ ಪೊಲ್ಲನ್

"ಮುನಿರಾಗರಹಿತನು; ಯಾವಾಗಲೂ ವನದ ಕಡೆ ಯಾವ ರೀತಿಯಲ್ಲಿ ಹೋಗುತ್ತಾನೆ; ಮನಸ್ಸಿನಲ್ಲಿ ಭಯವಾಗುತ್ತಿದೆ; ಶತ್ರುವಿನ ಬಗ್ಗೆ ಕೋಪ ಗೊಳ್ಳುತ್ತಾನೆ. ಪಾಪಕರ್ಮ ಸರಿಯಲ್ಲ.

ಈ ಪದ್ಯದಲ್ಲಿರುವ ವಾಕ್ಯಗಳು ಅರ್ಥವಾಗುತ್ತವಾದರೂ ಒಟ್ಟು ಅರ್ಥ ಸರಿಯಾಗಿಲ್ಲ.

79. "The ascetic is dispassionate. He always goes towards the forest. What way should he go? I have fear in my mind. One who does not know gets angry toward the enemy and it is not the right way."

In the given example, each sentence in the verse has some meaning. However, as the overall sense is not achieved, the individual meanings lose relevance.

ಸ್ಥಿರಮರ್ಥಶೂನ್ಯಮೆಂಬುದು
ದುರುಕ್ತಮಿದನಿಂತು ಪೇೞ್ದೊಡೆಲ್ಲಂ ಪೀನಂ
ಮರುಳಂ ಮದಿರಾಪರವಶ
ಶರೀರನುಂ ಪೇೞ್ಗುಮಱಿವನಾವಂ ಪೇೞ್ಗುಂ ೮೦

ಸ್ಥಿರಮ್ ಅರ್ಥಶೂನ್ಯಂ ಎಂಬುದು ದುರುಕ್ತಮ್ ಇದನ್ ಇಂತು ಪೇೞ್ದೊಡೆ ಎಲ್ಲಮ್ ಪೀನಮ್ ಮರುಳನ್ ಮದಿರಾಪರವಶ ಶರೀರನುಮ್ ಪೇೞ್ಗುಮ್ ಅಱಿವನ್ ಆವನ್ ಪೇೞ್ಗುಮ್

ನಿಶ್ಚಿತವಾಗಿ ಮೇಲಿನದು ಅರ್ಥಶೂನ್ಯವಾಗಿರುವುದರಿಂದ ದುರುಕ್ತ. ಇಂಥದನ್ನು ಹುಚ್ಚನು ಅಥವಾ ಮದಿರಾಪರವಶನು ಮಾತ್ರ ಹೇಳುತ್ತಾನೆಯೇ ಹೊರತು ಬೇರೆ ಯಾವನು ಹೇಳುತ್ತಾನೆ?

80. Certainly, the fault of *artha-śūnya* is inappropriate, as it adds heaviness. Unless one is mad or drunk, who succumbs to it?

ಪರಿಗೀತಾರ್ಥಂ ಪೂರ್ವಾ
ಪರದೊಳ್ ಬಗೆವಾಗಳೆಂದುಮೊಂದಱೊಳೊಂದಿಂ

ದೊರೆಕೊಂಡೊಂದದೊಡದು ದು
ಷ್ಕರಮೆ ವಿರುದ್ಧಾರ್ಥಮೆಂಬುದಾದಂ ದೋಷಂ ೮೧

ಪರಿಗೀತ ಅರ್ಥಮ್ ಪೂರ್ವ ಅಪರದೊಳ್ ಬಗೆವಾಗಳ್ ಎಂದುಮ್ ಒಂದರೊಳ್ ಒಂದಿನ್ ದೊರೆಕೊಂಡು ಒಂದದೊಡೆ ಅದು ದುಷ್ಕರಮೆ ವಿರುದ್ಧಾರ್ಥಮ್ ಎಂಬುದಾದಮ್ ದೋಷಮ್

ಮೊದಲು ಹೇಳಿದ ಮಾತು ಮತ್ತು ಆಮೇಲೆ ಹೇಳಿದ ಮಾತು ಹೊಂದಿಕೆಯಾಗದಿದ್ದಾಗ ಸಮಂಜಸವಾದ ಅರ್ಥ ದುಷ್ಕರವಾದರೆ ಅದು ವಿರುದ್ಧಾರ್ಥವೆಂಬ ದೋಷ.

ಭಾಮಹ (೪.೧) ಮತ್ತು ದಂಡಿ (೩.೧೨೫) ಇದನ್ನು 'ವ್ಯರ್ಥ' ಎಂದು ಹೇಳಿದ್ದಾರೆ.

81. If there is no coordination between the words used before and after, it is difficult to get the meaning. This is a prominent fault.

Bhāmaha (4.1) and Daṇḍin (3.125) call this poetic fault *vyartha*.

ಅರಿನೃಪಬಲಮಂ ಗೆಲ್ದುರು
ಪರಾಕ್ರಮಕ್ರಮದೆ ಶೌರ್ಯಮಂ ಪ್ರಕಟಿಸು ನೀಂ
ನರಮಹಿತಾ ನಿನಗೇನಹಿ
ತರುಮೊಳರೇ ಸತತಪರಹಿತಾಚಾರಪರಾ ೮೨

ಅರಿನೃಪ ಬಲಮನ್ ಗೆಲ್ದು ಉರುಪರಾಕ್ರಮ ಕ್ರಮದೆ ಶೌರ್ಯಮನ್ ಪ್ರಕಟಿಸು ನೀನ್ ನರಮಹಿತಾ ನಿನಗೇನ್ ಅಹಿತರುಮ್ ಒಳರೇ ಸತತ ಪರಹಿತ ಆಚಾರಪರಾ

"ರಾಜನೇ! ಶತ್ರುರಾಜರ ಸೈನ್ಯವನ್ನು ಗೆದ್ದು ಪರಾಕ್ರಮವಿಧಾನದಿಂದ ನೀನು ಶೌರ್ಯವನ್ನು ಪ್ರಕಟಿಸು. ಪರೋಪಕಾರಿಯೆ! ಪರರ ಹಿತವನ್ನೇ ವಿಚಾರಮಾಡುವವನೆ! ನಿನಗೆ ಶತ್ರುಗಳಿದ್ದಾರೆಯೆ?"

ಪದ್ಯದ ಮೊದಲನೆಯ ಭಾಗಕ್ಕೂ ಎರಡನೆಯ ಭಾಗಕ್ಕೂ ಹೊಂದಾಣಿಕೆ ಇಲ್ಲದಿರುವುದು ಸ್ಪಷ್ಟ.

82. "Oh, King! Show your valor by defeating the enemy's army. You always have the nature of helping others. How can you have enemies?"

ಇದು ವಿದಿತವಿರುದ್ಧಾರ್ಥ
ಕ್ಕುದಾಹೃತಂ ಹರಣಮಾತ್ರಮಿನ್ನಪ್ಪುವುಮಂ
ಸದಭಿಮತಕಾವ್ಯಪದವಿಧಿ
ವಿದೂರಗತಮಾಗೆ ಪರಿಹರಿಕ್ಕೆಬುಧರ್ಕಳ್ ೮೩

ಇದು ವಿದಿತ ವಿರುದ್ಧ ಅರ್ಥಕ್ಕೆ ಉದಾಹೃತಮ್ ಹರಣಮಾತ್ರಮ್ ಇನ್ನಪ್ಪುವುಮನ್ ಸದಭಿಮತ ಕಾವ್ಯಪದ ವಿಧಿ ವಿದೂರಗತಮಾಗೆ ಪರಿಹರಿಕ್ಕೆ ಬುಧರ್ಕಳ್

ಇದು 'ವಿರುದ್ಧಾರ್ಥ'ವೆಂಬ ದೋಷಕ್ಕೆ ಸ್ಪಷ್ಟವಾದ ಉದಾಹಣೆ. ಇದೇ ರೀತಿ ಮಿಕ್ಕವನ್ನೂ ಸತ್ಕಾವ್ಯದ ವಿಧಿವಿಧಾನಕ್ಕೆ ದೂರವಿರುವ ಹಾಗೆ ಬುಧಜನರು ಪರಿಹರಿಸಿಕೊಳ್ಳಬೇಕು.

83. This is a clear example of *viruddhārtha.* Let the poet-scholars avoid such faults by following the usages found in the best poems.

ಪುನರುಕ್ತಮೆಂಬುದಕ್ಕುಂ
ನೆನೆಯದೆ ಪೂರ್ವೋದಿತಾರ್ಥಪದಪದ್ಧತಿಗೊಂ
ದಿನಿಸುಂ ವಿಶೇಷಮಿಲ್ಲದೆ
ಜನಿಯಿಸಿದ ಪದಾರ್ಥಮದಱಿದೀ ದೃಷ್ಟಾಂತಂ ೮೪

ಪುನರುಕ್ತಮ್ ಎಂಬುದು ಅಕ್ಕುಮ್ ನೆನೆಯದೆ ಪೂರ್ವ ವಿದಿತ ಅರ್ಥ ಪದ ಪದ್ಧತಿಗೆ ಒಂದಿನಿಸು ವಿಶೇಷಮ್ ಇಲ್ಲದೆ ಜನಿಯಿಸಿದ ಪದಾರ್ಥಮ್ ಅದಱಿದು ಈ ದೃಷ್ಟಾಂತಮ್

ಮೊದಲು ಹೇಳಿದ ಪದದ ಅರ್ಥಪದ್ಧತಿಗೆ ಒಂದಿಷ್ಟೂ ವ್ಯತ್ಯಾಸವಿಲ್ಲದಂತೆ ಪದಪ್ರಯೋಗವನ್ನೂ ಮಾಡಿದರೆ, ಅದು 'ಪುನರುಕ್ತ'ದೋಷ.

ಭಾಮಹ (೪.೧) ಮತ್ತು ದಂಡಿ (೩.೧೨೫) ಇದನ್ನು 'ಏಕಾರ್ಥ' ಎಂದಿದ್ದಾರೆ. 'ಪುನರುಕ್ತ'ದ ಲಕ್ಷಣವನ್ನು ಹೇಳುವಾಗ ಶ್ರೀವಿಜಯ ದಂಡಿಯನ್ನು ಅನುಸರಿಸಿದ್ದಾನೆ.

84. The fault of *punar-ukta* occurs when a word with the same meaning bears no difference with a word and meaning already used. The following verse is an example.

Bhāmaha (4.1) and Daṇḍin (3.125) call this flaw *ēkārtha*. Śrīvijaya follows Daṇḍin while defining *punar-uktaṁ.*

ತ್ರಿದಶಸುರಲೋಕವಾಸಾ
ಸ್ಪದಮಂ ಪೆಱುಗುಂ ಮನುಷ್ಯ ಮನುಜಂ ನಿನ್ನಾ
ಪದಚರಣಯುಗದ್ವಯಮಂ
ಮುದದಟ್ಟಿಯೆ ಬಗೆದು ನೆನೆವನನುದಿನಮೆಂದುಂ ೮೫

ತ್ರಿದಶ ಸುರಲೋಕ ವಾಸ ಆಸ್ಪದಮನ್ ಪೆಱುಗುಮ್ ಮನುಷ್ಯ ಮನುಜನ್ ನಿನ್ನಾ ಪದ ಚರಣ ಯುಗ ದ್ವಯಮನ್ ಮುದದೆ ಅಟ್ಟೆಯೆ ಬಗೆದು ನೆನೆವನ್ ಅನುದಿನಮ್ ಎಂದುಮ್

"ನಿನ್ನ ಪದ-ಚರಣ ಯುಗ-ದ್ವಯವನ್ನು ಮುದ-ಅರ್ತಿಯಿಂದ ಅನುದಿನ-ಎಂದೆಂದೂ ಬಗೆದು-ನೆನೆವ ಮನುಷ್ಯ-ಮನುಜನು ತ್ರಿದಶ-ಸುರಲೋಕದಲ್ಲಿ ವಾಸ-ಆಸ್ಪದವನ್ನು ಪಡೆಯುವನು."

ಒಂದೇ ಅರ್ಥದ ಅನೇಕ ಪದಗಳನ್ನು ಇಲ್ಲಿ ಪುನರುಕ್ತಗೊಳಿಸಲಾಗಿದೆ.

85. "A person who thinks about your holy feet everyday with joy will get heaven as his abode."

In the original Kannada verse, there is a repetition of many words having the same meaning: *tridaśa-suralōka* (heaven), *vāsāspadaṁ* (abode), *manuṣya-manujaṁ* (man), *pada-caraṇa-yuga-dvayaṁ* (two feet), and *anudinamenduṁ* (everyday).

ನಿಯತೋದ್ದೇಶಿಯುಮನುದೇ
ಶಿಯುಮನನುವಿನಂತು ಪೇೞೆ ಯಾಥಾಸಂಖ್ಯಾ
ಹ್ವಯಮಕ್ಕುಮಾಗಮೋಕ್ತ್ಯಾ
ಶ್ರಯದಿಂ ವ್ಯತಿರೇಕಮಕ್ಕುಮಲ್ಲದುವೆಲ್ಲಂ ೮೬

ಚ್ಯುತಯಾಥಾಸಂಖ್ಯಾರ್ಥ
ಪ್ರತೀತ ದೋಷಾನುವಸಥಮೆಂದಱಿಗೆ ಬುಧರ್
ಸತತಮದಱಿಯೆ ನಿದರ್ಶನ
ಗತಮಿಂತಕ್ಕುಂ ಪ್ರಮೋದದಿಂ ಕವಿಜನದೊಳ್ ೮೭

ನಿಯತ ಉದ್ದೇಶಿಯುಮ್ ಅನುದೇಶಿಯುಮ್ ಅನುವಿನ್ ಅಂತು ಪೇೞೆ ಯಾಥಾಸಂಖ್ಯ ಆಹ್ವಯಮ್ ಅಕ್ಕುಮ್ ಆಗಮೋಕ್ತಿ ಆಶ್ರಯದಿಮ್ ವ್ಯತಿರೇಕಮ್ ಅಕ್ಕುಮ್ ಅಲ್ಲದವು ಎಲ್ಲಮ್

ಚ್ಯುತ ಯಾಥಾಸಂಖ್ಯ ಅರ್ಥ ಪ್ರತೀತ ದೋಷ ಅನುವಸಥಮ್ ಎಂದು ಅಱಿಗೆ ಬುಧರ್ ಸತತಮ್ ಅದು ಅಱಿಗೆ ನಿದರ್ಶನ ಗತಮ್ ಇಂತು ಅಕ್ಕುಮ್ ಪ್ರಮೋದದಿನ್ ಕವಿಜನದೊಳ್

ಉದ್ದಿಷ್ಟಕ್ರಮದಲ್ಲಿ ಮೊದಲು ಹೇಳಿದ್ದನ್ನು ಆ ಮೇಲೆ ಹೇಳಿದ್ದನ್ನು ಇದೇ ಉಕ್ತಿಕ್ರಮದಲ್ಲಿ ಮತ್ತೆ ಹೇಳಿದರೆ ಯಥಾಸಂಖ್ಯವಾಗುತ್ತದೆ. ಹಾಗೆ ಹೇಳದಿದ್ದರೆ ಅದು ವ್ಯತಿರೇಕವಾಗುತ್ತದೆ. ಆಗ ಅದು ಚ್ಯುತಯಾಥಾ ಸಂಖ್ಯವೆಂಬ ಹೆಸರಿನಲ್ಲಿ ಅರ್ಥದೋಷವಾಗುತ್ತದೆ ಎಂದು ಬುಧಜನರು ತಿಳಿಯಬೇಕು. ಅದನ್ನು ಯಾವಾಗಲೂ ತಿಳಿದರೆ ಕವಿಜನರಲ್ಲಿ ಅದು ಸಂತೋಷವನ್ನು ಉಂಟುಮಾಡುವ ನಿದರ್ಶನವಾಗುತ್ತದೆ.

ಭಾಮಹ (೪.೧) ಮತ್ತು ದಂಡಿ (೩.೧೨೫) ಇದನ್ನು 'ಅಪಕ್ರಮ' ಎಂದು ಕರೆದಿದ್ದಾರೆ. ಮುಂದಿನ ಪದ್ಯಗಳಲ್ಲಿ ಚ್ಯುತಯಾಥಾಸಂಖ್ಯಕ್ಕೆ ಮತ್ತು ಯಥಾಸಂಖ್ಯಕ್ಕೆ ಉದಾಹರಣೆಗಳನ್ನು ಕೊಡಲಾಗಿದೆ.

86-87. According to literary convention, a narration has sequence. If there is repetition in the same sequence, it is called *yāthā-saṅkhya.* If not, let the scholars understand it as a "problem with sequence" (*cyuta-yāthā-saṅkhya*). If the poets are conscious in demonstrating this "flaw," then it shows that they are happy with it.

This poetic fault is called *apakrama* in Daṇḍin (3.125) and Bhāmaha (4.1).

ಅಳಕಾನನನಯನಂಗಳೊ
ಳಳಿನಳಿನೋತ್ಪಳವಿಕಾಶಮಂ ಗೆಲ್ದುದಱಿಂ
ತಿಳಿಗೊಳಮಂ ಪೋಲ್ತಿರ್ದುಂ
ತಿಳಿಯದಿದೇನೆಂಬುದುಂ ತದನ್ವಯಮದಱೊಳ್ ೮೮

ಅಳಕ ಆನನ ನಯನಂಗಳೊಳ್ ಅಳಿ ನಳಿನ ಉತ್ಪಳ ವಿಕಾಶಮನ್ ಗೆಲ್ದುದಱಿನ್ ತಿಳಿ ಕೊಳವನ್ ಪೋಲ್ತಿರ್ದುಮ್ ತಿಳಿಯದು ಇದು ಏನ್ ಎಂಬುದು ತದನ್ವಯಮ್ ಅದಱೊಳ್

ಮುಂಗುರುಳು, ಮುಖ ಮತ್ತು ಕಣ್ಣುಗಳಿಂದ ದುಂಬಿ ಮತ್ತು ಕನ್ನೈದಿಲೆಯ ಕಾಂತಿಯನ್ನು ಗೆದ್ದಿರುವುದರಿಂದ ತಿಳಿಗೊಳವನ್ನು ಹೋಲುತ್ತಿದ್ದರೂ ಇದರ ಅನ್ವಯ ಏನೆಂದು ತಿಳಿಯದು.

ಇಲ್ಲಿ ಅನ್ವಯವೇ ಇಲ್ಲದಿರುವುದರಿಂದ ಇದು ಚ್ಯುತಯಾಥಾಸಂಖ್ಯ.

88. "The forelock of hair, the face, and the eyes won over the gracefulness of the bees and the blue lily. Though she resembles a pond, it is not clear what it means."

The lack of sequence in this example seemingly renders the idea meaningless. This is the poetic flaw of *cyuta-yāthā-saṅkhya*.

ಅಳಿನಳಿನೋತ್ಪಳರುಚಿಗಳ
ನಳಕಾನನನಯನಯುಗಳದಿಂ ಗೆಲ್ದಿರ್ದುಂ
ಕೊಳದೊಳಗೇನಂ ನೋೞ್ಪಿಯ್
ವಿಳಾಸಿನೀ ನಿನ್ನ ವೋಲದೇನತಿಶಯಮೋ ೮೯

ಅಳಿ ನಳಿನ ಉತ್ಪಳ ರುಚಿಗಳನ್ ಅಳಕ ಆನನ ನಯನ ಯುಗಳದಿನ್ ಗೆಲ್ದಿರ್ದುಮ್ ಕೊಳದೊಳಗೆ ಏನನ್ ನೋೞ್ಪಿಯ್ ವಿಳಾಸಿನೀ ನಿನ್ನವೋಲ್ ಅದು ಏನ್ ಅತಿಶಯಮೋ

ದುಂಬಿ, ಕಮಲ ಮತ್ತು ಕನ್ನೈದಿಲೆ ಕಾಂತಿಗಳನ್ನು ಮುಂಗುರುಳು, ಮುಖ ಮತ್ತು ಎರಡು ಕಣ್ಣುಗಳಿಂದ ಗೆದ್ದಿದ್ದರೂ ಕೊಳದೊಳಗೆ ಏನನ್ನು ನೋಡುವೆ? ಓ ವಿಲಾಸಿನೀ! ಅದು ನಿನ್ನಂತೆಯೇ ಇದೆ, ಇದೇನು ಅತಿಶಯವೋ!

ದುಂಬಿ, ಕಮಲ ಮತ್ತು ಕನ್ನೈದಿಲೆಗಳಿಗೆ ಅನ್ವಯವಾಗುವಂತೆ ಮುಂಗುರುಳು, ಮುಖ ಮತ್ತು ಕಣ್ಣುಗಳನ್ನು ಹೇಳಿರುವುದರಿಂದ ಇದು ಯಥಾಸಂಖ್ಯವಾಗಿದೆ.

89. "Oh, graceful lady! You won over the bees, the lotus and the blue lily with your forelock of hair, face, and eyes. But, why do you look again into the pond which looks like you? This is a wonder!"

Here, the author corrects the sequence and makes it *yāthā-saṅkhya.*

ಸವಿಶೇಷಾಲಂಕಾರೋ
ದ್ಭವಮಾಗಿಯುಮೊಂದುವರ್ಥದೊಳ್ ಸಂಬಂಧ
ವ್ಯವಧಾನಮಾದೊಡಕ್ಕುಂ
ವ್ಯವಹಿತದೋಷಂ ಪ್ರಯೋಗಮೀ ತೆಱನದಱಾ ೯೦

ಸವಿಶೇಷ ಅಲಂಕಾರ ಉದ್ಭವಮಾಗಿಯುಮ್ ಒಂದುವ ಅರ್ಥದೊಳ್ ಸಂಬಂಧ ವ್ಯವಧಾನಮ್ ಆದೊಡೆ ಅಕ್ಕುಮ್ ವ್ಯವಹಿತ ದೋಷಮ್ ಪ್ರಯೋಗಮ್ ಈ ತೆಱನದಱಾ

ವಿಶೇಷವಾದ ಅಲಂಕಾರದಿಂದ ಜನಿಸಿದ್ದರೂ ಅನ್ವಯಿಸಬೇಕಾದ ಅರ್ಥ ದೂರವಾಗಿಬಿಡುವುದಾದರೆ ಅದು 'ವ್ಯವಹಿತ'ವೆಂಬ ದೋಷ. ಇದರ ಪ್ರಯೋಗ ಈ ರೀತಿ ಇದೆ.

90. Though the meaning evolves from a special kind of ornamentation (*alaṅkāra*), if there is a gap between two meanings, with the intended meaning concealed, it is called *vyavahita.*

ಮನದೆ ನೆನೆದವರ ಕಿಡುಗುಂ
ಜಿನಾಧಿಪಾ ನಿನ್ನ ಪಾಪನಿಚಯಂ ಗುಣಮಂ
ಮುನಿಗಳುಮದಱೆಂ ತತ್ಸೇ
ವನೆಯಿಂ ಕಿಡಿಪಲ್ಕೆ ಪತ್ತಿದರ್ ಸಂಸ್ಕೃತಿಯಂ ೯೧

ಮನದೆ ನೆನೆದವರ ಕಿಡುಗುಮ್ ಜಿನಾಧಿಪಾ ನಿನ್ನ ಪಾಪನಿಚಯಮ್ ಗುಣಮನ್ ಮುನಿಗಳುಂ ಅದಱೆನ್ ತತ್ ಸೇವನೆಯಿನ್ ಕಿಡಿಪಲ್ಕೆ ಪತ್ತಿದರ್ ಸಂಸ್ಕೃತಿಯನ್

"ಜಿನಾಧಿಪಾ! ಮನದಲ್ಲಿ ನೆನೆದವರ ನಾಶವಾಗುವುದು ನಿನ್ನ ಪಾಪಸಮೂಹ. ಗುಣವನ್ನು ಮುನಿಗಳೂ ಅದರಿಂದ ಅದನ್ನು ಅನುಸರಿಸುವುದರಿಂದ ಕೆಡಿಸಲು ಹತ್ತಿದರು ಸಂಸಾರವನ್ನು" (ಅಸ್ತವ್ಯಸ್ತವಾಗಿರುವ ಪದಗಳಿಂದ ಅನ್ವಯ ಕ್ಲಿಷ್ಟವಾಗಿದೆ. ಇದನ್ನು ಸರಿಪಡಿಸಿ ಈ ರೀತಿ ಹೇಳಬಹುದು: "ಜಿನಾಧಿಪಾ! ನಿನ್ನ ಗುಣವನ್ನು ಮನದಲ್ಲಿ ನೆನೆದವರ ಪಾಪಸಮೂಹವು ನಾಶವಾಗುವುದು. ಅದರಿಂದ ಮುನಿಗಳೂ ಅದನ್ನು [ಗುಣವನ್ನು] ಅನುಸರಿಸುವುದರಿಂದ ಸಂಸಾರವನ್ನು ಕೆಡಿಸಲು ಹತ್ತಿದರು.)

91. (The example is in the following disorderly manner): "Oh, Lord Jina, those who remember you in their mind destroy your sins and virtues. That is why sages also attempted to neglect sins and virtues by following them, for the sake of family life."

When the order is set right, it will have the following meaning: "Oh, Lord Jina! The sins of those who remember your virtues in their mind will destroy their sins. That is why the sages neglected their family life by following the virtues."

ಗುರುಲಘುವಿನ್ಯಾಸಕ್ರಮ
ವಿರಚನೆಯೂನಾತಿರಿಕ್ತಮಾದೊಡೆ ಕೃತಿಯೊಳ್
ನಿರುತಂ ಛಂದೋಭಂಗಂ
ದುರುಕ್ತತರದೋಷಮದಱ ಪಾಂಗಿಂತಕ್ಕುಂ ೯೨

ಗುರು ಲಘು ವಿನ್ಯಾಸ ಕ್ರಮ ವಿರಚನೆ ಊನ ಅತಿರಿಕ್ತಮ್ ಆದೊಡೆ ಕೃತಿಯೊಳ್ ನಿರುತಮ್ ಛಂದೋಭಂಗಮ್ ದುರುಕ್ತತರ ದೋಷಮ್ ಅದಱ ಪಾಂಗು ಇಂತು ಅಕ್ಕುಮ್

ಗುರುಲಘುಗಳ ವಿನ್ಯಾಸಕ್ರಮದ ರಚನೆಯಲ್ಲಿ ಹೆಚ್ಚು ಕಡಮೆಗಳಾದರೆ ಅಂತಹ ಕೃತಿಯಲ್ಲಿ 'ಛಂದೋಭಂಗ'ವೆಂಬ ದುರುಕ್ತಿಯ ದೋಷ ವಾಗುತ್ತದೆ. ಅದರ ಸ್ವರೂಪ ಈ ರೀತಿ ಇರುತ್ತದೆ:

92. If there is faulty placement of heavy (*guru*) and light (*laghu*) syllables, there will be a faulty meter (*chandō-bhaṅga*). An example follows.

A metrical syllable is *guru* (heavy) when it has two or more *mātrās* (the time taken to utter a short syllable). It is *laghu* (light) when it has one *mātrā.*

ವನರುಹದಳನಯನ ನಿ
ನ್ನನೆ ನೆನೆನೆನೆದಿರುಳೊಳಗೊಱಗದಿರೆ ಕಡೆಗಣ್ಗಳ್
ಮುನಿಸನಭಿನಯಿಪವೋಲ್ ಕೆ
ಮ್ಮನೆ ರಕ್ತಾಂಭೋಜರುಚಿಯನಿಟ್ಕುಳಿಗೊಳ್ಗುಂ ೯೩

ವನರುಹದಳ ನಯನೆ ನಿನ್ನನೆ ನೆನೆನೆನೆದು ಇರುಳೊಳಗೆ ಒಱಗದಿರೆ ಕಡೆಗಣ್ಗಳ್ ಮುನಿಸನ್ ಅಭಿನಯಿಪವೋಲ್ ಕೆಮ್ಮನೆ ರಕ್ತ ಅಂಭೋಜ ರುಚಿಯನ್ ಇೞ್ಕುಳಿಗೊಳ್ಗುಮ್

“ಕಮಲಾಕ್ಷಿ! ನಿನ್ನನ್ನೇ ನೆನೆಯುತ್ತ, ನೆನೆಯುತ್ತ ಇರುಳಲ್ಲಿ ನಿದ್ದೆಯೇ ಮಾಡದಿರುವ ಕಡೆಗಣ್ಣುಗಳು ಕೋಪವನ್ನು ಅಭಿನಯಿಸುವಂತೆ ಬಿಂಕದಿಂದ ಕೆಂದಾವರೆಯ ಕಾಂತಿಯನ್ನು ಆಕರ್ಷಿಸುತ್ತಿವೆ.”

93. “Oh, lotus-eyed lady! As they remember you again and again, the corners of their eyes enact anger, attaining the luster of the red lotus.”

In the original Kannada verse, the first word, *vana-ruha-daḷa-nayane* has a short vowel at the end that should be a long vowel. Such a usage leads to a faulty meter.

ಮೊದಲ ಪದಂ ನ್ಯೂನಾಕ್ಷರ
ಮದಱಿಂದೆ ಬೞಿಕ್ಕಮರ್ಧಮಧಿಕಾಕ್ಷರಮಿಂ
ತಿದಱಿಂ ಛಂದೋಭಂಗಂ
ಪದನಱಿದದನಿಂತು ಸಮಱಿ ಪೇೞ್ದೊಡೆ ಸಲ್ಗುಂ ೯೪

ಮೊದಲ ಪದಮ್ ನ್ಯೂನಾಕ್ಷರಮ್ ಅದಱಿಂದೆ ಬೞಿಕ್ಕುಮ್ ಅರ್ಧಮ್ ಅಧಿಕ ಅಕ್ಷರಮ್ ಇಂತು ಇದಱಿನ್ ಛಂದೋಭಂಗಮ್ ಪದನಱಿದು ಅದನ್ ಇಂತು ಸಮಱಿ ಪೇೞ್ದೊಡೆ ಸಲ್ಗುಮ್

ಮೊದಲನೆಯ ಪಾದದಲ್ಲಿ ಅಕ್ಷರ ಕಡಮೆಯಾಗಿದೆ. ಎರಡನೆಯ ಪಾದದಲ್ಲಿ ಅಕ್ಷರ ಅಧಿಕವಾಗಿದೆ. ಇದರಿಂದ ಛಂದೋಭಂಗವಾಗಿದೆ. ಪದದ ಮಾತ್ರೆಗಳ ಲೆಕ್ಕವನ್ನು ಗಮನಿಸಿ ತಿದ್ದಿಕೊಂಡರೆ ಅದು ಸರಿಯಾಗಿರುತ್ತದೆ.

ಇಲ್ಲಿ ಮೊದಲನೆಯ ಪಾದದಲ್ಲಿ ‘ನಯನೇ’ ಎಂದಿದ್ದಾರೆ. ಛಂದೋಭಂಗ ವಾಗುವುದಿಲ್ಲ. ಎರಡನೆ ಪಾದದಲ್ಲಿ ‘ಇರುಳೊಳಗೊಱಗದಿರೆ’ ಎಂಬಲ್ಲಿ ಒಂದು ಲಘು ಹೆಚ್ಚಾಗಿ ಬಂದಿದೆ. ಅದನ್ನು ‘ಇರುಳೊಳೊಱಗದಿರೆ’ ಎಂದು ಓದಿದರೆ ಸರಿಹೋಗುತ್ತದೆ.

94. One syllable is missing at the end of the first word. In the second instance, there is an excess of a *laghu* syllable. Hence it is called *chandō-bhaṅga.* It should be corrected.

This explanation calls for a correction of the fault in the meter. The word *'nayane'* in the original Kannada verse should be *'nayanē'.* Similarly, *'iruḷoḷaagoṟagadire'* should be *'iruḷoḷoṟagadire'.*

ಛಂದಕ್ಕೆ ಬಾರದೆಂದಱಿ
ದೊಂದೊಂದಱೊಳೊಂದಿ ಬಂದು ನಿಂದಕ್ಕರಮುಂ
ಸಂದಿಸದೆ ಪೇೞ್ದೊಡದು ಕೃತಿ
ನಿಂದಿತಮೆಂದುಂ ವಿಸಂಧಿಯೆಂಬುದು ದೋಷಂ ೯೫

ಛಂದಕ್ಕೆ ಬಾರದು ಎಂದು ಅಱಿದು ಒಂದೊಂದಱೊಳ್ ಒಂದಿ ಬಂದು ನಿಂದ ಅಕ್ಕರಮಮ್ ಸಂದಿಸದೆ ಪೇೞ್ದೊಡೆ ಅದು ಕೃತಿನಿಂದಿತಮ್ ಎಂದುಮ್ ವಿಸಂಧಿ ಎಂಬುದು ದೋಷಮ್

ಛಂದಸ್ಸಿಗೆ ಸರಿಹೋಗದೆಂದು ತಿಳಿದು ಒಂದರಲ್ಲೊಂದು ಹೊಂದಿಕೊಂಡು ಸಂಧಿಯಾಗಬೇಕಾದ ಕಡೆ ಸಂಧಿ ಮಾಡದಿದ್ದರೆ ಅದು 'ವಿಸಂಧಿ' ಎಂಬ ದೋಷ.

95. If the *sandhi* (euphonic coalescence) is not followed, with the understanding that it does not fit into the metrical composition, the fault is known as *visandhi*, which is a blameworthy flaw in poetry.

ಜನಪತಿಗೆ ಒಸಗೆಯಂ ಪುರ
ಜನಮೆಲ್ಲಂ ಬೀೞುತಿರ್ಪ ಆಗಳ್ ತಾಮುಂ
ಮನದುತ್ಸವದಿಂ ಕುಣಿವಂ
ತನಿಲಾಹತಕೇತನಾಳಿ ಸೊಗಯಿಸಿ ತೋರ್ಕುಂ ೯೬

ಜನಪತಿಗೆ ಒಸಗೆಯನ್ ಪುರಜನಮೆಲ್ಲಮ್ ಬೀಱುತಿರ್ಪ ಆಗಳ್ ತಾಮುಮ್ ಮನದ ಉತ್ಸವದಿನ್ ಕುಣಿವಂತೆ ಅನಿಲ ಆಹತ ಕೇತನಾಳಿ ಸೊಗಯಿಸುತಿರ್ಕುಮ್

ಜನಪತಿಗೆ ಒಸಗೆಯನ್ನು ಪುರಜನವೆಲ್ಲ ಬೀರುತ್ತಿರುವಾಗ ತಾವೂ ಮನಸ್ಸಿನಲ್ಲಿ ಆನಂದದಿಂದ ಕುಣಿಯುತ್ತಿರುವಂತೆ ಗಾಳಿಗೆ ಹಾರಾಡುವ ಧ್ವಜಸಮೂಹ ಸೊಗಸಾಗಿದೆ.

ಇಲ್ಲಿ 'ಜನಪತಿಗೆ ಒಸಗೆ' ಎಂಬುದು 'ಜನಪತಿಗೊಸಗೆ' ಎಂದಾಗಬೇಕಾಗಿತ್ತು. 'ಬೀರುತಿರ್ಪ ಆಗಳ್' ಎಂಬುದು 'ಬೀರುತಿರ್ಪಾಗಳ್' ಎಂದಾಗಬೇಕಾಗಿತ್ತು.

96. "When all the citizens are expressing their joy, the flags blown by the wind also dance beautifully, as though they too are expressing their joy."

In the original Kannada verse, *sandhi* is not followed for the sake of meter. (*janapatige* + *osageyaṁ; bīrutirpa* + *āgaḷ*). But, in the second part of the verse, *sandhi* is followed: (*manada* + *utsava* = *manadutsava; kuṇivante* + *anila* = *kuṇivantanila*).

ಮುನ್ನಂ ಪೇೞ್ದಿರ್ದರ್ಧಂ
ಭಿನ್ನಪ್ರಸ್ತಾರಭಿತ್ತಿದೋಷಾನುಗತಂ
ಸನ್ನುತಮಪರಾರ್ಧಂ ಸಂ
ಪನ್ನಂ ಶ್ಲಿಷ್ಟಾಕ್ಷರೋಪರಚಿತಮದೋಷಂ ೯೭

ಮುನ್ನಮ್ ಪೇೞ್ದಿರ್ದ ಅರ್ಧಮ್ ಭಿನ್ನ ಪ್ರಸ್ತಾರ ಭಿತ್ತಿ ದೋಷಾನುಗತಮ್ ಸನ್ನುತಮ್ ಅಪರಾರ್ಧಮ್ ಸಂಪನ್ನ ಶ್ಲಿಷ್ಟ ಅಕ್ಷರ ಉಪರಚಿತಂ ಅದೋಷಮ್

ಹಿಂದಿನ ಪದ್ಯದ ಮೊದಲ ಅರ್ಧದಲ್ಲಿ 'ವಿಸಂಧಿ' ದೋಷ ಆಗಿದೆ. ಉತ್ತರಾರ್ಧದಲ್ಲಿ ಅಕ್ಷರಗಳೆಲ್ಲ ಸರಿಯಾಗಿ ಸೇರಿ ಸಂಧಿ ಆಗಿರುವುದರಿಂದ ವಿಸಂಧಿಯ ದೋಷವಿಲ್ಲ.

ಹಿಂದಿನ ಪದ್ಯದ ಮೊದಲ ಅರ್ಧದಲ್ಲಿ ಎರಡು ಕಡೆ ವಿಸಂಧಿಯಾಗಿದೆ. ಎರಡನೆಯ ಅರ್ಧದಲ್ಲಿ ವಿಸಂಧಿಯ ದೋಷವಿಲ್ಲ (ಮನದುತ್ಸವದಿಂ, ಕುಣಿವಂತನಿಲಾಹತಕೇತನಾಳಿ).

97. In the first half of the previous verse, there is faulty *sandhi.* In the second half, *sandhi* is followed and the fault is rectified.

ಸಂಧಿಗಳುಂ ಕೆಲವೆಡೆಯೊಳ್
ಬಂದು ವಿರೂಪಂಗಳಾಗಿ ಸಮನಿಸಿ ಕವಿತಾ
ಬಂಧನದೊಳಾಗೆ ದೋಷಾ
ಬಂಧುಗೆ ಶಶಲಕ್ಷ್ಮದಂತೆ ಕಱೆಯಂ ತರ್ಕುಂ ೯೮

ಸಂಧಿಗಳುಮ್ ಕೆಲವೆಡೆಯೊಳ್ ಬಂದು ವಿರೂಪಂಗಳಾಗಿ ಸಮನಿಸಿ ಕವಿತಾಬಂಧನದೊಳಾಗೆ ದೋಷಬಂಧುಗೆ ಶಶಲಕ್ಷ್ಮದಂತೆ ಕಱೆಯನ್ ತರ್ಕುಮ್

ಕೆಲವೆಡೆಗಳಲ್ಲಿ ಸಂಧಿಗಳು ವಿರೂಪವಾಗಿ ಬಂದು ಕಾವ್ಯಬಂಧದಲ್ಲಿ ಸೇರಿಕೊಂಡರೆ ಚಂದ್ರನಿಗೆ ಮೊಲದ ಗುರುತಿನಂತೆ ಕಾವ್ಯಕ್ಕೂ ಕಲಂಕವನ್ನು ತರುತ್ತವೆ.

98. In some places, *sandhi* deforms the poetic composition and brings a black spot to it, like the rabbit-mark in the moon.

ಅರಮರಸಂ ಕೃತಕಾದ್ರಿಯೊ
ಳರಮರಮನೆಯೊಳಗೆ ಕಂದುಕಕ್ರೀಡೆಗಳೊಳ್
ಅರಮುದ್ಯಾನವನಂಗಳೊ
ಳರಮಂತಃಪುರದೊಳರಮದೆಂದುಂ ನಿಲ್ವಂ ೯೯

ಅರಮ್ ಅರಸನ್ ಕೃತಕ ಅದ್ರಿಯೊಳ್ ಅರಮ್ ಅರಮನೆಯೊಳಗೆ ಕಂದುಕ ಕ್ರೀಡೆಗಳೊಳ್ ಅರಮ್ ಉದ್ಯಾನ ವನಂಗಳೊಳ್ ಅರಮ್ ಅಂತಃ ಪುರದೊಳ್ ಅರಮ್ ಅದು ಎಂದುಮ್ ನಿಲ್ವನ್

ಅರಸನು ಸ್ವಲ್ಪಕಾಲ ಕ್ರೀಡಾಪರ್ವತದಲ್ಲಿ, ಸ್ವಲ್ಪಕಾಲ ಅರಮನೆಯಲ್ಲಿ, ಸ್ವಲ್ಪಕಾಲ ಚೆಂಡಾಟಗಳಲ್ಲಿ, ಸ್ವಲ್ಪಕಾಲ ಉದ್ಯಾನವನಗಳಲ್ಲಿ, ಸ್ವಲ್ಪಕಾಲ ಅಂತಃಪುರದಲ್ಲಿ ನಿಲ್ಲುತ್ತಾನೆ.

'ಅರಮ್' ಎಂಬ ಅವ್ಯಯವನ್ನು ಕೆಲವು ಪದಗಳ ಜತೆ ಸಂಧಿಮಾಡಿದಾಗ ವಿರೂಪವಾಗುತ್ತದೆಂಬುದಕ್ಕೆ ಈ ಪದ್ಯ ಉದಾಹರಣೆಯಾಗಿದೆ.

99. "For sometime the king stays on the constructed hilltop, sometimes in the palace. For sometime he plays a ball-game, is sometimes in the garden, and sometimes in the harem."

The word *aram* ("For sometime" or "sometimes") is an indeclinable word. When it is added to other words and there is *sandhi,* it will be difficult to understand what it means. Here, in this verse, it is technically not *visandhi* (a problem with sandhi), but *virūpa-sandhi* (a 'deformed' *sandhi*). The "constructed hilltop" (*kṛtakādri*) is a hill made for enjoyment and play (*krīḍādri*).

ದೋಷಂಗಳಿಂತು ಮಿಗೆ ಸಂ
ಶ್ಲೇಷದೊಳಾದಂದು ಸಕಲವಿದ್ವತ್ಸಭೆಯೊಳ್
ದೂಷಿಸುಗುಂ ಕೃತಿವಧುವಂ
ಭಾಷಾವಿದರದಱ ತೆಱನನುಱ್ಗೀ ದೆಸೆಯಿಂ ೧೦೦

ದೋಷಂಗಳ್ ಇಂತು ಮಿಗೆ ಸಂಶ್ಲೇಷದೊಳ್ ಆದಂದು ಸಕಲ ವಿದ್ವತ್ ಸಭೆಯೊಳ್ ದೂಷಿಸುಗುಮ್ ಕೃತಿವಧುವನ್ ಭಾಷಾವಿದರ್ ಅದಱ ತೆರನನ್ ಉಟಿಗೆ ಈ ದೆಸೆಯಿನ್

ಹೀಗೆ ಸಂಧಿಯಲ್ಲಿ ಹೆಚ್ಚಾಗಿ ದೋಷಗಳು ಉಂಟಾದರೆ ಭಾಷಾವಿದರು ಸಕಲ ವಿದ್ವತ್ಸಭೆಯಲ್ಲಿ ಕೃತಿವಧುವನ್ನು ದೂಷಿಸುತ್ತಾರೆ. ಆದುದರಿಂದ ಇಂಥವನ್ನು ತೊರೆಯಬೇಕು.

100. In this way, if there is faulty *sandhi*, language experts abuse Lady Poetry in a court filled with scholars. For this reason, it is to be avoided.

ಕುಱಿತಂತೆ ಪೇೞ್ದ ಪದದೊಳ್
ಮೆಱೆಯದೊಡೆಲ್ಲಂ ವಿವಕ್ಷಿತಾರ್ಥಮಶೇಷಂ
ಪೆಱತೊಂದಲ್ಲಿಲ್ಲದುಮುಮ
ನಱಿವವರಿಟ್ಟಱಿಯೆ ಪೇೞ್ದೊಡದು ನೇಯಾರ್ಥಂ ೧೦೧

ಕುಱಿತಂತೆ ಪೇೞ್ದ ಪದದೊಳ್ ಮೆಱೆಯದೊಡೆ ಎಲ್ಲಮ್ ವಿವಕ್ಷಿತ ಅರ್ಥಮ್ ಅಶೇಷಮ್ ಪೆಱತು ಒಂದು ಅಲ್ಲಿ ಇಲ್ಲದುಮುಮನ್ ಅಱಿವವರ್ ಇಟ್ಟು ಅಱಿಯೆ ಪೇೞ್ದೊಡೆ ಅದು ನೇಯಾರ್ಥಮ್

ಪ್ರಯೋಗವಾದ ಪದದಲ್ಲಿ ವಿವಕ್ಷಿತ ಅರ್ಥ ಉದ್ದೇಶಕ್ಕೆ ತಕ್ಕಂತೆ ತಿಳಿಯಲಾಗದಿದ್ದರೆ ಬುದ್ಧಿಶಾಲಿಗಳು ಅಲ್ಲಿಲ್ಲದ ಮತ್ತೊಂದು ಪದವನ್ನು ಊಹಿಸಿಟ್ಟು ಅರ್ಥವನ್ನು ಸರಿಮಾಡಿದರೆ ಅದನ್ನು 'ನೇಯಾರ್ಥ' ಎನ್ನುವರು.

101. When an intended meaning is not conveyed by a certain word, intelligent people have to think of another word to set the meaning right. This is a poetic fault called *nēyārtha.*

ಪರೆದಿರೆ ರಾಗಂ ತನ್ನೊಳ್
ನಿರಂತರಂ ಗಗನವಿವರಮೊಪ್ಪಿತ್ತಾದಂ
ವರಪಾರಿಜಾತಕುಸುಮೋ
ತ್ಕರಸಾಂದ್ರಪರಾಗವಿಸರಪಿಂಜರಿತಂಬೋಲ್ ೧೦೨

ಪರೆದಿರೆ ರಾಗಮ್ ತನ್ನೊಳ್ ನಿರಂತರಮ್ ಗಗನ ವಿವರಮ್ ಒಪ್ಪಿತ್ತು ಆದಮ್ ವರ ಪಾರಿಜಾತ ಕುಸುಮ ಉತ್ಕರ ಸಾಂದ್ರ ಪರಾಗ ವಿಸರ ಪಿಂಜರಿತಂಬೋಲ್

ಶ್ರೇಷ್ಠವಾದ ಪಾರಿಜಾತ ಕುಸುಮಗಳ ದಟ್ಟವಾದ ಪರಾಗಧೂಳಿಯ ಪ್ರಸಾರದಿಂದ ರಂಜಿತವಾಗಿದೆಯೋ ಎಂಬಂತೆ ಗಗನತಲವು ಹರಡಿದ ರಕ್ತವರ್ಣದಿಂದ ಚೆಲುವಾಗಿತ್ತು.

ಇಲ್ಲಿ ಸಂಧ್ಯಾರಾಗವೆಂಬುದನ್ನು ಊಹಿಸಬೇಕಾಗಿರುವುದರಿಂದ ಇದು 'ನೇಯಾರ್ಥ'.

102. "With the spreading of redness, the sky looks beautiful, as though it is filled with the pollen of fragrant *pārijāta* flowers."

ಪರೆದಿರೆ ಸಂಧ್ಯಾರಾಗಂ
ನಿರಂತರಂ ಗಗನವಿವರಮೊಪ್ಪಿತ್ತೆಂದಾ
ದರದಿಂ ಪೇಟಲ್ ಬಗೆದಂ
ತಿರೆ ಸಂಧ್ಯಾಪದಮನಿಡದೆ ಪೇೞ್ವುದು ದೋಷಂ ೧೦೩

ಪರೆದಿರೆ ಸಂಧ್ಯಾರಾಗಮ್ ನಿರಂತರಮ್ ಗಗನ ವಿವರಮ್ ಒಪ್ಪಿತ್ತು ಎಂದು ಆದರದಿನ್ ಪೇಟಲ್ ಬಗೆದಂತೆ ಇರೆ ಸಂಧ್ಯಾಪದಮನ್ ಇಡದೆ ಪೇೞ್ವುದು ದೋಷಮ್

ನಿರಂತರವಾಗಿ ಸಂಧ್ಯಾರಾಗ ಹರಡಿರಲು ಗಗನತಲ ಒಪ್ಪಿತ್ತು ಎಂದು ಆದರದಿಂದ ಹೇಳಲು ಯೋಚಿಸಿದಾಗ ಸಂಧ್ಯಾಪದವನ್ನು ಬಳಸದೆ ಹೇಳುವುದು ದೋಷವಾಗುತ್ತದೆ.

103. Here (in the original Kannada verse), the word *rāga* (redness) is used, and a learned audience is expected to understand it as *sandhyā-rāga* (the redness of twilight). It is proper to say that the spreading of redness during twilight makes the sky beautiful. Otherwise it is a poetic fault.

ರಾಗಾದಿ ದೋಷವಿರಹಿತ
ವಾಗತಿಶಯವಖಿಳವಸ್ತುವಿಸ್ತರವಿಷಯಂ
ಯೋಗಿಗುಣಾನುಗತಂ ಮ
ತ್ತಾಗಮವೇತದ್ವಿರುದ್ಧವಚನಂ ದೋಷಂ ೧೦೪

ರಾಗಾದಿ ದೋಷ ವಿರಹಿತ ವಾಗತಿಶಯಮ್ ಅಖಿಳ ವಸ್ತು ವಿಸ್ತರ ವಿಷಯಮ್ ಯೋಗಿ ಗುಣಾನುಗತಮ್ ಮತ್ತೆ ಆಗಮಮ್ ಏತತ್ ವಿರುದ್ಧ ವಚನಂ ದೋಷಮ್

ರಾಗಾದಿದೋಷಗಳಿಂದ ಮುಕ್ತವಾದುದೂ ವಾಗತಿಶಯವುಳ್ಳದ್ದೂ ಅಖಿಲ ವಸ್ತುಗಳ ಪರಿಜ್ಞಾನ ಇರುವುದು ಯೋಗಿಗುಣಗಳ ವಚನವೂ ಆದ ಆಗಮಕ್ಕೆ ವಿರುದ್ಧವಾದುದು ದೋಷ.

104. *Āgama* refers to the traditional doctrines of *yōgis* that advocate the absence of false attachment toward all objects. Anything contradictory to these traditional doctrines in poetry is seen as a fault.

ಆ ಕಪಿಲ ಸುಗತ ಕಣಚರ
ಲೋಕಾಯತಿಕಾದಿ ಮಾರ್ಗಭೇದಂ ಸಮಯಂ
ಪ್ರಾಕಟಮದಂ ವಿರುದ್ಧ ವಿ
ವೇಕದಿನಱಿಪುವೊಡೆ ನಾಡೆ ಸಮಯವಿರುದ್ಧಂ ೧೦೫

ಆ ಕಪಿಲ ಸುಗತ ಕಣಚರ ಲೋಕಾಯತಿಕ ಆದಿ ಮಾರ್ಗ ಭೇದಮ್ ಸಮಯಮ್ ಪ್ರಾಕಟಂ ಅದನ್ ವಿರುದ್ಧ ವಿವೇಕದಿನ್ ಅಱಿಪುವೊಡೆನ್ ಆಡೆ ಸಮಯ ವಿರುದ್ಧಮ್

ಕಪಿಲ, ಬುದ್ಧ, ಕಣಾದ, ಲೋಕಾಯತಿಕ ಮೊದಲಾದ ಮಾರ್ಗ ಭೇದಗಳಿಂದ ಕೂಡಿದ್ದು ಪ್ರಸಿದ್ಧ 'ಸಮಯ', ವಿಪರೀತಮತಿಯಿಂದ ಅದಕ್ಕೆ ವಿರುದ್ಧವಾದುದನ್ನು ಹೇಳುವುದೇ 'ಸಮಯವಿರುದ್ಧ'.

ಕಪಿಲ ಮಹರ್ಷಿಯ ಸಾಂಖ್ಯ, ಸುಗತನ ಬೌದ್ಧ, ಕಣಾದನ ವೈಶೇಷಿಕ, ಲೋಕಾಯತಿಕ ಪ್ರಸಿದ್ಧ ದರ್ಶನಗಳು.

105. *Samaya* refers here to the philosophical doctrines of Kapila, Sugata, Kaṇacara, Lōkāyata and others. Anything contradictory to these philosophical doctrines in poetry is seen as a fault.

The doctrine of Kapila is called Sāṅkhya; Sugata is another name for Buddha; Kaṇacara refers to the doctrines of the Vaiśeṣika philosophy; and Lokāyata refers to materialist doctrines.

ಉಕ್ತವಿಚಾರಂ ನ್ಯಾಯನಿ
ಯುಕ್ತಕ್ರಮವಿನ್ನದರ್ಕೆ ಬಾರದುವೆಲ್ಲಂ
ವ್ಯಕ್ತಂ ನ್ಯಾಯವಿರುದ್ಧಂ
ಪ್ರೋಕ್ತಮಹಾದೋಷಮಂತು ಪೇೞಲ್ಕೆಂತುಂ ೧೦೬

ಉಕ್ತ ವಿಚಾರಮ್ ನ್ಯಾಯ ನಿಯುಕ್ತ ಕ್ರಮಮ್ ಇನ್ ಅದರ್ಕೆ ಬಾರದುವೆಲ್ಲಮ್ ವ್ಯಕ್ತಮ್ ನ್ಯಾಯ ವಿರುದ್ಧಮ್ ಪ್ರೋಕ್ತ ಮಹಾದೋಷಮ್ ಅಂತು ಪೇೞಲ್ಕೆ ಎಂತುಮ್

ಉಕ್ತವಿಚಾರ ನ್ಯಾಯಶಾಸ್ತ್ರದ ಕ್ರಮಕ್ಕೆ ಅನುಗುಣವಾಗಿದ್ದರೆ ಅದು 'ನ್ಯಾಯಯುಕ್ತ'. ಅದಕ್ಕೆ ವಿರುದ್ಧವಾದುದೆಲ್ಲ ನ್ಯಾಯವಿರುದ್ಧ. ಹಾಗೆ ಹೇಳಿದರೆ ಅದು ಮಹಾದೋಷವಾಗುತ್ತದೆ.

ನ್ಯಾಯಶಾಸ್ತ್ರ(ತರ್ಕಶಾಸ್ತ್ರ) ಪ್ರಮಾಣಗಳಾದ ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದ ಎಂಬುದನ್ನು ಅನುಸರಿಸಿದಾಗ ಅಂಥದು ನ್ಯಾಯಯುಕ್ತವೆನಿಸುತ್ತದೆ.

106. Poetry ought to be in conformity with logic. Anything contradictory to logic in poetry is considered a great fault.

ನಿರುಪಮಗಂಧರ್ವಗತಿ
ಸ್ವರಾದಿಕ ಕಳಾಗುಣಂ ಚತುಃಷಷ್ಟಿವಿಧಂ
ದೊರೆಕೊಳ್ಳದುದೆಲ್ಲಿ ಕಳಾ
ವಿರುದ್ಧದೋಷಂ ವಿಶಿಷ್ಟ ಜನತಾದೂಷ್ಯಂ ೧೦೭

ನಿರುಪಮ ಗಂಧರ್ವ ಗತಿ ಸ್ವರಾದಿಕ ಕಳಾಗುಣಮ್ ಚತುಃಷಷ್ಟಿ ವಿಧಮ್ ದೊರೆಕೊಳ್ಳದುದು ಎಲ್ಲಿ ಕಳಾವಿರುದ್ಧ ದೋಷಮ್ ವಿಶಿಷ್ಟ ಜನತಾದೂಷ್ಯಮ್

ನಿರುಪಮವಾದ, ಗಂಧರ್ವಗಾನದ ಸ್ವರಾದಿಕಲಾಗುಣ ಅರುವತ್ತನಾಲ್ಕು ವಿಧ. ಆ ಲಕ್ಷಣಗಳು ಸರಿಯಾಗಿ ಹೊಂದಿಕೆಯಾಗದಿದ್ದರೆ ಅದು ವಿಶಿಷ್ಟ ಜನ ದೂಷಿಸುವ 'ಕಲಾವಿರುದ್ಧ' ಎಂಬ ದೋಷವಾಗುತ್ತದೆ.

107. The incomparable artistry in the tunes of the divine *gandharva* musicians are of sixty-four types. If the quality of that artistry is not adhered to in poetry, connoisseurs regard it a blameworthy fault.

ಕಾಲಮಹೋರಾತ್ರಾದಿಕ
ಮಾ ಲಕ್ಷಿತಭೇದಮದಱೊಳೊಂದದೊಡಕ್ಕುಂ
ಕಾಲವಿರುದ್ಧಂ ದೋಷ
ಕ್ಕಾಲಯಮದನಱಿದು ಕೃತಿಯೊಳಿಡದಿರ್ಕೆ ಬುಧರ್ ೧೦೮

ಕಾಲಂ ಅಹೋರಾತ್ರಾದಿಕಮ್ ಆಲಕ್ಷಿತ ಭೇದಮ್ ಅದಱೊಳ್ ಒಂದದೊಡೆ ಅಕ್ಕುಮ್ ಕಾಲವಿರುದ್ಧಮ್ ದೋಷಕ್ಕೆ ಆಲಯಮ್ ಅದನ್ ಅಱಿದು ಕೃತಿಯೊಳ್ ಇಡದಿರ್ಕೆ ಬುಧರ್

'ಕಾಲ' ಎಂಬುದು ಹಗಲು, ಇರುಳು ಎಂದು ವಿಂಗಡಣೆಯಾಗಿರುತ್ತದೆ. ಅದರಲ್ಲಿ ಸರಿಯಾಗಿ ಹೊಂದಿಕೆಯಾಗದಿದ್ದರೆ 'ಕಾಲವಿರುದ್ಧ'ವೆಂಬ ದೋಷವಾಗುತ್ತದೆ. ಅದನ್ನು ಅರಿತುಕೊಂಡು ಬುಧರು ಆ ದೋಷವನ್ನು ಕಾವ್ಯದಲ್ಲಿ ಮಾಡದಿರಲಿ.

108. ***Kāla*** **(time) is the division of day and night. If there is no coordination between the two, it becomes a fault in poetry. Knowing this to be a fault, scholars should avoid it.**

ಲೋಕಮದೂರ್ಧ್ವಾಧೋಮ
ಧ್ಯಾಕಾಂಕ್ಷಿತಭೇದರೂಪದಿಂ ಮೂಱಕ್ಕುಂ
ಲೋಕವಿರುದ್ಧಂ ತದ್ವ್ಯತಿ
ರೇಕೋಕ್ತಿ ವಿವೇಕಿಲೋಕಗರ್ಹಿತಮಾರ್ಗಂ ೧೦೯

ಲೋಕಂ ಅದು ಊರ್ಧ್ವ ಅಧಃ ಮಧ್ಯ ಆಕಾಂಕ್ಷಿತ ಭೇದ ರೂಪದಿನ್ ಮೂಱಕ್ಕುಮ್ ಲೋಕ ವಿರುದ್ಧಮ್ ತತ್ ವ್ಯತಿರೇಕ ಉಕ್ತಿ ವಿವೇಕಿ ಲೋಕ ಗರ್ಹಿತ ಮಾರ್ಗಮ್

ಊರ್ಧ್ವಲೋಕ (ಸ್ವರ್ಗ), ಅಧೋಲೋಕ (ಪಾತಾಳ) ಮತ್ತು ಮಧ್ಯಲೋಕ (ಭೂಲೋಕ) ಎಂಬ ಮೂರು ಲೋಕಗಳ ವಿಭಾಗ ಕ್ರಮವಿದೆ. ಇದಕ್ಕೆ ವಿರುದ್ಧವಾಗಿ ಹೇಳಿದರೆ ಅದು 'ಲೋಕವಿರುದ್ಧ'. ಇದನ್ನು ವಿವೇಕಿಗಳು ದೂಷಿಸುತ್ತಾರೆ.

109. ***Lōka*** **(literally: world / space) is that which has upper, lower and middle divisions, numbering**

three. Anything contradictory to these three divisions is considered a flaw in poetry.

ದೇಶಂ ವರರಾಷ್ಟ್ರಾದಿನಿ
ವೇಶಾಂತಂ ತದ್ವಿರುದ್ಧವಚನಂ ಮಿಗೆ ಸಂ
ಕ್ಲೇಶಕರಂ ಕೃತಿಕರ್ತೃಗೆ
ಕೌಶಲಮಂ ಪಡೆಯದುಕ್ತದೇಶವಿರುದ್ಧಂ ೧೧೦

ದೇಶಮ್ ವರ ರಾಷ್ಟ್ರಾದಿ ನಿವೇಶಾಂತಮ್ ತತ್ ವಿರುದ್ಧ ವಚನಮ್ ಮಿಗೆ ಸಂಕ್ಲೇಶಕರಮ್ ಕೃತಿಕರ್ತೃಗೆ ಕೌಶಲಮನ್ ಪಡೆಯದು ಉಕ್ತ ದೇಶ ವಿರುದ್ಧಮ್

'ದೇಶ' ಎಂಬುದು ಶ್ರೇಷ್ಠರಾಷ್ಟ್ರಾದಿಗಳ ವಾಸಸ್ಥಳದ ಕಡೆಯವರೆಗೆ ಇರುವಂಥದು. ಅದಕ್ಕೆ ವಿರುದ್ಧವಾದುದು 'ದೇಶವಿರುದ್ಧ'. ಕ್ಲೇಶಕರವಾದ ಇದು ಕೃತಿಕರ್ತೃಗೆ ಗೌರವವನ್ನು ತರುವುದಿಲ್ಲ.

110. ***Dēśa*** **(regions) refers to a collective area of well-governed states. It is a problem to speak against it, as it will not bring honor to the author.**

ಇಂತಿಂತೆ ಪೇೞ್ವೊಡೆಲ್ಲಮ
ನಂತಾತ್ಮಕಮಕ್ಕುಮಾ ವಿರುದ್ಧದ ಭೇದಂ
ಸಂತಯಿಸಿ ಬಲಿದು ಮನಮನ
ದಂ ತಱಿಸಲೆ ಪೇೞಲಾರ್ಪನೆಂಬವನೊಳನೇ ೧೧೧

ಇಂತಿಂತೆ ಪೇೞ್ವೊಡೆ ಎಲ್ಲಮ್ ಅನಂತಾತ್ಮಕಂ ಅಕ್ಕುಮ್ ಆ ವಿರುದ್ಧದ ಭೇದಮ್ ಸಂತಯಿಸಿ ಬಲಿದು–ಮನಮಮ್ ಅದಮ್ ತಱಿಸಲೆ ಪೇೞಲಾರ್ಪನ್ ಎಂಬವನ್ ಒಳನೇ

ಈ ರೀತಿ ಹೇಳುತ್ತಾ ಹೋದರೆ ವಿರುದ್ಧದ ಭೇದಗಳು ಅನಂತವೆಂದು ತಿಳಿಯುತ್ತದೆ. ಇದನ್ನೆಲ್ಲ ನಿರ್ಣಯಿಸಿ ಸಮಾಧಾನದ ಮನಸ್ಸಿನಿಂದ ಹೇಳಬಲ್ಲವನಿದ್ದಾನೆಯೆ?

111. Listing faults in poetry is an endless task. Is there anyone who, with a firm mind, can list them comfortably?

ಗೀತಿಕೆ ದೋಸಮೇನಾನುಂ ಸ್ವಲ್ಪಮಾದೊಡಂ
ಮಾಸಿಸಿರ್ಕುಮಣಂ ಕೃತಿವಧುವಂ
ಪೇಸದೆ ದುರ್ಜನದೊಳಾದ ಪರಿಚಯಂ
ಮಾಸಿಸಿ ಕಿಡಿಸುವ ವೊಲೊಪ್ಪುವ ಕುಲವಧುವಂ ೧೧೨

ದೋಸಂ ಏನಾನುಮ್ ಸ್ವಲ್ಪಮ್ ಆದೊಡಮ್ ಮಾಸಿಸಿರ್ಕುಮ್ ಅಣಮ್ ಕೃತಿವಧುವನ್ ಪೇಸದೆ ದುರ್ಜನದೊಳ್ ಆದ ಪರಿಚಯಮ್ ಮಾಸಿಸಿ ಕಿಡಿಸುವವೊಲ್ ಒಪ್ಪುವ ಕುಲವಧುವನ್

ಹೇಸದೆ ದುರ್ಜನರೊಂದಿಗೆ ಮಾಡಿಕೊಂಡ ಪರಿಚಯ ಕುಲವಧುವನ್ನೂ ಕೆಡಿಸುವಂತೆ, ದೋಷವು ಎಷ್ಟೇ ಸ್ವಲ್ಪವಾದರೂ ಕೃತಿವಧುವಿನ ಅಂದವನ್ನು ಅದು ಕೆಡಿಸುವುದು.

112. Even a small flaw will affect the beauty of Lady Poetry. It is akin to a respectable lady spoiled by companionship with bad people.

ಕಾರಕಾದಿ ಇತರದೋಷಗಳು

Faults with *kāraka* (Case Relationships) and Other Aspects of Language

ಉ.ಮಾ. ಕಾರಕದೋಷಮುಂ ವಚನದೋಷಮುಮಾ ಗುರುದೋಷಮುಂ ಲಘೂ
ಚ್ಚಾರಿತಶಬ್ದದೋಷಮುಮದಂತೆ ಸಮುಚ್ಚಯಜಾತದೋಷಮುಂ
ಭೂರಿ ವಿಕಲ್ಪ ದೋಷಮುಮದಿನ್ನವಧಾರಣದೋಷಮುಂ ವಿಶಂ
ಕಾರಚಿತೋರುದೋಷಮುಮನೀ ತೆಱದಿಂ ತಱಿಸಲ್ಗೆ ಪಂಡಿತರ್
೧೧೩

ಕಾರಕ ದೋಷಮುಮ್ ವಚನ ದೋಷಮುಮ್ ಆ ಗುರು ದೋಷಮುಮ್ ಲಘು ಉಚ್ಚಾರಿತ ಶಬ್ದ ದೋಷಮುಮ್ ಅದಂತೆ ಸಮುಚ್ಚಯ ಜಾತದೋಷಮುಮ್ ಭೂರಿ ವಿಕಲ್ಪ ದೋಷಮುಮ್ ಅದು ಇನ್ನು ಅವಧಾರಣ ದೋಷಮುಮ್ ವಿಶಂಕಾರಚಿತ ಉರುದೋಷಮು ಮನ್ ಈ ತೆಱದಿನ್ ತಱಿಸಲ್ಗೆ ಪಂಡಿತರ್

ಕಾರಕದೋಷ, ವಚನದೋಷ, ಗುರುದೋಷ, ಲಘುಗಳಿಗೆ ಸಂಬಂಧಿಸಿದ ದೋಷ, ಸಮುಚ್ಚಯ ದೋಷ, ವಿಕಲ್ಪದೋಷ, ಅವಧಾರಣದೋಷ, ಸಂಶಯದ ದೋಷ ಎಂಬುವನ್ನು ಪಂಡಿತರು ದೋಷವೆಂದು ನಿಶ್ಚಯಿಸಬೇಕು.

ನಾಮವಿಭಕ್ತಿಗಳ ಸಂಬಂಧಕಾರಕ. ಕಾರಕಗಳಿಗೆ ಸಂಬಂಧಿಸಿದಂತೆ ದೋಷವಿರಬಾರದು. ಏಕ ಮತ್ತು ಬಹುವಚನಕ್ಕೆ ಸಂಬಂಧಿಸಿದಂತೆ ದೋಷವಿರಬಾರದು. ಪದ್ಯರಚನೆಯಲ್ಲಿ ಗುರುಲಘುಗಳ ದೋಷವನ್ನು ಪರಿಹರಿಸಬೇಕು. 'ಉಂ' ಇತ್ಯಾದಿ ಸಮುಚ್ಚಯಗಳಿಂದಾದ ದೋಷವನ್ನು ಬಿಡಬೇಕು. ಎರಡು ರೀತಿ ಹೇಳಬಹುದಾದ ವಿಕಲ್ಪದ ದೋಷವಿರಬಾರದು. ಅವಧಾರಣೆ (ನಿಯತಾರ್ಥದಲ್ಲಿ 'ಎ' ಮುಂತಾದವನ್ನು ಬಳಸುವುದು) ಸಂಬಂಧದ ದೋಷವನ್ನು ಪರಿಹರಿಸಬೇಕು. ಸಂಶಯವಿರಬಾರದು. ಈ ರೀತಿಯ ದೋಷಗಳನ್ನು ಪಂಡಿತರು ನಿಶ್ಚಯದಿಂದ ನೋಡಬೇಕು.

113. Also considered faults in poetry are problems with grammatical case relationships, with number (singular/plural), with meter (heavy and light syllables), with conjunctions (such as "and"), with semantic options (*vikalpa*), with words indicating emphasis *(avadhāraṇa)*, and with doubts about meaning (*viśaṅkā*).

This portion, which takes language into consideration, is Śrīvijaya's unique contribution to poetics.

ಉ.ಮಾ. ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿಭೇದನಿ
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞೆನಿಕ್ಕುಮಾ
ಚಾರುಗುಣೋದಯಂ ವಚನಮೇಕಬಹುಕ್ರಮದಿಂದೆರೞ್ತೆಱ
ಕ್ಕಾರಯೆ ಪೇೞ್ವೆನಿಂತಿವಱ ಜಾತಿವಿಭಾಗಗುಣಾಗುಣಂಗಳಂ ೧೧೪

ಕಾರಕಮ್ ಆಱು ಕರ್ಮಕರಣಾದಿಕದಿನ್ ಪ್ರಥಮಾದಿ ಭೇದ ನಿರ್ಧಾರಣ ದಿಂದೆ ಅದನ್ ಪಿಡಿದು ನಿಲ್ವ ವಿಭಕ್ತಿಗಳ್ ಏೞು ಎನಿಕ್ಕುಮ್ ಆ ಚಾರು ಗುಣೋದಯನ್ ವಚನಮ್ ಏಕ ಬಹು ಕ್ರಮದಿಂದೆ ಎರೞ್ ತೆಱಕ್ಕೆ ಆರಯೆ ಪೇೞ್ವೆನ್ ಇಂತು ಇವಱ ಜಾತಿ ವಿಭಾಗ ಗುಣ ಅಗುಣಂಗಳನ್

> **ಕರ್ಮಕರಣಾದಿ ಕಾರಕಗಳು ಆರು. ಕಾರಕಗಳನ್ನು ವಹಿಸಿ ನಿಲ್ಲುವ ವಿಭಕ್ತಿಗಳು ಪ್ರಥಮಾದಿಗಳು ಏಳು. ಆ ವಿಶಿಷ್ಟ ಗುಣಗಳ ಸಂಬಂಧವಿರುವ ವಚನಗಳು ಏಕವಚನ ಮತ್ತು ಬಹುವಚನ ಎಂಬ ಎರಡು. ಇನ್ನು ಇವುಗಳನ್ನು ವಿಭಾಗಮಾಡಿ ಗುಣದೋಷಗಳನ್ನು ಕುರಿತು ಹೇಳುತ್ತೇನೆ.**

ಕಾರಕಗಳ ಬಗೆಗಿನ ಈ ಭಾಗ ಕನ್ನಡದಲ್ಲಿ ಭಾಷೆಯ ವಿಷಯದಲ್ಲಿ ಮೊತ್ತ ಮೊದಲು ವ್ಯಕ್ತಮಾಡಿದ ಅಭಿಪ್ರಾಯ ಮತ್ತು ಕನ್ನಡ ಭಾಷೆಗೆ ವಿಶಿಷ್ಟವಾದ ಕೊಡುಗೆ. ಕಾರಕಗಳು ಆರೆಂದು, ಅವು ಕರ್ಮಕರಣಾದಿ ಆರು ಕಾರಕಗಳೆಂದು ಹೇಳಿರುವುದು ವಿವಿಧ ಅಭಿಪ್ರಾಯಗಳಿಗೆ ಎಡೆಮಾಡಿದೆ. ಆರು ಕಾರಕಗಳೆಂದರೆ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ ಮತ್ತು ಅಧಿಕರಣ, ಆದರೆ ಇಲ್ಲಿ 'ಕರ್ಮಕರಣಾದಿ' ಎಂದು ಹೇಳಿ ಕರ್ತೃಕಾರಕವನ್ನು ಬಿಟ್ಟಿರುವುದು ಅನೇಕ ಸಂಶಯಗಳಿಗೆ ಕಾರಣವಾಗಿದೆ. ಷಷ್ಠಿಗೆ ಕಾರಕತ್ವವಿಲ್ಲವೆಂದು, ವಿಭಕ್ತಿಗಳು ಏಳೆಂದು ನಾಗವರ್ಮ, ಕೇಶಿರಾಜ ಅಭಿಪ್ರಾಯಪಟ್ಟಿದ್ದಾರೆ. ಆದರೆ ಕವಿರಾಜಮಾರ್ಗದ ಲಕ್ಷ್ಯ ಪದ್ಯದಲ್ಲಿ ಪ್ರಥಮಾವಿಭಕ್ತಿ ಮತ್ತು ಷಷ್ಠೀವಿಭಕ್ತಿ ಸೇರಿರುವುದು ಗಮನಿಸತಕ್ಕ ವಿಷಯ. ಅಲ್ಲದೆ ಪದ್ಯದ ಕೊನೆಯಲ್ಲಿ 'ಇದು ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂದಿರುವುದು ವಿಶೇಷ. ಏಳು ವಿಭಕ್ತಿಗಳಲ್ಲಿ ಕಾರಕಗಳಿಂದ ಪ್ರಥಮಾವಿಭಕ್ತಿಯನ್ನು ಪರಿಹರಿಸಬೇಕೇ ಅಥವಾ ಷಷ್ಠೀವಿಭಕ್ತಿಯನ್ನು ಪರಿಹರಿಸಬೇಕೇ ಎಂಬುದು ಸ್ಪಷ್ಟವಾಗಿಲ್ಲ. ಈ ವಿಷಯದಲ್ಲಿ ವಿದ್ವಾಂಸರ ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದೆ. ಕರ್ತೃಕಾರಕವನ್ನು ಹೆಸರಿಸದಿರುವುದರಿಂದ ಕರ್ಮಕರಣಾದಿಗಳೇ ಕಾರಕಗಳೆಂದು ಕವಿರಾಜಮಾರ್ಗಕಾರನ ಅಭಿಪ್ರಾಯವೆಂದು ಕಾಣುತ್ತದೆ. ಆಧುನಿಕ ಭಾಷಾಶಾಸ್ತ್ರಜ್ಞರು ಕೂಡ ಪ್ರಥಮಾವಿಭಕ್ತಿಯಲ್ಲಿ ನಾಮಪ್ರಕೃತಿಯೇ ಪ್ರಥಮೆಯ ಅರ್ಥದಲ್ಲಿ ಪ್ರಯೋಗವಾಗುವುದನ್ನು ಗುರುತಿಸಿದ್ದಾರೆ. ಅಲ್ಲದೆ ಕರಣಕಾರಕ ಕರ್ತೃಕಾರಕವನ್ನೂ ಒಳಗೊಳ್ಳುವುದರಿಂದ ಅದನ್ನು ಹೇಳದೆ ಬಿಡಲಾಗಿದೆ ಎಂದೂ ಭಾವಿಸಬಹುದು. ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ, ಷಷ್ಠೀವಿಭಕ್ತಿ ನಾಮಪದ ಮತ್ತು ಕ್ರಿಯಾಪದಗಳ ಸಂಬಂಧವನ್ನು ಹೇಳದೆ ಎರಡು ನಾಮಪದಗಳ ಸಂಬಂಧವನ್ನು ತಿಳಿಸುತ್ತದೆಂಬುದನ್ನೂ ಗಮನಿಸಬೇಕು. ಒಟ್ಟಿನಲ್ಲಿ ಇಲ್ಲಿಯ ಕಾರಕದ ಪದ್ಯಗಳಿಂದ ಕವಿಯ ಅಭಿಪ್ರಾಯ ಸ್ಪಷ್ಟವಾಗುತ್ತಿಲ್ಲ ಎಂದೇ ಹೇಳಬೇಕು.

114. There are six *kāraka* syntactic case relationships, such as the direct object with the verb (*karma*), the instrumental cause of the action (*karaṇa*), etc. There are seven grammatical cases (with functions such as the nominative, accusative, etc.) and two numbers – singular and plural. I will explain how these are used correctly or incorrectly in poetry.

ಚಂ.ಮಾ. ನರಪತಿ ಬಂದನಾ ನೃಪನನಟ್ಟಿಯೆ ಕಾಣ್ಬುದು ತನ್ನರೇಂದ್ರನಿಂ
ಧರಣಿ ಸನಾಥೆ ಭೂಪತಿಗೆ ಕಪ್ಪವನಿತ್ತವನೀಶನತ್ತಣಿಂ
ಪರಿಭವಮಂ ಕಟಿಲ್ಚುವುದಧೀಶ್ವರನಾ ದಯೆ ಸಾಲ್ಗುಮಾ ಮಹೀ
ಶ್ವರನೊಳಿದಪ್ಪುದೆಂಬುದಿದು ಕಾರಕಯುಕ್ತ ವಿಭಕ್ತ್ಯನುಕ್ರಮಂ

೧೧೫

ನರಪತಿ ಬಂದನ್ ಆ ನೃಪನನ್ ಅಟ್ಟಿಯೆ ಕಾಣ್ಬುದು ತತ್ ನರೇಂದ್ರನಿನ್ ಧರಣಿ ಸನಾಥೆ ಭೂಪತಿಗೆ ಕಪ್ಪವನಿತ್ತು ಅವನೀಶನ್ ಅತ್ತಣಿಮ್ ಪರಿಭವಮನ್ ಕಟಿಲ್ಚುವುದು ಅಧೀಶ್ವರನಾ ದಯೆ ಸಾಲ್ಗುಮ್ ಆ ಮಹೀಶ್ವರನೊಳ್ ಇದು ಅಪ್ಪುದು ಎಂಬುದು ಇದು ಕಾರಕಯುಕ್ತ ವಿಭಕ್ತಿ ಅನುಕ್ರಮಮ್

'ನರಪತಿ ಬಂದನು'(ಪ್ರಥಮಾವಿಭಕ್ತಿ), 'ಆ ನೃಪನನ್ನು ಪ್ರೀತಿಯಿಂದ ಕಾಣಬೇಕು'(ದ್ವಿತೀಯಾ), 'ಆ ನರೇಂದ್ರನಿಂದ ಧರಣಿ ಸನಾಥೆ' (ತೃತೀಯಾ) 'ಭೂಪತಿಗೆ ಕಪ್ಪವನ್ನು ಕೊಟ್ಟು (ಚತುರ್ಥೀ), 'ಅವನೀಶನತ್ತಣಿಂದ ಅವಮಾನವನ್ನು ಹೋಗಲಾಡಿಸಬೇಕು' (ಪಂಚಮೀ), 'ಅಧೀಶ್ವರನ ದಯೆ ಸಾಕು' (ಷಷ್ಠೀ), 'ಆ ಮಹೀಶ್ವರನಲ್ಲಿ ಇದು ಆಗುವುದು' (ಸಪ್ತಮೀ)– ಇವು ಅನುಕ್ರಮವಾಗಿ ಕಾರಕಯುಕ್ತ ವಿಭಕ್ತಿಗಳಿಗೆ ಉದಾಹರಣೆಗಳು.

115. [An example of the use of grammatical cases:] "The king arrived" (first case). "Let one view the king with love" (second case). "Because of him, the earth has a Lord (*sanātha*) " (third case). "Let them offer cash or the kind to the king" (fourth case). "We should not receive disrespect from the king" (fifth case). "It is enough if we have the

king's mercy" (sixth case). "With respect to the king, this is possible" (seventh case). These are the cases with case roles.

ಚಂ.ಮಾ. ಬರವೆಮಗೀಗೆ ದೇವತೆಗಳಾದರದಿಂ ಕರುಣಿಪ್ಪುದಕ್ಕೆ ಬಂ
ಧುರಗುಣಬಂಧುಸಂತತಿಯನೆಂಬುದು ಕಾರಕದೋಷಮಾಗಳುಂ
ಬರವನಮೋಘಮೀಗೆಮಗೆ ದೇವತೆಗಳ್ ಕರುಣಿಪ್ಪುದಕ್ಕೆ ಬಂ
ಧುರಗುಣಬಂಧುಸಂತತಿಗೆ ನಿಕ್ಕುವಮೆಂಬುದದುಷ್ಟಕಾರಕಂ

೧೧೬

ಬರಮ್ ಎಮಗೆ ಈಗೆ ದೇವತೆಗಳ್ ಆದರದಿನ್ ಕರುಣಿಪ್ಪುದು ಅಕ್ಕೆ ಬಂಧುರ ಗುಣ ಬಂಧು ಸಂತತಿಯನ್ ಎಂಬುದು ಕಾರಕದೋಷಮ್ ಆಗಳುಮ್ ಬರಮನ್ ಅಮೋಘಮ್ ಈಗೆ ಎಮಗೆ ದೇವತೆಗಳ್ ಕರುಣಿಪ್ಪುದು ಅಕ್ಕೆ ಬಂಧುರ ಗುಣ ಬಂಧು ಸಂತತಿಗೆ ನಿಕ್ಕುವಮ್ ಎಂಬುದು ಅದುಷ್ಟ ಕಾರಕಮ್

'ದೇವತೆಗಳು ನಮಗೆ ಆದರದಿಂದ ವರ ಕೊಡಲಿ', 'ಬಂಧುರ ಗುಣವಿರುವ ಬಂಧುಸಂತತಿಯನ್ನು ಕರುಣಿಸುವುದಾಗಲಿ' ಎಂದು ಹೇಳುವುದು ಕಾರಕದೋಷ. 'ದೇವತೆಗಳು ನಮಗೆ ಅಮೋಘವಾದ ವರವನ್ನು ತಪ್ಪದೆ ಕೊಡಲಿ'– ಎಂದು ಹೇಳಿದರೆ ದೋಷರಹಿತ.

116. "Let the gods give a boon [first-case nominative] to us with love" and "Let them grant virtuous family relations" are examples of problems with grammatical case relationship (*kāraka-dōṣa*). The problems in these sentences can be rectified as follows: "Let the gods give a splendid boon [with the accusative case suffix in Kannada] to us" and "Let them grant it (the boon) to the virtuous relations without fail."

In the first of the corrected Kannada verses, "boon" is in the accusative (second) case, which is not expressible in the English translation (since there are no case-marking inflections in English). In the second sentence, the accusative case suffix is used instead of the dative (fourth

case) suffix; therefore, the problematic verse erroneously expresses that the gods are granting "virtuous family relations" and not the boon. The corrected version clears up the problems.

ಉ.ಮಾ. ನಿಕ್ಕುವಮಿಂತುಮಲ್ಲದದಱ ಕ್ರಿಯೆ ಸಾರ್ದಿರೆ ಪತ್ತಿ ಮುಂದೆ ಸ
ಯ್ತಕ್ಕುಮನುಕ್ರಮಾನುಗತದಿಂ ಬರಮೀಗೆಮಗೆಂಬ ಕಾರಕಂ
ಸಕ್ಕದವೇನೊ ಕಾರಕವಿಭಕ್ತಿಯೊಳೊಂದೆ ಸಮಾಸಯುಕ್ತಿ ಲೇ
ಸಕ್ಕುಮಭೇದರೂಪಗುಣಮಾಗಿ ತಗುಳ್ದಿರೆ ಮೇಣ್ ಕ್ರಿಯಾಪದಂ
೧೧೭

ನಿಕ್ಕುವಮ್ ಇಂತುಮ್ ಅಲ್ಲದೆ ಅದಱ ಕ್ರಿಯೆ ಸಾರ್ದಿರೆ ಪತ್ತಿ ಮುಂದೆ ಸಯ್ತು ಅಕ್ಕುಮ್ ಅನುಕ್ರಮ ಅನುಗತದಿನ್ ಬರಮ್ ಈಗೆ ಎಮಗೆ ಎಂಬ ಕಾರಕಮ್ ಸಕ್ಕದವೇನೊ ಕಾರಕ ವಿಭಕ್ತಿಯೊಳ್ ಒಂದೆ ಸಮಾಸಯುಕ್ತಿ ಲೇಸಕ್ಕುಮ್ ಅಭೇದ ರೂಪಗುಣಮ್ ಆಗಿ ತಗುಳ್ದಿರೆ ಮೇಣ್ ಕ್ರಿಯಾಪದಮ್

ಹೀಗಲ್ಲದೆ ಇನ್ನೊಂದು ರೀತಿಯಲ್ಲೂ ಸರಿಪಡಿಸಬಹುದು. ನಾಮಪದದ ಮುಂದಿರುವ ಕ್ರಿಯೆಯೊಡನೆ ಸಮಾಸ ಹೊಂದಿದ್ದಾದರೆ 'ಬರಮೀಗೆ' (ಬರಂ+ಈಗೆ) ಎಂದು ಕ್ರಮಬದ್ಧವಾದ ಪ್ರಯೋಗ ಸಿದ್ಧಿಸುತ್ತದೆ. ಸಂಸ್ಕೃತ ನಾಮಪ್ರಕೃತಿ ಇದ್ದರೂ ಅದು ಕಾರಕವಿಭಕ್ತಿಯನ್ನು ಪಡೆದು ಸಮಾಸವಾಗಿ, ಕಾರಕಯುಕ್ತವಿಭಕ್ತಿ ಅದರಲ್ಲಿ ಅಡಗಿಬಿಡುವುದರಿಂದ ಇದು ಅದೋಷವೆನಿಸುತ್ತದೆ.

117. Undoubtedly, this problem can be corrected in another way. If it (the noun) is joined with the verb to make a verbal compound expression (*varamīge* = let the boon be given), then it is understood as a *kāraka* relationship. Even if there is a Sanskrit base, the Kannada word initially takes a case suffix and then loses it in a compound. If a compound is formed in such a way, it is not considered a fault in poetry.

ಉ.ಮಾ. ಬಂದುವು ಪಾವುಡಂ ನೃಪತಿಗೆಂಬುದುಮಾನೆಗಳೀ ಪ್ರದೇಶದೊಳ್
ನಿಂದುದಿದೆಂಬುದುಂ ವಚನದೋಷವಿಶೇಷಮನೈಪುಣೋಕ್ತಿಯಿಂ

ಬಂದುದು ಪಾವುಡಂ ನೃಪತಿಗೆಂಬುದುಮಾನೆಗಳೀ ಪ್ರದೇಶದೊಳ್
ನಿಂದುವಿವೆಂಬುದು ಬಗೆದು ನೋಡೆ ಗುಣಂ ವಚನಕ್ಕೆ ನಿಕ್ಕುವಂ
೧೧೮

ಬಂದುವು ಪಾವುಡಮ್ ನೃಪತಿಗೆ ಎಂಬುದುಮ್ ಆನೆಗಳ್ ಈ ಪ್ರದೇಶದೊಳ್ ನಿಂದುದು ಇದು ಎಂಬುದುಮ್ ವಚನ ದೋಷ ವಿಶೇಷಮ್ ಅನೈಪುಣ ಉಕ್ತಿಯಿನ್, ಬಂದುದು ಪಾವುಡಮ್ ನೃಪತಿಗೆ ಎಂಬುದುಂ ಆನೆಗಳ್ ಈ ಪ್ರದೇಶದೊಳ್ ನಿಂದುವು ಇವು ಎಂಬುದು ಬಗೆದು ನೋಡೆ ಗುಣಮ್ ವಚನಕ್ಕೆ ನಿಕ್ಕುವಮ್

'ನೃಪತಿಗೆ ಪಾವುಡಂ(ಕಾಣಿಕೆ) ಬಂದುವು' ಎಂಬುದು, 'ಆನೆಗಳು ಈ ಪ್ರದೇಶದಲ್ಲಿ ನಿಂದಿತು' ಎಂಬುದು ವಚನದೋಷ. ಇದು ನೈಪುಣ್ಯ ಇಲ್ಲದವರ ಮಾತು. 'ಕಾಣಿಕೆ ಬಂದಿತು', 'ಆನೆಗಳು ಈ ಪ್ರದೇಶದ್ಲಿ ನಿಂದುವು' ಎಂದು ಹೇಳಿದರೆ ಅದು ದೋಷ ರಹಿತವಚನವಾಗುವುದು.

118 "The gift have come to the king" and "Elephants stands here" are faults in number. If they are corrected, they read in the following: "The gift has come to the king" and "Elephants stand here."

In the first sentence of the Kannada original, *banduvu* (the plural tense marker) is used instead of *bandudu* (singular). In the second sentence, *nindudu* (a singular tense marker) is used instead of *ninduvu* (the plural). This is rectified in the second part of the verse.

ಉ.ಮಾ. ಜಾತಿವಿಭಾಗಮಂ ಬಗೆದು ಪೇೞೆ ಬಹುತ್ವಮನೇಕವಾಕ್ಯಸಂ
ಜಾತಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ
ಮಾತಿನೊಳೇನೊ ಸಂಖ್ಯೆಗಳೊಳೇಕಬಹುತ್ವವಿಪರ್ಯಯಕ್ಕಸಂ
ಖ್ಯಾತಗುಣಂ ವಿಕಲ್ಪಮದು ಕನ್ನಡದೊಳ್ ಗುಣಮಂ ತಗುಳ್ಚುಗುಂ
೧೧೯

ಜಾತಿ ವಿಭಾಗಮನ್ ಬಗೆದು ಪೇೞೆ ಬಹುತ್ವಮ್ ಅನೇಕ ವಾಕ್ಯ ಸಂಜಾತ ಗುಣಮ್ ತತ್ ಏಕವಚನಂಗಳೊಳಮ್ ದೊರೆವೆತ್ತು ಕೂಡುಗುಮ್ ಮಾತಿನೊಳೇನೊ ಸಂಖ್ಯೆಗಳೊಳ್ ಏಕ ಬಹುತ್ವ ವಿಪರ್ಯಯಕ್ಕೆ ಅಸಂಖ್ಯಾತ ಗುಣಮ್ ವಿಕಲ್ಪಮ್ ಅದು ಕನ್ನಡದೊಳ್ ಗುಣಮನ್ ತಗುಳ್ಚುಗುಮ್

ಪ್ರಾಣಿಜಾತಿಯ ವಿಭಾಗವನ್ನು ಒಟ್ಟಾಗಿ ಗಮನದಲ್ಲಿಟ್ಟುಕೊಂಡು ಹೇಳುವಾಗ ಬಹುವಚನ ವಾಕ್ಯಗಳಲ್ಲಿ ಹೇಳುವುದು ಗುಣ. ಅದನ್ನು ಏಕವಚನದಲ್ಲಿ ಹೇಳಿದರೂ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಸಂಖ್ಯೆಗಳ ಸಂಬಂಧವಿರುವಾಗ ಜಾತಿವಾಚಕ ಪದಕ್ಕೆ ಏಕವಚನ ಮತ್ತು ಬಹುವಚನ ವೈಕಲ್ಪಿಕವಾಗಿರುತ್ತವೆ. ಅದು ಕನ್ನಡದಲ್ಲಿ ಗುಣವೇ ಆಗಿರುತ್ತದೆ.

ಬಹುವಚನಕ್ಕೆ ಬದಲಾಗಿ ಏಕವಚನ ಬಳಸುವುದು ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆಂಬುದನ್ನು ಗಮನಿಸಬಹುದು.

119. When the noun belongs to a general class or species of things, the singular is used in the sense of the plural. With numerals, singularity and plurality are not specified but are optional. In Kannada, this is a special feature.

This usage of the singular, instead of plural, is a common feature in many Dravidian languages.

ಚ.ಮಾ. ಕುದುರೆ ತಗುಳ್ದುವಾ ದೆಸೆಯ ಬಿಲ್ಲವರಂ ಸುೞಿದಾನೆ ಮೆ
ಟ್ಟಿದುವೆಲೆ ನೋಡಿಮೆಂಬುದಿದು ಜಾತಿಕೃತೈಕಬಹುತ್ವಮೊಂದುಗುಂ
ಕುದಿಕುದಿದತ್ತಣಿಂ ಕುದುರೆ ನೂಱುಱೊಳಾ ಬಲದಾನೆ ಹತ್ತುತಾ
ಗಿದುವೆನೆ ದೋಷಮಾ ಪಿರಿದು ಸಂಖ್ಯೆಯೊಳೇಕಬಹುತ್ವಸಂಗದಿಂ
೧೨೦

ಕುದುರೆ ತಗುಳ್ದುವು ಆ ದೆಸೆಯ ಬಿಲ್ಲವರನ್ ಸುೞಿದು ಆನೆ ಮೆಟ್ಟಿದುವು ಎಲೆ ನೋಡಿಮ್ ಎಂಬುದು ಇದು ಜಾತಿಕೃತ ಏಕ ಬಹುತ್ವಮ್ ಒಂದುಗುಮ್ ಕುದಿಕುದಿದು ಅತ್ತಣಿಮ್ ಕುದುರೆ ನೂಱುಱೊಳ್ ಆ ಬಲದ ಆನೆ ಹತ್ತು ತಾಗಿದುವು ಎನೆ ದೋಷಮ್ ಆ ಪಿರಿದು ಸಂಖ್ಯೆಯೊಳ್ ಏಕ ಬಹುತ್ವ ಸಂಗದಿನ್

"ಕುದುರೆ ಆ ದೆಸೆಯ ಬಿಲ್ಲವರನ್ನು ತಾಗಿದುವು", "ಆನೆ ಮುನ್ನುಗ್ಗಿ ಅವರನ್ನು ಮೆಟ್ಟಿದುವು, ನೋಡಿರಿ" ಎಂಬಲ್ಲಿ ಜಾತಿಕೃತ ಏಕವಚನ ಬಹುವಚನ ಕ್ರಿಯೆಯೊಡನೆ ಸರಿಯಾಗಿಯೇ ಅನ್ವಯಿಸಿದೆ. ಆದರೆ 'ಕುದಿಕುದಿದು ಆ ಕಡೆಯಿಂದ ಕುದುರೆ ನೂರರಲ್ಲಿ ಸೈನ್ಯದ ಹತ್ತು ಆನೆ ತಾಗಿದುವು' ಎಂದು ಹೇಳಿದರೆ ಗುಣವಲ್ಲ, ದೋಷವೇ. ಏಕೆಂದರೆ ಒಂದೇ ಬಹುತ್ವವಾಚಕವಾದ ಸಂಖ್ಯೆಯಲ್ಲಿ ಏಕವಚನ ಬಹುವಚನಗಳೆರಡೂ ಸೇರಿಕೊಂಡಿವೆ.

'ಕುದುರೆ ಬಿಲ್ಲವರನ್ನು ತಾಗಿದುವು" ಎಂದಾಗ 'ಕುದುರೆಗಳು' ಎಂದು ಅರ್ಥಮಾಡಿಕೊಳ್ಳಬಹುದು. ಆಗ 'ತಾಗಿದುವು' ಎಂದು ಬಹುವಚನವನ್ನು ಬಳಸಿದರೆ ದೋಷವಲ್ಲ. ಆದರೆ 'ಕುದುರೆ ನೂರು', 'ಹತ್ತು ಆನೆ' ಎಂದಾಗ ಕ್ರಿಯಾಪದ ಕರ್ತೃಪದದ ವಚನಾನುಗುಣವಾಗಿ ಏಕವಚನದಲ್ಲೇ ಇರಬೇಕು.

120. "The horse (horses) attacked the bowmen on that side" and "See! The elephant (elephants) advance and tread upon them." Here, the nouns belong to a general class. Hence, they are used in singular but taken as plural. Another example: "There, one hundred horse (horses) and ten elephant (elephants) have jumped and attacked." If it is expressed this way, it is considered a fault in poetry.

The author points out that the tense marker should be in conformity with the number. If the number used for a particular noun, as in "one hundred horse" or "ten elephant" (which is allowed in Kannada), is singular, then the tense marker should also be in the singular.

ಚಂ.ಮಾ. ಬೆರಸಿರೆ ಮುಂ ಸಮುಚ್ಚಯಪದದ್ವಿತಯೋಕ್ತಿ ವಿಭಕ್ತಿ ಕೂಡೆ ಬಂ
ದಿರದೆಯುಮೇಕವಾಕ್ಯದೊಳೆ ಕಾರಕಸಂಪದಮಂ ತಗುಳ್ಚುಗುಂ
ನರಪತಿಯುಂ ನೃಪಾಂಗನೆಯರುಂ ನೆರೆದಟ್ಟಿಯಿನಾಡಿ ಪೋದರಾ
ಪರಿಜನಮುಂ ಮಹೋತ್ಸವದೊಳೊಂದಿದುದೆಂಬುದಿದಲ್ಪ
ದೂಷಿತಂ ೧೨೧

ಬೆರಸಿರೆ ಮುನ್ ಸಮುಚ್ಚಯ ಪದ ದ್ವಿತಯೋಕ್ತಿ ವಿಭಕ್ತಿ ಕೂಡೆ ಬಂದಿರದೆಯುಮ್ ಏಕವಾಕ್ಯದೊಳೆ ಕಾರಕಸಂಪದಮನ್ ತಗುಳ್ಚುಗುಮ್ ನರಪತಿಯುಮ್ ನೃಪಾಂಗನೆಯರುಮ್ ನೆರೆದು ಅಟ್ಟೆಯಿನ್ ಆಡಿ ಪೋದರ್ ಆ ಪರಿಜನಮುಮ್ ಮಹೋತ್ಸವದೊಳ್ ಒಂದಿದುದು ಎಂಬುದು ಇದು ಅಲ್ಪ ದೂಷಿತಮ್.

ಸಮುಚ್ಚಯಗಳಿಂದ ಕೂಡಿದ ಎರಡು ಕರ್ತೃಪದಗಳು ಕೂಡಿಬಂದ ವಾಕ್ಯವಾಗಿದ್ದರೆ ಕ್ರಿಯೆಯಲ್ಲಿ ಉಚಿತವಾದ ವಚನದ ವಿಭಕ್ತಿ ಕೂಡಿಬರದಿದ್ದರೂ ಏಕವಾಕ್ಯದಲ್ಲಿ ಬಂದಿರುವುದರಿಂದ ಕಾರಕ ವಿಭಕ್ತಿ ಸರಿಯಾಗಿದೆ ಎಂದೆನಿಸುವುದು. ಉದಾಹರಣೆಗೆ "ನರಪತಿಯೂ ನೃಪಾಂಗನೆಯರೂ ಸೇರಿ ಪ್ರೀತಿಯಿಂದ ಆಡಿಹೋದರು. ಆ ಪರಿಜನವೂ ಮಹೋತ್ಸವದಲ್ಲಿ ಕೂಡಿದ್ದಿತು" ಎಂದಾಗ ಅದು ಅಲ್ಪದೋಷ.

'ನರಪತಿಯುಂ', 'ನೃಪಾಂಗನೆಯರುಂ' ಎಂದಾಗ ಸಮುಚ್ಚಯ ಇರುವುದರಿಂದ ಏಕವಾಕ್ಯವೆನಿಸಿ ಎರಡಕ್ಕೂ ಸೇರಿ ಬಹುವಚನಕ್ರಿಯೆ ಬಂದಿದೆ. 'ಪರಿಜನಮುಂ' ಎಂಬುದು ಬೇರೆ ವಾಕ್ಯವಾದುದರಿಂದ ವಚನ ಭೇದ ದೋಷವೆನಿಸುವುದಿಲ್ಲ.

121. If there are two nouns in a sentence linked with a suffix to convey a sense of aggregation ("and," "also," "all," etc.), the case-suffix has a relationship with the whole sentence (and not just a part of it). Hence, the suffix indicating number is also in conformity with the *kāraka* relationship. For example, "The king and the queens came together and played; the group of servants also joined the festive occasion." If one expresses it like this, it is considered to be a minor fault.

Here, "king" is singular and the "queens" plural. When the two nouns are joined by a conjunction ("and," etc.), the plural is used. In the same sentence, the "group of servants" (a collective noun) takes a singular suffix.

ಚಂ.ಮಾ. ಗಣಿದದೊಳೊಂದಿ ಬರ್ಪ ಪದವೊಂದೆಡೆಗೊಂಡು

ವಿಶೇಷ್ಯಮುಂ ವಿಶೇ

ಷಣಮುಮನೊಂದಲೀಯದಿರೆಯುಂ ಮಿಗೆ ಕಾರಕದೋಷಮಲ್ತದು

ಪ್ರಣುತಪದಾಂತರೀಕರಣಮಂತದೆ ತಾಣದೊಳಾದೊಡಂ ಮಹಾ
ಗುಣಮನೆ ತರ್ಕುಮೇಕಬಹುಭೇದವಿಕಲ್ಪಮನಲ್ಲಿ ನೋಡಲಿಂ
೧೨೨

ಗಣಿದದೊಳ್ ಒಂದಿ ಬರ್ಪ ಪದಮ್ ಒಂದು ಎಡೆಗೊಂಡು ವಿಶೇಷ್ಯಮನ್ ವಿಶೇಷಣಮುಮಮ್ ಒಂದಲೀಯದೆ ಇರೆಯುಮ್ ಮಿಗೆ ಕಾರಕದೋಷಮ್ ಅಲ್ತು ಅದು ಪ್ರಣುತ ಪದಾಂತರೀಕರಣಮ್ ಅಂತು ಅದೆ ತಾಣದೊಳ್ ಆದೊಡಮ್ ಮಹಾಗುಣಮನೆ ತರ್ಕುಮ್ ಏಕ ಬಹುಭೇದ ವಿಕಲ್ಪಮನ್ ಅಲ್ಲಿ ನೋಡಲಿಮ್

ಎಣಿಕೆಗನುಗುಣವಾಗಿ ಬರುವ ಪದವೊಂದು ಪ್ರಯುಕ್ತವಾದಾಗ ವಿಶೇಷ್ಯವೂ ವಿಶೇಷಣವೂ ಹೊಂದಿಕೊಳ್ಳದಿದ್ದರೂ ಅದು ಕಾರಕ ದೋಷವೆನಿಸದು. ವಿಶೇಷ್ಯ ವಿಶೇಷಣಗಳು ಅಕ್ಕಪಕ್ಕದಲ್ಲಿದ್ದಾಗ ಒಮ್ಮೊಮ್ಮೆ ವಚನ ವಿಭಕ್ತಿಗಳಲ್ಲಿ ವ್ಯತ್ಯಯ ಕಂಡುಬಂದರೂ ಅದು ಗುಣವನ್ನೇ ತರುತ್ತದೆ. ಅಲ್ಲಿ ಏಕಬಹುವಿಕಲ್ಪವನ್ನು ನೋಡಬಹುದು.

122. When a noun and its adjective are not juxtaposed, it is not considered a problem with case relationship. When the noun and the adjective are side-by-side in a sentence, even if there is some contradiction in number and case, it is not considered a fault, as there may be an optional usage of singular and plural.

ಚಂ.ಮಾ. ಗುಣಯುತನಪ್ಪನಂ ಸುಭಟನಪ್ಪನನಾಯುಧಯುಕ್ತನಪ್ಪನಂ
ಪ್ರಣುತಸಮಸ್ತವೈರಿಗಣನಪ್ಪನನುಜ್ಜ್ವಲಕೀರ್ತಿಯಪ್ಪನಂ
ಗಣಿದಮನೇನುಮಂ ಬಗೆಯದಾಗಡುಮಂತೆ ಪರೋಪಕಾರಕಾ
ರಣವರನಪ್ಪನಂ ಮನದೆ ಮೆಚ್ಚದರಾರಭಿಮಾನಿಯಪ್ಪನಂ ೧೨೩

ಗುಣಯುತನಪ್ಪನನ್ ಸುಭಟನಪ್ಪನನ್ ಆಯುಧಯುಕ್ತನ್ ಅಪ್ಪನನ್ ಪ್ರಣುತ ಸಮಸ್ತ ವೈರಿಗಣನಪ್ಪನನ್ ಉಜ್ವಲ ಕೀರ್ತಿಯಪ್ಪನನ್ ಗಣಿದಮನ್ ಏನುಮಮ್ ಬಗೆಯದೆ ಆಗಡುಮ್ ಅಂತೆ ಪರೋಪಕಾರ ಕಾರಣ ವರನಪ್ಪನನ್ ಮನದೆ ಮೆಚ್ಚದರ್ ಆರ್ ಅಭಿಮಾನಿಯಪ್ಪನನ್

"ಗುಣಯುತನಾಗಿರುವವನನ್ನು, ಸುಭಟನಾಗಿರುವವನನ್ನು, ಆಯುಧಯುಕ್ತನಾಗಿರುವವನನ್ನು, ಎಲ್ಲ ವೈರಿಗಳಿಂದಲೂ ಹೊಗಳಿಕೆ ಪಡೆಯುವವನನ್ನು, ಉಜ್ವಲಕೀರ್ತಿ ಇರುವವನನ್ನು, ಯಾವುದೇ ಲೆಕ್ಕಾಚಾರವಿಲ್ಲದಂತೆ ಯಾವಾಗಲೂ ಪರೋಪಕಾರಿಯಾಗಿರುವವನನ್ನು, ಅಭಿಮಾನಿಯಾಗಿರುವವನನ್ನು ಮನದಲ್ಲಿ ಮೆಚ್ಚದವರು ಯಾರು?"

ಇಲ್ಲಿ ಹಲವು ವಿಶೇಷಣಗಳಿವೆಯೇ ಹೊರತು ವಿಶೇಷ್ಯವಿಲ್ಲ. ಅದನ್ನು ಅಧ್ಯಾಹಾರಮಾಡಿಕೊಳ್ಳಬೇಕು. ಇಲ್ಲಿ ಹಾಗೆ ಊಹಿಸುವುದು ಸುಲಭವೇ ಆಗಿರುವುದರಿಂದ ಇದು ದೋಷವಲ್ಲ.

123. "Is there anyone who cannot appreciate the one who is virtuous, who is a great warrior, who is carrying a weapon, who is praised by even the enemy, who is famous, who helps others without any calculation, and who has self-pride?"

This fragment is the first part of verse. Here there are many adjectives but the noun being qualified is not present and must be inferred.

ಚಂ.ಮಾ. ನೆಗೆದ ಮುಗಿಲ್ಗಳುಂ ಸುರಿವ ಪೆರ್ಮೞೆಯುಂ ಮಿಗೆ ಸಣ್ಣನಪ್ಪ ಕೇ
ಕಿಗಳ ಸರಂಗಳುಂ ಪೊಳೆವ ಮಿಂಚುಗಳುಂ ಕರಮುಚ್ಚಮಪ್ಪ ಬೆ
ಟ್ಟುಗಳ ತಟಂಗಳಿಂ ಸುರಿವ ನಿರ್ಝರಮುಂ ಪೊಸ ಕಾರೊಳಿಂತು ಬೆ
ಳ್ಪುಗೆ ಪಥಿಕಾಂಗನಾಜನಮನಂಜಿಸುವಂತಿರೆ ತೋಱೆ ಸುತ್ತಲುಂ
೧೨೪

ನೆಗೆದ ಮುಗಿಲ್ಗಳುಮ್ ಸುರಿವ ಪೆರ್ಮೞೆಯುಮ್ ಮಿಗೆ ಸಣ್ಣನಪ್ಪ ಕೇಕಿಗಳ ಸರಂಗಳುಮ್ ಪೊಳೆವ ಮಿಂಚುಗಳುಮ್ ಕರಮ್ ಉಚ್ಚಮಪ್ಪ ಬೆಟ್ಟುಗಳ ತಟಂಗಳಿನ್ ಸುರಿವ ನಿರ್ಝರಮುಮ್ ಪೊಸ ಕಾರೊಳ್ ಇಂತು ಬೆಳ್ಪುಗೆ ಪಥಿಕ ಅಂಗನಾಜನಮನ್ ಅಂಜಿಸುವಂತಿರೆ ತೋಱೆ ಸುತ್ತಲುಮ್

ನೆಗೆದ ಮೋಡಗಳೂ ಸುರಿಯುವ ದೊಡ್ಡ ಮಳೆಯೂ ನವಿಲುಗಳ ಇನಿದಾದ ದನಿಗಳೂ ಹೊಳೆವ ಮಿಂಚುಗಳೂ ಬಹಳ ಎತ್ತರವಾಗಿರುವ

ಬೆಟ್ಟಗಳ ದಡಗಳಿಂದ ಸುರಿಯುವ ತೊರೆಯೂ ಹೊಸ ಮಳೆಗಾಲದಲ್ಲಿ ಪಥಿಕಾಂಗನೆಯರನ್ನು ಅಂಜಿಸುವಂತೆ ಸುತ್ತಲೂ ಕಾಣಿಸಿಕೊಂಡಿರಲು,

ಇಲ್ಲಿ 'ನೆಗೆದ', 'ಸುರಿವ', 'ನುಣ್ಣನಪ್ಪ', 'ಪೊಳೆವ' ಮುಂತಾದ ವಿಶೇಷಣಗಳಿಗೆ ಅನುಕ್ರಮವಾಗಿ ವಿಶೇಷ್ಯಗಳಾದ 'ಮುಗಿಲ್ಗಳ್' 'ಪೆರ್ಮೞೆ' ಮುಂತಾದವುಗಳು ಜತೆಗೂಡಿವೆ. ಕೆಲವು ವಿಶೇಷ್ಯಗಳು ಏಕವಚನದಲ್ಲಿ, ಕೆಲವು ಬಹುವಚನದಲ್ಲಿ ಇವೆ. ಈ ವಚನವ್ಯತ್ಯಯದಿಂದ ದೋಷವೇನೂ ಆಗಿಲ್ಲ.

124. "Jumping clouds, pouring rain, pleasing sounds of peacocks, flashes of lightning, and flowing rivers from the high mountains seem to threaten the women travelers."

Here, the adjectives and the nouns they qualify are sometimes singular and sometimes plural. This contradiction does not constitute a fault.

ಗೀತಿಕೆ ಇಂತು ಕಾರಕಂಗಳೊಳ್
ಸಂತಮಱಿಯೆ ಪೇೞ್ದ ಗುಣಮಂ ದೋಷಮುಮಂ
ಚಿಂತಿಸಿ ಪೆಱವುಮಿನ್ನಪ್ಪುವಂ
ಭ್ರಾಂತಿಲ್ಲದಱಿದುಕೊಳ್ಗೆ ಕವಿಗಳ್ ಕೃತಿಗಳೊಳ್ ೧೨೫

ಇಂತು ಕಾರಕಂಗಳೊಳ್ ಸಂತಮ್ ಅಱಿಯೆ ಪೇೞ್ದ ಗುಣಮನ್ ದೋಷಮುಮಮ್ ಚಿಂತಿಸಿ ಪೆಱವು ಮಿನ್ನಪ್ಪುವನ್ ಭ್ರಾಂತಿ ಇಲ್ಲದೆ ಅಱಿದುಕೊಳ್ಗೆ ಕವಿಗಳ್ ಕೃತಿಗಳೊಳ್

ಹೀಗೆ ಕಾರಕಗಳಲ್ಲಿ ಮೇಲೆ ಹೇಳಿದಂತೆ ಗುಣವನ್ನೂ ದೋಷವನ್ನೂ ಅರಿಯಲು ಇದೇ ರೀತಿಯಾದ ಮಿಕ್ಕವನ್ನೂ ಕೃತಿಗಳಲ್ಲಿ ಕವಿಗಳು ಸಂಶಯವಿಲ್ಲದಂತೆ ಊಹಿಸಿಕೊಳ್ಳಬೇಕು.

125. In this manner, poets should observe correct and incorrect usages of *kāraka,* number, and case suffixes. Other faults may be inferred without any uncertainty.

ಗುರುಲಘುದೋಷಗಳು

Faults Associated with Heavy and Light Syllables

ಮಣಿವಿಭೂಷಣ

ಆರುಮೀ ಗುರುಲಘೂದಿತದೋಷವಿಶೇಷಮಂ
ಧೀರಸತ್ತ್ವರಱಿದುಂ ಕುಱಿಗೊಂಡು ವಿಭಾಗಿಸರ್
ಕಾರಣಾಂತರಮನಂತದಱೊಳ್ ತಱಿಸಂದು ನಿ
ರ್ಧಾರಿತಕ್ರಮದೆ ಪೇೞ್ವೆನುದಾಹರಣಂಗಳಂ ೧೨೬

ಆರುಮ್ ಈ ಗುರು ಲಘು ಉದಿತ ದೋಷ ವಿಶೇಷಮನ್ ಧೀರ ಸತ್ತ್ವರ್ ಅಱಿದುಮ್ ಕುಱಿಗೊಂಡು ವಿಭಾಗಿಸರ್ ಕಾರಣಾಂತರಮನ್ ಅಂತು ಅದಱೊಳ್ ತಱಿಸಂದು ನಿರ್ಧಾರಿತ ಕ್ರಮದೆ ಪೇೞ್ವೆನ್ ಉದಾಹರಣಂಗಳಮ್

ಧೀರಸತ್ತ್ವರಾದ ಯಾರಾದರೂ ಈ ಗುರುಲಘು ದೋಷಗಳನ್ನು ಬೇರೆಬೇರೆಯಾಗಿ ನಿರ್ದಿಷ್ಟಪಡಿಸಿ ವಿಭಾಗಿಸುವುದಿಲ್ಲ. ಕಾರಣಾಂತರಗಳನ್ನು ನಿಶ್ಚಯಿಸಿ ಒಂದು ನಿರ್ಧಾರಿತ ಕ್ರಮದಲ್ಲಿ ಉದಾಹರಣೆಗಳನ್ನು ಹೇಳುತ್ತೇನೆ.

127. If a heavy syllable is used in the wrong context, it is considered a fault associated with heavy syllables (*guru-dōṣa*). Similarly, if a light syllable is used in the wrong context, it is considered a fault associated with light syllables (*laghu-dōṣa*).

ಮಣಿವಿಭೂಷಣ

ಆಗಳುಂ ಗುರುಗಳಲ್ಲದ ತಾಣದೊಳಂ ಗುರೂ
ದ್ಯೋಗದಿಂ ಬಗೆಗೆ ಗೌರವದೋಷಮಿದೆಂಬುದಂ
ಬೇಗಮಾ ಲಘುಗಳಲ್ಲದ ತಾಣದೊಳಂ ಲಘೂ
ಪಾಗಮಕ್ರಮದೆ ನಂಬುಗೆ ಲಾಘವದೋಷಮಂ ೧೨೭

ಆಗಳುಮ್ ಗುರುಗಳ್ ಅಲ್ಲದ ತಾಣದೊಳಮ್ ಗುರು ಉದ್ಯೋಗದಿನ್ ಬಗೆಗೆ ಗೌರವ ದೋಷಮ್ ಇದು ಎಂಬುದನ್ ಬೇಗಮ್ ಆ ಲಘುಗಳ್ ಅಲ್ಲದ ತಾಣದೊಳಮ್ ಲಘು ಉಪಾಗಮ ಕ್ರಮದೆ ನಂಬುಗೆ ಲಾಘವ ದೋಷಮನ್

ಯಾವಾಗಲೂ ಗುರುವಲ್ಲದ ಸ್ಥಾನದಲ್ಲಿ ಗುರುವನ್ನು ಪ್ರಯೋಗಿಸುವುದು ಇರುದೋಷ. ಅದೇ ರೀತಿ ಲಘುವಿಲ್ಲದ ಸ್ಥಾನದಲ್ಲಿ ಲಘುವನ್ನು ಪ್ರಯೋಗಿಸುವುದು ಲಘುದೋಷ.

ಮಂಗಳ ನೆರೆದು ಬಂದಪರವರ್ ಸಾಯಲಾ ಬಲಮೆಲ್ಲಮೆ
ಟ್ಟಿರದೆ ಕೊಂದಪೆನಿವಂದಿರನೀಗಳೆ ನಿಕ್ಕುವಂ
ಪರಿದು ಬೀೞ್ವವೋಲಿವಂದಿರ ಪಾಡೞಿವಂದಮಂ
ತಿರವೇೞೊಡ್ಡೞಿಯದಂತಿರೆ ನಮ್ಮವರೆಲ್ಲರಂ ೧೨೮

ನೆರೆದು ಬಂದಪರ್ ಅವರ್ ಸಾಯಲ್ ಆ ಬಲಮೆಲ್ಲಮ್ ಎಟ್ಟಿರದೆ ಕೊಂದಪೆನ್ ಇವಂದಿರನ್ ಈಗಳೆ ನಿಕ್ಕುವಮ್ ಪರಿದು ಬೀೞ್ವೋಲ್ ಇವಂದಿರ ಪಾಡು ಅೞಿವಂದಮಂ ತಿರವೇೞ್ ಒಡ್ಡು ಅೞಿಯದಂತೆ ಇರೆ ನಮ್ಮವರ್ ಎಲ್ಲರನ್

"ಅವರು ನೆರೆದು ಬರುತ್ತಿದ್ದಾರೆ. ಎದ್ದುಬರುತ್ತಿರುವ ಆ ಸೈನ್ಯವೆಲ್ಲ ಸಾಯುವಂತೆ ಈಗಲೇ ಇವರನ್ನೆಲ್ಲ ಕೊಲ್ಲುತ್ತೇನೆಂಬುದು ದಿಟ. ಇವರು ಪಾಡಳಿದು ಬೀಳುವವರೆಗೂ ನಮ್ಮವರ ವ್ಯೂಹ ಅಳಿಯದಂತೆ ಇರಲು ಹೇಳು."

ಇದು ಮಂಗಳವೃತ್ತ. 'ನ–ಭ–ಜ–ಜ–ಜ–ಗುರು' ಇದರಲ್ಲಿ ಗಣಗಳು. ಮೊದಲನೆಯ, ಮೂರನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಗುರುವಿರಬಾರದ ಕಡೆಗಳಲ್ಲಿ ಗುರು ಬಂದಿದೆ.

128. "They are coming close. I will definitely kill the attacking army at this moment. Until they perish, let unity prevail among our people."

This is an invocatory meter (*maṅgala-vṛtta*) with the following scan: light-light-light / heavy-light-light / light-heavy-light/ light-heavy-light/ light-heavy-light/ heavy. In the original Kannada verse, long vowels (heavy syllables) occur in three places [*sāyalābalaṃ* in the first line *vōl* in third line and *tiravē* in the fourth line is in conformity with the meter]. If these are converted to light syllables, the meaning would be lost.

ಮಣಿವಿಭೂಷಣ

ಇಂತು ಪೇೞ್ದೊಡಿದು ಗೌರವದೋಷದ ಮಾೞ್ಕೆ ನಿ
ಶ್ಚಿಂತಮೀ ತೆಱದವಂ ಕಳೆಗಾ ಕೃತಿಯತ್ತಣಿಂ

ಮುಂತೆ ಪೇೞ್ವ ಕುಱಿಪಂ ಕುಱಿಗೊಂಡು ಕವೀಶರಾ
ರ್ಪಂತು ಪಿಂಗಿಸುಗೆ ಕಾವ್ಯದಿನಾ ಲಘುದೋಷಮಂ ೧೨೯

ಇಂತು ಪೇೞ್ದೊಡೆ ಇದು ಗೌರವ ದೋಷದ ಮಾೞ್ಕೆ ನಿಶ್ಚಿಂತಮ್ ಈ ತೆಱದಿ ಅವನ್ ಕಳೆಗೆ ಆ ಕೃತಿ ಅತ್ತಣಿಂ ಮುಂತೆ ಪೇೞ್ವ ಕುಱಿಪನ್ ಕುಱಿಗೊಂಡು ಕವೀಶರ್ ಆರ್ಪಂತು ಪಿಂಗಿಸುಗೆ ಕಾವ್ಯದಿನ್ ಆ ಲಘುದೋಷಮನ್

ಹೀಗೆ ಹೇಳಿದರೆ ಅದು ಗುರುದೋಷವಾಗುತ್ತದೆ. ನಿಶ್ಚಿಂತೆಯಿಂದ ಅದನ್ನು ಕೃತಿಯಿಂದ ಪರಿಹರಿಸಬೇಕು. ಮುಂದೆ ಹೇಳುವ ಲಕ್ಷಣವನ್ನು ಅನುಲಕ್ಷಿಸಿ ಕವೀಶರು ಲಘುದೋಷವನ್ನು ಕಾವ್ಯದಿಂದ ತೊಲಗಿಸಬೇಕು.

129. In this verse there is a problem with the use of heavy syllables. This problem should be avoided. Now considering carefully the metrical characteristics in the forthcoming verses, let the best among poets remove faults associated with light syllables.

ಮಣಿವಿಭೂಷಣ

ಸಾದುಗೆತ್ತು ಬಗೆಯುದವನನೊಡನಟ್ಟಿದೆ
ನಾದಮಾನುಮೞಿಮಾನಸನಾಗೆನೆ ಮಾಳದೊಳ್
ಮೋದದಾನುಡುವ ಸೀರೆಗಮೆನ್ನನದಿರ್ಪಿ ಬಾ
ರದೆ ಪೋದೆಡೆಯೊಳೆ ತಡೆದನವನೆಂದಪೆಂ ೧೩೦

ಸಾದುಗೆತ್ತು ಬಗೆಯದೆ ಅವನನ್ ಒಡನಟ್ಟಿದೆಮ್ ಆದಮ್ ಆನುಮ್ ಅೞಿಮಾನಸನ್ ಆಗೆನೆ ಮಾಳದೊಳ್ ಮೋದದಿ ಆನ್ ಉಡುವ ಸೀರೆಗಮ್ ಎನ್ನನ್ ಅದಿರ್ಪಿ ಬಾರದೆ ಪೋದ ಎಡೆಯೊಳೆ ತಡೆದನ್ ಅವನ್ ಎಂದಪೆನ್

ಸಾಧುವೆಂದು ಭಾವಿಸಿ, ಯೋಚನೆ ಮಾಡದೆ ಅವನನ್ನು ಜತೆಗೆ ಕರೆಯಿಸಿದೆ. ನಾನೂ ಕೆಟ್ಟ ಮನುಷ್ಯನಾಗೆನೆ? ಬಯಲಿನಲ್ಲಿ ಮೋದದಿಂದ ನಾನುಡುವ ಸೀರೆಗಾಗಿ ನನ್ನನ್ನು ಹೆದರಿಸಿ, ನನ್ನೊಡನೆ ಬಾರದೆ, ನಾನು ಹೋದಲ್ಲಿ ಅವನು ತಡೆದೇ ಬಿಡುವನು ಎನ್ನುತ್ತೇನೆ.

ಪದ್ಯದ ಮೊದಲನೆಯ ಮತ್ತು ನಾಲ್ಕನೆಯ ಪಾದದಲ್ಲಿ ಗುರುಗಳಿರಬೇಕಾದ ಸ್ಥಳಗಳಲ್ಲಿ ಲಘುಗಳಿವೆ.

130. "I called him, thinking that he was a pious person. By doing this, did I become a bad person? He may demand from me the clothes I am wearing and though he may not come with me, he will obstruct me from going anywhere else."

In the original Kannada verse, short vowels (light syllables) are used in the first and last lines instead of long vowels, thus creating a problem with the use of light syllables.

ಮಣಿವಿಭೂಷಣ

ಬೇಱೆವೇಱಿರೆ ವಿಕಲ್ಪಸಮುಚ್ಚಯಂ ಯುಗ್ಮದೊಳ್
ತೋಱುವೆಂ ಕ್ರಮವಿಕಲ್ಪನೆಯಿಂ ಗುಣದೋಷಮಂ
ಕೀಱಿಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ
ತೂಱಿ ಪಿಂಗಿಸುವ ವೋಲ್ ಪೊಸನೆಲ್ಲಿರೆ ಪೊಳ್ಗಳಂ ೧೩೧

ಬೇಱೆವೇಱ್ ಇರೆ ವಿಕಲ್ಪ ಸಮುಚ್ಚಯ ಯುಗ್ಮದೊಳ್ ತೋಱುವೆನ್ ಕ್ರಮ ವಿಕಲ್ಪನೆಯಿನ್ ಗುಣದೋಷಮನ್ ಕೀಱಿಕೊಂಡು ಗುಣಮನ್ ಕಳೆಗೆ ಅಲ್ಲಿಯ ದೋಷಮನ್ ತೂಱಿ ಪಿಂಗಿಸುವವೋಲ್ ಪೊಸ ನೆಲ್ಲಿರೆ ಪೊಳ್ಗಳಮ್

ಸಮುಚ್ಚಯಗಳ ಜೋಡಿಯನ್ನು ಉದಾಹರಿಸಿ ಬೇರೆಬೇರೆಯಾಗಿ ಗುಣದೋಷಗಳನ್ನು ವಿಂಗಡಿಸಿ ತೋರಿಸುತ್ತೇನೆ. ಹೊಸ ಬತ್ತವನ್ನು ತೂರಿಕೊಂಡು ಜೊಳ್ಳುಗಳನ್ನು ದೂರಮಾಡುವಂತೆ ಗುಣವನ್ನು ಸ್ವೀಕರಿಸಿ, ದೋಷವನ್ನು ತೊರೆಯಬೇಕು.

131. I give below examples of "aggregation" (*samuccaya*), showing correct and incorrect usages. Correct usage is to be followed and the

flawed usage avoided, just as we keep the new rice paddy and throw away the chaff.

ಮಣಿವಿಭೂಷಣ

ದೇವರುಂ ಗೊರವರುಂ ಗುಣವೃದ್ಧರನಾರತಂ
ಕಾವರಕ್ಕರಸನಂ ಪ್ರಜೆಯಂ ಪರಿವಾರಮಂ
ಏವಮಂ ಬಗೆಯದಂತಿರೆ ಪೇಟ್ದ ಸಮುಚ್ಚಯೋ
ದ್ಭಾವಕಕ್ರಮವಿಚಾರದೆ ದೋಷಮಿದಗ್ಗಳಂ ೧೩೨

ದೇವರುಮ್ ಗೊರವರುಮ್ ಗುಣವೃದ್ಧರ್ ಅನಾರತಮ್ ಕಾವರಕ್ಕೆ ಅರಸನನ್ ಪ್ರಜೆಯನ್ ಪರಿವಾರಮನ್ ಏವಮನ್ ಬಗೆಯದಂತಿರೆ ಪೇಟ್ದ ಸಮುಚ್ಚಯ ಉದ್ಭಾವಕ ಕ್ರಮ ವಿಚಾರದೆ ದೋಷಮ್ ಇದು ಅಗ್ಗಳಮ್

"ದೇವರೂ ಗೊರವರೂ ಗುಣವೃದ್ಧರು ಯಾವಾಗಲೂ ಅರಸನನ್ನು, ಪ್ರಜೆಯನ್ನು, ಪರಿವಾರವನ್ನು ಕಾಪಾಡಲಿ"– ಹೀಗೆ ತಪ್ಪನ್ನು ಕುರಿತು ಯೋಚಿಸದೆ ಮಾಡುವ ಸಮುಚ್ಚಯದ ಪ್ರಯೋಗ ದೊಡ್ಡ ದೋಷವಾಗುತ್ತದೆ.

ಸಮುಚ್ಚಯವನ್ನು ಬಳಸುವಾಗ ಸಂಬಂಧವಿರುವ ಎಲ್ಲ ನಾಮಪದಗಳಲ್ಲೂ ಬಳಸಬೇಕು. 'ದೇವರುಂ ಗೊರವರುಂ' ಎಂದು ಬಳಸಿ 'ಗುಣವೃದ್ಧರ್' ಎಂದು ಬಳಸಿರುವುದರಿಂದ ಇದು ದೋಷ.

132. "Let the gods and gurus and virtuous elders always protect the king, the people, and the king's servants." If the *samuccaya* is expressed like this, without a proper understanding, there is a major flaw.

If the *samuccaya* is used in sequence, it should be used for all the nouns concerned, not just one. In the Kannada original, the suffix indicating *samuccaya* ['*um*'] is used for '*dēvaruṁ*' (gods) and '*goravaruṁ*' (religious *gurus*) but not for '*guṇavṛddhar*' (virtuous elders). In this sequence, the last sense of the aggregation is "and also." The flaw here is corrected in the next example.

ಮಂಗಳ ನೃಪನುಮಂ ಪ್ರಜೆಯುಮಂ ಪರಿವಾರಮುಮಂ ಮಹಾ
ಕೃಪೆಯಿನಾ ಗೊರವರುಂ ಸುರರುಂ ಗುಣವೃದ್ಧರುಂ
ವಿಪುಳರಾಗಪರರಾಗಿಸುಗೆಂದು ಸಮುಚ್ಚಯ
ಕ್ಕುಪಚಿತೋರುಗುಣಮಂ ಮಿಗೆ ಪೇೞ್ಗೆಕವೀಶ್ವರರ್ ೧೩೩

ನೃಪನುಮನ್ ಪ್ರಜೆಯುಮನ್ ಪರಿವಾರಮುಮನ್ ಮಹಾಕೃಪೆಯಿನ್ ಆ ಗೊರವರುಮ್ ಸುರರುಮ್ ಗುಣವೃದ್ಧರುಮ್ ವಿಪುಳ ರಾಗಪರರ್ ಆಗಿಸುಗೆ ಎಂದು ಸಮುಚ್ಚಯಕ್ಕೆ ಉಪಚಿತ ಉರುಗುಣಮನ್ ಮಿಗೆ ಪೇೞ್ಗೆ ಕವೀಶ್ವರರ್

"ನೃಪನನ್ನೂ ಪ್ರಜೆಯನ್ನೂ ಪರಿವಾರವನ್ನೂ ಮಹಾಕೃಪೆಯಿಂದ ಗೊರವರೂ ದೇವತೆಗಳೂ ಗುಣವೃದ್ಧರೂ ವಿಪುಲರಾಗಪರರನ್ನಾಗಿ ಮಾಡಲಿ" ಎಂದು ಸಮುಚ್ಚಯಕ್ಕೆ ಕವೀಶ್ವರರು ದೊಡ್ಡಗುಣ ಒದಗಿಬರುವಂತೆ ಹೇಳಲಿ.

133. "Let the king and the people, and also their followers, become lovable with the grace of gurus and of gods and also of the virtuous seniors." When the best poets express it this way, it is a virtue in poetry.

If a separate verb is used for each *kāraka* relationship, then the fault is avoided and the usage is correct.

ಮಣಿವಿಭೂಷಣ

ಬೇಱೆವೇಱೆನಿಲೆ ಕಾರಕದೊಳ್ ಕ್ರಿಯೆ ತಳ್ತು ಮುಂ
ತೋಱೆ ಪೇೞ್ದವಗುಣಂ ಗುಣರೂಪದೆ ಪೊರ್ದುಗುಂ
ಸಾಱುಗಾನೆಯವರೆಲ್ಲರುಮಾ ನೃಪನಾನೆ ಮ
ತ್ತೇಱುವಂ ಪಣಿದೊಡಾನೆಯನೆಂಬುದದೂಷಿತಂ ೧೩೪

ಬೇರೆವೇಱೆ ನಿಲೆಕಾರಕದೊಳ್ ಕ್ರಿಯೆ ತಳ್ತು ಮುಂತೋಱೆ ಪೇೞ್ದ ಅವಗುಣಮ್ ಗುಣರೂಪದೆ ಪೊರ್ದುಗುಮ್. ಸಾಱುಗೆ ಆನೆಯವರ್ ಎಲ್ಲರುಮ್ ಆ ನೃಪನ್ ಆನೆ ಮತ್ತೆ ಏಱುವನ್ ಪಣಿದೊಡೆ ಆನೆಯನ್ ಎಂಬುದು ಅದೋಷಿತಮ್

ಪ್ರತ್ಯೇಕವಾಗಿ ಒಂದೊಂದು ಕಾರಕಕ್ಕೂ ಬೇರೆ ಬೇರೆ ಕ್ರಿಯಾಪದ ಅನ್ವಯಿಸುವಂತೆ ಹೇಳಿದರೆ ದೋಷ ಹೋಗಿ ಗುಣರೂಪವನ್ನು ತಾಳುತ್ತದೆ. "ಆನೆಯವರೆಲ್ಲರಿಗೂ ಸಾರಿ ಹೇಳಲಿ. ಆನೆಯನ್ನು ಸಜ್ಜು ಮಾಡಿದರೆ ಅರಸನು ಮತ್ತೆ ಏರುವನು."

'ಆನೆಯವರೆಲ್ಲರುಂ' ಎಂದಾಗ ಒಮ್ಮೆ ಮಾತ್ರ ಸಮುಚ್ಚಯ ಬಂದಿದೆ. 'ಸಾಱುಗೆ' ಎಂಬ ಕ್ರಿಯೆ 'ಆನೆಯವರೆಲ್ಲರುಂ' (ವಿಭಕ್ತಿ ಪಲ್ಲಟ ಆಗಿರುವುದರಿಂದ 'ಆನೆಯವರೆಲ್ಲರಿಗೆ' ಎಂದು ಅರ್ಥ ಮಾಡಿಕೊಳ್ಳಬೇಕು) ಎಂಬ ಕಾರಕಕ್ಕೆ ಅನ್ವಯಿಸಿದೆ. 'ಪಣಿದೊಡೆ' ಎಂಬುದು 'ಆನೆಯಂ' ಎಂಬ ಕಾರಕಕ್ಕೆ, 'ಏಱುವಂ' ಎಂಬ ಕ್ರಿಯೆ 'ಆನೆಯಂ' ಎಂಬುದಕ್ಕೆ ಅನ್ವಯವಾಗುತ್ತವೆ. ಹೀಗಾಗಿ ಏಕವಾಕ್ಯತೆ ಬಂದು ಸಮುಚ್ಚಯ ದೋಷ ತಪ್ಪುತ್ತದೆ.

134. "Let it be said to all the elephant men. If the elephant is well prepared, the king will mount it himself."

Here the *samuccaya* is used only once (all the elephant men). 'Let it be said' is associated with 'all the elephant men'. 'He will mount' is associated with 'the elephant'. As different verbs are used here, there is no problem with *samuccaya*.

ಮಂಗಳ ಒಸೆಗೆ ಮೇಣ್ ಮುನಿಗೆ ಮೇಣವರೆಲ್ಲರುಮಂತೆ ಬ
ಗ್ಗಿಸುಗೆ ಮತ್ತುೞಿಯಲಾಗದು ನೆಟ್ಟಗೆ ಪೂಣ್ದುದಂ
ಪುಸಿವರಾಗಿರದೆ ಮಾನಸರೆಂಬುದನಿಂತೆ ಸಂ
ಕಿಸದೆ ನಂಬುವುದು ಮಿಕ್ಕವಿಕಲ್ಪದ ದೋಷಮಂ ೧೩೫

ಒಸೆಗೆ ಮೇಣ್ ಮುನಿಗೆ ಮೇಣ್ ಅವರೆಲ್ಲರುಮ್ ಅಂತೆ ಬಗ್ಗಿಸುಗೆ ಮತ್ತೆ ಉೞಿಯಲ್ ಆಗದು ನೆಟ್ಟಗೆ ಪೂಣ್ದುದುಮ್ ಪುಸಿವರ್ ಆಗಿರದೆ ಮಾನಸರ್ ಎಂಬುದನ್ ಇಂತೆ ಸಂಕಿಸದೆ ನಂಬುವುದು ಮಿಕ್ಕ ವಿಕಲ್ಪದ ದೋಷಮನ್

"ಅವರು ಪ್ರೀತಿಸಲಿ ಅಥವಾ ಕೋಪಿಸಲಿ, ಹಾಗೆಯೇ ಹೆದರಿಸಲಿ, ಶಂಕೆಯಿಲ್ಲದೆ ಪ್ರತಿಜ್ಞೆ ಮಾಡಿದ್ದನ್ನು ಸತ್ಯವಂತರಾದ ಮನುಷ್ಯರು ಬಿಡಬಾರದು."

ಇಲ್ಲಿ 'ಮೇಣ್' ಎಂಬ ವಿಕಲ್ಪಾರ್ಥಕ ಶಬ್ದವನ್ನು ಪ್ರಯೋಗಿಸಿ ಮುಂದೆ 'ಮತ್ತೆ' ಎಂದು ಪ್ರಯೋಗಿಸಿರುವುದು ವಿಕಲ್ಪ ದೋಷಕ್ಕೆ ಲಕ್ಷ್ಯವಾಗಿದೆ.

135. "Let all of them <u>either</u> love <u>or</u> get angry, let them shout <u>again</u>. If truthful people promise something, they should fulfill it." Undoubtedly, the use of similar words (as in this example) leads to "a problem with alternatives" (*vikalpadōṣa*).

When alternatives (either, or) are used, they should be continued in the sentence to convey the intended meaning. But, here, "again" is used, which leads to a *vikalpa-dōṣa.*

ಮಂಗಳ ಪಱಿಗೆ ಮೇಣ್ ಪೊಗೞ್ಗೆಮೇಣ್ ನೆವಮಿಲ್ಲದೊಡಿಂತು ಕೈ
ಗಱಿಯೆ ಬಗ್ಗಿಸುಗೆ ಮೇಣವರೆಲ್ಲರು ಮೆಂತುಮಾ
ನಱಿವೆನಲ್ಲೆನೆನಿತಾದೊಡಮೆಂಬುದು ಚೆಲ್ವುಪಾಂ
ಗಱಿಯದಂತಿದನೆಯಿಂತಿರೆ ಪೇೞ್ಗೆವಿಕಲ್ಪಮಂ ೧೩೬

ಪಟಿಗೆ ಮೇಣ್ ಪೊಗಟ್ಗೆ ಮೇಣ್ ನೆವಮ್ ಇಲ್ಲದೊಡೆ ಇಂತು ಕೈಗಟಿಯೆ ಬಗ್ಗಿಸುಗೆ ಮೇಣ್ ಅವರೆಲ್ಲರುಮ್ ಎಂತುಮ್ ಆನ್ ಅಟಿವೆನ್ ಅಲ್ಲೆನ್ ಎನಿತಾದೊಡಮ್ ಎಂಬುದು ಚೆಲ್ವು ಪಾಂಗಟಿಯದೆ ಇಂತು ಇದನೆ ಇಂತಿರೆ ಪೇಟ್ಗೆ ವಿಕಲ್ಪಮನ್

"ಅವರು ನಿಂದಿಸಲಿ ಅಥವಾ ಹೊಗಳಲಿ ಅಥವಾ ಕಾರಣವಿಲ್ಲದೆ ಹೀಗೆ ಮಿತಿಮೀರಿ ಗದರಿಸಲಿ, ಹೇಗೂ ನಾನು ಮಾತ್ರ ಬಿಡುವವನಲ್ಲ"– ವಿಕಲ್ಪಾರ್ಥಕ ಶಬ್ದಗಳನ್ನು ಹೀಗೆ ಹೇಳಬೇಕು.

136. The problem can be corrected in this way: "Let all of them either abuse or praise or shout excessively. Anyway, I am not going to leave the matter as it is." Expressed thus, the problem is corrected.

ಗೀತಿಕೆ ಕುಱಿತು ಸಮುಚ್ಚಯದಾಬಱಿ ವಿಕಲ್ಪದಾ
ತೆಱದೊಳೆ ದೋಷಮುಮನಂತೆ ಗುಣಮುಮಂ

ಕಿಱಿದಱಿೊಳಱಿಯೆ ಪೇೞ್ದೆನಿಂತೆ ಪೆಱವುಮನೀ
ಕುಱಿಪನೆ ಕುಱಿಮಾಡಿಪೇೞ್ಗೆಕಬ್ಬಮಂ ೧೩೭

ಕುಱಿತು ಸಮುಚ್ಚಯದಾ ಬಱಿ ವಿಕಲ್ಪದಾ ತೆಱದೊಳೆ ದೋಷಮುಮನ್ ಅಂತೆ ಗುಣಮುಮನ್ ಕಿಱಿದಱಿೊಳ್ ಅಱಿಯೆ ಪೇೞ್ದೆನ್ ಇಂತೆ ಪೆಱವುಮನ್ ಈ ಕುಱಿಪನೆ ಕುಱಿ ಮಾಡಿ ಪೇೞ್ಗೆ ಕಬ್ಬಮನ್

ಸಮುಚ್ಚಯದ ಬಗೆಗೆ, ವಿಕಲ್ಪಗಳ ಪ್ರಯೋಗಗಳ ಬಗೆಗೆ ದೋಷವನ್ನೂ ಗುಣವನ್ನೂ ಸಂಕ್ಷೇಪವಾಗಿ ತಿಳಿಯುವಂತೆ ಹೇಳಿದ್ದೇನೆ. ಹೀಗೆಯೇ ಮಿಕ್ಕವನ್ನೂ ಅನುಲಕ್ಷಿಸಿ ಕಾವ್ಯವನ್ನು ಹೇಳಬೇಕು.

137. I spoke here briefly about the correct and incorrect usage of *samuccaya* and *vikalpa*. Let other such problems be identified and poems composed thereafter.

ದ್ರುತವಿಳಂಬಿತ

ನಿಯಮಿತಾನ್ವಯಜಾತಿಗುಣಕ್ರಿಯಾ
ಶ್ರಯಮಿದಾಯವಧಾರಣಲಕ್ಷಣಂ
ನಯನಿಯೋಗವಿಕಲ್ಪನೆಯೊಳ್ ವಿಶಂ
ಕೆಯೆ ವಿಶೇಷಗುಣಕ್ಕುಪಲಕ್ಷಣಂ ೧೩೮

ನಿಯಮಿತ ಅನ್ವಯ ಜಾತಿ ಗುಣ ಕ್ರಿಯಾಶ್ರಯಮ್ ಇದು ಆ ಅವಧಾರಣ ಲಕ್ಷಣಮ್. ನಯ ನಿಯೋಗ ವಿಕಲ್ಪನೆಯೊಳ್ ವಿಶಂಕೆಯೆ ವಿಶೇಷ ಗುಣಕ್ಕೆ ಉಪಲಕ್ಷಣಮ್.

ಜಾತಿವಾಚಕ, ಗುಣವಾಚಕ, ಕ್ರಿಯಾವಾಚಕ ಶಬ್ದಗಳಿಗೆ ಅನ್ವಯವಾಗುವಂತೆ ಬರುವುದು ಅವಧಾರಣ ಲಕ್ಷಣ. ನಯ(ತರ್ಕವಾಕ್ಯ) ನಿಯೋಗಗಳ ವಿಕಲ್ಪಗಳನ್ನು ಹೇಳುವಾಗ ವಿಶಂಕೆ(ಸಂದೇಹ) ಸೂಚಕ ವಿಶೇಷ ಗುಣವಾಗುವುದು.

138. Emphasis (*avadhāraṇa*) is associated with the markers of genus, quality, and action. If the indicator of doubtfulness (*viśaṅkā*) comes in contexts where there are reasonable alternatives, the usage of it is a virtue in poetry.

ದ್ರುತವಿಳಂಬಿತ

ಕುಲಜನೀತನೆ ಪಂಡಿತನೀತನು
ಜ್ಜ್ವಲಯಶೋಧಿಕನೀತನೆ ತಿಬ್ಬಮೆಂ
ದಲಸಿ ಪೇೞ್ವವಧಾರಣದೋಷಮಂ
ನೆಲಸಲೀಯದಿರಿಂ ಕೃತಿನಾರಿಯೊಳ್ ೧೩೯

ಕುಲಜನ್ ಈತನೆ ಪಂಡಿತನ್ ಈತನ್ ಉಜ್ಜ್ವಲ ಯಶೋಧಿಕನ್ ಈತನೆ ತಿಬ್ಬಮೆಂದಲಸಿ ಪೇೞ್ವ ಅವಧಾರಣ ದೋಷಮನ್ ನೆಲಸಲೀಯದಿರಿಮ್ ಕೃತಿನಾರಿಯೊಳ್

"ಈತನೇ ಕುಲೀನನು, ಈತನು ಪಂಡಿತನು, ಈತನೇ ಉಜ್ವಲ ಯಶೋವಂತನು" ಎಂದು ಕ್ರಮತಪ್ಪಿ ಹೇಳುವ ಅವಧಾರಣೆಯ ದೋಷವನ್ನು ಕೃತಿನಾರಿಯಲ್ಲಿ ಸೇರಿಸಬಾರದು.

ಅವಧಾರಣದಲ್ಲಿ ಕ್ರಮವನ್ನು ಅನುಸರಿಸಬೇಕಾದಲ್ಲಿ ಎರಡುಕಡೆ ಒತ್ತಿ ಹೇಳಿ (ಕುಲಜನೀತನೆ, ಯಶೋಧಿಕನೀತನೆ) ಇನ್ನೊಂದರಲ್ಲಿ ಹೇಳದಿರುವುದು (ಪಂಡಿತನೀತನ್) ದೋಷ.

139. "He is indeed a man of noble birth, a scholar and, of course, a man of glorious fame." Lady Poetry should not be marked by such a fault of emphasis present in this line.

The problem in this verse is that the emphasis is not used correctly in the sequence, as it is not applicable for the scholar. The problem is corrected in the next verse.

ಅಚ್ಯುತ ಶೂರನೀತನೆ ಪಂಡಿತನೀತನೇ
ಕ್ಷೀರಗೌರಯಶೋಧಿಕನೀತನೇ
ಧಾರಿಣೀತಳದೊಳ್ ಧ್ರುವಮೆಂಬುದಾ
ಧಾರಮಿಂತವಧಾರಣದೊಳ್ ಗುಣಂ ೧೪೦

ಶೂರನ್ ಈತನೆ ಪಂಡಿತನ್ ಈತನೇ ಕ್ಷೀರಗೌರ ಯಶೋಧಿಕನ್ ಈತನೇ ಧಾರಿಣೀ ತಳದೊಳ್ ಧ್ರುವಮ್ ಎಂಬುದು ಆಧಾರಮ್ ಇಂತು ಅವಧಾರಣದೊಳ್ ಗುಣಮ್

"ಈತನೇ ಶೂರನು, ಈತನೇ ಪಂಡಿತನು, ಭೂತಳದಲ್ಲಿ ಹಾಲಿನಂತೆ ಬೆಳ್ಳಗಿರುವ ಯಶಸ್ಸನ್ನು ಪಡೆದವನು ಈತನೇ. ಇದು ದಿಟ"– ಹೀಗೆ ಹೇಳಿದರೆ ಅವಧಾರಣ ಗುಣಕ್ಕೆ ಆಧಾರವಾಗುತ್ತದೆ.

140. "He is indeed a valiant man, indeed a scholar. This man is, of course, the one having fame comparable to milk." Expressed thus, it is a virtue in poetry.

ದ್ರುತವಿಳಂಬಿತ

ದಿವಿಜನೋ ಫಣಿನಾಯಕನೋ ಮನೋ
ಭವನಿವಂ ಕರಮೊಪ್ಪಿದನೆಂಬುದಂ
ಕವಿಗಳಿಟ್ಟ ವಿಶಂಕೆಯ ಪಾಟಿಯಂ
ತವಿಸಿ ನಿಲ್ಕೆ ಮನೋಹರಕಾವ್ಯದೊಳ್ ೧೪೧

ದಿವಿಜನೋ ಫಣಿನಾಯಕನೋ ಮನೋಭವನ್ ಇವನ್ ಕರಮ್ ಒಪ್ಪಿದನ್ ಎಂಬುದನ್ ಕವಿಗಳ್ ಇಟ್ಟ ವಿಶಂಕೆಯ ಪಾಟಿಯನ್ ತವಿಸಿ ನಿಲ್ಕೆ ಮನೋಹರ ಕಾವ್ಯದೊಳ್

"ಇವನು ದಿವಿಜನೋ, ನಾಗರಾಜನೋ, ಇವನು ಮನ್ಮಥನು, ತುಂಬ ಚೆಲುವಾಗಿದ್ದಾನೆ"– ಹೀಗೆ ಕವಿಗಳು ಹೇಳಿದರೆ ವಿಶಂಕೆಯ ಪ್ರಯೋಗ ಸರಿಯಲ್ಲವಾದುದರಿಂದ ಅದನ್ನು ಪರಿಹರಿಸಿ ಕಾವ್ಯದಲ್ಲಿ ನಿಲ್ಲಿಸಬೇಕು.

141. "Is he a god? Is he the lord of serpents? The god of love is handsome." If such doubtfulness is expressed in a disorderly manner, it is considered a blemish in poetry.

ದ್ರುತವಿಳಂಬಿತ

ಸುರಗಣಾಧಿಪನೋ ಫಣಿನಾಥನೋ
ನಿರುತಮಾ ಸ್ಮರನೋ ಸೊಗಯಿಪ್ಪರೀ
ದೊರೆಯರಿಲ್ಲನರರ್ ಪೆಱರೆಂಬುದಾ
ದರದಿನಕ್ಕೆ ಗುಣೋದಯಕಾರಣಂ ೧೪೨

ಸುರಗಣ ಅಧಿಪನೋ ಫಣಿನಾಥನೋ ನಿರುತಮ್ ಆ ಸ್ಮರನೋ ಸೊಗಯಿಪ್ಪರ್ ಈ ದೊರೆಯರ್ ಇಲ್ಲ ನರರ್ ಪೆಱರ್ ಎಂಬುದು ಆದರದಿನ್ ಅಕ್ಕೆ ಗುಣೋದಯ ಕಾರಣಮ್

"ಇವನು ಇಂದ್ರನೋ, ನಾಗರಾಜನೋ, ಮನ್ಮಥನೋ ಆಗಿರಬೇಕು. ಇವನಂತೆ ಸೊಗಸಾಗಿರುವವರು ಮನುಷ್ಯರಲ್ಲಿ ಇನ್ನಾರೂ ಇಲ್ಲ" ಎಂದು ಹೇಳಿದರೆ ಅದು ಗುಣಕ್ಕೆ ಕಾರಣವಾಗುತ್ತದೆ.

ಇಲ್ಲಿ ಎಲ್ಲಾ ನಾಮಪದಗಳಿಗೂ ಸಂದೇಹವನ್ನು ಸೂಚಿಸುವ 'ಓ' ಎಂಬುದನ್ನು ಬಳಸಿರುವುದರಿಂದ ದೋಷವಿಲ್ಲದಂತಾಯಿತು.

142. "Is he the lord of gods? Is he the lord of serpents? Is he the lord of love? He is indeed a handsome person." If it is corrected thus, it becomes a virtue in poetry.

ದ್ರುತವಿಳಂಬಿತ

ಅಪರಿಮೇಯಮೆ ದೋಷಗುಣೌಘಮಿಂ
ತುಚಿತಕ್ರಮದಾರಯೆ ಕಾವ್ಯದೊಳ್
ವಿಪುಳವೃತ್ತಿಯೊಳೊಂದಿರೆ ಪೇೞ್ವೆನ
ಭ್ಯುಪಮಿತೋಕ್ತಿ ಗುಣಾವಗುಣಂಗಳಂ ೧೪೩

ಅಪರಿಮೇಯಮೆ ದೋಷ ಗುಣೌಘಮ್ ಇಂತು ಉಚಿತಕ್ರಮದೆ ಆರಯೆ ಕಾವ್ಯದೊಳ್ ವಿಪುಳ ವೃತ್ತಿಯೊಳ್ ಒಂದಿರೆ ಪೇೞ್ವೆನ್ ಅಭ್ಯುಪಮಿತ ಉಕ್ತಿ ಗುಣ ಅವಗಣಂಗಳಮ್

ಉಚಿತ ಕ್ರಮದಿಂದ ವಿಚಾರ ಮಾಡುವುದಾದರೆ ಕಾವ್ಯದಲ್ಲಿ ದೋಷಗಳು ಮತ್ತು ಗುಣಗಳು ಅಪರಿಮಿತವಾಗಿರುತ್ತವೆಂದು ತಿಳಿಯಬಹುದು. ಈಗ ವಿವರವಾದ ರೀತಿಯಿಂದ ಉಪಮಾವಾಚಕಗಳ ಗುಣಾವಗುಣಗಳನ್ನು ಕುರಿತು ಹೇಳುತ್ತೇನೆ.

143. Within reason, there is no limit to virtues and blemishes in poetry. Now, in detail, I speak about the virtues and blemishes of words indicating comparisons (*upamā-vācaka*).

ದ್ರುತವಿಳಂಬಿತ

ಪೊಳೆವ ಮಿಂಚುಗಳಂತಿರೆ ಕೇತುಗಳ್
ಜಳದವೃಂದದವೋಲಿರೆ ಹಸ್ತಿಗಳ್
ಗಳಿತಧಾರೆಗಳಂತಿರೆ ಪತ್ತಿಗಳ್
ಬಳಸಿ ಕಾರ್ಗೆಣೆಯಾಯ್ತು ಮಹಾಹವಂ ೧೪೪

ಪೊಳೆವ ಮಿಂಚುಗಳಂತೆ ಇರೆ ಕೇತುಗಳ್ ಜಳದ ವೃಂದದವೋಲ್ ಇರೆ ಹಸ್ತಿಗಳ್ ಗಳಿತ ಧಾರೆಗಳಂತೆ ಇರೆ ಪತ್ತಿಗಳ್ ಬಳಸಿ ಕಾರ್ಗೆ ಎಣೆ ಆಯ್ತು ಮಹಾಹವಮ್

ಧ್ವಜಗಳು ಹೊಳೆಯುವ ಮಿಂಚುಗಳಂತಿರಲು, ಆನೆಗಳು ಮೇಘಸಮೂಹದ ಹಾಗಿರಲು, ಪದಾತಿದಳಗಳು ಸುರಿಯುವ ಮಳೆಯಂತೆ ಇರಲು ಆ ಮಹಾಸಮರ ಮಳೆಗಾಲದಂತಾಯಿತು.

ಇಲ್ಲಿ ಮೊದಲ ಮತ್ತು ಕಡೆಯ ಉಪಮಾವಾಚಕಗಳು 'ಅಂತೆ' ಎಂದಿದ್ದರೆ, ನಡುವಿನದು 'ವೋಲ್' ಆಗಿದೆ.

144. As the flags are like lightning, as the elephants are comparable to the clouds, and as the army is like pouring rain, the great battle resembled the rainy season.

In the original Kannada verse, linking the three comparisons, the word *ante* ("like") is used in the first and the third images, whereas *hāge* (having same meaning as "like") is used in the middle one.

ದ್ರುತವಿಳಂಬಿತ

ನಿಯಮಿತಾಕ್ಷರದಿಂದುಪಮಾಪ್ರತಿ
ಜ್ಞೆಯನೆ ತಿರ್ದುವುದಟ್ಟಿಯಿನಿರ್ದುಮಾ
ಬಯಕೆ ತೀರದ ಕಾರಣದಿಂ ವಿಪ
ರ್ಯಯಮಿದಭ್ಯುಪಮೋಕ್ತ್ಯುಪದೂಷಣಂ ೧೪೫

ನಿಯಮಿತ ಅಕ್ಷರದಿಂದ ಉಪಮಾ ಪ್ರತಿಜ್ಞೆಯನೆ ತಿರ್ದುವುದು ಅಟ್ಟಿಯಿನ್ ಇರ್ದುಮ್ ಆ ಬಯಕೆ ತೀರದ ಕಾರಣದಿನ್ ವಿಪರ್ಯಯಮ್ ಇದು ಅಭ್ಯುಪಮೋಕ್ತಿ ಉಪದೂಷಣಮ್

ನಿಯತವಾದ ಅಕ್ಷರದಿಂದ ಉಪಮಾಪ್ರತೀತಿ ಆಗಬೇಕೆಂದು ನಮ್ಮ ನಿರೀಕ್ಷೆ ಇರುತ್ತದೆ. ಆ ಬಯಕೆ ತೀರದ ಕಾರಣದಿಂದ ವಿಪರ್ಯಾಸವಾಗಿ ಉಪಮಾದೋಷವಾಗುತ್ತದೆ.

145. When one can use the same word of comparison twice, we expect that it can be used in all instances. As our expectation is not fulfilled here, it is considered a problematic usage of a word indicating comparison.

ದ್ರುತವಿಳಂಬಿತ

ಉಪಮಿತಾಕ್ಷರಮೆಲ್ಲಿಯುಮೇಕರೂ
ಪಪರಿವೃತ್ತಿಯೊಳೊಂದಿದ ಮಾಟ್ಕೆಯಿಂ
ದುಪಚಿತಕ್ರಮಮಕ್ಕುಮಿದೆಂದುಮ
ಭ್ಯುಪಮಿತಕ್ಕೆಗುಣೋದಯಕಾರಣಂ ೧೪೬

ಉಪಮಿತ ಅಕ್ಷರಮ್ ಎಲ್ಲಿಯುಮ್ ಏಕರೂಪ ಪರಿವೃತ್ತಿಯೊಳ್ ಒಂದಿದ ಮಾಟ್ಕೆಯಿಂದೆ ಉಪಚಿತ ಕ್ರಮಮ್ ಅಕ್ಕುಮ್ ಇದು ಎಂದುಮ್ ಅಭ್ಯುಪಮಿತಕ್ಕೆ ಗುಣೋದಯ ಕಾರಣಮ್

ಉಪಮಿತಾಕ್ಷರ ಎಲ್ಲೆಡೆಯಲ್ಲಿಯೂ ಏಕರೂಪವಾಗಿರುವಂತೆ ತಿದ್ದಿದ ಲಕ್ಷ್ಯವು ಕ್ರಮಬದ್ಧವೆನಿಸುವುದಲ್ಲದೆ ಗುಣಾತಿಶಯಕ್ಕೂ ಕಾರಣವಾಗುತ್ತದೆ.

146. When the word used for comparison is applied uniformly, the example will be put in correct order and considered a good usage.

ಉಪಸಂಹಾರ

Conclusion

ಪುಷ್ಪಿತಾಗ್ರ ಸಮುಚಿತನೃಪತುಂಗದೇವಮಾರ್ಗ
ಕ್ರಮಗಮನಾಭಿಮುಖರ್ಕಳಪ್ಪಧೀರರ್

ಕ್ರಮುಸಹಿತಮಗಮ್ಯರೂಪಕಾವ್ಯ
ಶ್ರಮಪದಮಂ ನಿರಪಾಯದೆಯ್ದಲಾರ್ಪರ್ ೧೪೭

ಸಮುಚಿತ ನೃಪತುಂಗದೇವ ಮಾರ್ಗ ಕ್ರಮ ಗಮನ ಅಭಿಮುಖರ್ಕಳಪ್ಪ ಧೀರರ್ ಕ್ರಮ ಸಹಿತಮ್ ಅಗಮ್ಯ ರೂಪಕಾವ್ಯ ಶ್ರಮಪದಮನ್ ನಿರಪಾಯದೆ ಎಯ್ದಲ್ ಆರ್ಪರ್

ಸಮುಚಿತವಾದ ನೃಪತುಂಗದೇವನ ಮಾರ್ಗವನ್ನು ಅನುಸರಿಸಿ ನಡೆಯಲು ಅಭಿಮುಖರಾದ ವಿಬುಧರು ಅಗಮ್ಯವೂ ಕ್ರಮಬದ್ಧವೂ ಆದ ಕಾವ್ಯನಿರ್ಮಾಣಪದವನ್ನು ನಿರಪಾಯವಾಗಿ ಪಡೆಯಬಲ್ಲವರಾಗುತ್ತಾರೆ.

147. Resolute people, who wish to properly follow Nṛpatungadēva, will achieve the status of having composed a good poem without difficulty.

ಪುಷ್ಪಿತಾಗ್ರ ಅತಿಶಯಧವಳೋರ್ವಿಪೋದಿತಾಳಂ
ಕೃತಿ ಮತಿ ನೀತಿನಿರಂತರಪ್ರತೀತಂ
ಶ್ರುತಿಯುವತಿಕೃತೋಪಚಾರಸಾರ
ಸ್ವತಗುಣದಿಂ ಕೃತಕೃತ್ಯಮಲ್ಲನಕ್ಕುಂ ೧೪೮

ಅತಿಶಯ ಧವಳ ಉರ್ವೀಪ ಉದಿತ ಅಳಂಕೃತಿ ಮತಿ ನೀತಿ ನಿರಂತರ ಪ್ರತೀತಮ್ ಶ್ರುತಿಯುವತಿ ಕೃತ ಉಪಚಾರ ಸಾರಸ್ವತ ಗುಣದಿನ್ ಕೃತಕೃತ್ಯಮಲ್ಲನ್ ಅಕ್ಕುಮ್

ಅತಿಶಯಧವಳನು, ನೀತಿನಿರಂತರನು ಆದ ನೃಪತುಂಗನಿಂದ ಬೆಳಕಿಗೆ ಬಂದ ಈ ಕೃತಿ ವಿದ್ಯಾದೇವಿಯ ಉಪಾಸನೆಯಿಂದ ಬರುವ ಸಾರಸ್ವತಗುಣ ದಿಂದಾಗಿ ಆತ ಕೃತಕೃತ್ಯಮಲ್ಲನಾಗಿದ್ದಾನೆ.

ಈ ಫಲಶ್ರುತಿಯ ಪದ್ಯದಲ್ಲಿ ಅತಿಶಯಧವಳ, ನೀತಿನಿರಂತರ, ಕೃತಕೃತ್ಯಮಲ್ಲ ಎಂಬ ಬಿರುದಾವಳಿಯನ್ನು ಉಲ್ಲೇಖಿಸಿ ಕವಿರಾಜಮಾರ್ಗ ಕೃತಿಯು ಬೆಳಕಿಗೆ ಬರಲು ಅವನೇ ಕಾರಣನೆಂಬುದನ್ನು ಸೂಚಿಸಲಾಗಿದೆ.

148. The king, with the title of *Atiśayadhavaḷa* and *Nītinirantara*, has propounded and ornamented

this regal road to poetry. The path will become successful by worshipping the celebrated Lady Learning, Sarasvatī.

ಚಂ.ಮಾ.

ನುಡಿಗಳೊಡಂಬಡಲ್ ಬಗೆದವೋಲ್ ಬಗೆಯಂ ಮಿಗಲೀಯ
ದೊಂದೆ ನಾ
ಟ್ನುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್
ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂ
ಗುಡಿವಿಡುವಂತೆ ನೀಳ್ದು ಪೇಟ್ಪುದು ನೀತಿನಿರಂತರಕ್ರಮಂ ೧೪೯

ನುಡಿಗಳ್ ಒಡಂಬಡಲ್ ಬಗೆದವೋಲ್ ಬಗೆಯನ್ ಮಿಗಲೀಯದೊಂದೆ ನಾಟ್ನುಡಿಯ ಬೆಡಂಗೆ ಕನ್ನಡದ ಮಾತಿನೊಳ್ ಆ ವಿಕಟ ಅಕ್ಷರಂಗಳೊಳ್ ತೊಡರದೆ ಸಕ್ಕದಂಗಳ ಪದಮ್ ಪವಣಾಗಿರೆ ಮೆಲ್ಪುವೆತ್ತು ದಾಂಗುಡಿ ವಿಡುವಂತೆ ನೀಳ್ದು ಪೇಟ್ಪುದು ನೀತಿನಿರಂತರ ಕ್ರಮಮ್

ಉಚಿತ ಶಬ್ದಗಳು ಕೂಡಿ ಬರುವಂತೆ, ಉದ್ದೇಶಿಸಿದ ಅರ್ಥ ಇರುವಂತೆ, ಕನ್ನಡದ ಮಾತುಗಳಲ್ಲಿ ನಾಣ್ಣುಡಿಗಳ ಬೆಡಗಿರುವಂತೆ, ಪರುಷಾಕ್ಷರಗಳನ್ನು ಬಳಸದೆ ಸಂಸ್ಕೃತ ಪದಗಳು ಸಮುಚಿತ ರೀತಿಯಲ್ಲಿ ಬಳಕೆಯಾಗುವಂತೆ, ಚೆನ್ನಾಗಿ ವ್ಯಾಪ್ತಿಯನ್ನು ಪಡೆಯುವಂತೆ ನೀತಿನಿರಂತರನ ಕಾವ್ಯಮಾರ್ಗ ವನ್ನು ಅನುಸರಿಸಿ ಹೇಳಬೇಕು.

149. According to the way of *Nītinirantara*, a poem should contain suitable words conveying only intended meanings. Kannada speech should contain the beauty of proverbs. Sanskrit words that are harsh should not obstruct the flow. The usage of words should reveal the poet's ability and should flow naturally, like a creeper.

ಮ.ವಿ. ಸಕಳಾಳಾಪಕಳಾಕಳಾಪಕಥಿತವ್ಯಾವೃತ್ತಿಯೊಳ್ ಕೂಡಿ ಚಿ
ತ್ರಕರಂಬೋಲ್ ಪರಭಾಗಭಾವವಿಲಸದ್ವರ್ಣಕ್ರಮಾವೃತ್ತಿಯಂ
ಪ್ರಕಟಂ ಮಾಡಿರೆ ಪೇಟ್ದ ಚಿತ್ರಕೃತಿಯಂ ವ್ಯಾವರ್ಣಿಸುತ್ತುಂ ಕವಿ
ಪ್ರಕರಂ ಶ್ರೀ ವಿಜಯಪ್ರಭೂತಮನಿದಂ ಕೈಕೊಳ್ವುದೀ
ಮಾಟ್ಕೆಯಿಂ ೧೫೦

ಸಕಳ ಆಳಾಪ ಕಳಾ ಕಳಾಪ ಕಥಿತ ವ್ಯಾವೃತ್ತಿಯೊಳ್ ಕೂಡಿ ಚಿತ್ರಕರಂ
ಬೋಲ್ ಪರಭಾಗಭಾವ ವಿಲಸತ್ ವರ್ಣ ಕ್ರಮಾವೃತ್ತಿಯನ್ ಪ್ರಕಟಮ್
ಮಾಡಿರೆ ಪೇಟ್ದಿ ಚಿತ್ರ ಕೃತಿಯನ್ ವ್ಯಾವರ್ಣಿಸುತ್ತುನ್ ಕವಿಪ್ರಕರಮ್
ಶ್ರೀವಿಜಯ ಪ್ರಭೂತಮನ್ ಇದಂ ಕೈಕೊಳ್ವುದು ಈ ಮಾಟಕ್ಕೆಯಿನ್

ಸಕಲಕಲಾಕಲಾಪಗಳಿಂದ ಕೂಡಿ ಕಥಿತವಾದ ಸತ್ಕಾವ್ಯ ಭಾವ-ವರ್ಣಗಳಿಂದ ಕೂಡಿದ ಚಿತ್ರಕಾರನ ಶ್ರೇಷ್ಠ ಕೃತಿಯಂತೆ ಭಾವಿಸಿ ವರ್ಣಿಸುತ್ತ ಕವಿ ಸಮೂಹ ಶ್ರೀವಿಜಯ ಪ್ರಭೂತವಾದ ಈ ರಚನೆಯನ್ನು ಸ್ವೀಕರಿಸಬೇಕು.

ಇದು ಪರಮಶ್ರೀ ನೃಪತುಂಗದೇವಾನುಮತಮಪ್ಪ
ಕವಿರಾಜಮಾರ್ಗದೊಳ್
ದೋಷಾದೋಷಾನುವರ್ಣನನಿರ್ಣಯಂ ಪ್ರಥಮಪರಿಚ್ಛೇದಂ

150. Let the poets publicize Śrīvijaya's composition as a great work of art, explaining how it is a guide in the creation of the best kinds of poems, with lofty themes and ideas presented in colorful ways.

This is the end of first chapter of the *Kavirājamārgaṁ* which, with the approval of Nṛpatuṅgadēva, is devoted to what is faulty and the faultless in poetry.

ಕವಿರಾಜಮಾರ್ಗಂ

KAVIRĀJAMĀRGAṀ

ದ್ವಿತೀಯಪರಿಚ್ಛೇದಂ

CHAPTER TWO

ಶಬ್ದಾಲಂಕಾರ ವರ್ಣನನಿರ್ಣಯಂ

śabdālaṅkāra-varṇana-nirṇayaṁ

Defining Figures of Speech and Ascertaining a Description of Figures of Sound and Word (*śabdālaṅkāra*)

ಕಂ. ಪರಮಶ್ರೀ ಕೃತಿವಧುವಾ
ಶರೀರಶೋಭಾಕರಂಗಳಪ್ಪಗುಣಂಗಳ್
ನಿರತಿಶಯಾಲಂಕಾರ
ಪ್ರರೂಪಿತಂಗಳ್ ಪುರಾಣಕವಿವಿದಿತಂಗಳ್ ೧

ಪರಮ ಶ್ರೀ ಕೃತಿ ವಧುವಾ ಶರೀರ ಶೋಭಾಕರಂಗಳಪ್ಪ ಗುಣಂಗಳ್ ನಿರತಿಶಯ ಅಲಂಕಾರ ಪ್ರರೂಪಿತಂಗಳ್ ಪುರಾಣ ಕವಿ ವಿದಿತಂಗಳ್

ಅತ್ಯಂತ ಶುಭಕರವಾದ ಕಾವ್ಯದ ರಮಣೀಯಶರೀರದ ಚೆಲುವಿಗೆ ಕಾರಣವಾದ ಗುಣಗಳೇ ಉತ್ತಮವಾದ ಅಲಂಕಾರಸ್ವರೂಪಗಳೆಂದು ಪ್ರಾಚೀನ ಕವಿಗಳು ತಿಳಿದಿರುವರು.

"ಕಾವ್ಯಶೋಭಾಕರಾನ್ ಧರ್ಮಾನಲಂಕಾರಾನ್ ಪ್ರಚಕ್ಷತೇ" (೨.೧) ಎಂಬ ದಂಡಿಯ ವಾಕ್ಯವನ್ನೆ ಶ್ರೀವಿಜಯನು ಅನುಸರಿಸಿದ್ದಾನೆ. 'ಕಾವ್ಯಶೋಭೆಗೆ' ಎಂದು ಹೇಳದೆ 'ಕೃತಿವಧುವಿನ ಶರೀರ'ಕ್ಕೆ ಎಂದು ಹೇಳಿರುವುದನ್ನು ಗಮನಿಸಬೇಕು.

1. The incomparable *alaṅkāras* made known by ancient poets give luster to the body of the great and auspicious Lady Poetry.

The word *alaṅkāra* means "ornament" and, by extension, "figures of speech (or thought)" that ornament poetry.

ಚಾರುಶ್ರೀ ನೃಪತುಂಗವಿ
ಚಾರಕ್ರಮಮಾರ್ಗಗಣನೆಯೊಳ್ ಪರಮಾಲಂ
ಕಾರವಿಭಾಗಂ ವಿವಿಧಾ
ಕಾರಂ ಶಬ್ದಾರ್ಥಭೇದದಿಂದೆರಡಕ್ಕುಂ ೨

ಚಾರು ಶ್ರೀ ನೃಪತುಂಗ ವಿಚಾರ ಕ್ರಮ ಮಾರ್ಗ ಗಣನೆಯೊಳ್ ಪರಮ ಅಲಂಕಾರ ವಿಭಾಗಮ್ ವಿವಿಧ ಆಕಾರಮ್ ಶಬ್ದ ಅರ್ಥ ಭೇದದಿಂದೆ ಎರಡು ಅಕ್ಕುಮ್

ಶ್ರೀ ನೃಪತುಂಗನ ಚಾರುವಿಚಾರಧಾರೆಯನ್ನು ಗಣನೆಗೆ ತೆಗೆದುಕೊಂಡಾಗ ಶ್ರೇಷ್ಠವಾದ ಅಲಂಕಾರಗಳಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂಬ ಎರಡು ಪ್ರಭೇದಗಳಿರುತ್ತವೆ.

ಎರಡು ರೀತಿಯ ಅಲಂಕಾರಗಳಲ್ಲಿ ಮೊದಲು ಶಬ್ದಾಲಂಕಾರವನ್ನು ಹೇಳಿರುವುದು ವಿಶೇಷ. ದಂಡಿ ತನ್ನ ಕಾವ್ಯಾದರ್ಶದ ಎರಡನೆಯ ಪರಿಚ್ಛೇದದಲ್ಲಿ ಅರ್ಥಾಲಂಕಾರಗಳನ್ನು ಹೇಳಿ, ಮೂರನೆಯ ಪರಿಚ್ಛೇದದಲ್ಲಿ ಶಬ್ದಾಲಂಕಾರ ಗಳನ್ನು, ಚಿತ್ರಬಂಧ, ಪ್ರಹೇಳಿಕಾದಿಗಳನ್ನು, ಕಾವ್ಯದೋಷಗಳನ್ನು ಹೇಳಿದ್ದಾನೆ. ಆದರೆ ಉಪಸಂಹಾರದಲ್ಲಿ "ಶಬ್ದಾರ್ಥಾಲಂಕ್ರಿಯಾಶ್ಚಿತ್ರಮಾರ್ಗಾಃ ಸುಕರ ದುಷ್ಕರಾಃ। ಗುಣಾದೋಷಾಶ್ಚ ಕಾವ್ಯನಾಮಿಹ ಸಂಕ್ಷಿಪ್ಯ ದರ್ಶಿತಾಃ ॥" ಎಂದಿರುವುದನ್ನು ಗಮನಿಸಬಹುದು.

2. According to the Śrī Nṛpatuṅga's charming series of thoughts, the many categories of the best

***alaṅkāras* are divided into two types: *śabdālaṅkāra* (figures of sound and word) and *arthālaṅkāra* (figures of thought and meaning).**

ಅನ್ನೆಗಮದಱೊಳಗೆ ಸಮು

ತ್ಪನ್ನ ಪ್ರಾಧಾನ್ಯಮನ್ಯಮರ್ಥಾಧಾರಂ

ಮುನ್ನಂ ಶಬ್ದಾಳಂಕಾ

ರಂ ನಿಶ್ಚಿತಮಕ್ಕೆ ಪೇೞ್ವ ಮಾೞ್ಕೆಯೊಳೆನ್ನಾ ೩

ಅನ್ನೆಗಮ್ ಅದಱೊಳಗೆ ಸಮುತ್ಪನ್ನ ಪ್ರಾಧಾನ್ಯಮ್ ಅನ್ಯಮ್ ಅರ್ಥ ಆಧಾರಮ್ ಮುನ್ನಮ್ ಶಬ್ದಾಲಂಕಾರಮ್ ನಿಶ್ಚಿತಮ್ ಅಕ್ಕೆ ಪೇೞ್ವ ಮಾೞ್ಕೆಯೊಳ್ ಎನ್ನಾ

ಇವುಗಳಲ್ಲಿ ಪ್ರಾಧಾನ್ಯವನ್ನು ಪಡೆದಿರುವುದೂ ಅರ್ಥಕ್ಕೆ ಆಧಾರವೂ ಆದ ಶಬ್ದಾಲಂಕಾರವನ್ನು ನಾನು ಮೊದಲು ಹೇಳುವ ಕ್ರಮ ನಿಶ್ಚಿತವಾಗಿದೆ.

3. Most important among these *alaṅkāras* are certainly *śabdālaṅkāras,* which are the basis of the other type of *alaṅkāras* (*arthālaṅkāras*). First, let me explain the *śabdālaṅkāras*.

ಶಬ್ದ ಮತ್ತು ಅರ್ಥಗಳ ಪ್ರಯೋಗ ವಿಧಿ
Modes for using Words and their Meaning

ಇಲ್ಲಿಗಿದು ತಕ್ಕುದಿಲ್ಲಿಗೆ

ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ

ನೆಲ್ಲುಂ ಮೊಸರುಂ ಕುಡಿದಂ

ತಲ್ಲದೆ ತಲ್ಲಣಿಸದಲಸದಿಡು ಮೃದುಪದಮಂ ೪

ಇಲ್ಲಿಗೆ ಇದು ತಕ್ಕುದು ಇಲ್ಲಿಗೆ ಪೊಲ್ಲದು ಇದು ಎಂದು ಅಱಿದು ಸಮಱಿ ಬಲ್ಲಂತೆ ಎಲ್ಲಮ್ ನೆಲ್ಲುಮ್ ಮೊಸರುಮ್ ಕುಡಿದಂತೆ ಅಲ್ಲದೆ ತಲ್ಲಣಿಸದೆ ಅಲಸದೆ ಇಡು ಮೃದು ಪದಮನ್

ಇಲ್ಲಿಗೆ ಇದು ಸರಿ, ಇದು ಸರಿಯಲ್ಲ ಎಂಬುದನ್ನು ತಿಳಿದು ತಕ್ಕಂತೆ ಅಂದವಾಗಿಸಿ, ತಲ್ಲಣಿಸದೆ, ಆಲಸ್ಯ ಹೊಂದದೆ ಬತ್ತ, ಮೊಸರು ಕಲಸಿದ ಹಾಗೆ ಇರದಂತಹ ಮೃದುಪದಗಳನ್ನು ಬಳಸು.

4. Knowing whether it fits or does not fit (in a poem), one ought to use a soft word beautifully, and without difficulty or confusion. It should not be like mixing curds and rice paddy.

ಗಱಿಯಿಸಿದರ್ಥಂ ಸಲೆ ಪಾಂ
ಗಱಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ
ಮೆಱಸುಂ ಕೋದಂತಿರ್ಕುಂ
ಕಱಲ್ಚಿ ಕಳೆಗೊಂದಿ ಮುಂದೆ ಬಾರದ ಪದಮಂ ೫

ಗಱಿಯಿಸಿದ ಅರ್ಥಮ್ ಸಲೆ ಪಾಂಗಱಿಯದೆಯುಮ್ ಶಬ್ದಮ್ ಒಂದದೆ ಇರ್ದೊಡೆ ಮುತ್ತುಮ್ ಮೆಱಸುಮ್ ಕೋದಂತೆ ಇರ್ಕುಮ್ ಕಱಲ್ಚಿ ಕಳೆಗೊಂದಿ ಮುಂದೆ ಬಾರದ ಪದಮನ್

ಒದಗಿಬಂದ ಅರ್ಥ ಕ್ರಮತಪ್ಪದಿದ್ದರೂ ಅದಕ್ಕೆ ತಕ್ಕಂತಹ ಪದ ಹೊಂದಿಕೆಯಾಗದಿದ್ದರೆ ಮುತ್ತನ್ನೂ ಮೆಣಸನ್ನೂ ಪೋಣಿಸಿದಂತಾಗುತ್ತದೆ. ಈ ರೀತಿ ಹೊಂದಿಕೆಯಾಗದ ಪದವನ್ನು ಕಿತ್ತು ತೆಗೆಯಬೇಕು.

5. Even if the desired meaning is obtained, if the appropriate word is not present, it will be like stringing together pearls and pepper seeds. Thus, inappropriate words should be left out.

ನಿಲಿಸಿ ಲಘುಪದಮನದನ
ಗ್ಗಲಿಸಿರೆ ಮತ್ತೊತ್ತಿಬರ್ಪ ಪದಮಂ ತುದಿಯೊಳ್
ನಿಲೆ ಪೇೞ್ದಾಗಳ್ ಕೂಸಿನ
ತಲೆಯೊಳ್ ಬಿಣ್ಪೊಱೆಯನಿಟ್ಟವೋಲಸುಖಕರಂ ೬

ನಿಲಿಸಿ ಲಘು ಪದಮನ್ ಅದನ್ ಅಗ್ಗಲಿಸಿರೆ ಮತ್ತೆ ಒತ್ತಿ ಬರ್ಪ ಪದಮನ್ ತುದಿಯೊಳ್ ನಿಲೆ ಪೇೞ್ದಾಗಳ್ ಕೂಸಿನ ತಲೆಯೊಳ್ ಬಿಣ್ಪೊರೆಯನ್ ಇಟ್ಟವೋಲ್ ಅಸುಖಕರಮ್

ಲಘ್ವಕ್ಷರ ಇರುವ ಪದವನ್ನು ನಿಲ್ಲಿಸಿ ಅದಕ್ಕೆ ಹತ್ತಿಕೊಂಡಂತೆ ಅದರ ಕಡೆಯಕ್ಷರದ ಬಳಿಯೇ ಒತ್ತಕ್ಷರದಿಂದ ಮೊದಲಾಗುವ ಪದವನ್ನು

ಹೇಳಿದರೆ ಕೂಸಿನ ತಲೆಯ ಮೇಲೆ ದೊಡ್ಡ ಹೊರೆಯನ್ನು ಹೇರಿದಂತೆ ಅಸುಖಕರವಾಗುತ್ತದೆ.

6. A word with short vowels followed by conjuncts is akin to a heavy burden on the head of a child.

ಬರಿಸಿ ಕ್ಷಿತಿಪತಿಯಂ ಸ
ಯ್ತಿರಿಸಿ ಪ್ರಿಯಕುಶಲವಾರ್ತೆಯಂ ಬೆಸಗೊಂಡು
ಸ್ಥಿರಮಿರ್ದು ಪ್ರಭು ನುಡಿಯೆ
ಪ್ರರೂಢ ಮುದನಾದನಾತನೆಂಬುದು ದೂಷ್ಯಂ ೭

ಬರಿಸಿ ಕ್ಷಿತಿಪತಿಯನ್ ಸಯ್ತಿರಿಸಿ ಪ್ರಿಯ ಕುಶಲ ವಾರ್ತೆಯನ್ ಬೆಸಗೊಂಡು ಸ್ಥಿರಮಿರ್ದು ಪ್ರಭು ನುಡಿಯೆ ಪ್ರರೂಢ ಮುದನಾದನ್ ಆತನ್ ಎಂಬುದು ದೂಷ್ಯಮ್

"ಭೂಪತಿಯನ್ನು ಸ್ವಾಗತಿಸಿ, ಚೆನ್ನಾಗಿ ಉಪಚರಿಸಿ, ಪ್ರಿಯಕುಶಲ ವಾರ್ತೆಗಳಿಂದ ವಿಚಾರಿಸಿ, ಸ್ಥಿರವಾಗಿ ಪ್ರಭು ನುಡಿಯಲು ಅವನು ಹೆಚ್ಚಿನ ಆನಂದವನ್ನು ಪಡೆದನು" ಎಂದು ಹೇಳಿದರೆ ಅದು ದೋಷ.

ಮೂಲದಲ್ಲಿ 'ಬರಿಸಿ + ಕ್ಷಿತಿಪತಿಯನ್; ಸಯ್ತಿರಿಸಿ + ಪ್ರಿಯ; ಬೆಸಗೊಂಡು + ಸ್ಥಿರಮಿರ್ದು + ಪ್ರಭು; ನುಡಿಯೆ + ಪ್ರರೂಢ' ಎಂದಾಗ ಲಘು ಆದಮೇಲೆ ಒತ್ತಕ್ಷರಗಳು ಬಂದಿರುವುದರಿಂದ ದೋಷ.

7. [For example, here is a fault-ridden usage:] "When the king invited the other king, paid attention and spoke confidently to him, asking about the welfare of the beloved people, the other king felt very happy."

In the Kannada original, conjunct letters are used in many places after short vowels (*barisi* + *kṣitipatiyaṁ*; *saytirisi priyakuśala*; *besagoṇḍu* + *sthiramirdu* + *prabhunuḍiye* + *prarūḍha*).

ಕ್ಷಿತಿಪತಿಯಂ ಬರಿಸಿ ಜಗ
ನ್ನುತನಂ ಸಂತೈಸಿ ಕುಶಲವಾರ್ತಾಂತರಮಂ

ಮಿತವಚನಂ ಬೆಸಗೊಂಡತಿ
ವಿತೀರ್ಣಮುದನಾದನಾತನೆಂಬುದು ಮಾರ್ಗಂ ೮

ಕ್ಷಿತಿಪತಿಯನ್ ಬರಿಸಿ ಜಗನ್ನುತನನ್ ಸಂತೈಸಿ ಕುಶಲ ವಾರ್ತಾಂತರಮನ್ ಮಿತ ವಚನನ್ ಬೆಸಗೊಂಡು ಅತಿ ವಿತೀರ್ಣ ಮುದನ್ ಆದನ್ ಆತನ್ ಎಂಬುದು ಮಾರ್ಗಮ್

"ಜಗನ್ನುತನು, ಮಿತಭಾಷಿಯು ಆದ ನರಪತಿಯನ್ನು ಸ್ವಾಗತಿಸಿ, ಸಂತೈಸಿ, ಕುಶಲವಾರ್ತೆಗಳನ್ನು ಹೇಳಿ ಆನಂದವನ್ನು ಪಡೆದನು" ಎಂದು ಹೇಳಿದರೆ ಸರಿಯಾದ ಮಾರ್ಗ.

ಇಲ್ಲಿ ಹಿಂದಿನ ಪದ್ಯದಲ್ಲಿರುವಂತೆ ಲಘ್ವಕ್ಷರಗಳಾದ ಮೇಲೆ ಸಂಯುಕ್ತಾಕ್ಷರಗಳು ಬಂದಿಲ್ಲವಾದುದರಿಂದ ದೋಷಪರಿಹಾರ ಆಗಿದೆ.

8. [Here is a corrected version of the same sentence:] "When the king, a man of few words, invited the other king, consoled him and asked about his welfare, that other king felt very happy."

In the Kannada original, the words are rearranged in such a way that the conjuncts do not follow the short vowels (*barisi kṣitipatiaṁ* is rearranged as *kṣitipatiyaṁ barisi.* Hence the fault is rectified.

ಒಂದಂ ಕ್ರಿಯಾವಿಶೇಷಣ
ಮಂ ದೊರೆಕೊಳೆ ಸಯ್ತು ಪೇೞ್ದುಮದಱಿೊಳೆ ಪೆಱತಂ
ಸಂದಿಸಿ ಪೇೞ್ದೊಡೆ ಕೃತಿಯೊಳ
ಗೊಂದಿರದೆರಡರ್ಕೆ ಬಿಟ್ಟಕೞುವಂ ಪೋಲ್ಗುಂ ೯

ಒಂದನ್ ಕ್ರಿಯಾವಿಶೇಷಣಮನ್ ದೊರೆಕೊಳೆ ಸಯ್ತು ಪೇೞ್ದುಮ್ ಅದಱಿಕೊಳೆ ಪೆಱತನ್ ಸಂದಿಸಿ ಪೇೞ್ದೊಡೆ ಕೃತಿಯೊಳಗೆ ಒಂದಿರದೆ ಎರಡಕ್ಕೆ ಬಿಟ್ಟ ಕೞುವನ್ ಪೋಲ್ಗುಮ್

ಒಂದು ಕ್ರಿಯಾವಿಶೇಷಣವನ್ನು ಸರಿಯಾಗಿ ಹೇಳಿ ಕೂಡ ಅದಕ್ಕೆ ಇನ್ನೊಂದನ್ನು ಸೇರಿಸಿ ಹೇಳುವುದಾದರೆ ಎರಡು ಕೆಚ್ಚಲಿಗೆ ಬಿಟ್ಟ ಕರುವಿನಂತೆ ಆ ಕ್ರಿಯಾವಿಶೇಷಣ ಕೃತಿಯಲ್ಲಿ ಹೊಂದಿಕೊಳ್ಳುವುದಿಲ್ಲ.

9. Instead of using a single adverb, if another one is added, it will not fit into the sentence. It is akin to leading one calf to the udder of two cows (for drinking milk).

ಪರಿವಾರವಾರವನಿತಾ
ಪರಿವೃತನರಮನೆಯೊಳರಸನಂಬರತಳದೊಳ್
ವರತಾರಾಪರಿಗತಶಶ
ಧರನಂತೊಪ್ಪಿರೆ ವಿನೋದದಿಂದುರುಮುದದಿಂ ೧೦

ಪರಿವಾರ ವಾರ ವನಿತಾ ಪರಿವೃತನ್ ಅರಮನೆಯೊಳ್ ಅರಸನ್ ಅಂಬರತರದೊಳ್ ವರ ತಾರಾ ಪರಿಗತ ಶಶಧರನಂತೆ ಒಪ್ಪಿರೆ ವಿನೋದದಿಂದ ಉರು ಮುದದಿನ್

ಪರಿವಾರದ ವಾರಾಂಗನೆಯರಿಂದ ಅರಮನೆಯಲ್ಲಿ ಪರಿವೃತನಾಗಿದ್ದ ಅರಸನು ಆಕಾಶದಲ್ಲಿ ತಾರಾಗಣದಿಂದ ಪರಿವೃತನಾದ ಚಂದ್ರನಂತೆ ವಿನೋದದಿಂದ, ಮುದದಿಂದ ಒಪ್ಪಿರಲು,

ಇಲ್ಲಿ ಕ್ರಿಯಾವಿಶೇಷಣಗಳು ಕ್ರಿಯೆಯೊಡನೆ ಅನ್ವಯಿಸುತ್ತಿಲ್ಲ.

10. [For example:] “The king who was surrounded by courtesans in the palace was like the moon surrounded by the brightest stars. He shone with pleasure and joy.”

ಪದನಱಿದೊಂದಂ ಕ್ರಿಯೆಯೊಳ್
ಪುದಿದುೞಿದುದನೊಂದಿ ಬರೆ ವಿಶೇಷ್ಯದೊಳೊಂದಂ
ಸದಭಿಮತಮಾಗಿ ನಿಲೆ ಪೇ
ೞ್ವುದು ಮಾರ್ಗಂ ನಿತ್ಯಮಲ್ಲವಲ್ಲಭಮತದಿಂ ೧೧

ಪದನಱಿದು ಒಂದನ್ ಕ್ರಿಯೆಯೊಳ್ ಪುದಿದು ಉೞಿದುದನ್ ಒಂದಿ ಬರೆ ವಿಶೇಷ್ಯದೊಳ್ ಒಂದನ್ ಸದಭಿಮತಮಾಗಿ ನಿಲೆ ಪೇೞ್ವುದು ಮಾರ್ಗಮ್ ನಿತ್ಯಮಲ್ಲವಲ್ಲಭ ಮತದಿನ್

ಕ್ರಮವರಿತು ಒಂದು ಕ್ರಿಯಾವಿಶೇಷಣವನ್ನು ಕ್ರಿಯೆಯಲ್ಲಿ ಅನ್ವಯಿಸುವಂತೆ ಮಾಡಿ, ಇನ್ನೊಂದು ಕ್ರಿಯಾವಿಶೇಷಣವನ್ನು ವಿಶೇಷ್ಯಕ್ಕೆ ಅನ್ವಯಿಸಿ ಸದಭಿಮತದಿಂದ ಹೇಳುವುದು ನೃಪತುಂಗನ ಮತದಂತೆ 'ಮಾರ್ಗ' ಆಗುತ್ತದೆ.

11. According to the advice of Nṛpatuṅga – the enduring lord of wrestlers (*nitya-malla-vallabha*) – to correct this sentence, one adverb should come with the verb and another, serving as an adjective, should come with the noun.

ಪರಿವಾರವಾರವನಿತಾ
ಪರಿವೃತನರಮನೆಯೊಳರಸನಂಬರತಳದೊಳ್
ವರತಾರಾಪರಿಗತಶಶ
ಧರನಂತೊಪ್ಪಿರೆ ವಿನೋದದಿಂ ಜನಿತಮುದಂ ೧೨

ಪರಿವಾರ ವಾರ ವನಿತಾ ಪರಿವೃತನ್ ಅರಮನೆಯೊಳ್ ಅರಸನ್ ಅಂಬರತಳದೊಳ್ ವರ ತಾರಾ ಪರಿಗತ ಶಶಧರನಂತೆ ಒಪ್ಪಿರೆ ವಿನೋದದಿನ್ ಜನಿತಮುದನ್

ಪರಿವಾರದ ವಾರಾಂಗನೆಯರಿಂದ ಅರಮನೆಯಲ್ಲಿ ಪರಿವೃತನಾಗಿದ್ದ ಅರಸನು ಆಕಾಶದಲ್ಲಿ ತಾರಾಗಣದಿಂದ ಪರಿವೃತನಾದ ಚಂದ್ರನಂತೆ ವಿನೋದದಿಂದ ಒಪ್ಪಿರಲು ಸಂತೋಷಪಡೆದನು.

ಇಲ್ಲಿ 'ವಿನೋದದಿನ್' ಎಂಬ ವಿಶೇಷಣ 'ಒಪ್ಪಿರೆ' ಎಂಬ ಕ್ರಿಯೆಯೊಡನೆ 'ಜನಿತಮುದನ್' ಎಂಬುದು 'ಅರಸನ್' ಎಂಬ ವಿಶೇಷ್ಯದೊಡನೆ ಅನ್ವಯಿಸುವುದರಿಂದ ದೋಷ ಪರಿಹಾರವಾಗಿದೆ.

12. [For example:] "The king who was surrounded by courtesans in the palace was like the moon

surrounded by the brightest stars. The king, who was happy with pleasure, shone joyfully.”

Here the correction is to make one of the adverbs the adjectival participle instead of using two adverbs.

ಇನ್ನಂತೆ ಮತ್ತೆ ಬೞಿ ಮಿಗೆ
ಮುನ್ನಿಲೆ ತಾಂ ಮೇಣ್ ವೆಱಂ ಗಡಂ ಗಳಮಾದಂ
ಕೆನ್ನಂ ನಿಲ್ಲೆಂದಿವನೆಂ
ದುಂ ನಿೞಿಸಲ್ಕಲ್ಲದೆಡೆಗಳೊಳ್ ಕಲ್ಲದಿರಿಂ ೧೩

ಇನ್, ಅಂತೆ, ಮತ್ತೆ, ಬೞಿ, ಮಿಗೆ, ಮುನ್, ನಿಲೆ, ತಾನ್, ಮೇಣ್, ಪೆಱಮ್, ಗಡಮ್, ಗಳಮ್, ಆದಮ್, ಕೆನ್ನಮ್, ನಿಲ್ ಎಂದು ಇವನ್ ಎಂದುಮ್ ನಿೞಿಸಲ್ಕೆ ಅಲ್ಲದ ಎಡೆಗಳೊಳ್ ಕಲ್ಲದಿರಿಮ್

‘ಇನ್’, ‘ಅಂತೆ’, ‘ಬೞಿ’, ‘ಮಿಗೆ’, ‘ಮುನ್’, ‘ನಿಲೆ’, ‘ತಾಂ’, ‘ಮೇಣ್’, ‘ಪೆಱಂ’, ‘ಗಡಂ’, ‘ಗಳಂ’, ‘ಆದಂ’, ‘ಕೆನ್ನಂ’, ‘ನಿಲ್’ ಎಂಬ ಇವನ್ನು ನಿಲ್ಲಿಸಬಾರದ ಸ್ಥಳಗಳಲ್ಲಿ ನಿಲ್ಲಿಸುವುದನ್ನು ಕಲಿಯದಿರಿ.

13. On should unlearn using these words in unwanted places: *‘in’* (furthermore, moreover), ‘*ante’* (likewise), ‘*baḻi’* (near), ‘*mige’* (much), ‘*muṁ’* (early, prior), ‘*nile’* (permanent, firm), ‘*tāṁ’* (he, reflexive pronoun), ‘*mēṇ’* (besides), ‘*peṟaṁ’* (other), ‘*gaḍaṁ’* (indeed, certainly), ‘*gaḷaṁ’* (?), ‘*ādaṁ’* (in particular), ‘*kennaṁ’* (excess), ‘*nil’* (?).

ನೃಪಕನ್ಯಕಾಸ್ವಯಂವರ
ವಿಪುಳಮಹೋತ್ಸವವಿವಾಹದೊಳ್ ಬಂದಿರ್ ಮು
ನ್ನಪವಾದವಾದುದೆನಗೇಂ
ಚಪಲಾಧ್ವಜನೋಕ್ತಿಯಿಂದಮಿಂ ಬಾರದಿರಿಂ ೧೪

ನೃಪ ಕನ್ಯಕಾ ಸ್ವಯಂವರ ವಿಪುಳ ಮಹೋತ್ಸವ ವಿವಾಹದೊಳ್ ಬಂದಿರ್ ಮುನ್ ಅಪವಾದ ಆದುದು ಎನಗೇನ್ ಚಪಲಾಧ್ವ ಜನ ಉಕ್ತಿಯಿಂದನ್ ಇನ್ ಬಾರದಿರಿಮ್

"ರಾಜಪುತ್ರಿಯ ಸ್ವಯಂವರ ವಿವಾಹ ಮಹೋತ್ಸವದಲ್ಲಿ ಮುಂಚೆ ಬಂದಿರಿ. ನನಗೆ ಅಪವಾದವೇನಾಯಿತು? ಹೀಗೆ ಚಪಲಚಿತ್ತರಾದ ದಾರಿಹೋಕರ ಮಾತಿನಿಂದ ಇನ್ನು ಬರಬೇಡಿ".

ಇಲ್ಲಿ 'ಮುನ್' ಮತ್ತು 'ಇನ್' ಎಂಬುವು ಅನಗತ್ಯವೆಂದು ಕೃತಿಕಾರನ ಅಭಿಪ್ರಾಯ.

14. "You came early to the great *svayaṁvara* (groom-choosing ceremony) of the princes. What is there to blame me? Furthermore, do not come here, believing the words of the fickle-minded men on the streets."

In the opinion of the poet, *mun* (early) and *in* (furthermore) are unnecessary.

ಘನಮೆರಡನೆಯದಱೊಳಮಾ
ಱನೆಯ ವಿಭಕ್ತಿಯೊಳಮೊಳವು ಗುರುಲಘುಭೇದಂ
ಅನಿಯತವೃತ್ತಿಯನಱಿದಿದ
ನನುಮಾರ್ಗಕ್ರಮದೆ ಸಯ್ತು ಮಾಡುಗೆ ನಿಪುಣಂ ೧೫

ಘನಮ್ ಎರಡನೆ ಅದರೊಳಮ್ ಆಱನೆಯ ವಿಭಕ್ತಿಯೊಳಮ್ ಒಳವು ಗುರು ಲಘು ಭೇದಮ್ ಅನಿಯತ ವೃತ್ತಿಯನ್ ಅಱಿದು ಇದನ್ ಅನುಮಾರ್ಗ ಕ್ರಮದೆ ಸಯ್ತು ಮಾಡುಗೆ ನಿಪುಣನ್

ಎರಡನೆಯ ಮತ್ತು ಆರನೆಯ ವಿಭಕ್ತಿಗಳಲ್ಲಿ ವಿಭಕ್ತಿ ಪ್ರತ್ಯಯಗಳು ದೀರ್ಘವಾಗಿಯೂ ಇರಬಹುದು, ಹ್ರಸ್ವವಾಗಿಯೂ ಇರಬಹುದು. ಇವೆರಡೂ ಅನಿಯತವಾಗಿದ್ದರೂ ಇದನ್ನು 'ಮಾರ್ಗ' ಕ್ರಮವನ್ನು ಅನುಸರಿಸಿ ನಿಪುಣನಾದವನು ಸರಿಯಾಗಿ ಬಳಸಲಿ.

15. The second and sixth-case suffixes can be metrically long or short. Understanding this, they

are optional and educated people should use them properly.

ಆದಿಸ್ವರಪದಮಂತದೊ
ಳಾದೆಡೆಯೊಳ್ ದೀರ್ಘಮಕ್ಕುಮೆರಡನೆಯ ವಿಭ
ಕ್ತ್ಯಾದಾನಪದಂ ದೀರ್ಘಂ
ಪಾದಾಂತದೊಳುಳಿದ ತಾಣದೊಳ್ ಸ್ವಚ್ಛಂದಂ ೧೬

ಆದಿಸ್ವರ ಪದಮ್ ಅಂತದೊಳ್ ಆದೆಡೆಯೊಳ್ ದೀರ್ಘಮ್ ಅಕ್ಕುಮ್ ಎರಡನೆಯ ವಿಭಕ್ತಿ ಆದಾನಪದಮ್ ದೀರ್ಘಮ್ ಪಾದಾಂತದೊಳ್ ಉಟಿದ ತಾಣದೊಳ್ ಸ್ವಚ್ಛಂದಮ್

ಎರಡನೆಯ ವಿಭಕ್ತಿಪ್ರತ್ಯಯಾಂತ ಪದದ ಮುಂದೆ ಆದಿಸ್ವರವಿರುವ ಪದ ಬಂದರೆ ಪಾದಾಂತ್ಯದಲ್ಲಿ ಮಾತ್ರ ಅದು ದೀರ್ಘವಾಗಬೇಕೆಂದು ನಿಯಮ. ಉಳಿದ ಸ್ಥಾನಗಳಲ್ಲಿ ದೀರ್ಘ ಅಥವಾ ಹ್ರಸ್ವಗಳಲ್ಲಿ ಯಾವುದಾದರೂ ಬರಬಹುದು.

16. If a word beginning with a vowel follows a word with a second-case suffix, the rule is that it should be metrically long only when it comes at the end of a metrical line. In other places, it is long optionally.

ನೃಪನನಭಿಮಾನಧನನನ
ನುಪಮನನತಿಶಯವಿಶಾಲಕೀರ್ತಿಧ್ವಜನಾ
ನುಪಚಿತಗುಣನಾನುಚಿತನ
ನಪೇತದೋಷನನುದಾರಚರಿತೋದಯನಂ ೧೭

ನೃಪನನ್ ಅಭಿಮಾನಧನನ್ ಅನುಪಮನನ್ ಅತಿಶಯ ವಿಶಾಲ ಕೀರ್ತಿಧ್ವಜನಾನ್ ಉಪಚಿತ ಗುಣನಾನ್ ಉಚಿತನನ್ ಅಪೇತ ದೋಷನನ್ ಉದಾರ ಚರಿತ ಉದಯನನ್

ಅಭಿಮಾನಧನನೂ ಅನುಪಮನೂ ಅತಿಶಯವಾದ ವಿಶಾಲಕೀರ್ತಿಯೇ ಧ್ವಜವಾಗಿರುವವನೂ ಮಹಾಗುಣಶಾಲಿಯೂ ಉಚಿತನೂ ದೋಷ ರಹಿತನೂ ಉದಾರಚರಿತನೂ ಆದ ಅರಸನನ್ನು,

17. "…him (in the second case), the king, a man with self respect, incomparable, one with a flag signifying great fame, a man of good qualities, proper, without defect, a man with the rising fame of compassion."

In the first half of the original Kannada verse, all the second-case suffixes are metrically short, except the one at the end of the metrical line (*kīrtidhvajanān*). In the second half, one suffix has a long vowel to indicate that it is optional in other places (*upacitaguṇanān*).

ನೃಪನಾನಭಿನುತಮನನಾ
ನುಪಮೇತರನಾನಪಾರಕೀರ್ತಿಧ್ವಜನಂ
ವಿಪುಲಗುಣಜ್ಞನನುಚಿತನ
ನಪಗತದೋಷನನುದಾರಚರಿತೋದಯನಂ ೧೮

ನೃಪನಾನ್ ಅಭಿನುತ ಮನನಾನ್ ಉಪಮೇತರನಾನ್ ಅಪಾರ ಕೀರ್ತಿಧ್ವಜನನ್ ವಿಪುಲ ಗುಣಜ್ಞನನ್ ಉಚಿತನನ್ ಅಪಗತ ದೋಷನನ್ ಉದಾರ ಚರಿತ ಉದಯನನ್

ಅಭಿನುತ ಮನಸ್ಸುಳ್ಳವನೂ ಉಪಮಾತೀತನೂ ಅಪಾರ ಕೀರ್ತಿಧ್ವಜನೂ ವಿಪುಲಗುಣಜ್ಞನೂ ಉಚಿತನೂ ದೋಷರಹಿತನೂ ಉದಾರ ಚರಿತನೂ ಆದ ಅರಸನನ್ನು,

ಇಲ್ಲಿ ಅರ್ಥ ಹಿಂದಿನ ಪದ್ಯದ್ದೇ ಆದರೂ 'ನೃಪನಾನ್, ಅಭಿನುತ–ಮನನಾನ್, ಉಪಮೇತರನಾನ್' ಎಂದಾಗ ದೀರ್ಘಾದೇಶವನ್ನು ನೋಡಬಹುದು.

18. "…him (in the second case), the king, a man with self-respect, incomparable, one with a flag signifying great fame, a man of good qualities, proper, without defect, a man with rising fame from being compassionate."

The same verse (17) is repeated with some of the second-case suffixes used with long vowels, indicating that they are optional.

ಎಂದಿಂತು ಪೇೞ್ದ ಮಾೞ್ಕೆಯೊ
ಳೊಂದುವುದುಮನೊಂದಿ ಬಾರದುದುಮಂ ಪೀನಂ
ಸಂದೆಯಮಿಲ್ಲದೆ ಸಲೆ ತಱಿ
ಸಂದೋಸರಿಸುವುದು ಕಾವ್ಯರಚನಾಕ್ರಮದೊಳ್ ೧೯

ಎಂದು ಇಂತು ಪೇೞ್ದ ಮಾೞ್ಕೆಯೊಳ್ ಒಂದುವುದುಮನ್ ಒಂದಿ ಬಾರದುದಮನ್ ಪೀನಮ್ ಸಂದೆಯಮ್ ಇಲ್ಲದೆ ಸಲೆ ತಱಿಸಂದು ಓಸರಿಸುವುದು ಕಾವ್ಯ ರಚನಾ ಕ್ರಮದೊಳ್

ಹೀಗೆ ಮೇಲೆ ಹೇಳಿದಂತೆ ಸರಿಹೊಂದುವಂತಹವು ಯಾವವು, ಸರಿಹೊಂದದವು ಯಾವವು ಎನ್ನುವುದನ್ನು ಸಂದೇಹವಿಲ್ಲದೆ ನಿಷ್ಕರ್ಷಿಸಿ ಬಿಡಬೇಕಾದುದನ್ನು ಕಾವ್ಯ ರಚನಾಕ್ರಮದಲ್ಲಿ ಬಿಡಬೇಕು.

19. By thinking about the instances that fit under the above-mentioned rule, heavy and light syllables should be used—or left out—when creating a poem.

ಪಲವುಮನೊಡಗೂಡಿರೆ ಸ
ಯ್ತುಲಸದೆ ಪೇೞ್ವೆಡೆಯೊಳಂ ಸ್ವಪಾದಾಂತದೊಳಂ
ಪಲವಾಱನೆಯ ವಿಭಕ್ತಿಯೊ
ಳಲಘೂಚ್ಚಾರಣೆ ಯಥೇಷ್ಟಮುೞಿದೆಡೆಗಳೊಳಂ ೨೦

ಪಲವುಮನ್ ಒಡಗೂಡಿರೆ ಸಯ್ತು ಅಲಸದೆ ಪೇೞ್ವೆಡೆಯೊಳಮ್ ಸ್ವಪಾದಾಂತದೊಳಮ್ ಪಲವು ಆಱನೆಯ ವಿಭಕ್ತಿಯೊಳ್ ಅಲಘು ಉಚ್ಚಾರಣೆ ಯಥೇಷ್ಟಮ್ ಉೞಿದ ಎಡೆಗಳೊಳಮ್

ಹಲವನ್ನು ಒಟ್ಟುಗೂಡಿಸಿ ಹೇಳುವೆಡೆಗಳಲ್ಲಿ, ಪಾದಾಂತ್ಯದಲ್ಲಿ ಷಷ್ಠೀವಿಭಕ್ತಿ ಪ್ರತ್ಯಯ ದೀರ್ಘವಾಗುತ್ತದೆ. ಉಳಿದೆಡೆಗಳಲ್ಲಿ ಅನಿಯತವಾಗಿ ಹ್ರಸ್ವವಾಗಿ ಅಥವಾ ದೀರ್ಘವಾಗಿರಬಹುದು.

20. In places where several words with the sixth-case suffix are used, and also at the end of a metrical line, the sixth-case suffix will be metrically long. In other places, it may be long or short.

ನೃಪನಾ ನೃಪನಂದನನಾ
ನೃಪವಧುವರ್ ನೆರೆದು ಸುಖದೊಳಿರೆ ಕೈಕೊಂಡ
ತ್ತಪರಿಮಿತರಾಗಮೆರ್ದೆಯಂ
ನೃಪಬಾಂಧವರಾ ಸುಮಿತ್ರರಾ ಪರಿಜನದಾ ೨೧

ನೃಪನಾ ನೃಪನಂದನನಾ ನೃಪವಧುವರ್ ನೆರೆದು ಸುಖದೊಳ್ ಇರೆ ಕೈಕೊಂಡತ್ತು ಅಪರಿಮಿತ ರಾಗಮ್ ಎರ್ದೆಯಮ್ ನೃಪಬಾಂಧವರಾ ಸುಮಿತ್ರರಾ ಪರಿಜನದಾ

"ನೃಪನ, ನೃಪನಂದನನ, ನೃಪವಧುಗಳು ನೆರೆದು ಸುಖವಾಗಿರುವಾಗ ನೃಪಬಾಂಧವರ, ಸುಮಿತ್ರರ, ಪರಿಜನದ ಅಪರಿಮಿತ ಪ್ರೀತಿ ಅವರ ಹೃದಯವನ್ನು ಆವರಿಸಿತು."

21. "As the wives of the king and the prince were happy and close to him, the hearts of relatives, friends, and followers of the king were filled with unlimited joy."

In the original Kannada verse, all the words in the sixth case have a long vowel (*nṛpanā, nṛpanandananā, nṛpabāndhavarā, sumitrarā, parijanadā*).

ನೃಪನ ನರಪಾಲತನಯನ
ನೃಪವಧುವರ್ ನೆರೆದು ಸುಖದಿನಿರೆ ಕೈಕೊಂಡ
ತ್ತಪರಿಮಿತರಾಗಮೆರ್ದೆಯಂ
ನೃಪತಿಸನಾಭಿಗಳ ಬಂಧುಜನದಾ ಕೆಳೆಯಾ ೨೨

ನೃಪನ ನರಪಾಲ ತನಯನ ನೃಪವಧುವರ್ ನೆರೆದು ಸುಖದಿನ್ ಇರೆ ಕೈಕೊಂಡತ್ತು ಅಪರಿಮಿತ ರಾಗಮ್ ಎರ್ದೆಯನ್ ನೃಪತಿ ಸನಾಭಿಗಳ ಬಂಧುಜನದಾ ಕೆಳೆಯಾ

"ನೃಪನ, ನರಪಾಲ ತನಯನ, ನೃಪವಧುಗಳು ನೆರೆದು ಸುಖವಾಗಿರುವಾಗ ನೃಪಬಾಂಧವರ, ಬಂಧು ಜನರ, ಗೆಳೆಯರ ಅಪರಿಮಿತ ಪ್ರೀತಿ ಅವರ ಹೃದಯವನ್ನು ಆವರಿಸಿತು."

ಇಲ್ಲಿ 'ನೃಪನ', 'ನರಪಾಲತನಯನ' ಎಂದಾಗ ಹ್ರಸ್ವಗಳು, 'ಬಂಧುಜನದಾ', 'ಕೆಳೆಯಾ' ಎಂದಾಗ ದೀರ್ಘಗಳು ಬಳಕೆಯಾಗಿವೆ. 'ಕೆಳೆಯಾ' ಪಾದಾಂತವಾದುದರಿಂದ ಗುರು ಕಡ್ಡಾಯ.

22. "As the wives of the king and the prince were happy and close to him, the hearts of brothers, relatives, and friends of the king were filled with unlimited joy."

The only difference between the previous verse and the present one is that the sixth-case has a short vowel, except at the end of the metrical line where a long vowel is mandatory.

ಸಂಬೋಧನೆ ದೀರ್ಘೋಕ್ತಿಯೊ
ಳಿಂಬಾಗಿರೆ ಬರ್ಕುಮದನೆ ಪಲವೆಡೆಗಳೊಳೆಂ
ದುಂ ಬಲ್ಲವರಿಡದಿರ್ಕಾ
ದಂ ಬಾಯಟಿದೂಳ್ವವೋಲ್ ಕರಂ ವಿರಸತರಂ ೨೩

ಸಂಬೋಧನೆ ದೀರ್ಘೋಕ್ತಿಯೊಳ್ ಇಂಬಾಗಿರೆ ಬರ್ಕುಮ್ ಅದನೆ ಪಲವೆಡೆಗಳೊಳ್ ಎಂದುಮ್ ಬಲ್ಲವರ್ ಇಡದಿರ್ಕೆ ಆದಮ್ ಬಾಯಟಿದು ಊಳ್ವವೋಲ್ ಕರಮ್ ವಿರಸತರಮ್

ಸಂಬೋಧನೆ ದೀರ್ಘವಾಗಿ ಬಂದಾಗ ಚೆನ್ನಾಗಿರುತ್ತದೆ. ಆದರೆ ತಿಳಿದವರು ಅದನ್ನೇ ಹಲವೆಡೆಗಳಲ್ಲಿ ಬಳಸಬಾರದು. ಹಾಗೆ ಮಾಡಿದರೆ ಗೋಳಿಟ್ಟು ಆರ್ತಧ್ವನಿಯಿಂದ ಕೂಗಿದಂತೆ ಅದು ತುಂಬ ವಿರಸವಾಗುವುದು.

23. Ideally, the vocative case takes a long vowel. But knowledgeable people should not always abide by

this usage. If they do, it will be unpleasant to the ear, like a shriek of pain.

ನೃಪತೀ ಪರೋಪಕಾರೀ
ವಿಪುಲಗುಣೀ ವಿಶದಶಶಧರಾಯತಕೀರ್ತೀ
ವ್ಯಪಗತಭಯಾ ದಯಾಲೂ
ರಿಪುವರ್ಗಮನಲೆದು ಗೆಲ್ವೆಯಾಗಾಹವದೊಳ್ ೨೪

ನೃಪತೀ ಪರೋಪಕಾರೀ ವಿಪುಲಗುಣೀ ವಿಶದ ಶಶಧರಾಯತ ಕೀರ್ತೀ ವ್ಯಪಗತಭಯಾ ದಯಾಲೂ ರಿಪುವರ್ಗಮನ್ ಅಲೆದು ಗೆಲ್ವೆಯಾಗು ಆಹವದೊಳ್

"ನೃಪತೀ! ಪರೋಪಕಾರೀ! ವಿಪುಳಗುಣೀ! ಸ್ವಚ್ಛಚಂದ್ರನಂತೆ ಧವಳಕೀರ್ತೀ! ವ್ಯಪಗತಭಯಾ! ದಯಾಲೂ! ನೀನು ರಿಪುವರ್ಗವನ್ನು ಬೆನ್ನಟ್ಟಿ ಗೆಲ್ಲುವವನಾಗು!"

ಇಲ್ಲಿ ಎಲ್ಲಾ ಸಂಬೋಧನೆಗಳೂ ದೀರ್ಘದಿಂದ ಕೂಡಿವೆ. ಹಲವೆಡೆಗಳಲ್ಲಿ ಬಳಸಿದಾಗ ಹಿತಕರವಾಗಿರುವುದಿಲ್ಲ ಎಂಬುದಕ್ಕೆ ಉದಾಹರಣೆ.

24. "Oh King! Oh Benefactor! Oh man of good character! Oh man having fame that has a moon-like clarity! Oh fearless person! Oh man of compassion! Defeat the enemy and be victorious!"

This is an example of using too many vocatives ending in long vowels (*nṛpatī, parōpakārī*, *vipulaguṇī etc.*).

ಅಱಿಪಿದವರುಂ ವಿಭೀತರು
ಮಱಲ್ದರುಂ ಸಲೆ ವಿಯೋಗದಿಂ ನಿಜಜನದಿಂ
ಕಱಿಯೆ ಪರಾರ್ಥಿಗಳುಂ ಬಾ
ಯಱಿದೊಳ್ಗಿಂತಿದನೆಯುಕ್ತಪುನರುಕ್ತಿಕಮಂ ೨೫

ಅಟಿಪಿದವರುಮ್ ವಿಭೀತರುಮ್ ಅಟಿಲ್ದರುಮ್ ಸಲೆವಿಯೋಗದಿನ್ ನಿಜಜನದಿನ್ ಕಟಿಯೆ ಪರಾರ್ಥಿಗಳುಮ್ ಬಾಯಟಿದು ಊಳ್ಗೆ ಇಂತು ಇದನೆ ಯುಕ್ತ ಪುನರುಕ್ತಿಮನ್

ನಾಶಮಾಡಿದವರೂ ಹೆದರಿದವರೂ ತಮ್ಮವರನ್ನು ಕಳೆದುಕೊಂಡ ಶೋಕತಪ್ತರೂ ಅರ್ಥಿಗಳೂ ಬಾಯಿಬಿಟ್ಟು ಒಂದು ಪದವನ್ನೇ ಪುನರುಕ್ತಿ ಮಾಡುತ್ತಾ ಕೂಗುವುದು ಸಮಂಜಸವೇ ಆಗುತ್ತದೆ.

25. These are the people who naturally repeat words: those who are desirous of destruction [e.g. Kill him! Kill him"], those who are afraid, those aggrieved because of separation from their family, and those desiring boons."

ಪುಲಿಪುಲಿ ಪರಿಪರಿ ಪೋಪೋ
ಗೆಲೆಯೆಲೆ ಪೆಱಪಿಂಗು ಪಿಂಗು ನಿಲ್‌ನಿಲ್ ಬಾ ಬಾ
ಬಲಿ ಮನಮನಂಜದಂಜದೆ
ತೊಲತೊಲಗೀ ಮೆಳೆಗೆ ಪುಲಿಯದೆಂಬುದು ಮಾರ್ಗಂ ೨೬

ಪುಲಿ ಪುಲಿ, ಪರಿಪರಿ, ಪೋಪೋಗು, ಎಲೆ ಎಲೆ, ಪೆಱಪಿಂಗು ಪಿಂಗು, ನಿಲ್ ನಿಲ್, ಬಾಬಾ, ಬಲಿ ಮನಮನ್ ಅಂಜದೆ ಅಂಜದೆ ತೊಲತೊಲಗು ಈ ಮೆಳೆಗೆ ಪುಲಿ ಅದು ಎಂಬುದು ಮಾರ್ಗಮ್

"ಹುಲಿ–ಹುಲಿ, ಓಡು–ಓಡು, ಹೋಗು–ಹೋಗು, ಎಲೆ–ಎಲೆ, ಹಿಮ್ಮೆಟ್ಟು–ಹಿಮ್ಮೆಟ್ಟು, ನಿಲ್ಲು–ನಿಲ್ಲು, ಬಾ–ಬಾ, ಮನಸ್ಸನ್ನು ಗಟ್ಟಿ ಮಾಡು, ಅಂಜದಿರು–ಅಂಜದಿರು, ತೊಲಗು–ತೊಲಗು, ಈ ಮೆಳೆಗೆ ಹುಲಿ" ಎಂದು ಈ ರೀತಿ ಹೇಳುವುದು ಸರಿಯಾದ ಮಾರ್ಗ.

26. Examples of repetition when "The tiger entered the bush": "Tiger, Tiger," "Move, Move," "Go, Go," "Hey you, Hey you," "Retreat, Retreat," "Stop, Stop," "Come, Come," "Be firm in your mind, in your mind," "Do not get frightened, frightened," "Go away, Go away."

ರೂಪಕದೊಳಂ ವಿಶೇಷಾ
ಳಾಪೋದ್ದೇಶದೊಳಮಲ್ಲದುೞಿದೆಡೆಗಳೊಳಂ
ಚಾಪಳಮತಿಗಳ್ ವಿರಸಸ
ಮೀಪಮನಿಡದರ್ಕೆ ಬಹುವಿಶೇಷಣಗಣಮಂ ೨೭

ರೂಪಕದೊಳಂ ವಿಶೇಷ ಆಳಾಪ ಉದ್ದೇಶದೊಳಮ್ ಅಲ್ಲದೆ ಉೞಿದೆಡೆಗಳೊಳಮ್ ಚಾಪಳಮತಿಗಳ್ ವಿರಸ ಸಮೀಪಮನ್ ಇಡದಿರ್ಕೆ ಬಹು ವಿಶೇಷಣ ಗಣಮನ್

ರೂಪಕಾಲಂಕಾರ ಮತ್ತು ವಿಶೇಷವಾಗಿ ಹೇಳುವ ಉದ್ದೇಶ ಇರುವ ಸ್ಥಳಗಳನ್ನು ಬಿಟ್ಟರೆ ಬೇರೆ ಸ್ಥಳಗಳಲ್ಲಿ ಚಪಲಚಿತ್ತರಾಗಿ ಬಹು ವಿಶೇಷಣಗಣವನ್ನು ವಿರಸವಾಗುವಂತೆ ಬಳಸಬಾರದು.

27. Except in places where a metaphor *(rūpaka)* is specially intended, multiple adjectives should not be used with an unsteady mind.

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ೨೮

ಸುಭಟರ್ಕಳ್ ಕವಿಗಳ್ ಸುಪ್ರಭುಗಳ್ ಚೆಲ್ವರ್ಕಳ್ ಅಭಿಜನರ್ಕಳ್ ಗುಣಿಗಳ್ ಅಭಿಮಾನಿಗಳ್ ಅತಿ ಉಗ್ರರ್ ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್

"ಈ ನಾಡಿನ ಜನ ಒಳ್ಳೆಯ ಯೋಧರು, ಕವಿಗಳು, ಒಳ್ಳೆಯ ಪ್ರಭುಗಳು, ಸುಂದರರು, ಶಿಷ್ಟರು, ಗುಣವಂತರು, ಅಭಿಮಾನಿಗಳು, ಅತ್ಯುಗ್ರರು, ಗಂಭೀರ ಚಿತ್ತರು ಮತ್ತು ವಿವೇಕಿಗಳು."

28. "People of this land are great warriors, poets, great kings, handsome, good, virtuous, full of self-respect, terrific, serious-minded, and wise."

ಅಂತಧಿಕವಿಶೇಷಣ ಗಣ
ಮಂ ತಡೆಯದೆ ಪೇಟಿಶ್ಕೊಡಂಕಚಾರಣೆಗಳೊಳಂ
ಸಂತಂ ಪೇೞ್ಗುೞಿದಾವೆಡೆ
ಯಂತರದೊಳಮಾಗದೆಂದನತಿಶಯಧವಳಂ ೨೯

ಅಂತು ಅಧಿಕ ವಿಶೇಷ ಗಣಮನ್ ತಡೆಯದೆ ಪೇಟಿಶ್ಕೊಡೆ ಅಂಕಚಾರಣೆಗಳೊಳಮ್ ಸಂತಮ್ ಪೇೞ್ಗೆ ಉೞಿದಾವೆಡೆ ಅಂತರದೊಳಮ್ ಆಗದು ಎಂದನ್ ಅತಿಶಯ ಧವಳನ್

ಹೀಗೆ ಅಧಿಕ ವಿಶೇಷಣಗಳನ್ನು ಸದ್ಗುಣವರ್ಣನೆಯ ಪ್ರಸಂಗವಿದ್ದಾಗ ಮಾತ್ರ ಬಳಸುವುದು ಸರಿ. ಉಳಿದೆಡೆಗಳಲ್ಲಿ ಹಾಗೆ ಹೇಳುವುದು ಸರಿಯಲ್ಲವೆಂದು ಅತಿಶಯಧವಳನಾದ ನೃಪತುಂಗನ ಮತ.

29. As in the above example, when listing praiseworthy qualities, many adjectives can be used. Elsewhere, they should not be used, according to the very bright (*atiśayadhavaḷa*) Nṛpatuṅga.

ಪ್ರಾಸವಿಚಾರ

Prāsa, A Special Feature in Kannada

ನುತ ಶಬ್ದಾಲಂಕಾರದೊ
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ
ಕೃತಕೃತ್ಯಮಲ್ಲವಲ್ಲಭ
ಮತದಿಂದದಱಾ ಪ್ರಪಂಚಮೀ ತೆಱದಿನಕ್ಕುಂ ೩೦

ನುತ ಶಬ್ದಾಲಂಕಾರದೊಳ್ ಅತಿಶಯಮ್ ಈ ಕನ್ನಡಕ್ಕೆ ಸತತಮ್ ಪ್ರಾಸಮ್ ಕೃತಕೃತ್ಯ ಮಲ್ಲ ವಲ್ಲಭ ಮತದಿಂದೆ ಅದಱಾ ಪ್ರಪಂಚಮ್ ಈ ತೆಱದಿನ್ ಅಕ್ಕುಮ್

ಪ್ರಖ್ಯಾತವಾದ ಶಬ್ದಾಲಂಕಾರಗಳಲ್ಲಿ ಪ್ರಾಸ ಎಂಬುದು ಕನ್ನಡಕ್ಕೆ ಯಾವಾಗಲೂ ಅತಿಶಯವಾದುದು. ನೃಪತುಂಗನ ಮತದಂತೆ ಅದರ ವಿವರಗಳು ಹೀಗಿವೆ.

30. The praiseworthy *śabdālaṅkāra* known as *prāsa* (rhyme or alliteration) has always been a special feature in Kannada. In the opinion of Nṛpatuṅga, the best of accomplished wrestlers (*kṛtakṛtya-malla-vallabha*), *prāsas* are of the following types.

Prāsa is a special feature in Kannada prosody (as also in Telugu). It is not just rhyme but has special characteristics. Generally, the second syllable of the first metrical line (with the same consonant, but potentially different vowels) is repeated in all the lines of the verse.

ವಿನುತಪ್ರಾಸಂ ಶಾಂತೋ
ಪನತಂ ವರ್ಗೋದಿತಂ ಸಮೀಪಗತಂ ಮ
ತ್ತನುಗತಮಂತಗತಂ ಸಂ
ಜನಿತವಿಭೇದೋಕ್ತಿಯಿಂದಮಿಂತಾಱು ತೆಱಂ ೩೧

ವಿನುತ ಪ್ರಾಸಮ್, ಶಾಂತ ಉಪನತಮ್, ವರ್ಗ ಉದಿತಮ್, ಸಮೀಪಗತಮ್, ಮತ್ತೆ ಅನುಗತಮ್, ಅಂತಗತಮ್, ಸಂಜನಿತ ವಿಭೇದ ಉಕ್ತಿಯಿಂದನ್ ಇಂತು ಆಱು ತೆಱಮ್

'ವಿನುತಪ್ರಾಸ', 'ಶಾಂತಪ್ರಾಸ', 'ವರ್ಗಪ್ರಾಸ', 'ಸಮೀಪಪ್ರಾಸ', 'ಅನು(ಗತ)ಪ್ರಾಸ', 'ಅಂತ(ಗತ)ಪ್ರಾಸ' ಎಂಬ ಭೇದಗಳಿಂದ ಪ್ರಾಸ ಆರುಬಗೆಯಾಗಿವೆ.

31. The six types of *prāsa* are: *vinuta-prāsa, śānta-prāsa, varga-prāsa, samīpa-prāsa, anugata-prāsa, antagata-prāsa*.

ಪಾದದೊಳೆರಡನೆಯಕ್ಕರ
ಮಾದರದಿಂದಾದುದಾವುದದನಱಿದನಿತುಂ
ಪಾದದೊಳಿಡುವುದದಕ್ಕುಂ
ಭೇದೋಕ್ತಿ ಕ್ರಮವಿಚಾರಿತೋರುಪ್ರಾಸಂ ೩೨

ಪಾದದೊಳ್ ಎರಡನೆ ಅಕ್ಕರಮ್ ಆದರದಿಂದ ಆದುದು ಆವುದು ಅದನ್ ಅಱಿದು ಅನಿತುಮ್ ಪಾದದೊಳ್ ಇಡುವುದು ಅದು ಅಕ್ಕುಮ್ ಭೇದ ಉಕ್ತಿ ಕ್ರಮ ವಿಚಾರಿತ ಉರು ಪ್ರಾಸಮ್ ಪಾದದಲ್ಲಿ ಎರಡನೆಯ ಅಕ್ಷರ ಯಾವುದೆಂಬುದನ್ನು ಸರಿಯಾಗಿ ತಿಳಿದು ಅದನ್ನೇ ಎಲ್ಲ ಪಾದಗಳಲ್ಲಿ ಹಾಗೆಯೇ ಇರಿಸುವುದು ವಿಭಾಗಕ್ರಮದಲ್ಲಿ ಮೊದಲನೆಯದಾದ ಶ್ರೇಷ್ಠ (ವಿನುತ) ಪ್ರಾಸ.

32. Know the first among the *prāsas* (*vinuta-prāsa*) to be as follows: the second syllable in a metrical line is used in all the metrical lines.

ಮನೆಗಿಂದು ಬರ್ಕುಮೆಂದಾ
ನನೇಕತರವಸ್ತುವಾಹನಾದಿಯನೊಸೆದಿಂ
ಬಿದಿನೆ ಪಸರಿಸಿ ಕುಡಲಿರ್ದೆಂ
ಜನೇಶನಿಂತೇಕೆ ಕಱಿದು ಪೋದನೊ ಪೇೞಿಂ ೩೩

ಮನೆಗೆ ಇಂದು ಬರ್ಕುಮ್ ಎಂದು ಆನ್ ಅನೇಕತರ ವಸ್ತು ವಾಹನಾದಿಯನ್ ಒಸೆದು ಇಂಬಿನೆ ಪಸರಿಸಿ ಕುಡಲಿರ್ದೆಮ್ ಜನೇಶನ್ ಇಂತು ಏಕೆ ಕಱಿದು ಪೋದನೊ ಪೇೞಿಮ್

"ರಾಜನು ಇಂದು ಬರುವನು, ನಾನು ಅನೇಕ ವಿಧವಾದ ವಸ್ತುವಾಹನಾದಿಗಳನ್ನು ಅವನಿಗೆ ಪ್ರೀತಿಯಿಂದ ಕೊಡುವೆನು ಎಂದುಕೊಂಡೆ. ಅವನು ಇಂದೇಕೆ ದೂರವಾದನೆಂಬುದನ್ನು ಹೇಳಿರಿ."

33. "I thought he would visit my house today. I wanted to present him with so many things, and vehicles and other thnhings. Tell me why he died today."

ಎಂಬುದು ವಿನುತಪ್ರಾಸಂ
ಸಂಬಂಧಾಕ್ಷರದೊಳೆಲ್ಲ ಮಾತ್ರೆಗಳುಂ ತ
ಳ್ತಿಂಬಾಗಿ ಬೆರಸಿ ಶೋಭಾ
ಡಂಬರಮಂ ಪಡೆಗುಮುಚಿತಕಾವ್ಯೋಕ್ತಿಗಳೊಳ್ ೩೪

ಎಂಬುದು ವಿನುತ ಪ್ರಾಸಮ್ ಸಂಬಂಧ ಅಕ್ಷರದೊಳೆಲ್ಲ ಮಾತ್ರೆಗಳುಮ್ ತಳ್ತು ಇಂಬಾಗಿ ಬೆರಸಿ ಶೋಭಾಡಂಬರಮನ್ ಪಡೆಗುಮ್ ಉಚಿತ ಕಾವ್ಯ ಉಕ್ತಿಗಳೊಳ್

ಉಕ್ತಿ ಹೇಳಿದರೆ ಅದು ವಿನುತಪ್ರಾಸ. ಇಲ್ಲಿ ಸಮಾನಾಕ್ಷರದ ಎಲ್ಲ ಮಾತ್ರೆಗಳೂ ಒಂದೇ ವಿಧವಾಗಿ ಸೇರಿಕೊಂಡು ಒಳ್ಳೆಯ ಕಾವ್ಯ ಪ್ರಯೋಗದಲ್ಲಿ ಶೋಭಾತಿಶಯವನ್ನು ಪಡೆಯುತ್ತವೆ.

34. The Kannada verse is an example of the general *prāsa* (*vinuta-prāsa*) where the same second syllable is used in all metrical lines of the verse (*manegindu*;*anēka*;(*iṁ)bene pasarisi*; *janēśa*).This is *vinuta-prāsa.* Here, all the *mātras* (morae; metrical instants) in the related syllables mix beautifully to produce loveliness in appropriately crafted poetic expressions.

Mātrā is the time taken to utter a short vowel.

ಬೆರಸಿರೆ ಮುಂ ಸಂಯೋಗಾ
ಕ್ಷರಂಗಳೇಕಸ್ವರಂಗಳಿಂ ಸುಪ್ರಾಸಂ
ನೆರೆದು ವಿಪರ್ಯಾಸಕ್ರಮ
ಮಿರೆ ಸತತಂ ಶಾಂತಪೂರ್ವಮಕ್ಕುಂ ಪ್ರಾಸಂ ೩೫

ಬೆರಸಿರೆ ಮುನ್ ಸಂಯೋಗ ಅಕ್ಷರಂಗಳ್ ಏಕಸ್ವರಂಗಳಿನ್ ಸುಪ್ರಾಸಮ್ ನೆರೆದು ವಿಪರ್ಯಾಸ ಕ್ರಮಮ್ ಇರೆ ಸತತಮ್ ಶಾಂತ ಪೂರ್ವಮ್ ಅಕ್ಕುಮ್ ಪ್ರಾಸಮ್

ಪ್ರಾಸಸ್ಥಾನದಲ್ಲಿ ಸಮಾನವಾದ ಸ್ವರದಿಂದ ಕೂಡಿದ ಸಂಯುಕ್ತಾಕ್ಷರಗಳು ಇದ್ದರೆ ಅದು ಸುಪ್ರಾಸ. ವಿಪರ್ಯಾಸ ಕ್ರಮ ಇರುವ ಪ್ರಾಸವೇ ಶಾಂತಪ್ರಾಸ.

35. If the same vowel comes in a consonant cluster, it is a good *prāsa.* If there is scope for a different cluster to also occur, it is called *śānta-prāsa.*

ಪತ್ತಿ ಪ್ರಮಾದಫಲಕಮು
ನತ್ಯುಗ್ರಗ್ರಾಹನಿವಹಸಂಕ್ಷೋಭಿತದೊಳ್
ಮತ್ತೀ ರತ್ನಾಕರದೊಳ್
ಪುತ್ರಿಕೆಯೆನೆ ಬಟ್ದಳಿಂತು ಬಾಝ್ವುದೆ ಚೋದ್ಯಂ ೩೬

ಪತ್ತಿ ಪ್ರಮಾದಫಲಕಮನ್ ಅತಿ ಉಗ್ರಗ್ರಾಹನಿವಹ ಸಂಕ್ಷೋಭಿತದೊಳ್ ಮತ್ತೆ ಈ ರತ್ನಾಕರದೊಳ್ ಪುತ್ರಿಕೆಯೆನೆ ಬಟ್ದಳ್ ಇಂತು ಬಾಝ್ವುದೆ ಚೋದ್ಯಂ

"ಪ್ರಮಾದ ಫಲಕವನ್ನೇರಿ ಭಯಂಕರವಾದ ಮೊಸಳೆಗಳ ಸಮೂಹದಿಂದ ಉಲ್ಲೋಲ ಕಲ್ಲೋಲವಾದ ಈ ಸಾಗರದಲ್ಲಿ ಬೊಂಬೆಯಂತೆ ಬದುಕಿ ಬಂದಿರುವುದೇ ಆಶ್ಚರ್ಯ."

ಈ ಪದ್ಯದ ಪ್ರಾಸಸ್ಥಾನದಲ್ಲಿ ಇರುವ ಸಂಯುಕ್ತಾಕ್ಷರಗಳಲ್ಲಿ ಮೊದಲನೆಯ ವ್ಯಂಜನ ಒಂದೇ ಆಗಿದ್ದರೂ ಎರಡನೆಯ ವ್ಯಂಜನದಲ್ಲಿ ವ್ಯತ್ಯಾಸವಿದೆ.

36. "Ascending a wooden plank obtained unexpectedly, the young girl, like a doll, somehow escaped the group of crocodiles in the ocean and remained alive. It is a wonder!"

Here, the first and third lines of the verse have the same consonantal cluster with the same vowel (*pattipramāda; mattī* ratnākaradoḷ). The second and fourth lines have different consonants and vowels (*atyugra; putrikeyene*).

ಶಾಂತಪ್ರಾಸದ ಭೇದಮು
ದಿಂತಕ್ಕುಂ ವರ್ಗದಕ್ಕರಂಗಳ್ ನಾಲ್ಕುಂ
ಸಂತಮಿರೆ ಪೇಟ್ದ ತಾಣದೊ
ಳಂತಕ್ಕುಂ ಪ್ರಾಕ್ತನೋಕ್ತವರ್ಗಪ್ರಾಸಂ ೩೭

ಶಾಂತ ಪ್ರಾಸದ ಭೇದಮ್ ಅದು ಇಂತು ಅಕ್ಕುಮ್ ವರ್ಗದ ಅಕ್ಕರಂಗಳ್ ನಾಲ್ಕುಮ್ ಸಂತಮಿರೆ ಪೇಟ್ಟ ತಾಣದೊಳ್ ಅಂತು ಅಕ್ಕುಮ್ ಪ್ರಾಕ್ತನ ಉಕ್ತ ವರ್ಗ ಪ್ರಾಸಮ್

ಶಾಂತ ಪ್ರಾಸವೆಂಬ ಪ್ರಭೇದ ಹೀಗಿರುತ್ತದೆ. ವರ್ಗಾಕ್ಷರಗಳ (ಕ–ಚ–ಟ–ತ–ಪ) ಮೊದಲ ನಾಲ್ಕು ಅಕ್ಷರಗಳು (ಕ–ಖ–ಗ–ಘ ಇತ್ಯಾದಿ) ಅದೇ ಕ್ರಮದಲ್ಲಿ ಪ್ರಾಸಸ್ಥಾನದಲ್ಲಿ ಬಂದರೆ ಅದು ವರ್ಗಪ್ರಾಸ.

37. This is *śānta-prāsa.* If the first four letters of each category of stops (*ka, kha, ga, gha)* come in that order as *prāsa* syllables (*prāsākṣara*), it is called *varga-prāsa (varga*=group or category of syllables in a stop series).

ಸಕಲಜನವಿನುತನಂ ಶತ
ಮಖಸದೃಶವಿಶಾಲವಿವಿಧವಿಭವೋದಯನಂ
ಪ್ರಗತಗುಣಗಣನನರಿಬಲ
ವಿಘಟನನಂ ಕಂಡನಣುವನಾ ರಾಘವನಂ ೩೮

ಸಕಲ ಜನ ವಿನುತನನ್ ಶತಮಖ ಸದೃಶ ವಿಶಾಲ ವಿವಿಧ ವಿಭವ ಉದಯನನ್ ಪ್ರಗತ ಗುಣಗಣನನ್ ಅರಿಬಲ ವಿಘಟನನ್ ಕಂಡನ್ ಅಣುವನ್ ಆ ರಾಘವನನ್

ಎಲ್ಲ ಜನರ ಸ್ತುತಿಯನ್ನು ಪಡೆದವನೂ ಇಂದ್ರನಿಗೆ ಸಮಾನವಾದ ವೈಭವವಿರುವವನೂ ಅಧಿಕ ಗುಣಶಾಲಿಯೂ ಅರಿಬಲಮರ್ದನನೂ ಆದ ರಾಘವನನ್ನು ಅಣುವನು (ಹನುಮಂತನು) ಕಂಡನು.

ಈ ಪದ್ಯದ ಪ್ರಾಸಸ್ಥಾನದಲ್ಲಿ 'ಸಕಲ', 'ಮಖ', 'ಪ್ರಗತ', 'ವಿಘಟನನನ್' ಎಂಬ ಪದಗಳಲ್ಲಿ ಪ್ರಾಸಸ್ಥಾನದಲ್ಲಿ ಕ–ಖ–ಗ–ಘಗಳು ಬಂದಿರುವುದರಿಂದ ಇದು ವರ್ಗಪ್ರಾಸ.

38. Aṇuvan (Hanumanta, the monkey god) saw Rāghava (Rāma), one who is praised by all people, and one whose glory is like that of Lord Indra (*śata-makha*), the one who performed one

hundred penances, is virtuous, and who defeats enemies.

The example given by Śrīvijaya contains the first four letters of the *ka*-varga stop series (*sakalajana;* (*śata*)*makhasadṛśa; pragataguṇa; vighaṭanaṁ*).

ಇದು ದಲ್ ವರ್ಗಪ್ರಾಸ
ಕ್ಕುದಾಹೃತಂ ಕುಱಿತು ಶಷಸವರ್ಣತ್ರಯಮುಂ
ವಿದಿತಪ್ರಾಸವಿವಿಕ್ತಾ
ಸ್ಪದದೊಳ್ ನಿಲೆ ಪೇೞ್ದೊಡದು ಸಮೀಪಪ್ರಾಸಂ ೩೯

ಇದು ದಲ್ ವರ್ಗಪ್ರಾಸಕ್ಕೆ ಉದಾಹೃತಮ್ ಕುಱಿತು ಶ–ಷ–ಸ ವರ್ಣ ತ್ರಯಮುಮ್ ವಿದಿತ ಪ್ರಾಸ ವಿವಿಕ್ತ ಆಸ್ಪದದೊಳ್ ನಿಲೆ ಪೇೞ್ದೊಡೆ ಅದು ಸಮೀಪ ಪ್ರಾಸಮ್

ಇದು ವರ್ಗಪ್ರಾಸಕ್ಕೆ ಉದಾಹರಣೆ. ಉದ್ದೇಶಪೂರ್ವಕವಾಗಿ ಶ–ಷ–ಸ ಎಂಬ ಅಕ್ಷರಗಳನ್ನು ಪ್ರಾಸಸ್ಥಾನದಲ್ಲಿರಿಸಿ ಹೇಳಿದರೆ ಅದು ಸಮೀಪ ಪ್ರಾಸ.

ಊಷ್ಮಗಳಲ್ಲಿ ಶ–ಷ–ಸ ಎಂಬ ಮೂರಕ್ಷರಗಳು ಧ್ವನಿ ಸಂಬಂಧ ಇರುವಂತಹವು. ಸಮೀಪಧ್ವನಿಗಳಾದ ಈ ಮೂರನ್ನು ಪ್ರಾಸದಲ್ಲಿ ಬಳಸಬಹುದೆಂದು ಈ ಲಕ್ಷಣ ಹೇಳುತ್ತದೆ.

39. This is an example of *varga- prāsa.* If the letters *śa, ṣa,* and *sa* are used in the prescribed place, it is called *samīpa-prāsa* (*prāsa* of nearness).

ಶಶಧರಬಿಂಬಾನನೆಯುಂ
ಝಷಕೇತನಕೇತನಾಭತನುತನುವಂ ತಾಂ
ಬಿಸವಿಶದವರ್ಣೆಯುಂ ಕಂ
ಡೊಸೆದಂ ಬನದೊಳಗೆ ಜನಕತನಯಳನಣುವಂ ೪೦

ಶಶಧರ ಬಿಂಬ ಆನನೆಯನ್ ಝಷಕೇತನ ಕೇತನಾಭ ತನು ತನುವನ್ ತಾನ್ ಬಿಸ ವಿಶದ ವರ್ಣೆಯನ್ ಕಂಡು ಒಸೆದನ್ ಬನದೊಳಗೆ ಜನಕ ತನಯಳನ್ ಅಣುವನ್

ಚಂದ್ರಬಿಂಬದಂತಹ ಮುಖವುಳ್ಳವಳು, ಮೀನಧ್ವಜನಾದ ಮನ್ಮಥನ ಧ್ವಜದ ಮೀನಿನಂತೆ ಕೃಶವಾದ ದೇಹವುಳ್ಳವಳು, ತಾವರೆಯೆಳೆಯಂತೆ ಸ್ವಚ್ಛವರ್ಣದವಳು ಆದ ಜಾನಕಿಯನ್ನು ವನದಲ್ಲಿ ಕಂಡು ಹನುಮಂತನು ಹಿಗ್ಗಿದನು.

ಇಲ್ಲಿ 'ಶಶಧರ', 'ಝಷಕೇತನ', 'ಬಿಸವಿಶದ', 'ಒಸೆದನ್' ಎಂಬಲ್ಲಿ ಶ–ಷ–ಸ ಗಳನ್ನು ಪ್ರಾಸ ಸ್ಥಾನದಲ್ಲಿ ಬಳಸಲಾಗಿದೆ.

40. "Aṇuvan was happy to see Sītā, who is moon-faced, has a slim body like the fish in the flag of the god of love, and who has a clear complexion."

In the original stanza, the *prāsa* is constituted by the syllables *śa, ṣa,* and *sa* (*śaśadhara; jhaṣakētana; bisaviśada-varṇe).*

ಎಂದಿಂತು ಸಮೀಪಪ್ರಾ
ಸಂ ದರ್ಶಿತಭೇದಮಾಯ್ತನುಪ್ರಾಸಮು ಮಾ
ಸಂದಿಸಿದೆಣೆಯಕ್ಕರಮೊಂ
ದೊಂದಱೊಳಳವಡಿಸಿ ಬಂದೊಡನುಗತಮಕ್ಕುಂ ೪೧

ಎಂದು ಇಂತು ಸಮೀಪ ಪ್ರಾಸಮ್ ದರ್ಶಿತ ಭೇದಮ್ ಆಯ್ತು ಅನುಪ್ರಾಸಮುಮ್ ಆ ಸಂದಿಸಿದ ಎಣೆಯಕ್ಕರಮ್ ಒಂದೊಂದಱೊಳ್ ಅಳವಡಿಸಿ ಬಂದೊಡೆ ಅನುಗತಮ್ ಅಕ್ಕುಮ್

ಹೀಗೆ ಸಮೀಪ ಪ್ರಾಸವನ್ನು ನೋಡಲಾಯಿತು. ಸಮಾನಾಕ್ಷರದ ಜೋಡಿಯನ್ನು ಪದವೊಂದರಲ್ಲಿ ಪೋಣಿಸಿಟ್ಟಂತೆ ಕೂಡಿಸಿ ಅಳವಡಿಸಿದರೆ ಅದು ಅನುಗತ ಅಥವಾ ಅನುಪ್ರಾಸ ಆಗುತ್ತದೆ.

41. This is an example of *śamīpa-prāsa.* If a couple of letters in a word is used repeatedly, it becomes *anu-prāsa.*

ಜನವಿನುತನನಘನನುಪಮ
ನನುನಯಪರನರಸನಿನಿಸು ನೆನೆನೆನೆದು ಮನೋ
ಜನಿತಮುದನನಿಲತನಯನ
ನನನೃತವಚನಪ್ರಪಂಚನಂತಿರೆ ನುಡಿದಂ ೪೨

ಜನವಿನುತನ್ ಅನಘನ್ ಅನುಪಮನ್ ಅನುನಯಪರನ್ ಅರಸನ್ ಇನಿಸು ನೆನೆನೆನೆದು ಮನೋಜನಿತ ಮುದನ್ ಅನಿಲತನಯನನ್ ಅನನೃತ ವಚನ ಪ್ರಪಂಚನ್ ಅಂತು ಇರೆ ನುಡಿದನ್

ಜನವಿನುತನು, ಅನಘನು, ಅನುಪಮನು, ಅನುನಯಪರನು, ಸತ್ಯವಚನನು ಆದ ಅರಸನು (ರಾಮನು) ಮನಸ್ಸಿನಲ್ಲಿ ಸಂತೋಷದಿಂದ ನೆನೆನೆನೆದು ಹನುಮಂತನಿಗೆ ಹೀಗೆಂದನು.

ಇಲ್ಲಿ 'ನ' ಅಕ್ಷರವನ್ನು ಮತ್ತೆ ಮತ್ತೆ ಬಳಸಿರುವುದರಿಂದ ಅನುಪ್ರಾಸ.

42. "Praised by the people, sinless, incomparable, and approachable, the truthful King (Rāma) spoke to (Hanumanta) the son of the wind, with joy.

This is an example of *anu-prāsa*, as the syllable *'na'* is repeated again and again (*anaghananupamananunaya).*

ಇಂತಿದನುಪ್ರಾಸಂ ಪಾ
ದಾಂತದೊಳೊಂದಾವುದಾನುಮಿಟ್ಟಕ್ಕರಮಂ
ಮುಂತಣ ಪಾದಾಂತಂಗಳೊ
ಳಂ ತಡೆಯದೆ ಪೇೞ್ದೊಡಂತದಂತಪ್ರಾಸಂ ೪೩

ಇಂತು ಇದು ಅನುಪ್ರಾಸಮ್ ಪಾದಾಂತದೊಳ್ ಒಂದು ಆವುದಾನುಮ್ ಇಟ್ಟ ಅಕ್ಕರಮನ್ ಮುಂತಣ ಪಾದಾಂತಂಗಳೊಳಮ್ ತಡೆಯದೆ ಪೇೞ್ದೊಡೆ ಅಂತು ಅದು ಅಂತಪ್ರಾಸಮ್

ಹೀಗೆ ಇದು ಅನುಪ್ರಾಸ. ಪಾದಾಂತದಲ್ಲಿ ಇಟ್ಟ ಅಕ್ಷರವನ್ನು ಮುಂದಿನ ಪಾದಾಂತಗಳಲ್ಲಿ ತಡೆಯದೆ ಹೇಳಿದರೆ ಅದು ಅಂತಪ್ರಾಸ.

43. This, therefore, is an example of *anu-prāsa*. If a syllable is used at the end of all the metrical lines, it is called *antya-prāsa.*

ಅತಿವಿಶದಯಶೋವೃತ್ತಂ
ನತಸಕಳಾರಾತಿಜನವಿತಾನಂ ಮತ್ತಂ
ವಿತತಶ್ರೀಸಂಪತ್ತಂ
ಶತಮಖಸದೃಶಾನುಭಾವನೊಲವಿಂ ಪೆತ್ತಂ ೪೪

ಅತಿ ವಿಶದ ಯಶೋವೃತ್ತನ್ ನತ ಸಕಳಾರಾತಿ ಜನವಿತಾನನ್ ಮತ್ತನ್ ವಿತತ ಶ್ರೀಸಂಪತ್ತನ್ ಶತಮಖ ಸದೃಶ ಅನುಭಾವನ್ ಒಲವಿನ್ ಪೆತ್ತನ್

ಅತಿಸ್ವಚ್ಛವಾದ ಯಶಶ್ಚರಿತ್ರನು, ಸಕಲ ಅರಿಸಮೂಹವನ್ನೂ ವಶಮಾಡಿಕೊಂಡು ಗರ್ವಿತನಾದವನು, ವಿಪುಲ ಸಂಪದ್ಭರಿತನು, ಇಂದ್ರನಿಗೆ ಸಮಾನವಾದ ಪ್ರಭಾವವುಳ್ಳವನು ಆದ ಆತನು ಒಲವನ್ನು ತಳೆದನು.

'ಯಶೋವೃತ್ತಂ', 'ವಿತಾನಂ ಮತ್ತಂ', 'ಶ್ರೀಸಂಪತ್ತಂ', 'ಒಲವಿಂ ಪೆತ್ತಂ' ಎಂಬ ಪದಗಳು ಅಂತಪ್ರಾಸಕ್ಕೆ ಉದಾಹರಣೆಯಾಗಿವೆ.

44. "The man with great fame who makes enemies prostrate, is prosperous and comparable to the lord of gods (Indra), obtained love."

The syllable *'ttaṁ'* is repeated at the end of each metrical line to render it an *antya-prāsa (yaśōvṛttaṁ; janavitānaṁ mattaṁ; śrīsaṁpattaṁ; olavaṁ pettaṁ).*

ಪ್ರಾಸಾನುಪ್ರಾಸಾಂತ
ಪ್ರಾಸಂಗಳ್ ಮೂಱುಮತಿಶಯಂಗಳ್ ಪ್ರಾಸಾ
ಭಾಸಂಗಳುಱಿದ ಮೂಱುಂ
ಭಾಸುರ ನೃಪತುಂಗದೇವವಿದಿತಕ್ರಮದಿಂ ೪೫

ಪ್ರಾಸ ಅನುಪ್ರಾಸ ಅಂತಪ್ರಾಸಂಗಳ್ ಮೂಱುಮ್ ಅತಿಶಯಂಗಳ್ ಪ್ರಾಸ ಆಭಾಸಂಗಳ್ ಉಱಿದ ಮೂಱುಂ ಭಾಸುರ ನೃಪತುಂಗದೇವ ವಿದಿತ ಕ್ರಮದಿನ್

ಪ್ರಾಸ (ವಿನುತಪ್ರಾಸ), ಅನುಪ್ರಾಸ, ಅಂತ್ಯಪ್ರಾಸ ಎಂಬ ಮೂರೂ ಅತಿಶಯವಾದುವು. ಉಳಿದ ಮೂರು(ಶಾಂತಪ್ರಾಸ, ವರ್ಗಪ್ರಾಸ, ಸಮೀಪ ಪ್ರಾಸ) ನೃಪತುಂಗದೇವವಿಹಿತ ಮಾರ್ಗದ ಪ್ರಕಾರ ಪ್ರಾಸಾಭಾಸಗಳು.

45. ***Prāsa (vinuta-prāsa), anu-prāsa*** **and** ***anta-prāsa*** **are significant in Kannada. According to the opinion of the illustrious Nṛpatuṅgadēva, the other three are** ***prāsābhāsas*** **(apparent** ***prāsas*****).**

ಮಾರ್ಗಗತಿವಿಚಾರ

The Ways of Poetic Style (*mārga-gati)*

ಗೀತಿಕೆ ಅಱಿದು ಪೀನಂ ಮಾರ್ಗಗತಿಯಂ
ತಱಿಸಲಾಗದಾರ್ಗಂ ಬಹುವಿಕಲ್ಪದೊಳ್
ಕುಱಿತು ಪೂರ್ವಶಾಸ್ತ್ರಪದವಿಧಿಯಂ
ತೆಱೆದಿರೆ ಪೇೞ್ವೆನಿನಿಸಂ ಕನ್ನಡದೊಳ್ ೪೬

ಅಱಿದು ಪೀನಮ್ ಮಾರ್ಗಗತಿಯನ್ ತಱಿಸಲ್ ಆಗದು ಆರ್ಗಮ್. ಬಹು ವಿಕಲ್ಪದೊಳ್ ಕುಱಿತು ಪೂರ್ವಶಾಸ್ತ್ರ ಪದ ವಿಧಿಯನ್ ತೆಱೆದಿರೆ ಪೇೞ್ವೆನ್ ಇನಿಸಮ್ ಕನ್ನಡದೊಳ್

ಅಧಿಕವಾಗಿರುವ (ಕಾವ್ಯ) ಮಾರ್ಗಗತಿಯನ್ನು ನಿಶ್ಚಯಿಸಲು ಯಾರಿಗೂ ಸಾಧ್ಯವಿಲ್ಲ. ಪೂರ್ವ ಶಾಸ್ತ್ರಲಕ್ಷಣದ ರೀತಿ ಅನ್ವಯಿಸುವಂತೆ ಸ್ವಲ್ಪವನ್ನು ಮಾತ್ರ ಹೇಳುತ್ತೇನೆ.

46. It is difficult to speak to the multiple "ways" of poetic style. Following the early treatises, however, I will say something about them with respect to Kannada.

ಕರಚರಣಶರೀರಶಿರೋ
ದರವದನಾದ್ಯವಯವಂಗಳಿವು ತಂತಮ್ಮೊಳ್

ದೊರೆಕೊಂಡೆಡೆಗಳೊಳೊಳವಾ
ಗಿರೆಯುಂ ನರರೊರ್ವರೊರ್ವರಂ ಪೋಲದ ವೋಲ್ ೪೭

ವರ ಶಬ್ದಾಲಂಕಾರದ
ವಿರಚನೆಗಳ್ ನೋಟಿಪ್ಪೊಡೊಂದೆ ತೋರ್ಕೆಗಳೆಂತುಂ
ಪೊರೆದಿರಲೊಂದೊಂದಱೊಳಾ
ಪರಮಕವೀಶಪ್ರಯೋಗಗತಮಾರ್ಗಂಗಳ್ ೪೮

ಕರ ಚರಣ ಶರೀರ ಶಿರ ಉದರ ವದನಾದಿ ಅವಯವಂಗಳ್ ಇವು ತಂತಮ್ಮೊಳ್ ದೊರೆಕೊಂಡ ಎಡೆಗಳೊಳ್ ಒಳವಾಗಿರೆಯುಮ್ ನರರ್ ಒರ್ವರ್ ಒರ್ವರಮ್ ಪೋಲದವೋಲ್

ವರ ಶಬ್ದಾಲಂಕಾರದ ವಿರಚನೆಗಳ್ ನೋಟಿಪ್ಪೊಡೆ ಒಂದೆ ತೋರ್ಕೆಗಳ್ ಎಂತುಂ ಪೊರೆದಿರಲ್ ಒಂದೊಂದಱೊಳ್ ಆ ಪರಮ ಕವೀಶ ಪ್ರಯೋಗಗತ ಮಾರ್ಗಂಗಗಳ್

ಕೈ, ಕಾಲು, ಮೈ, ತಲೆ, ಹೊಟ್ಟೆ, ಮುಖ ಮೊದಲಾದ ಅವಯವಗಳು ಮನುಷ್ಯರಲ್ಲಿ ತಮ್ಮ ತಮ್ಮ ಸ್ಥಾನಗಳಲ್ಲಿ ಒಂದೇ ರೀತಿಯಾಗಿ ಸೇರಿಕೊಂಡಿದ್ದರೂ ಒಬ್ಬರು ಇನ್ನೊಬ್ಬರನ್ನು ಹೋಲದಂತೆ, ಶಬ್ದಾಲಂಕಾರ ರಚನೆಗಳು ಶ್ರೇಷ್ಠ ಕವಿಗಳ ಪ್ರಯೋಗ ಮಾರ್ಗದಲ್ಲಿ ಒಂದೇ ರೀತಿ ತೋರಿ ಬಂದರೂ ಅವು ಬೇರೆಯಾಗಿರುತ್ತವೆ.

47 Even though the hands, the feet, the body, the head, the belly, the face and other body parts are the same, men do not look alike.

48. Likewise, the precious *śabdālaṅkāras* in the writings of the best poets appear to be the same on the surface (but they are different).

ಕವಿಗಳುಮನಾದಿಲೋಕೋ
ದ್ಭವರಪ್ಪುದಱಿಂದನಂತಗಣನಾನುಗತಂ
ಸವಿಶೇಷೋಕ್ತಿಗಳುಮನಂ
ತವಿಧಂಗಳನಂತಭೇದವದಱಿಂ ಮಾರ್ಗಂ ೪೯

ಕವಿಗಳುಮ್ ಅನಾದಿ ಲೋಕ ಉದ್ಭವರ್ ಅಪ್ಪುದಱಿಂದೆ ಅನಂತ ಗಣನ ಅನುಗತಮ್ ಸವಿಶೇಷೋಕ್ತಿಗಳುಮ್ ಅನಂತ ವಿಧಂಗಳ್ ಅನಂತ ಭೇದಮ್ ಅದಱಿನ್ ಮಾರ್ಗಮ್

ಅನಾದಿಕಾಲದ ಲೋಕದಲ್ಲಿ ಕವಿಗಳು ಜನಿಸುತ್ತಾ ಬಂದಿದ್ದಾರೆ, ಹೀಗಾಗಿ ಅವರ ವಿಶೇಷವಾದ ಅಭಿವ್ಯಕ್ತಿಗಳೂ ಅನಂತವಾಗಿರುತ್ತವೆ. ಆದುದರಿಂದ ಮಾರ್ಗದ ಭೇದಗುಣಗಳು ಅನಂತವಾಗಿರುತ್ತವೆ.

ಭಗವಂತನೇ ಜಗತ್ತಿನ ಸೃಷ್ಟಿಗೆ ಕಾರಣ, ಅವನೇ ಜಗತ್ತಿಗೆ ಆದಿ ಎಂದು ಭಾವಿಸುವ ವೈದಿಕ ಮತಕ್ಕೆ ಭಿನ್ನವಾಗಿ 'ಅನಾದಿಲೋಕ' ಎಂದಿರುವುದರಿಂದ ಈ ಕವಿ ಜೈನನೆಂದು ಊಹಿಸಲು ಸಾಧ್ಯವಿದೆ.

49. Just as the poets come in a line right down from ancient times, so too their distinguished usages are innumerable and varied. That is why the poetic ways (*mārga)* are also of several types.

ಜನಿತವಿಭಾಗಂಗಳ್ ವಾ
ಙ್ಮನಸಾತೀತಂಗಳಿಂತು ಮಾರ್ಗೋಕ್ತಿಗಳೊಳ್
ನೆನೆದಱಿಪಲಾರ್ಪರಾರದ
ನನಿಶ್ಚಿತಕ್ರಮವಿಶೇಷಗುಣಯುಕ್ತಕಮಂ ೫೦

ಜನಿತ ವಿಭಾಗಂಗಳ್ ವಾಕ್ ಮನಸಾತೀತಂಗಳ್ ಇಂತು ಮಾರ್ಗ ಉಕ್ತಿಗಳೊಳ್ ನೆನೆದು ಅಱಿಪಲ್ ಆರ್ಪರ್ ಆರ್ ಅದನ್ ಅನಿಶ್ಚಿತ ಕ್ರಮ ವಿಶೇಷ ಗುಣಯುಕ್ತಕಮನ್

–ಹೀಗೆ ಮಾರ್ಗದ ಉಕ್ತಿಗಳಲ್ಲಿ ಸಂಭವಿಸುವ ವಿಭಾಗಗಳು ಮಾತಿಗೂ ಮನಸ್ಸಿಗೂ ಅತೀತವಾಗಿವೆ. ಹೀಗಾಗಿ ಒಂದೊಂದರಲ್ಲೂ ಇರುವ ಅನಿಶ್ಚಿತ ಗುಣವಿಶೇಷ ಗುಣವನ್ನು ಅರಿತು ಹೇಳಬಲ್ಲವರು ಯಾರು?

50. Thus, the categories evolving from these "ways" are beyond the reach of word and mind. Thus, how can anyone say anything definitive about the uncertain features of *mārga*?

ದಕ್ಷಿಣೋತ್ತರಮಾರ್ಗಗಳು
Southern and Northern Ways

ಅಂತುಂ ಭೇದಮನಿನಿಸಾ
ರ್ಪಂತುತ್ತರದಕ್ಷಿಣೋರುಮಾರ್ಗದ್ವಯದಾ
ಚಿಂತಿತಪುರಾಣಕವಿವಿದಿ
ತಾಂತರಮಂ ಪೇೞ್ವೆನಱಿವ ಮಾೞ್ಕೆಯೊಳೆನ್ನಾ ೫೧

ಅಂತುಮ್ ಭೇದಮನ್ ಇನಿಸು ಆರ್ಪಂತೆ ಉತ್ತರ ದಕ್ಷಿಣ ಉರು ಮಾರ್ಗ ದ್ವಯದಾ ಚಿಂತಿತ ಪುರಾಣ ಕವಿ ವಿದಿತ ಅಂತರಮನ್ ಪೇೞ್ವೆನ್ ಅಱಿವ ಮಾೞ್ಕೆಯೊಳ್ ಎನ್ನಾ

ಹೇಗಾದರು ಇರಲಿ. ಪೂರ್ವಕವಿಗಳಲ್ಲಿ ಸ್ಪಷ್ಟವಾಗಿ ಕಂಡುಬರುವ ಭೇದಗಳಲ್ಲಿ ಮುಖ್ಯವಾಗಿರುವ ದಕ್ಷಿಣೋತ್ತರ ಮಾರ್ಗಗಳನ್ನು ನನಗೆ ತಿಳಿದಂತೆ ಸ್ವಲ್ಪಮಟ್ಟಿಗೆ ಹೇಳುವೆನು.

51. To the extent that I am aware, found in the works of ancient poets are two types of poetic ways: a Southern one (*dakṣiṇa-mārga*) and a Northern one (*uttara-mārga*). Let these differences exist and be explored.

ನಿಗದಿತ ಕಾವ್ಯೋಕ್ತಿಗಳೊಳ್
ನೆಗೞ್ದುವು ಮಾರ್ಗಂಗಳಿಂತುಮೆರಡುಕ್ತಿಗಳುಂ
ಬಗೆವಾಗಳೆರಡು ಮಾೞ್ಕೆಯೊ
ಳೊಗೆದುವು ವಕ್ರಸ್ವಭಾವನಿಯತಿಕ್ರಮದಿಂ ೫೨

ನಿಗದಿತ ಕಾವ್ಯ ಉಕ್ತಿಗಳೊಳ್ ನೆಗೞ್ದುವು ಮಾರ್ಗಂಗಳ್ ಇಂತುಮ್ ಎರಡು ಉಕ್ತಿಗಳುಮ್ ಬಗೆವಾಗಳ್ ಎರಡು ಮಾೞ್ಕೆಯೊಳ್ ಒಗೆದುವು ವಕ್ರ ಸ್ವಭಾವ ನಿಯತಿ ಕ್ರಮದಿನ್

ನಿಶ್ಚಿತ ಕಾವ್ಯದ ಉಕ್ತಿಭೇದಗಳಲ್ಲಿ ಪ್ರಸಿದ್ಧವಾದ ಎರಡು ಮಾರ್ಗಗಳಿವೆ. ವಕ್ರತೆ ಮತ್ತು ಸ್ವಭಾವ ಎಂಬ ನಿಯಮ ಭೇದವನ್ನಾಶ್ರಯಿಸಿ ಎರಡು ರೀತಿಯಾಗಿ ಹುಟ್ಟಿಕೊಂಡಿವೆ.

52. Similarly, there are two specific types of poetic usages, based on indirect or “crooked” (*vakra*) and direct or natural (*svabhāva*) expressions.

ಸತತಂ ದಕ್ಷಿಣಮಾರ್ಗೋ
ದಿತೋಕ್ತಿಭೇದಕಗುಣಂ ಸ್ವಭಾವಾಖ್ಯಾನಂ
ವಿದಿತೋತ್ತರಮಾರ್ಗಗತಂ
ಪ್ರತೀತವಕ್ರೋಕ್ತಿಕೃತಮನಲ್ಪವಿಕಲ್ಪಂ ೫೩

ಸತತಮ್ ದಕ್ಷಿಣ ಮಾರ್ಗ ಉದಿತ ಉಕ್ತಿ ಭೇದಕ ಗುಣಮ್ ಸ್ವಭಾವ ಆಖ್ಯಾನಮ್ ವಿದಿತ ಉತ್ತರ ಮಾರ್ಗಗತಮ್ ಪ್ರತೀತ ವಕ್ರೋಕ್ತಿಕೃತಮ್ ಅನಲ್ಪ ವಿಕಲ್ಪಮ್

ಸ್ವಭಾವೋಕ್ತಿ ಎಂಬುದು ದಕ್ಷಿಣ ಮಾರ್ಗವೆಂದು ಹೆಸರಾದ ಭೇದವಾಗಿದೆ. ವಕ್ರೋಕ್ತಿಯಿಂದ ಕೂಡಿದ ಅನೇಕ ಭೇದಗಳು ಉತ್ತರಮಾರ್ಗಕ್ಕೆ ಸೇರಿದವಾಗಿವೆ.

ಜಾತಿ, ಗುಣ, ದ್ರವ್ಯ, ಕ್ರಿಯೆಗಳ ಸಹಜ ಸ್ವಭಾವವನ್ನು ಹೇಳುವುದು ಸ್ವಭಾವೋಕ್ತಿ ಎಂದು ದಂಡಿ ಹೇಳಿದ್ದಾನೆ:

‘ಜಾತಿಕ್ರಿಯಾಗುಣದ್ರವ್ಯಸ್ವಭಾವಾಖ್ಯಾನಮೀದೃಶಂ’ (೨.೧೩). ವಕ್ರೋಕ್ತಿಗೆ ಪ್ರಾಧಾನ್ಯ ನೀಡಿದ ಕುಂತಕನು ಸ್ವಭಾವೋಕ್ತಿ ಒಂದು ಅಲಂಕಾರ್ಯವೇ ಹೊರತು ಅಲಂಕಾರವೆನಿಸದೆನ್ನುತ್ತಾನೆ. ‘ಸ್ವಭಾವ’ ದಕ್ಷಿಣ ಮಾರ್ಗವೆಂದೂ ‘ವಕ್ರ’ ಉತ್ತರ ಮಾರ್ಗವೆಂದೂ ಹೇಳಿರುವುದು ಕವಿರಾಜಮಾರ್ಗಕಾರನ ಕೊಡುಗೆ ಎನ್ನಬೇಕು.

53. Generally, the southern way is distinctive for its natural quality. The Northern way is an indirect expression presenting many options for interpretation.

ಸಮ ಮಧುರ ನಿಬಿಡ ಕಾಂತ ಸು
ಕುಮಾರ ಸುಸಮಾಹಿತ ಪ್ರಸನ್ನೋದಾರ
ಪ್ರಮಿತಾಗ್ರಾಮ್ಯೋಜಸ್ವಿ
ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ ೫೪

ಸಮ, ಮಧುರ, ನಿಬಿಡ, ಕಾಂತ, ಸುಕುಮಾರ, ಸುಸಮಾಹಿತ, ಪ್ರಸನ್ನ, ಉದಾರ, ಪ್ರಮಿತ ಅಗ್ರಾಮ್ಯ, ಓಜಸ್ವಿ ಕ್ರಮದಿಮ್ ದಶಭೇದಮ್ ಅಲ್ಲಿ ದಕ್ಷಿಣ ಮಾರ್ಗಮ್

ಸಮ, ಮಧುರ, ನಿಬಿಡ, ಕಾಂತ, ಸುಕುಮಾರ, ಸಮಾಹಿತ, ಪ್ರಸನ್ನ, ಉದಾರ, ಅಗ್ರಾಮ್ಯ, ಓಜಸ್ವಿ ಎಂಬುವು ಕ್ರಮವಾಗಿ ದಕ್ಷಿಣಮಾರ್ಗಕ್ಕೆ ಸೇರಿದವು.

ಭಾಮಹನು ಮಾಧುರ್ಯ, ಪ್ರಸಾದ ಮತ್ತು ಓಜಸ್ಸು ಎಂಬ ಮೂರು ಗುಣಗಳನ್ನು ಮಾತ್ರ ವಿವರಿಸಿದ್ದಾನೆ(೨.೧,೨,೩). ಕವಿರಾಜಮಾರ್ಗದಲ್ಲಿ ಹೆಸರಿಸಲಾದ ಗುಣಗಳು ದಂಡಿ ನೀಡಿದ ಗುಣಗಳನ್ನು ಹೋಲುತ್ತವೆ: "ಶ್ಲೇಷಃ ಪ್ರಸಾದಃ ಸಮತಾಮಾಧುರ್ಯಂ ಸುಕುಮಾರತಾ । ಅರ್ಥವ್ಯಕ್ತಿರುದಾರತ್ವ ಮೋಜಃಕಾಂತಿಸಮಾಧಯಃ॥" (೧.೪೧). ಈ ಹತ್ತು ಗುಣಗಳು ವೈದರ್ಭ ಮಾರ್ಗದ ಪ್ರಾಣಗಳೆಂದು ದಂಡಿ ಹೇಳುತ್ತಾನೆ. ಅಲ್ಲದೆ ಇವುಗಳ ವಿಪರ್ಯಾಸವೇ ಗೌಡಮಾರ್ಗದಲ್ಲಿ ಕಾಣುತ್ತದೆಂದೂ ಹೇಳಿದ್ದಾನೆ: "ಇತಿ ವೈದರ್ಭಮಾರ್ಗಸ್ಯ ಪ್ರಾಣಾ ದಶ ಗುಣಾಃ ಸ್ಮೃತಾಃ। ಏಷಾಂ ವಿಪರ್ಯಯಃ ಪ್ರಾಯೋದೃಶ್ಯತೇ ಗೌಡವರ್ತ್ಮನಿ॥" (೧.೪೨).

54. The Southern way presents ten types: *sama* (sonically consistent), *madhura* (mellifluous), *nibiḍa* (dense), *kānta* (lovely), *sukumāra* (soft), *samāhita* (serene), *prasanna* (clear and pleasant), *udāra* (lofty), *agrāmya* (non-rustic) and *ōjasvi* (vigorous).

These types can be compared to Daṇḍin's (1.41)

ಅವಱ ವಿಪರ್ಯಯವೃತ್ತಿ
ಪ್ರವಿಭಕ್ತ ವಿಕಲ್ಪಮಕ್ಕುಮುತ್ತರಮಾರ್ಗಂ
ಸವಿಶೇಷಗುಣಮನತಿಶಯ
ಧವಳೋಕ್ತಿಕ್ರಮದಿನಱಿಪುವೆಂ ತದ್ಭವದೊಳ್ ೫೫

ಅವಱ ವಿಪರ್ಯಯ ವೃತ್ತಿ ಪ್ರವಿಭಕ್ತ ವಿಕಲ್ಪಮ್ ಅಕ್ಕುಮ್ ಉತ್ತರ ಮಾರ್ಗಮ್ ಸವಿಶೇಷ ಗುಣಮನ್ ಅತಿಶಯ ಧವಳ ಉಕ್ತಿ ಕ್ರಮದಿನ್ ಅಱಿಪುವೆನ್ ತದ್ಭವದೊಳ್

ಅವುಗಳ ವಿಪರ್ಯಯ ಸ್ವರೂಪವೇ ಉತ್ತರ ಮಾರ್ಗ. ಅದರ ಸವಿಶೇಷ ಗುಣವನ್ನು ಅತಿಶಯಧವಳೋಕ್ತಿ ಕ್ರಮದಿಂದ ಅವುಗಳ ಮಾರ್ಗವನ್ನು ಕುರಿತು ಹೇಳುತ್ತೇನೆ.

ಇಲ್ಲಿ 'ತದ್ಭವದೊಳ್' ಎಂಬುದನ್ನು ವಿದ್ವಾಂಸರು ಹಲವು ರೀತಿ ಅರ್ಥ ಮಾಡಿಕೊಂಡಿದ್ದಾರೆ. ಬಿ.ಎಂ.ಶ್ರೀ. ಅವರು 'ತದ್ದ್ವಯದೊಳ್' ಎಂಬ ಪರಿಷ್ಕರಣವನ್ನು ಸೂಚಿಸಿದ್ದನ್ನು ಕೆ.ಕೃಷ್ಣಮೂರ್ತಿ ಅವರು ಅನುಸರಿಸಿದ್ದಾರೆ (ಕೆ. ಕೃಷ್ಣಮೂರ್ತಿ, ಕವಿರಾಜಮಾರ್ಗಂ, ಪು.೬೩). 'ತತ್ಸಮ', 'ತದ್ಭವ'. ಎಂದಾಗ ಸಂಸ್ಕೃತ ಪ್ರಾಕೃತಗಳೆರಡೂ ಸೂಚಿತವಾದಂತೆ 'ತದ್ಭವ' ಎಂದಾಗ ದಕ್ಷಿಣೋತ್ತರಮಾರ್ಗಗಳೆರಡೂ ಸೂಚಿತವಾಗಿವೆ ಎನ್ನಬಹುದು.

55. The alternative is the Northern way. Following the order taken up by of *Atiśayadhavaḷa*, I take up these two ways below.

ಸಮಬಂಧಮೆಂಬುದಕ್ಕುಂ
ಸಮನಿಸಿ ಕಿವಿಗೆಡಱು ಬಾರದಾದಂ ಮಟ್ಟಂ
ಸಮೆದ ಪದದಾ ವಿಭೇದ
ಕ್ರಮುಮೆರಡಕ್ಕುಂ ಮೃದು ಸ್ಫುಟೋಕ್ತಿಯಿನದಱಿಂ ೫೬

ಸಮಬಂಧಮ್ ಎಂಬುದು ಅಕ್ಕುಂ ಸಮನಿಸಿ ಕಿವಿಗೆಡಱ ಬಾರದೆ ಆದಮ್ ಮಟ್ಟಮ್ ಸಮೆದ ಪದದಾ ವಿಭೇದ ಕ್ರಮಮ್ ಎರಡಕ್ಕುಮ್ ಮೃದು ಸ್ಫುಟ ಉಕ್ತಿಯಿನ್ ಅದಱಿಮ್

ಕಿವಿಗೆ ಎಡರುತೊಡರಾಗದಂತೆ ಮಟ್ಟಸವಾಗಿ ರಚಿತವಾದ ಕಾವ್ಯಬಂಧವೇ ಸಮಬಂಧ. ಇದರಲ್ಲಿ ಮೃದೂಕ್ತಿ ಮತ್ತು ಸ್ಫುಟೋಕ್ತಿ ಎಂಬ ಎರಡು ಬಗೆಗಳಿವೆ.

ದಂಡಿ ಇದನ್ನು 'ಸಮಂಬಂಧೇಷ್ಟ ವಿಷಮಂ' (೧.೪೭) ಎಂದಿದ್ದಾನೆ. ಸಮಬಂಧದಲ್ಲಿ ಮೃದು, ಸ್ಫುಟ ಮತ್ತು ಮಧ್ಯಮ ಎಂಬ ಮೂರು ಭೇದಗಳನ್ನು ಹೇಳಿದ್ದಾನೆ.

56. ***Sama-bandha* will not be unpleasant to the ear. There are two types of it: *mṛdūkti* (soft expression) and *sphuṭōkti* (clear expression).**

ಮೃದುತರವರ್ಣಾನುಗಮಾ
ಸ್ಪದವಿರಚನೆಯೊಳಗೆ ತೋರ್ಪುದದು ಮೃದುಬಂಧಂ
ವಿದಿತಸ್ಫುಟಾಕ್ಷರಾಧಿಕ
ಪದವಿರಚಿತಮಪ್ಪುದಕ್ಕುಮಾ ಸ್ಫುಟಬಂಧಂ **೫೭**

ಮೃದುತರ ವರ್ಣಾನುಗಮ ಆಸ್ಪದ ವಿರಚನೆಯೊಳಗೆ ತೋರ್ಪುದು ಅದು ಮೃದುಬಂಧಮ್ ವಿದಿತ ಸ್ಫುಟಾಕ್ಷರ ಅಧಿಕ ಪದ ವಿರಚಿತಮ್ ಅಪ್ಪುದು ಅಕ್ಕುಮ್ ಆ ಸ್ಫುಟಬಂಧಮ್

ಮೃದುತರವಾದ ವರ್ಣಗಳಿಗೆ ಆಸ್ಪದವಾದ ರಚನೆ ಮೃದುಬಂಧ. ಸ್ಫುಟವಾದ ಅಕ್ಷರಗಳು ಹೆಚ್ಚಾಗಿ ಪ್ರಯುಕ್ತವಾಗಿರುವ ರಚನೆ ಸ್ಫುಟಬಂಧ.

57. **A *mṛdu-bandha* is a poetic composition consisting of "soft" syllables, whereas a *sphuṭa-bandha* mostly consists of "clear" syllables.**

By "soft" letters, the author means un-aspirated consonants and by "clear" letters, he means aspirated consonants.

ದೊರೆಕೊಳೆ ನೋಡಿದನಾಯತ
ಕರುಣಾಪಾಂಗದೊಳೆ ಲೋಲಲೋಚನಯುಗೆಯಂ
ಗುರುಜಘನಪಯೋಧರಯುಗ
ಭರವಿಧುರೆಯನಾ ಧರಾಧಿಪತಿ ವಿಧುಮುಖಿಯಂ **೫೮**

ದೊರೆಕೊಳೆ ನೋಡಿದನ್ ಆಯತ ಕರುಣಾಪಾಂಗದೊಳೆ ಲೋಲ ಲೋಚನಯುಗೆಯನ್ ಗುರು ಜಘನ ಪಯೋಧರಯುಗ ಭರ ವಿಧುರೆಯನ್ ಆ ಧರಾಧಿಪತಿ ವಿಧುಮುಖಿಯನ್.

"ಆಕೆ ಸಮೀಪಕ್ಕೆ ಬರಲು, ಆ ಲೋಲಲೋಚನೆಯನ್ನು ಕರುಣೆಯಿಂದ ಕೂಡಿದ ಕಡೆಗಣ್ಣಿನಿಂದ ನೋಡಿದನು." "ಭಾರವಾದ ಜಘನ ಪಯೋಧರಗಳಿರುವ ಆ ವಿಯೋಗಿನಿಯಾದ ಚಂದ್ರಮುಖಿಯನ್ನು ಧರಾಧಿಪನು ನೋಡಿದನು."

ಇಲ್ಲಿ ಮೊದಲನೆಯ ವಾಕ್ಯ ಅಲ್ಪಪ್ರಾಣಗಳಿಂದ ಸರಳವಾಗಿದ್ದು, ಮೃದುಬಂಧಕ್ಕೆ ಉದಾಹರಣೆಯಾಗಿದೆ. ಎರಡನೆಯ ವಾಕ್ಯದಲ್ಲಿ ಮಹಾಪ್ರಾಣಾಕ್ಷರಗಳು ಹೆಚ್ಚಿಗೆ ಇರುವುದರಿಂದ ಸ್ಫುಟಬಂಧಕ್ಕೆ ಉದಾಹರಣೆಯಾಗಿದೆ.

58. "As she came close, he saw her with wide and compassionate eyes" (*dorekoḷe nōḍidanāyata karuṇāpāṅgadoḷe lōlalōcanayugeyaṁ*). "The king saw the moon-faced lady, with heavy buttocks and breasts, separated from her husband" (*gurujaghanapayōdharayugabharavidhureyanā dharādhipati vidhumukhiyaṁ*).

This is an example of the two types of *sama-bandha.* An example of *viṣama-bandha* (sonically inconsistent composition) is as follows:

ಇಂತಿದು ಸಮಬಂಧದ್ವಿತ
ಯಾಂತರಮಾ ವಿಷಮಬಂಧಮಿನ್ನಿಂತಕ್ಕುಂ
ಚಿಂತೈಕಸುಖಾಕ್ರಾಂತರ್
ಸಂತುಷ್ಟ್ಯೆಕಾಗ್ರಚಿತ್ತರಾದರ್ ತಮ್ಮೊಳ್ ೫೯

ಇಂತು ಇದು ಸಮಬಂಧ ದ್ವಿತಯಾಂತರಮ್ ಆ ವಿಷಮ ಬಂಧಮ್ ಇನ್ನಿಂತಕ್ಕುಮ್. ಚಿಂತೈಕ ಸುಖಾಕ್ರಾಂತರ್ ಸಂತುಷ್ಟ ಏಕಾಗ್ರ ಚಿತ್ತರ್ ಆದರ್ ತಮ್ಮೊಳ್

ಹೀಗೆ ಇದು ಸಮಬಂಧದ ಎರಡು ಪ್ರಕಾರಗಳಿಗೂ ಉದಾಹರಣೆಯಾಯಿತು. ಇನ್ನು ವಿಷಮಬಂಧ ಈ ರೀತಿ ಇರುತ್ತದೆ: "ಅವರು ತಮ್ಮಲ್ಲಿಯೇ ಚಿಂತೈಕ ಸುಖಾಕ್ರಾಂತರು, ಸಂತುಷ್ಟೈಕಾಗ್ರ ಚಿತ್ತರು ಆದರು."

ಇಲ್ಲಿ 'ಸಂತುಷ್ಟೈಕಾಗ್ರ' ಎಂಬ ಪ್ರಯೋಗ ಹಿತವಾಗಿಲ್ಲದ ಕಾರಣ ಇದು ವಿಷಮಬಂಧಕ್ಕೆ ಉದಾಹರಣೆಯಾಯಿತು. ಇದು ದಕ್ಷಿಣಮಾರ್ಗದವರಿಗೆ ಪ್ರಿಯವಾಗುವುದಿಲ್ಲವೆಂದು ಕೃತಿಕಾರನ ಅಭಿಪ್ರಾಯ.

59. "Their one thought was about joy and they were singularly focused on their contentment." (*cintaika sukhākrāntar santuṣṭaikāgracittarādar tammoḷ*).

In the opinion of the author, words like *sukhākrāntar* and *santuṣṭaikāgracittar* make it a *viṣama-bandha.*

ಸವಿವೊಡೆ ಮಧುರರಸಂಬೋಲ್
ಕಿವಿಗಿನಿದಾಗಿರ್ಪ ವಚನವಿರಚನೆ ಮಧುರಂ
ಸವಿಳಾಸಾಳಾಪದಿನವ
ಱ ವಿಶೇಷವಿಶೇಷ್ಯಮಿಂತು ಮಾರ್ಗದ್ವಯದೊಳ್ ೬೦

ಸವಿವೊಡೆ ಮಧುರ ರಸಂಬೋಲ್ ಕಿವಿಗೆ ಇನಿದಾಗಿರ್ಪ ವಚನ ವಿರಚನೆ ಮಧುರಮ್ ಸವಿಳಾಸ ಆಳಾಪದಿನ್ ಅವಱ ವಿಶೇಷ ವಿಶೇಷ್ಯಮ್ ಇಂತು ಮಾರ್ಗ ದ್ವಯದೊಳ್

ಸವಿಯಲು ಹಿತವಾಗಿರುವ ಮಧುರರಸದಂತೆ ಕಿವಿಗೆ ಹಿತವಾಗಿರುವ ಪದರಚನೆ ಮಧುರವೆನಿಸುವುದು. ಆ ಉಕ್ತಿವಿಲಾಸದ ವಿಶೇಷ ವಿಶೇಷ್ಯಗಳು ಈ ರೀತಿ ದಕ್ಷಿಣೋತ್ತರ ಮಾರ್ಗಗಳಲ್ಲಿ ಕಂಡುಬರುತ್ತವೆ.

60. A composition of words that are pleasing to the ear, sweet like a tasty juice, is called *mādhurya-guṇa.* There are different types of this kind of expression, found in both *mārgas* in a unique manner.

ದೆಸೆಗಳ್ ವಿಶಾಲಮಾದುವು
ಕೆಸಱೆಂ ಪಿಂಗಿತ್ತು ಧರಣಿ ತಿಳಿದುವು ಕೊಳಗಳ್
ಶ್ವಸನಪದಮಮಳಮಾಯ್ತಿಂ
ದೊಸಗೆಗಳಂ ಬೀಱುವಂತೆ ಶರದಾಗಮದೊಳ್ ೬೧

ದೆಸೆಗಳ್ ವಿಶಾಲಮ್ ಆದುವು ಕೆಸಱಿನ್ ಪಿಂಗಿತ್ತು ಧರಣಿ ತಿಳಿದುವು ಕೊಳಗಳ್ ಶ್ವಸನಪಥಮ್ ಅಮಳಮ್ ಆಯ್ತು ಇಂದು ಒಸಗೆಗಳನ್ ಬೀಱುವಂತೆ ಶರತ್ ಆಗಮದೊಳ್.

ಶರತ್ಕಾಲದ ಆಗಮನದಿಂದ ದಿಕ್ಕುಗಳು ವಿಶಾಲವಾದುವು. ಕೆಸರೆಲ್ಲ ಹೋಗಿ ನೆಲ ಶುಭ್ರವಾಯಿತು. ಕೊಳಗಳು ತಿಳಿಯಾದುವು. ಗಗನವು ನಿರ್ಮಲವಾಯಿತು.

61. "As if to announce the arrival of autumn, the directions expanded. The earth was clean, without mud. The water in ponds became clear. The sky too was pure."

The original Kannada verse is composed with pleasing Kannada words and with very few Sanskrit words. The sentences are short and the style is appealing.

ಇದು ದಕ್ಷಿಣಮಾರ್ಗವಿಭೇ
ದದ ಮಧುರರಸಪ್ರಯೋಗಮಾಚಾರ್ಯಮನೋ
ಮುದಿತವಿತಾನಂ ವಿಗತಾ
ಸ್ಪದಮುತ್ತರಮಾರ್ಗವರ್ಗಮಧುರಾಳಾಪಂ ೬೨

ಇದು ದಕ್ಷಿಣ ಮಾರ್ಗ ವಿಭೇದದ ಮಧುರ ರಸ ಪ್ರಯೋಗಮ್. ಆಚಾರ್ಯ ಮನೋಮುದಿತ ವಿತಾನಮ್ ವಿಗತ ಆಸ್ಪದಮ್ ಉತ್ತರ ಮಾರ್ಗ ವರ್ಗ ಮಧುರ ಆಳಾಪಮ್

ಇದು ದಕ್ಷಿಣ ಮಾರ್ಗವಿಭೇದದ ಮಧುರರಸ ಪ್ರಯೋಗ. ಇದು ಪೂರ್ವಾಚಾರ್ಯರ ಹೃದಯಕ್ಕೆ ತುಂಬ ಮೆಚ್ಚಿನದು. ಉತ್ತರ ಮಾರ್ಗ ವರ್ಗದ ಮಧುರಪ್ರಯೋಗ ಮುಂದಿದೆ.

62. This is an aesthetically appealing usage in the Southern Way (*dakṣiṇa-mārga*), a thing of joy in the minds of ancient teachers. The following is an example for the pleasing Northern Way (*uttara-mārga*).

ಧವಳಜಳಧರಕುಳಾಕುಳ
ಮವಿಕಳಮಂಬರತಳಂ ವಿನೀಳಚ್ಛಾಯಂ
ಕುವಳಯಕೀರ್ತಿಗೆ ಶಾರದ
ಮವಧಾರಿತಮಾಯ್ತ್ತದೆಂಬುದುತ್ತರಮಾರ್ಗಂ ೬೩

ಧವಳ ಜಳಧರ ಕುಳ ಆಕುಳಮ್ ಅವಿಕಳಮ್ ಅಂಬರತಳಮ್ ವಿನೀಳಚ್ಛಾಯಮ್ ಕುವಳಯ ಕೀರ್ತಿಗೆ ಶಾರದಮ್ ಅವಧಾರಿತಮ್ ಆಯ್ತು ಎಂಬುದು ಉತ್ತರ ಮಾರ್ಗಮ್

ಬಿಳಿ ಮೋಡಗಳ ಸಮೂಹದಿಂದ ಕೂಡಿದ ಆಕಾಶ ನೀಲವರ್ಣದಿಂದ ಕೂಡಿದೆ. ಅದು ಭೂವಲಯದ ಕೀರ್ತಿಗೆ ಶರದಾಗಮನವನ್ನು ತಿಳಿಸುತ್ತಿದೆ.

ಸರಳವಾಗಿರಬೇಕಾದ ಶರದಾಗಮನವನ್ನು 'ಧವಳಜಳಧರಕುಳ ಆಕುಳಮ್ ಅವಿಕಳಮ್ ಅಂಬರತಳಮ್' ಇತ್ಯಾದಿ ಪದಗಳಲ್ಲಿ 'ಳ'ಕಾರಗಳಿಂದ, ಸಮಾಸ ಬಾಹುಳ್ಯದಿಂದ ಹೇಳುವುದು ಉತ್ತರಮಾರ್ಗ.

63. "Along with a group of white clouds, the blue sky looked to be announcing the arrival of autumn to the famed earth."

The original Kannada verse has more Sanskrit words and compounds even though the meaning is almost the same as the previous verse.

ಮಿಗೆ ನಿಬಿಡಬಂಧಮೆಂಬುದು
ತಗುಳ್ಚುವು ವರ್ಣಂಗಳಗಲದಿರೆ ಮತ್ತಕ್ಕುಂ
ನೆಗಟ್ದಲ್ಪಪ್ರಾಣಾಕ್ಷರ
ನಿಗದಿತಮೇತದ್ವಿಪರ್ಯಯೋಕ್ತಂ ಶಿಥಿಲಂ ೬೪

ಮಿಗೆ ನಿಬಿಡ ಬಂಧಮ್ ಎಂಬುದು ತಗುಳ್ವುವು ವರ್ಣಂಗಳ್ ಅಗಲದಿರೆ ಮತ್ತಕ್ಕುಮ್ ನೆಗಟ್ದಿ ಅಲ್ಪಪ್ರಾಣ ಅಕ್ಷರ ನಿಗದಿತಮ್ ಏತತ್ ವಿಪರ್ಯಯ ಉಕ್ತಮ್ ಶಿಥಿಲಮ್

ವರ್ಣಗಳು ಅಗಲದೆ ಇದ್ದರೆ (ಸಂಧಿಯರೂಪದಲ್ಲಿ) ಅದು ನಿಬಿಡ ಬಂಧವೆನಿಸುವುದು. ಕೇವಲ ಅಲ್ಪಪ್ರಾಣಾಕ್ಷರಗಳು ಬಳಕೆಯಾದರೆ ಅದು ಶಿಥಿಲಬಂಧ.

64. If the letters are not separated and tightly arranged, the composition is called *nibiḍa-bandha.* On the contrary, if un-aspirated letters are used, the composition is *śithila-bandha.*

ಅರವಿಂದೋತ್ಪಲಪುಷ್ಪೋ
ತ್ಕರಂಗಳೊಳ್ ಪಾಯ್ಗುಮುದ್ಭ್ರಮದ್ಭ್ರಮರಂಗಳ್
ವಿರತಮುದವಾದುವುರುಮದ
ವಿರಾಮವನಕರಿಕಪೋಲಫಲಕದೊಳಾಗಳ್ ೬೫

ಅರವಿಂದ ಉತ್ಪಲ ಪುಷ್ಪೋತ್ಕರಂಗಳೊಳ್ ಪಾಯ್ಗುಮ್ ಉದ್ಭ್ರಮತ್ ಭ್ರಮರಂಗಳ್. ವಿರತ ಮುದವಾದುವು ಉರು ಮದ ವಿರಾಮ ವನ ಕರಿಕಪೋಲ ಫಲಕದೊಳ್ ಆಗಳ್

"ಹಾರುವ ದುಂಬಿಗಳು ಕಮಲ ಮತ್ತು ಕನ್ನೈದಿಲೆ ಹೂವುಗಳ ಮೇಲೆ ಎರಗುತ್ತವೆ. ಆದರೆ ಹೆಚ್ಚಿನ ಮದದಿಂದ ಸುಂದರವಾಗಿರುವ ಕಾಡಾನೆಗಳ ಕಪೋಲ ಫಲಕಗಳಲ್ಲಿ ಕುಳಿತು ಮಾತ್ರ ಮುದವನ್ನು ಪಡೆದುವು."

ಪದ್ಯದ ಮೊದಲ ಭಾಗದಲ್ಲಿ 'ಅರವಿಂದೋತ್ಪಲ', 'ಪುಷ್ಪೋತ್ಕರ', 'ಉದ್ಭ್ರಮದ್‌ಭ್ರಮರ' ಎನ್ನುವ ಕಡೆ ಸಂಧಿಗಳಿಂದ ನಿಬಿಡಬಂಧವಾಗಿದೆ. ಎರಡನೆಯ ಭಾಗದಲ್ಲಿ ಉದ್ದನೆಯ ಸಮಾಸವಿದ್ದರೂ ಒಂದೇ ಒಂದು ಸಂಯುಕ್ತಾಕ್ಷರವೂ ಇಲ್ಲದ ಶಿಥಿಲ ಬಂಧವಾಗಿದೆ (ವಿರತಮುದ ವಾದುವುರುಮದ ವಿರಾಮವನ ಕರಿಕಪೋಲಫಲಕದೊಳಾಗಳ್).

65. "The flying bees were falling on lotus and lily flowers. But, they got delighted when they sat on the forehead of the rutting elephants."

The first part contains *sandhi* and compounds that render a "dense" composition (*aravindōtpala, puṣpōtkara; udbhramad bhramara*). The second part does not have such *sandhi*, making it a "relaxed" composition.

ನಿಬಿಡ ಮತ್ತು ಶಿಥಿಲಬಂಧಗಳು

Dense (*nibiḍa*) and Relaxed (*śithila*) Compositions

ಇದು ನಿಬಿಡಶಿಥಿಲಬಂಧಾ
ಸ್ಪದಮಾರ್ಗದ್ವಿತಯಗದಿತಲಕ್ಷ್ಯವಿಭಾಗಂ
ಸದಭಿಕಮನೀಯಗುಣಮ
ಪ್ಪುದು ನಿಯತಂ ಕಾಂತಮೆಂಬುದಭಿಗೀತಾರ್ಥಂ **೬೬**

ಇದು ನಿಬಿಡ ಶಿಥಿಲ ಬಂಧ ಆಸ್ಪದ ಮಾರ್ಗ ದ್ವಿತಯ ಗದಿತ ಲಕ್ಷ್ಯ ವಿಭಾಗಮ್ ಸದಭಿಕಮನೀಯ ಗುಣಮ್ ಅಪ್ಪುದು ನಿಯತಮ್ ಕಾಂತಮ್ ಎಂಬುದು ಅಭಿಗೀತಾರ್ಥಮ್

ಇದು ನಿಬಿಡ ಮತ್ತು ಶಿಥಿಲ ಎಂಬ ಎರಡು ಬಂಧಗಳ ಲಕ್ಷ್ಯ. ಪ್ರಸಿದ್ಧವಾದ ಅರ್ಥವನ್ನು ಜನಾಕರ್ಷಕವಾಗಿ ಹೇಳುವ ಗುಣವೇ ರಮಣೀಯವಾದ ಕಾಂತ ಗುಣದ ಲಕ್ಷಣ.

ಇದು ದಕ್ಷಿಣ ಮಾರ್ಗದ ಕಾಂತಗುಣದ ಲಕ್ಷಣ. ಕಾವ್ಯಾದರ್ಶದ ಲಕ್ಷಣ ಹೀಗಿದೆ: 'ಕಾಂತಂಸರ್ವಜಗತ್ಕಾಂತಂಲೌಕಿಕಾರ್ಥಾನತಿಕ್ರಮಾತ್ । ತಚ್ಚವಾರ್ತಾಭಿಧಾನೇಷು ವರ್ಣನಾಸ್ವಪಿ ದೃಶ್ಯತೇ॥" (೧.೮೫).

66. Like this, examples are given for both *nibiḍa* and *sithila* types. A verse with *kānta-guna* and a readily accessible meaning has a lovely quality.

This definition is similar to that of Daṇḍin's (1.85).

ದಿನಕರಕರನಿಕರಂಗಳ್
ಘನವಿವರಪ್ರಸರಮಾಗಿಯುಂ ತಮ್ಮಂ ಕಂ

ಡನಿತಱಿೊಳೆ ತೆರಳ್ದೆನ್ನಾ
ಮನೋಗತಧ್ವಾಂತಬಂಧಮಳಱಿತ್ತೆಲ್ಲಂ ೬೭

ದಿನಕರ ಕರ ನಿಕರಂಗಳ್ ಘನ ವಿವರ ಪ್ರಸರಮ್ ಆಗಿಯುಮ್ ತಮ್ಮನ್ ಕಂಡ ಅನಿತಱಿಕೊಳೆ ತೆರಳ್ದು ಎನ್ನಾ ಮನೋಗತ ಧ್ವಾಂತಬಂಧಮ್ ಅಳಱಿತ್ತು ಎಲ್ಲಮ್

"ಸೂರ್ಯನ ಕಿರಣಗಳು ದಟ್ಟವಾದ ಮೋಡಗಳ ನಡುವೆ ವ್ಯಾಪಿಸಿಕೊಂಡಿದ್ದರೂ, ತಮ್ಮನ್ನು ಕಾಣುವಷ್ಟರಲ್ಲಿಯೆ ಹೊರಟುಹೋಗಿ ನನ್ನ ಮನಸ್ಸಿನಲ್ಲಿರುವ ಕತ್ತಲೆಯಬಂಧ ಭಯದಿಂದ ಬೆದರುವಂತೆ ಮಾಡಿತು."

ಪಂಡಿತರಿಗೆ ಮಾತ್ರವಲ್ಲದೆ ಸಾಮಾನ್ಯರಿಗೂ ಹೊಳೆಯುವಂತೆ ತಿಳಿಸುವ ಲೋಕಪ್ರಸಿದ್ಧವಾದ ಅರ್ಥ ಕಾಂತ. ಒಬ್ಬ ಜ್ಞಾನಿಯ ಆಗಮನದಿಂದ ಅಜ್ಞಾನವೆಂಬ ಕತ್ತಲೆ ತೊಲಗಿತೆಂಬ ಅರ್ಥ ಇಲ್ಲಿ ಹೊಳೆಯುತ್ತದೆ.

67. "Even though the sun's rays are surrounded by thick clouds, as soon as I saw you, all the darkness in my mind disappeared."

ಇಂತಿದು ದಕ್ಷಿಣಮಾರ್ಗದ
ಕಾಂತಮಸಂಭಾವಿತಾರ್ಥಮುದ್ದಾಮೋಕ್ತಂ
ಸಂತತಮುತ್ತರಮಾರ್ಗಗ
ತಾಂತರಮದನಿಂತು ಕುಱಿತು ತಱಿಸಲ್ಗೆ ಬುಧರ್ ೬೮

ಇಂತು ಇದು ದಕ್ಷಿಣ ಮಾರ್ಗದ ಕಾಂತಮ್ ಅಸಂಭಾವಿತ ಅರ್ಥಮ್ ಉದ್ದಾಮ ಉಕ್ತಮ್ ಸಂತತಮ್ ಉತ್ತರ ಮಾರ್ಗ ಗತ ಅಂತರಮ್ ಅದನ್ ಇಂತು ಕುಱಿತು ತಱಿಸಲ್ಗೆ ಬುಧರ್

ಹೀಗೆ ಇದು ದಕ್ಷಿಣ ಮಾರ್ಗದ ಕಾಂತಗುಣ. ಇನ್ನು ಪಂಡಿತರು ಅತ್ಯಂತ ಅಸಂಭಾವ್ಯವಾದ ಅರ್ಥವನ್ನು ಅತಿಶಯವಾಗಿ ಹೇಳುವ ಉತ್ತರ ಮಾರ್ಗದಲ್ಲಿ ಕಾಂತಗುಣವನ್ನು ಮುಂದಿನ ಉದಾಹರಣೆಯಲ್ಲಿ ಉದ್ದೇಶಪೂರ್ವಕವಾಗಿ ನಿಶ್ಚಯಿಸಲಿ.

68. This is an example of *kānta-guṇa* in the Southern Way. Now, here is an exaggerated example of it in the Northern Way, as understood by scholars.

ವಿಲಸಿತಭವದಭ್ಯಾಗಮ
ಜಲಧಾರೆಗಳೇನುಮುೞಿಯದಂತು ಮದಂತ
ರ್ಮಲಮಂ ಕರ್ಚಿದೊಡಾನೀ
ನೆಲಕೆಲ್ಲಂ ಪಾವನೀಯಚರಿತನೆನಾದೆಂ ೬೯

ವಿಲಸಿತ ಭವತ್ ಅಭ್ಯಾಗಮ ಜಲಧಾರೆಗಳ್ ಏನುಮ್ ಉೞಿಯದಂತು ಮದಂತರ್ಮಲಮನ್ ಕರ್ಚಿದೊಡೆ ಆನ್ ಈ ನೆಲಕೆಲ್ಲಮ್ ಪಾವನೀಯ ಚರಿತನ್ ಎನೆ ಆದೆನ್.

"ಪೂಜ್ಯರಾದ ತಮ್ಮ ಆಗಮನವೆಂಬ ಜಲಧಾರೆಗಳು ನನ್ನ ಅಂತರಂಗದ ಮಲವನ್ನೆಲ್ಲ ಏನೂ ಉಳಿಯದಂತೆ ತೊಳೆದಿರುವ ಕಾರಣ, ನಾನೀಗ ಈ ಭೂಮಿಯಲ್ಲಿಯೇ ಪಾವನಚರಿತನಾದೆನು."

ಆಗಮನವನ್ನು ಜಲಧಾರೆಗೆ ಹೋಲಿಸುವುದು ಅಸಂಭಾವ್ಯ. ಹೀಗಾಗಿ ಇದು ಉತ್ತರ ಮಾರ್ಗಕ್ಕೆ ಉದಾಹರಣೆಯಾಯಿತು.

69. "Your arrival, like a water stream, washed all the dirt from my mind. I became the most sacred person on earth."

Here the arrival is equated with a water stream, which is very rare use among poetic conventions. As it is ambiguous, the author feels that it is not convincing, and thus includes it under *uttara-marga.*

ಸುಕುಮಾರತರಾಕ್ಷರಪದ
ನಿಕರವಿಶಿಷ್ಟಪ್ರಯೋಗಗತಮಪ್ಪುದದಾ
ಸುಕುಮಾರಮೆಂಬುದಕ್ಕುಂ
ಪ್ರಕಟಿತಮದಱಾ ಪ್ರಯೋಗಮೀ ತೆಱನಕ್ಕುಂ ೭೦

ಸುಕುಮಾರತರ ಅಕ್ಷರ ಪದ ನಿಕರ ವಿಶಿಷ್ಟ ಪ್ರಯೋಗ ಗತಮ್ ಅಪ್ಪುದು ಅದು ಆ ಸುಕುಮಾರಮ್ ಎಂಬುದು ಅಕ್ಕುಮ್ ಪ್ರಕಟಿತಮ್ ಅದಱಾ ಪ್ರಯೋಗಮ್ ಈ ತೆಱನ್ ಅಕ್ಕುಮ್

ಸುಕುಮಾರತರವಾದ ಅಕ್ಷರಗಳ ವಿಶಿಷ್ಟ ಪ್ರಯೋಗ ಸುಕುಮಾರ. ಅದರ ಪ್ರಯೋಗ ಈ ರೀತಿ ಇರುತ್ತದೆ.

ದಂಡಿಯ ಶ್ಲೋಕದಲ್ಲಿ ಕರ್ಕಶವಲ್ಲದ ವರ್ಣಗಳು ಹೆಚ್ಚಾಗಿರುವುದು ಸೌಕುಮಾರ್ಯವೆಂದು ಹೇಳಲಾಗಿದೆ: 'ಅನಿಷ್ಠುರಾಕ್ಷರ ಪ್ರಾಯಂ ಸುಕುಮಾರ ಮಿತೀಷ್ಯತೇ' (೧.೬೯).

70. If soft words are used in a significant way, it is called *sukumāra-guṇa.* Usage of such a *guṇa* is as follows.

This definition can be compared to Daṇḍin's (1.68).

ತೊಳಪೆಳವಱೆಯುಂ ಮೊರೆವಳಿ
ಕುಳಂಗಳುಂ ಮೆಲ್ಲನೆಸಪ ಮಳಯಾನಿಳನುಂ
ಮುಳಿಸಂ ಕಟಿಲ್ಚಿ ಕಳೆದುವು
ಕಳಿಕಾಂಕುರಚೂತತತಿಗಳುಂ ಕಾಮಿಗಳಾ ೭೧

ತೊಳಪ ಎಳವಱೆಯುಮ್ ಮೊರೆವ ಅಳಿಕುಳಂಗಳುಮ್ ಮೆಲ್ಲನೆ ಎಸಪ ಮಳಯಾನಿಳನುಮ್ ಮುಳಿಸನ್ ಕಟಿಲ್ಚಿ ಕಳೆದುವು ಕಳಿಕಾಂಕುರ ಚೂತತತಿಗಳುಮ್ ಕಾಮಿಗಳಾ

ಹೊಳೆಯುವ ಬಾಲಚಂದ್ರನೂ ಸದ್ದು ಮಾಡುವ ದುಂಬಿಗಳೂ ಮೆಲ್ಲನೆ ಬೀಸುವ ಮಲಯಾನಿಲವೂ ಮಾವಿನ ಹೂ ಮೊಗ್ಗೆಗಳೂ ಕಾಮಿಗಳ ಪ್ರಣಯ ಕೋಪವನ್ನು ಹೋಗಲಾಡಿಸಿದುವು.

ಕರ್ಕಶವಲ್ಲದ ವರ್ಣಗಳಿಂದ ಕೂಡಿದ ಈ ಪದ್ಯ ಸುಕುಮಾರಗುಣಕ್ಕೆ ಉದಾಹರಣೆಯಾಗಿದೆ.

71. "The shining young moon, the buzzing bees, the cool breeze slowly blowing, and tender mango

sprouts – all of these drive away the anger of lovers.”

The Kannada verse, lacking aspirated consonant, represents the quality of “softness.”

ಇದಱ ವಿಪರ್ಯಯವಿವಿಧಾ
ಸ್ಪದಾಕ್ಷರವಿಕಲ್ಪಮಿಂತಿದುತ್ತರಮಾರ್ಗಂ
ತ್ರಿದಶಾಧೀಶ್ವರಭೂತ್ಯ
ತ್ಯುದಾರವಿವಿದಾರ್ಥವಿಭವನೀ ಭೂಪೇಂದ್ರಂ ೭೨

ಇದಱ ವಿಪರ್ಯಯ ವಿವಿಧ ಆಸ್ಪದ ಅಕ್ಷರ ವಿಕಲ್ಪಮ್ ಇಂತು ಇದು ಉತ್ತರ ಮಾರ್ಗಮ್ ತ್ರಿದಶ ಅಧೀಶ್ವರ ಭೂತಿ ಅತಿ ಉದಾರ ವಿವಿಧ ಅರ್ಥ ವಿಭವನ್ ಈ ಭೂಪೇಂದ್ರನ್

ಇದರ ವಿಪರ್ಯಾಸವಾಗಿ ವಿವಿಧ ಅಕ್ಷರಗಳ ಪ್ರಯೋಗ ಇರುವುದು ಉತ್ತರ ಮಾರ್ಗದ ಸುಕುಮಾರ ಗುಣ. “ಈ ರಾಜನು ತ್ರಿದಶಾಧೀಶ್ವರನಾದ ಇಂದ್ರನ ಐಶ್ವರ್ಯ ಮತ್ತು ವಿವಿಧ ವಿಭವವನ್ನು ಪಡೆದಿರುವನು.”

ಇಲ್ಲಿಯ ಉದಾಹರಣೆಯನ್ನು ನೋಡಿದರೆ ಆಡಂಬರವಾಗಿರುವುದು ಸ್ಪಷ್ಟವಾಗಿದೆ.

72. Contrary to this, when different types of syllables are used, it reflects the Northern Way: "This king has the prosperity and the glory of the Lord of Gods (*tridaśādhīśvara).*

The example has Sanskrit *sandhi, samāsa* (compounds) and aspirated letters, marking it as a verse in the Northern Way.

ಒಂದಱ ಮಾತುಗಳಂ ಪೆಱ
ತೊಂದಱೊಳಱಿದಿಟ್ಟು ಕೂಡೆ ಪೇೞ್ದೊಡದಕ್ಕುಂ
ಸುಂದರತರಂ ಸಮಾಹಿತ
ಮೆಂದುಂ ಮತ್ತದಱ ಲಕ್ಷ್ಯಮೀ ತೆಱನಕ್ಕುಂ ೭೩

ಒಂದಱ ಮಾತುಗಳಮ್ ಪೆಱತೊಂದಱೊಳ್ ಅಱಿದಿಟ್ಟು ಕೂಡೆ ಪೇೞ್ದೊಡೆ ಅದು ಅಕ್ಕುಮ್ ಸುಂದರತರಮ್ ಸಮಾಹಿತಮ್ ಎಂದುಮ್ ಮತ್ತೆ ಅದಱ ಲಕ್ಷ್ಯಮ್ ಈ ತೆಱನ್ ಅಕ್ಕುಮ್

ಒಂದರ ಮಾತುಗಳನ್ನು ಇನ್ನೊಂದರಲ್ಲಿ ಆರೋಪಿಸಿ ಹೇಳಿದರೆ ಅದು ಸುಂದರವಾದ ಸಮಾಹಿತಗುಣವಾಗುತ್ತದೆ. ಮತ್ತೆ ಅದರ ಲಕ್ಷ್ಯ ಈ ರೀತಿ ಇರುತ್ತದೆ.

ದಂಡಿ ಇದನ್ನು ಸಮಾಧಿ ಎಂದು ಕರೆದು ಲೋಕನ್ಯಾಯವನ್ನು ಮೀರದಂತೆ ಒಂದರ ಧರ್ಮವನ್ನು ಇನ್ನೊಂದರಲ್ಲಿ ಆರೋಪಿಸುವುದು ಎಂದಿದ್ದಾನೆ (೧.೯೩).

73. If the words referring to one thing are intentionally attributed to some other thing, it is called the beautiful *samāhita.* An example follows.

Daṇḍin says that if the characteristic feature of one thing is attributed to some other thing, without transgressing popular convention, it is called *samādhi* (1.93).

ವಿನಿಮೀಳಿತಕುಮುದವನಂ
ಜನಿತೋನ್ಮೀಲಾರವಿಂದವನಲಕ್ಷ್ಮೀಶಂ
ದಿನಕರನುದಯಂ ಗೆಯ್ದಂ
ವಿನಿಹತತಿಮಿರಂ ವಿಶಿಷ್ಟ ಸಂಧ್ಯಾಶ್ಲೇಷಂ **೭೪**

ವಿನಿಮೀಳಿತ ಕುಮುದವನನ್ ಜನಿತ ಉನ್ಮೀಲ ಅರವಿಂದ ವನಲಕ್ಷ್ಮೀಶನ್ ದಿನಕರನ್ ಉದಯಮ್ ಗೆಯ್ದನ್ ವಿನಿಹತತಿಮಿರನ್ ವಿಶಿಷ್ಟ ಸಂಧ್ಯಾಶ್ಲೇಷನ್

"ಕುಮುದವನದ ಕಣ್ಮುಚ್ಚಿಸಿದವನು, ಅರವಿಂದ ವನಲಕ್ಷ್ಮಿಯ ಕಣ್ಣರಳಿಸಿದವನು, ಕತ್ತಲೆಯನ್ನು ನಾಶಮಾಡಿದವನು. ಸಂಧ್ಯಾದೇವಿಯನ್ನು ಅಪ್ಪಿಕೊಂಡವನು ಆದ ದಿನಕರನು ಉದಯಗೊಂಡನು."

ಇಲ್ಲಿಯ ಉದಾಹರಣೆ ದಂಡಿಯ ಉದಾಹರಣೆಯನ್ನು ಹೋಲುತ್ತದೆ (೧.೯೪): "ಕುಮುದಾನಿ ನಿಮೀಲಂತಿ ಕಮಲಾನ್ಯುನ್ಮಿಷನ್ತಿ ಚ । ಇತಿ ನೇತ್ರಕ್ರಿಯಾಧ್ಯಾಸಾಲ್ಲಬ್ಧಾ ತದ್ವಾಚಿನೀ ಶ್ರುತಿಃ ॥"

74. "Closing the eyes of the lily garden and making the glorious lotuses blossom, the risen sun killed the darkness and embraced the Lady Dawn."

ವಿನಿಮೀಳಾದಿಗಳಿವು ಲೋ
ಚನಾದಿ ಧರ್ಮಂಗಳಿವನೆ ಕುಮುದಾದಿಗಳೊಳ್
ನೆನೆದಿಂತು ಪೇೞ್ದೊಡಕ್ಕುಂ
ವಿನಿಶ್ಚಿತಕ್ರಮಸಮಾಹಿತಾಲಂಕಾರಂ ೭೫

ವಿನಿಮೀಳಾದಿಗಳ್ ಇವು ಲೋಚನಾದಿ ಧರ್ಮಂಗಳ್ ಇವನೆ ಕುಮುದಾದಿಗಳೊಳ್ ನೆನೆದು ಇಂತು ಪೇೞ್ದೊಡೆ ಅಕ್ಕುಮ್ ವಿನಿಶ್ಚಿತ ಕ್ರಮ ಸಮಾಹಿತ ಅಲಂಕಾರಮ್

ಕಣ್ಮುಚ್ಚುವುದು, ಅರಳಿಸುವುದು ಮೊದಲಾದವು ನೇತ್ರಾದಿಗಳ ಧರ್ಮಗಳು. ಅವನ್ನು ಕುಮುದಾದಿಗಳಲ್ಲಿ ಆರೋಪಿಸಿ ಹೀಗೆ ಹೇಳಿದಾಗ ನಿಶ್ಚಿತವಾಗಿ ಸಮಾಹಿತ ಅಲಂಕಾರವಾಗುತ್ತದೆ.

ಇಲ್ಲಿ ಅಲಂಕಾರವೆಂದಿದ್ದರೂ ಸಮಾಹಿತಗುಣವನ್ನೇ ಸೂಚಿಸಲಾಗಿದೆ. ಅಲಂಕಾರ ಗಳಲ್ಲಿ ಒಂದರ ಧರ್ಮವನ್ನು ಇನ್ನೊಂದಕ್ಕೆ ಆರೋಪಿಸುವುದನ್ನು ಸಮಾಸೋಕ್ತಿ ಎನ್ನಲಾಗಿದೆ.

75. The closing of the eyes being attributed to lilies [which have no eyes] definitely signify *samāhita-guṇa.*

Among the figures of speech, the figure of "compounded expression" (*samāsōkti*) is related to *samāhita-guṇa*.

ವಿನಿಹತಸಮಸ್ತರಿಪುಕುಳ
ನನಿಮಿಷಲೋಚನದೆ ನೀಡುಂ ಪ್ರಿಯೆಯುಂ

ವಿನಿಮೀಳಿತಲೋಚನೆಯಂ

ಜನಪತಿ ನಿಜಬಾಹುಯುಗದಿನಾಶ್ಲೇಷಿಸಿದಂ ೭೬

ವಿನಿಹತ ಸಮಸ್ತ ರಿಪುಕುಳನ್ ಅನಿಮಿಷ ಲೋಚನದೆ ನೀಡುಮ್ ಪ್ರಿಯೆಯನ್ ವಿನಿಮೀಳಿತ ಲೋಚನೆಯನ್ ಜನಪತಿ ನಿಜಬಾಹುಯುಗದಿನ್ ಆಶ್ಲೇಷಿಸಿದನ್

"ಸಮಸ್ತ ರಿಪುಕುಲವನ್ನು ಕೊಂದ ರಾಜನು ಎವೆಯನ್ನು ಮುಚ್ಚಿದ್ದ ಪ್ರಿಯೆಯನ್ನು ಎವೆಯಿಕ್ಕದ ಕಣ್ಣುಗಳಿಂದ ನೋಡಿ ತನ್ನ ತೋಳ್ಗಳಿಂದ ಆಲಿಂಗಿಸಿದನು."

76. "The king saw with wide open eyes all the enemies he killed, and he embraced his beloved, whose eyes were closed.

ಈ ಕುಱಿಪುಗಳಿಂದಱಿವುದ

ನೇಕಸಮಾಹಿತಪದಪ್ರಯೋಗಾಂತರಮಂ

ಲೋಕಪ್ರತೀತಸುಭಗವಿ

ವೇಕಾಳಾಪಂ ಪ್ರಸನ್ನಮದುವಿಂತಕ್ಕುಂ ೭೭

ಈ ಕುಱಿಪುಗಳಿಂದೆ ಅಱಿವುದು ಅನೇಕ ಸಮಾಹಿತ ಪದ ಪ್ರಯೋಗಾಂತರಮನ್ ಲೋಕ ಪ್ರತೀತ ಸುಭಗ ವಿವೇಕ ಆಳಾಪಮ್ ಪ್ರಸನ್ನಮ್ ಅದು ಇಂತಕ್ಕುಮ್

ಈ ಲಕ್ಷಣಗಳಿಂದ ಅನೇಕ ಸಮಾಹಿತ ಪದಪ್ರಯೋಗಗಳನ್ನು ಅರಿವುದು, ಲೋಕ ಪ್ರತೀತಿಯಿಂದ ತಿಳಿಯಲು ಸಾಧ್ಯವಾದ ವಿವೇಕಯುತ ಉಕ್ತಿಯು ಪ್ರಸನ್ನ ಗುಣ. ಅದು ಹೀಗೆ ಇರುತ್ತದೆ.

77. Let the usage of *samāhita* thus be understood with these characteristics. *Prasanna-guṇa,* which signifies that which can be easily understood and clearly uttered, is as follows.

ಶರದಮಲಾಂಬರದೊಳ್ ಹಿಮ

ಕರನೆಸೆದತ್ತೆಂಬುದಾ ಪ್ರಸನ್ನಮಿದಕ್ಕುಂ

ಕರಮೊಪ್ಪಿತ್ತುಷ್ಣೇತರ
ಕಿರಣಂ ವರ್ಷಾಂತಸಮಯಜಳಧರಪಥದೊಳ್ ೭೮

ಶರತ್ ಅಮಲ ಅಂಬರದೊಳ್ ಹಿಮಕರನ್ ಎಸೆದತ್ತು ಎಂಬುದು ಆ ಪ್ರಸನ್ನಮ್ ಇದು ಅಕ್ಕುಮ್ ಕರಮ್ ಒಪ್ಪಿತ್ತು ಉಷ್ಣೇತರ ಕಿರಣಮ್ ವರ್ಷಾಂತ ಸಮಯ ಜಳಧರ ಪಥದೊಳ್

"ಶರದೃತುವಿನ ವಿಮಲಾಕಾಶದಲ್ಲಿ ಚಂದ್ರಬಿಂಬ ಬೆಳಗುತ್ತಿತ್ತು" ಎಂಬುದು ಪ್ರಸನ್ನಗುಣ (ದಕ್ಷಿಣ ಮಾರ್ಗ). ಇದನ್ನೇ "ವರ್ಷಾಂತ ಸಮಯದ ಮೇಘ ಮಾರ್ಗದಲ್ಲಿ ಉಷ್ಣೇತರ (ಶೀತಲ) ಕಿರಣನ ಬಿಂಬ ಬೆಳಗುತ್ತಿತ್ತು" ಎಂದರೆ ಉತ್ತರ ಮಾರ್ಗ.

78. "The moon (*hima-kara*, the one which makes things cool) was shining upon the autumn sky" is an example of *prasanna-guṇa.* "The moon (*uṣṇētara-kiraṇa*, the one which has non-hot rays) looked beautiful in the path of clouds after the rainy season had passed."

The first part is an example of the Southern Way. The second part of the verse, not expressed in a straightforward manner, is an example of the Northern Way.

ಮಿಗೆ ವಸ್ತುಗತಸ್ಥಿತಿಯುಂ
ಬಗೆದಗ್ಗಳಮಾಗೆ ಪೇೞ್ದೊಡಕ್ಕುಮುದಾರಂ
ಬಗೆವೊಡೆ ಕಾವ್ಯದ ಪದವಿಯ
ನೆಗೞ್ತೆಗದು ಮೂಲಮದಱ ಪಾಂಗಿಂತಕ್ಕುಂ ೭೯

ಮಿಗೆ ವಸ್ತುಗತ ಸ್ಥಿತಿಯಮ್ ಬಗೆದು ಅಗ್ಗಳಮಾಗೆ ಪೇೞ್ದೊಡೆ ಅಕ್ಕುಮ್ ಉದಾರಮ್ ಬಗೆವೊಡೆ ಕಾವ್ಯದ ಪದವಿಯ ನೆಗೞ್ತೆಗೆ ಅದು ಮೂಲಮ್ ಅದಱ ಪಾಂಗು ಇಂತು ಅಕ್ಕುಮ್

ವಸ್ತುವಿನ ಸ್ಥಿತಿಯನ್ನು ಅತಿಶಯವಾಗಿ ಹೇಳಿದರೆ ಅದು ಉದಾರ ಗುಣವಾಗುತ್ತದೆ. ಯೋಚಿಸಿ ನೋಡಿದರೆ ಕಾವ್ಯ ಪದವಿಯ ಮೇಲ್ಮೆಗೆ ಅದು ಮೂಲಾಧಾರ. ಅದರ ಪರಿ ಈ ರೀತಿ ಇರುತ್ತದೆ.

ಗುಣೋತ್ಕರ್ಷ ತೋರುವ ಸ್ಥಿತಿ ಉದಾರವೆಂದು ದಂಡಿ ಹೇಳಿದ್ದಾನೆ (೧.೭೬) : "ಉತ್ಕರ್ಷವಾನ್ ಗುಣಃ ಕಶ್ಚಿದ್ಯಸ್ಮಿನ್ನುಕ್ತೇ ಪ್ರತೀಯತೇ । ತದುದಾರಾಹ್ವಯಂ ತೇನ ಸನಾಥಾ ಕಾವ್ಯಪದ್ಧತಿಃ ॥"

79. If the natural condition of something or someone is presented in an exaggerated manner, the poetic quality is known as *udāra-guṇa,* or the quality of "loftiness."

ಪುರುಷೋತ್ತಮರಾರ್ ನಿನ್ನ
ನ್ನರುದಾರರರಾತಿಸಮಿತಿಯಂ ಕೊಂದಿರ್ದುಂ
ಸುರಸುಂದರಿಲೀಲಾಲಸ
ಪರಿರಂಭಾರಂಭಸುರತಸುಖದೊಳ್ ನಿಱಿಪರ್ ೮೦

ಪುರುಷೋತ್ತಮರ್ ಆರ್ ನಿನ್ನನ್ನರ್ ಉದಾರರ್ ಅರಾತಿ ಸಮಿತಿಯನ್ ಕೊಂದಿರ್ದುಮ್ ಸುರ ಸುಂದರಿ ಲೀಲಾಲಸ ಪರಿರಂಭ ಆರಂಭ ಸುರತ ಸುಖದೊಳ್ ನಿಱಿಪರ್

"ಅರಿಸಮುದಾಯವನ್ನೆಲ್ಲ ಕೊಂದಿದ್ದರೂ ಅವರನ್ನೆಲ್ಲ ಸುರ-ಸುಂದರಿಯರ ಲೀಲಾವಿಲಾಸದಲ್ಲಿ ಮತ್ತು ಆಲಿಂಗನ ಸುರತಾದಿ ಸುಖಗಳಲ್ಲಿರಿಸುವ ನಿನ್ನಂತಹ ಪುರುಷೋತ್ತಮರು ಯಾರಿದ್ದಾರೆ?"

80. "Is there any other person as noble as you who, in spite of killing his enemies, sends them to enjoy the pleasures of sex, which begin with a hug from divine damsels."

ಇದು ದಾಕ್ಷಿಣಾತ್ಯಕವಿಮಾ
ರ್ಗದುದಾರಮುದೀಚ್ಯರುರು ವಿಶೇಷಣಯುತಮ
ಪ್ಪುದನೊಲ್ವರಿಂತು ಹೇಮಾಂ
ಗದಲೀಲಾಂಬುಜವಿಚಿತ್ರಚಿತ್ರಾದಿಕಮಂ ೮೧

ಇದು ದಾಕ್ಷಿಣಾತ್ಯ ಕವಿಮಾರ್ಗದ ಉದಾರಮ್ ಉದೀಚ್ಯರ ಉರು ವಿಶೇಷಣಯುತಮ್ ಅಪ್ಪುದನ್ ಒಲ್ವರ್ ಇಂತು ಹೇಮಾಂಗದ, ಲೀಲಾಂಬುಜ, ವಿಚಿತ್ರ ಚಿತ್ರಾದಿಕಮನ್

ಇದು ದಾಕ್ಷಿಣಾತ್ಯ ಕವಿಮಾರ್ಗದ ಉದಾರಗುಣ. ಉತ್ತರ ಮಾರ್ಗದವರು ಹೆಚ್ಚಿನ ವಿಶೇಷಣಗಳಿಂದ ಕೂಡಿದ ಹೇಮಾಂಗದ, ಲೀಲಾಂಬುಜ, ವಿಚಿತ್ರಚಿತ್ರ ಇತ್ಯಾದಿಗಳನ್ನು ಮೆಚ್ಚುವರು.

81. This represents the Southern Way. The Northern Way is fond of excessive adjectives: golden bracelet, graceful lily, wonderful piece of art, etc.

The author suggests that an adjective should be used only if the situation demands it.

Otherwise, though a preference of the Northern Way, it seems to be excessive.

ಗೋಪಾಳಬಾಳಲಲನಾ
ಚಾಪಳವಾಚಾಳಕಿತವಬಾಹ್ಲೀಕಾದಿ
ವ್ಯಾಪಾರಂಗಳ್ ಗ್ರಾಮ್ಯಾ
ಳಾಪಂಗಳ್ ಮಾರ್ಗಯುಗಳಪರಿಹಾರ್ಯಂಗಳ್ ೮೨

ಗೋಪಾಳ ಬಾಳ ಲಲನಾ ಚಾಪಳ ವಾಚಾಳ ಕಿತವ ಬಾಹ್ಲೀಕಾದಿ ವ್ಯಾಪಾರಂಗಳ್ ಗ್ರಾಮ್ಯ ಆಳಾಪಂಗಳ್ ಮಾರ್ಗ ಯುಗಳ ಪರಿಹಾರ್ಯಂಗಳ್

ಗೋಪಾಲಕರು, ಬಾಲಕರು, ಲಲನೆಯರು, ಚಪಲಚಿತ್ತರು, ವಾಚಾಳರು, ಜೂಜುಗಾರರು, ಬಾಹ್ಲಿಕಾದಿ ವಿದೇಶೀಯರು ಮುಂತಾದವರ ವ್ಯವಹಾರಗಳು ಗ್ರಾಮ್ಯಾಲಾಪಗಳು, ಎರಡು ಮಾರ್ಗಗಳಲ್ಲಿಯೂ ಅವನ್ನು ಬಿಡಬೇಕು.

82. The rustic language of the cowherd, of young boys, of women, of fickle-minded people, of garrulous men, of gamblers, and of foreigners like the Bahlikas are to be avoided.

Here, the author has given an example of *grāmya* and says that it is fit to be avoided in both the *mārgas. Kavirājamārga* scholar M.V.Seetharamaiah calls the guṇa *pramita-grāmyōkyi* (2005:251) to defend the view that

even *grāmya*, if used moderately, is a *guṇa.* Śrīvijaya, however, does not seem to defend *grāmya* at all in the following verses but defends *agrāmya*.

ನೆನೆದಿರುಳುಂ ಪಗಲುಂ ನಿ
ನ್ನನೆ ಪೀನಮೊಱಲ್ದು ಮಱುಗಿ ಕಾತರಿಸುತ್ತುಂ
ಮನದೊಳ್ ಸೈರಿಸಲಾಱೆಂ
ನಿನಗೆನಸುಂ ಕರುಣಮಿಲ್ಲ ಮರವಾನಸನಯ್ ೮೩

ನೆನೆದು ಇರುಳುಮ್ ಪಗಲುಮ್ ನಿನ್ನನೆ ಪೀನಮ್ ಒಱಲ್ದು ಮಱುಗಿ ಕಾತರಿಸುತ್ತುಮ್ ಮನದೊಳ್ ಸೈರಿಸಲಾಱೆನ್. ನಿನಗೆ ಎನಸುಮ್ ಕರುಣಮ್ ಇಲ್ಲ ಮರವಾನಸನಯ್

ಇರುಳೂ ಹಗಲೂ ನಿನ್ನನ್ನೇ ತುಂಬ ಕೂಗಿಕೊಳ್ಳುತ್ತ, ಗೋಳಾಡಿ ಕಾತರಿಸುತ್ತ, ಮನದಲ್ಲಿ ಸೈರಿಸಲಾರದೆ ಇದ್ದೇನೆ. ನಿನಗೆ ಸ್ವಲ್ಪವೂ ಕರುಣೆಯಿಲ್ಲ. ನೀನು ಮರದ ಮನುಷ್ಯನಯ್ಯ!"

ಯಾವ ಕಾವ್ಯಾಂಶವೂ ಇಲ್ಲದೆ ನೇರವಾಗಿ ಮಾತನಾಡುವುದು ಗ್ರಾಮ್ಯವೆಂದು ಕವಿಯ ಅಭಿಪ್ರಾಯ.

83. "I thought about you day and night, bemoaned, and called out to you loudly. My mind could not tolerate it. You do not have any mercy. You are a man made of wood."

ಎಂದಿಂತೀ ಗ್ರಾಮ್ಯೋಕ್ತಿಯೊ
ಳೊಂದಾಗಿಸದದನೆ ಪೇೞ್ವುದಿಂತೀ ಸ್ಥಿತಿಯೊಳ್
ಕಂದರ್ಪಂ ಚಲದೆನ್ನೊಳ್
ನಿಂದಂ ಮುನಿಸಿಲ್ಲ ನಿನ್ನೊಳಾತಂಗಿನಿಸುಂ ೮೪

ಎಂದು ಇಂತು ಈ ಗ್ರಾಮ್ಯ ಉಕ್ತಿಯೊಳ್ ಒಂದಾಗಿಸದೆ ಅದನೆ ಪೇೞ್ವುದು ಇಂತು ಈ ಸ್ಥಿತಿಯೊಳ್ ಕಂದರ್ಪನ್ ಚಲದೆ ಎನ್ನೊಳ್ ನಿಂದನ್ ಮುನಿಸಿಲ್ಲ ನಿನ್ನೊಳ್ ಆತಂಗೆ ಇನಿಸುಮ್

ಹೀಗೆ ಗ್ರಾಮ್ಯವಾಗಿರುವ ಉಕ್ತಿಗಳನ್ನು ಕಾವ್ಯದಲ್ಲಿ ಸೇರಿಸದೆ ಅದನ್ನೇ ಶಬ್ದಾಂತರಗಳಿಂದ ಕೆಳಗಿನಂತೆ ಮಾರ್ಪಡಿಸಿ ಹೇಳಬೇಕು: "ಮನ್ಮಥನು

ಚಲದಿಂದ ನನ್ನಲ್ಲಿ ನೆಲೆಗೊಂಡಿರುವನು. ನಿನ್ನಲ್ಲಿ ಅವನಿಗೆ ಸ್ವಲ್ಪವೂ ಮುನಿಸೇ ಇಲ್ಲ."

84. Such a rustic way of expression is to be avoided. Instead, let it be expressed this way: "The lord of love found a firm place in me. He is not angry with you at all."

ಸಮಱಿ ಸಮಾಸಪದಂಗಳ
ನಮರ್ದಿರೆ ಸಯ್ತಾಗಿ ಬಗೆದು ಪೇೞ್ದೊಡದಕ್ಕುಂ
ಕ್ರಮದೋಜೋಲಕ್ಷಣಮು
ತ್ತಮಮಿದು ಗದ್ಯಕ್ಕಲಂಕ್ರಿಯಾನುಸಮೇತಂ ೮೫

ಸಮಱಿ ಸಮಾಸ ಪದಂಗಳನ್ ಅಮರ್ದಿರೆ ಸಯ್ತಾಗಿ ಬಗೆದು ಪೇೞ್ದೊಡೆ ಅದು ಅಕ್ಕುಮ್ ಕ್ರಮದೆ ಓಜೋಲಕ್ಷಣಮ್ ಉತ್ತಮಮ್ ಇದು ಗದ್ಯಕ್ಕೆ ಅಲಂಕ್ರಿಯಾನು ಸಮೇತಮ್

ಪ್ರಯೋಗಿಸಿದ ಸಮಾಸ ಪದಗಳು ಚೆನ್ನಾಗಿ ಹೊಂದಿಕೊಳ್ಳುವಂತೆ ಯೋಚಿಸಿ ಹೇಳಿದರೆ ಅದು ಓಜೋಲಕ್ಷಣವಾಗುತ್ತದೆ. ಇದು ಗದ್ಯಕ್ಕೆ ಅಲಂಕಾರವೆನಿಸುತ್ತದೆ.

ದಂಡಿ ಕೂಡ ಇದೇ ರೀತಿಯ ಲಕ್ಷಣವನ್ನು ಹೇಳಿದ್ದಾನೆ. ಓಜಸ್ಸು ಗದ್ಯಕ್ಕೆ ಜೀವಿತವೆಂದು ದಂಡಿ ಹೇಳಿದರೆ ಶ್ರೀವಿಜಯನು ಅದು ಅಲಂಕಾರವೆಂದು ಹೇಳಿದ್ದಾನೆ. ಅಲ್ಲದೆ ಉತ್ತರದವರಿಗೆ ಪದ್ಯದಲ್ಲಿಯೂ ಓಜಸ್ಸು ಪ್ರಧಾನವೆಂದು ದಂಡಿ ಹೇಳಿದ್ದಾನೆ (೧.೮೦) : "ಓಜಸ್ಸಮಾಸಭೂಯಸ್ತ್ವಮೇತದ್ಗದ್ಯಸ್ಯ ಜೀವಿತಮ್ । ಪದ್ಯೇಪ್ಯದಾಕ್ಷಿಣಾತ್ಯಾನಾಮಿದ ಮೇಕಂ ಪರಾಯಣಮ್ ॥"

85. If compounds are used to express the process of one's thoughts, often as a poetic ornamentation in prose sentences, it is called *ojō-guṇa.*

This verse follows Daṇḍin's definition (1.80): *ōjas-samāsa-bhūyastvam etad gadyasya jīvitam / padyēpy adākṣiṇātyām idam ēkaṁ parāyaṇam //* In Daṇḍiṇ's opinion, *ōjas* is associated with the Southern Way in prose, whereas the "non-Southern" (Northern) Way uses

the quality in both prose and poetry. Śrīvijaya puts it differently in the next verse, saying that even in metrical compositions, *ōjas* serves as an effective quality.

ಮಿಗೆ ಪದ್ಯದೊಳಂ ಗುಣಮಂ
ತಗುಳ್ಚುಗುಂ ಸಮಹಿತಪ್ರಯೋಗಾನುಗತಂ
ಸೊಗಯಿಸುವಂತಿರೆ ಬಗೆದಿದ
ನಗಾಧಮನರಿಡುಗೆ ಕೃತಿಯೊಳೋಜೋಗುಣಮಂ ೮೬

ಮಿಗೆ ಪದ್ಯದೊಳಮ್ ಗುಣಮಮ್ ತಗುಳ್ಚುಗುಮ್ ಸಮಹಿತ ಪ್ರಯೋಗಾನುಗತಮ್ ಸೊಗಯಿಸುವಂತೆ ಇರೆ ಬಗೆದು ಇದನ್ ಅಗಾಧ ಮನರ್ ಇಡುಗೆ ಕೃತಿಯೊಳ್ ಓಜೋಗುಣಮನ್

ಇದು ಸಮವಾಗಿ, ಹಿತವಾಗಿ (ಅಥವಾ ಸ+ಮಹಿತ=ಗೌರವಾರ್ಹವಾದ ರೀತಿಯಲ್ಲಿ) ಪ್ರಯೋಗವಾದರೆ ಪದ್ಯದಲ್ಲಿ ಕೂಡ ಸೊಗಸಾಗಿರುತ್ತದೆ. ಗಂಭೀರಮತಿಗಳಾದ ಕವಿಗಳು ಇದನ್ನರಿತು ಓಜೋಗುಣವನ್ನು ಕೃತಿಯಲ್ಲಿ ಅಳವಡಿಸಲಿ.

86. Even in a metrical composition, *ojas* is effective, if it is used in a balanced and proper way. Let poets, therefore, use *ojo-guṇa* to make a poem more beautiful.

ಕಾರಕಮಂ ಕ್ರಿಯೆಯುಮನಱಿ
ದೋರಂತಿರೆ ಮುಂ ತಗುಳ್ಚಿ ಮುಕ್ತಕಪದದೊಳ್
ಸಾರಂ ಸಮಾಸಪದದು
ಚ್ಚಾರಣೆಯಂ ನೀಳ್ದುನಿಲೆ ತಗುಳ್ಚುಗೆ ಕೃತಿಯೊಳ್ ೮೭

ಕಾರಕಮಮ್ ಕ್ರಿಯೆಯುಮನ್ ಅಱಿದು ಓರಂತಿರೆ ಮುನ್ ತಗುಳ್ಚಿ ಮುಕ್ತಕ ಪದದೊಳ್ ಸಾರಮ್ ಸಮಾಸ ಪದದ ಉಚ್ಚಾರಣೆಯನ್ ನೀಳ್ದು ನಿಲೆ ತಗುಳ್ಚುಗೆ ಕೃತಿಯೊಳ್

ಕಾರಕವನ್ನು, ಕ್ರಿಯೆಯನ್ನು ಬಿಡಿಬಿಡಿಯಾದ ಪದಗಳಲ್ಲಿ ಚೆನ್ನಾಗಿ ಅಳವಡಿಸಿಕೊಂಡು, ಆ ಮೇಲೆ ದೀರ್ಘಸಮಾಸ ಪದದ ಉಚ್ಚಾರಣೆ ಬರುವಂತೆ ಕೃತಿಯಲ್ಲಿ ನೆಲೆಗೊಳಿಸಬೇಕು.

87. First the *kāraka* relationships with the verb are to be construed in non-compounded (independent) words, and then it should be incorporated into a compound and used in a literary work.

ಮೊದಲೊಳ್ ಸಮಾಸಪದಮುಮ
ನೊದವಿಸಿ ಪೇೞ್ದದಱ ತುದಿಯೊಳಸಮಾಸಪದಾ
ಸ್ಪದಮಾಗಿ ನಿಱಿಸೆ ಕರ್ವಿನ
ತುದಿಯಂತಿರೆ ವಿರಸಮಕ್ಕುಮದು ತೊದಳುಂಟೇ ೮೮

ಮೊದಲೊಳ್ ಸಮಾಸ ಪದಮುಮನ್ ಒದವಿಸಿ ಪೇೞ್ದು ಅದಱ ತುದಿಯೊಳ್ ಅಸಮಾಸ ಪದಾಸ್ಪದಮಾಗಿ ನಿಱಿಸೆ ಕರ್ವಿನ ತುದಿಯಂತೆ ಇರೆ ವಿರಸಮ್ ಅಕ್ಕುಮ್ ಅದು ತೊದಳ್ ಉಂಟೇ

(ಹೀಗೆ ಮಾಡದೆ) ಮೊದಲು ಸಮಾಸ ಪದವನ್ನು ಪ್ರಯೋಗಿಸಿ, ತುದಿಯಲ್ಲಿ ಅಸಮಾಸಪದವನ್ನು ಪ್ರಯೋಗಿಸಿದರೆ ಕಬ್ಬಿನ ತುದಿಯಂತೆ ವಿರಸವೆನಿಸುವುದರಲ್ಲಿ ಸಂದೇಹವುಂಟೇ?

88. Added words that are not part of the initial compound will not be compatible to the expression, just as the tip of the sugarcane (which is not sweet) is not compatible with the rest of the stalk.

ಪರಮಾನುಭಾವಭಾಸುರ
ಸುರರಾಜೋಪಮಿತವಿವಿಧವಿಭವೋದಯನಂ
ನರಪತಿಯುಂ ಕಪಿಪ್ರುತನಾ
ಪರಿವೃತನಂ ಜಲಧಿತಟದೊಳಣುವಂ ಕಂಡಂ ೮೯

ಪರಮ ಅನುಭಾವ ಭಾಸುರ ಸುರರಾಜ ಉಪಮಿತ ವಿವಿಧ ವಿಭವ ಉದಯನನ್ ನರಪತಿಯನ್ ಕಪಿಪ್ರೃತನಾ ಪರಿವೃತನನ್ ಜಲಧಿತಟದೊಳ್ ಅಣುವನ್ ಕಂಡನ್

"ಪರಮ ಪ್ರಭಾವದಿಂದ ಬೆಳಗುವನು, ಇಂದ್ರ ಸದೃಶ ವಿಭವಸಮೇತನು, ಕಪಿಸೇನಾಪರಿವೃತನು ಆದ ನರಪತಿಯನ್ನು ಸಮುದ್ರತೀರದಲ್ಲಿ ಹನುಮಂತನು ಕಂಡನು."

ಮೊದಲು ದೀರ್ಘಸಮಾಸವನ್ನು ಪ್ರಯೋಗಿಸಿ, ಅನಂತರ ಸಮಾಸವಲ್ಲದ ಬಿಡಿಪದಗಳನ್ನು ಬಳಸಿದರೆ ವಿರಸವಾಗುವುದೆನ್ನಲು ಇದನ್ನು ಉದಾಹರಣೆಯಾಗಿ ಕೊಡಲಾಗಿದೆ.

89. "Hanumān saw on the seashore the king whose glory is comparable to that of the most powerful Dēvendra and who is surrounded by the monkey army."

The original Kannada verse has one long compound in the first part and non-compounded (independent) words in the second part.

ಎಂದಿಂತು ಪೇೞ್ದ ಮಾಟ್ಕೆಯೊ
ಳೊಂದುವುದೋಜಸ್ವಿತಾಗುಣಂ ಕೈಕೊಳೆಯುಂ
ಸುಂದರಮಾಗದು ಕವಿಪದ
ಮೆಂದುಂ ವ್ಯತ್ಯಯದಿನಿಡುವೊಡೆದಸುಕರತರಂ ೯೦

ಎಂದು ಇಂತು ಪೇೞ್ದ ಮಾಟ್ಕೆಯೊಳ್ ಒಂದುವುದು ಓಜಸ್ವಿತಾಗುಣಮ್ ಕೈಕೊಳೆಯುಮ್ ಸುಂದರಮ್ ಆಗದು ಕವಿ ಪದಮ್ ಎಂದುಮ್ ವ್ಯತ್ಯಯದಿನ್ ಇಡುವೊಡೆ ಅದು ಅಸುಕರತರಮ್

ಈ ರೀತಿ ಹೇಳಿದಾಗ ಓಜೋಗುಣದ ಲಕ್ಷಣ ಅನ್ವಯಿಸುವಂತಿದ್ದರೂ ಕವಿಪ್ರಯೋಗ ಎಂದೂ ಸುಂದರವಾಗಿರುವುದಿಲ್ಲ. ಈ ರೀತಿ ಹಿಂದೆ ಮುಂದೆ ಮಾಡಿದರೆ ಅದು ಸರಿಹೊಂದುವುದಿಲ್ಲ.

90. Even though the characteristic features of *ojō-guṇa* are present in this verse, the usage is not at all beautiful. If it is used differently like this, it will not work.

ನರಪತಿಯಂ ಕಪಿಪೃತನಾ
ಪರಿವೃತನಂ ಜಳಧಿತಟದೊಳಣುವಂ ಕಂಡಂ
ಪರಮಾನುಭಾವಭಾಸುರ
ಸುರರಾಜೋಪಮಿತವಿವಿಧವಿಭವೋದಯನಂ ೯೧

ಓಜೋಗುಣ ಸರಿಯಾಗಿ ಹೇಗಿರಬೇಕೆಂಬುದನ್ನು ಹೇಳಲು ೮೯ನೆಯ ಪದ್ಯದ ಪೂರ್ವಾರ್ಧವನ್ನೇ ಉತ್ತರಾರ್ಧವನ್ನಾಗಿ ಮಾಡಲಾಗಿದೆ.

91. Verse 89 is repeated here, exchanging the first part with the second part so that the long compound follows the non-compounded (independent) words. This is an effective use of the *ojō-guṇa*.

ಬೆರಸಿರೆ ಸಮಾಸದೊಳ್ ಬಂ
ಧುರಮಾಗದು ಕಾವ್ಯಬಂಧಮೆಂದುಂ ಕೃತಿಯೊಳ್
ದೊರೆಕೊಳ್ವ ಪದವಿಶೇಷ್ಯಾಂ
ತರಮದಱಿಂ ವ್ಯಸ್ತಮಾಗಿ ಪೇೞ್ಗಿದನೆಂದುಂ ೯೨

ಬೆರಸಿರೆ ಸಮಾಸದೊಳ್ ಬಂಧುರಮ್ ಆಗದು ಕಾವ್ಯಬಂಧಮ್ ಎಂದುಮ್ ಕೃತಿಯೊಳ್ ದೊರೆಕೊಳ್ವ ಪದ ವಿಶೇಷ್ಯಾಂತರಮ್ ಅದಱಿನ್ ವ್ಯಸ್ತಮಾಗಿ ಪೇೞ್ಗೆ ಇದನ್ ಎಂದುಮ್

ಅನ್ವಯಿಸಬೇಕಾದ (ವಿಶೇಷಣದೊಡನೆ) ಒಂದು ವಿಶೇಷ್ಯಪದ ವಿಶೇಷ್ಯವಾದ ಇನ್ನೊಂದು ಪದದೊಡನೆ ಸಮಾಸವಾಗಿ ಬೆರಸಿಹೋದರೆ ಕಾವ್ಯಬಂಧ ಸುಂದರವಾಗುವುದಿಲ್ಲ. ಆದುದರಿಂದ ವಿಶೇಷ್ಯಪದವನ್ನು ವ್ಯಸ್ತವಾಗಿ (ಬಿಡಿಯಾಗಿ) ಮಾತ್ರ ಹೇಳಬೇಕು.

92. When a noun is qualified by an adjective, it cannot be linked with another qualified noun in a compound. As it does not enhance the beauty of a poetic composition, the noun outside of the compound should remain separate.

ಪರಿದೆಯ್ದಿ ತಾಗಿದಂ ಭಾ
ಸುರತರರಘುಕುಲಲಲಾಮಲಕ್ಷ್ಮೀಧರನೊಳ್
ಪರಿಕೋಪವಿಧೃತವಿಸ್ಫುರ
ದುರುರಕ್ತಕಠೋರನಯನಯುತದಶವದನಂ ೯೩

ಪರಿದೆಯ್ದಿ ತಾಗಿದಮ್ ಭಾಸುರತರ ರಘುಕುಲಲಲಾಮ ಲಕ್ಷ್ಮೀಧರನೊಳ್ ಪರಿಕೋಪ ವಿಧೃತ ವಿಸ್ಫುರತ್ ಉರು ರಕ್ತ ಕಠೋರ ನಯನಯುತ ದಶವದನನ್

"ಭಾಸುರತರ ರಘುಕುಲಲಲಾಮ ಲಕ್ಷ್ಮೀಧರನಲ್ಲಿಗೆ ವೇಗದಿಂದ ಓಡಿ ಅತಿಕೋಪದಿಂದ ಕೆಂಗಣ್ಣಿನಿಂದ ಇರುವ ರಾವಣನು ತಾಗಿದನು."

ಭಾಸುರತರರಘುಕುಲಲಾಮ ಲಕ್ಷ್ಮೀಧರ ಎಂದಾಗ ವಿಶೇಷಣದೊಡನೆ ಅನ್ವಯಿಸ ಬೇಕಾದ ಒಂದು ವಿಶೇಷ್ಯಪದ ಇನ್ನೊಂದು ವಿಶೇಷ್ಯದೊಡನೆ ಸಮಾಸವಾಗಿದೆ.

93. "The ten-faced Rāvaṇa went with excessive anger and cruel red eyes towards Rāma who, bearing Lakṣmi, is the best among the others who belong to the illustrious Raghu race."

In this verse, two nouns qualified by adjectives are linked in one compound (*raghu-kula-lalāma, lakṣmī-dhara; rakta-kaṭhōra-nayanayuta-daśa-vadanaṁ).*

ಇಂತು ವಿಶೇಷ್ಯಂ ಕ್ರಿಯೆಯುಂ
ಸಂತಂ ನೋೞ್ಪುದಱಿನಕ್ಕುಮದು ಸಾಪೇಕ್ಷಂ
ಚಿಂತಿಸೆ ಸಮಾಸಮುಂ ಪೇ
ೞ್ವಂತಪ್ಪಪದಂ ಸಮರ್ಥಮಲ್ತಪ್ಪುದಱಿಂ ೯೪

ಇಂತು ವಿಶೇಷ್ಯಮ್ ಕ್ರಿಯೆಯನ್ ಸಂತಮ್ ನೋಱ್ಪುದಱಿನ್ ಅಕ್ಕುಮ್ ಅದು ಸಾಪೇಕ್ಷಮ್ ಚಿಂತಿಸೆ ಸಮಾಸಮನ್ ಪೇೞ್ವಿಂತಪ್ಪಪದಮ್ ಸಮರ್ಥಮ್ ಅಲ್ತು ಅಪ್ಪುದಱಿನ್

ಹೀಗೆ ವಿಶೇಷ್ಯವು ಕ್ರಿಯೆಯನ್ನೇ ನೋಡುವುದರಿಂದ (ಅನ್ವಯಿಸು ವುದರಿಂದ) ಅದು ಸಾಪೇಕ್ಷ ಸಮಾಸವಾಗುತ್ತದೆ. ಸಮಾಸಾರ್ಥವನ್ನು ಬೋಧಿಸಲು ಪದವು ಪೂರ್ಣವಾಗಿ ಶಕ್ತವಾಗಿರುವುದಿಲ್ಲ.

'ತಾಗಿದನ್ ದಶವದನನ್' ಎಂದಾಗ ಕರ್ತೃಪದವು ಸಮಸ್ತವಾಗಿರುವುದರಿಂದ ತನ್ನ ವಿಶೇಷಣಗಳ ಅರ್ಥವನ್ನು ಬಿಟ್ಟು ತಾನೊಂದೇ ಕ್ರಿಯೆಯೊಂದಿಗೆ ಅನ್ವಯವಾಗುತ್ತದೆ. ಹೀಗಾಗಿ ಸಮಾಸವಾದ ಕರ್ತೃಪದ ಸಮರ್ಥವಲ್ಲ.

94. Similarly, if a qualified noun in a compound is syntactically tied to the verb, the compound is called *sāpēkṣa-samāsa* (dependent compound) because it has no capacity to complete the meaning of the compound without connection with the verb.

ಸಮನಿಸೆ ಸಾಪೇಕ್ಷಮುಮಾ
ಸಮಾಸಮುಂ ಪೆಱುಗಮೆಲ್ಲಿಯಾನುಂ ಗಮಕಂ
ಕ್ರಮಮುದಱಿೊಳೆಲ್ಲಮೆನಲಿನಿ
ತು ಮಾರ್ಗದೊಳ್ ಸಮಱುಗಿಂತು ಕವಿವೃಷಭರ್ಕಳ್ ೯೫

ಸಮನಿಸೆ ಸಾಪೇಕ್ಷಮುಮ್ ಆ ಸಮಾಸಮುಮ್ ಪೆಱುಗುಮ್ ಎಲ್ಲಿ ಯಾನುಮ್ ಗಮಕಮ್ ಕ್ರಮಮ್ ಅದಱಿೊಳ್ ಎಲ್ಲಮ್ ಎನಲ್ ಇನಿತು ಮಾರ್ಗದೊಳ್ ಸಮಱುಗೆ ಇಂತು ಕವಿವೃಷಭರ್ಕಳ್

ಸಾಪೇಕ್ಷವೂ ಸಮಾಸವೂ ಎರಡೂ ಕೂಡಿ ಸಮನಿಸಿದರೆ ಎಲ್ಲಿಯಾದರೂ ಒಂದು ಕಡೆ ಗಮಕವು ದೊರೆಕೊಳ್ಳುತ್ತದೆ. ಇದನ್ನು ಸಕ್ರಮಗೊಳಿಸಬೇಕಾದರೆ ಕವಿಶ್ರೇಷ್ಠರಾದವರು ಮಾರ್ಗದಲ್ಲಿ ಈ ರೀತಿ ಅಂದಗೊಳಿಸಲಿ.

ಸಾಪೇಕ್ಷವೂ ಸಮಾಸವೂ ಸಮನಿಸುವಂತೆ ಮಾಡುವುದಾದರೆ ಅದು ಗಮಕ. "ಸಾಪೇಕ್ಷತ್ವೇಪಿ ಗಮಕತ್ವಾತ್ ಸಾಧುಃ" ಎಂದು ಮಲ್ಲಿನಾಥಾದಿಗಳ ಮಾತು

ಇರುವುದರಿಂದ (ಕೆ.ಕೃಷ್ಣಮೂರ್ತಿ, ಕವಿರಾಜಮಾರ್ಗಂ, ಪು. ೭೬) ಕವಿರಾಜ ಮಾರ್ಗದಲ್ಲೂ ಇದೇ ರೀತಿಯ ಅಭಿಪ್ರಾಯ ವ್ಯಕ್ತವಾಗಿದೆ.

95. If a dependent compound (*sāpēkṣa-samāsa*) leads to a meaningful expression (*gamaka*), such a compound is proper.

ಪರಿದೆಯ್ದಿ ತಾಗಿದಂ ಭಾ
ಸುರತರರಘುಕುಲಲಲಾಮನೊಳ್ ಲಕ್ಷ್ಮಣನೊಳ್
ಪರಿಕೋಪವಶಭ್ರಮಣೋ
ದ್ಧುರರಕ್ತಕಠೋರಲೋಚನಂ ದಶವದನಂ ೯೬

ಪರಿದು ಎಯ್ದಿ ತಾಗಿದನ್ ಭಾಸುರತರ ರಘುಕುಲ ಲಲಾಮನೊಳ್ ಲಕ್ಷ್ಮಣನೊಳ್ ಪರಿಕೋಪ ವಶ ಭ್ರಮಣ ಉದ್ಧುರ ರಕ್ತ ಕಠೋರ ಲೋಚನನ್ ದಶವದನನ್

“ಭಾಸುರತರ ರಘುಕುಲಲಾಮನಲ್ಲಿಗೆ ಲಕ್ಷ್ಮಣನಲ್ಲಿಗೆ ವೇಗದಿಂದ ಓಡಿ ಅತಿಕೋಪದಿಂದ ಕೆಂಗಣ್ಣಿನಿಂದ ರಾವಣನು ತಾಗಿದನು.”

ಸಾಪೇಕ್ಷತ್ವ ಇಲ್ಲದಂತೆ ವಿಶೇಷ್ಯ ಪದವನ್ನು ಸಮಾಸದಿಂದ ಬೇರ್ಪಡಿಸಿ ಎರಡು ವಿಶೇಷ್ಯಗಳಿಗೂ ಸ್ವತಂತ್ರ ವಿಭಕ್ತಿ ಬರುವಂತೆ (ಲಲಾಮನೊಳ್, ಲಕ್ಷ್ಮಣನೊಳ್) ಮಾಡಿದ್ದಲ್ಲದೆ ರಕ್ತಕಠೋರಲೋಚನನ್, ದಶವದನನ್ ಎಂದು ಸಮಸ್ತಪದವನ್ನು ಎರಡು ಪದಗಳನ್ನಾಗಿ ಬೇರ್ಪಡಿಸಲಾಗಿದೆ.

96. “The ten-faced Rāvaṇa who had cruel red eyes went with excessive anger towards Lakṣmaṇa and Rāma, the best in the illustrious Raghu race.”

The author has altered verse 93, freeing the noun in the compound from its dependence (*sāpēkṣatā*) on the verb. The breaking up of the compounds, giving separate case-suffixes to the qualifying nouns, has set the verse right.

ಇಂತಿರೆ ಮಾರ್ಗದ್ವಿತಯಗ
ತಾಂತರಮಂ ಪೇೞ್ದೆನೆಲ್ಲಿಯುಂ ಕ್ಷೀರಗುಡಾ
ದ್ಯಂತರರಸಾಂತರಂ ಜಾ
ತ್ಯಂತರಮಪ್ಪಂತನಂತಮಂತರ್ಭೇದಂ ೯೭

ಇಂತು ಇರೆ ಮಾರ್ಗದ್ವಿತಯ ಗತಾಂತರಮನ್ ಪೇೞ್ವೆನ್ ಎಲ್ಲಿಯುಮ್ ಕ್ಷೀರ ಗುಡಾದ್ಯಂತರ ರಸಾಂತರಮ್ ಜಾತ್ಯಂತರಮಪ್ಪ ಅಂತು ಅನಂತಮ್ ಅಂತರ್ಭೇದಮ್

ಹೀಗೆ ಎರಡು ಮಾರ್ಗಗಳಲ್ಲಿಯೂ ಇರುವ (ಗುಣಗಳ) ಅಂತರವನ್ನು ಹೇಳಿದೆ. ಒಂದೊಂದರಲ್ಲಿರುವ ಅಂತರ್ಭೇದಗಳು ಅನಂತವಾಗಿವೆ. ಹಾಲು, ಬೆಲ್ಲ ಮುಂತಾದವು ರುಚಿಕರವಾದರೂ ಅವುಗಳಲ್ಲಿ ಸೂಕ್ಷ್ಮ ರುಚಿಭೇದಗಳಿರುತ್ತವೆ.

ಕಾವ್ಯಾದರ್ಶದಲ್ಲಿ 'ಇಕ್ಷುಕ್ಷೀರ ಗುಡಾದೀನಾಂ ಮಾಧುರ್ಯಸ್ಯಾಂತರಂ ಮಹತ್' (೧.೧೦೨) ಎಂಬುದನ್ನು ಇದು ಅನುಸರಿಸುತ್ತದೆ.

97. I have thus presented the differences between the two Ways (*mārga*). The internal subdivisions are innumerable in the same way that milk and jaggery, which have their own taste, are open to innumerable divisions because of individual tastes.

ರಸವಿಶೇಷಗಳು

The Distinctiveness of *Rasa* (Aesthetic Experience)

ಗೀತಿಕೆ ಬಗೆದು ಮಾರ್ಗದ್ವಿತಯಗತಿಗಳಂ
ಪ್ರಗುಣಗುಣಗಣೋದಯರ್ಕಳ್ ವಿತರ್ಕದಿಂ
ಸೊಗಯಿಸುವಂತು ವಚನರಚನೆಯಿಂ
ನೆಗೞ್ದಿರೆ ಬೆರಸಿ ಪೇೞ್ಗೆ ರಸವಿಶೇಷದೊಳ್ ೯೮

ಬಗೆದು ಮಾರ್ಗ ದ್ವಿತಯ ಗತಿಗಳನ್ ಪ್ರಗುಣ ಗುಣ ಗುಣೋದಯರ್ಕಳ್ ವಿತರ್ಕದಿನ್ ಸೊಗಯಿಸುವಂತು ವಚನ ರಚನೆಯಿನ್ ನೆಗಟ್ದಿರೆ ಬೆರಸಿ ಪೇಟ್ಗೆ ರಸವಿಶೇಷದೊಳ್

ಎರಡು ಮಾರ್ಗಗಳ ಪರಿಗಳನ್ನೂ ವಿಶಿಷ್ಟ ಗುಣಗಣದಿಂದ ಕೂಡಿದ ಕವೀಶ್ವರರು ಚೆನ್ನಾಗಿ ಪರಾಮರ್ಶಿಸಿ ಸೊಗಯಿಸುವ ಹಾಗೆ ರಸವಿಶೇಷಗಳನ್ನು ಬೆರಸಿ ಹೇಳಬೇಕು.

ರಸವಿಶೇಷಗಳಿಗೆ ಗುಣಗಳ ನಿರ್ದೇಶನ ಮಾಡಿರುವುದು ವಿಶೇಷ. ಇದು ದಂಡಿ–ಭಾಮಹರಲ್ಲಿ ಕಂಡುಬರುವುದಿಲ್ಲ.

98. The best poets who understand the qualities of poetry should think about the two *mārgas* logically and incorporate the *guṇas* (poetic qualities) with the various special aesthetic experiences known as *rasa*.

ಉತ್ಪಲಮಾಲೆ

ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂ
ಚ್ಚಾರಣೆಯಿಂದಮದ್ಭುತರಸಂ ನಿಬಿಡೋಕ್ತಿಗಳಿಂದಮಲ್ತೆ ಶೃಂ
ಗಾರರಸಂ ಸಮಂತು ಸುಕುಮಾರೋಕ್ತಿಗಳಿಂ ಪ್ರಸನ್ನಗಂ
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತಮುಂ ೯೮

ವೀರರಸಮ್ ಸ್ಫುಟ ಉಕ್ತಿಯಿನ್ ಉದಾರತಮಮ್ ಕರುಣಾ ರಸಮ್ ಮೃದು ಉಚ್ಚಾರಣೆಯಿಂದಮ್ ಅದ್ಭುತರಸಮ್ ನಿಬಿಡ ಉಕ್ತಿಗಳಿಂದಮ್ ಅಲ್ತೆ ಶೃಂಗಾರರಸಮ್ ಸಮಂತು ಸುಕುಮಾರ ಉಕ್ತಿಗಳಿನ್ ಪ್ರಸನ್ನ ಗಂಭೀರತರ ಉಕ್ತಿಯಿನ್ ಪ್ರಕಟಮ್ ಅಕ್ಕೆ ರಸಮ್ ಸತತಮ್ ಪ್ರಶಾಂತಮುಮ್

ಸ್ಫುಟವಾದ ಉಕ್ತಿಯಿಂದ ವೀರರಸ, ಮೃದುವಾದ ಉಚ್ಚಾರಣೆಯಿಂದ ಉತ್ತಮವಾದ ಕರುಣರಸ, ನಿಬಿಡವಾದ ಉಕ್ತಿಗಳಿಂದ ಅದ್ಭುತರಸ, ಅತ್ಯಂತ ಸುಕುಮಾರವಾದ ಉಕ್ತಿಗಳಿಂದ ಶೃಂಗಾರರಸ, ಪ್ರಸನ್ನ ಗಂಭೀರ ಉಕ್ತಿಗಳಿಂದ ಯಾವಾಗಲೂ ಪ್ರಶಾಂತರಸ ಪ್ರಕಟವಾಗಲಿ.

ಭರತಾದಿಗಳು ಹೇಳಿರುವುದು ಕರುಣರಸವೇ ಹೊರತು ಕರುಣಾರಸವಲ್ಲ. ಕರುಣರಸ ಶೋಕ ಸ್ಥಾಯೀಭಾವದಿಂದ ಕೂಡಿದ್ದು, ಕರುಣೆ ಎಂಬುದು ಕಾರುಣ್ಯ

ಅಥವಾ ದಯೆಗೆ ಸಂಬಂಧಿಸಿದ್ದು. ಭವಭೂತಿ ಉತ್ತರರಾಮಚರಿತದಲ್ಲಿ 'ಏಕೋ ರಸಃ ಕರುಣ ಏವ' ಎಂದಾಗಲೂ ಪುಲ್ಲಿಂಗ ಶಬ್ದವಾದ ಕರುಣವನ್ನೆ ಬಳಸಿದ್ದಾನೆ. ದಯೆ ಅಥವಾ ಕರುಣೆ ದಯಾವೀರವೇ ಹೊರತು ಕರುಣರಸವಲ್ಲ. ಆದರೆ ಕರುಣಾರಸವನ್ನೇ ಕವಿರಾಜಮಾರ್ಗರಾಜನು ನವರಸಗಳಲ್ಲಿ ಸೇರಿಸಿದಂತಿದೆ (ನೋಡಿ ೩.೧೯೧) . ಜೈನ ತಾತ್ತ್ವಿಕ ಕೃತಿ (೨ನೆಯ ಶತಮಾನ) 'ಅಣುಓಗದಾರ'ದಲ್ಲಿ ಪ್ರಶಾಂತರಸವನ್ನು ಕುರಿತು ಹೇಳಲಾಗಿದೆ.

99. Here is how to understand the expression of *rasa* in light of the *guṇas*: *vīra-rasa* (heroism) with clear expression (*sphutokti)*; *karuṇā-rasa* (compassion) with loftiness *(udāra)*; *adbhuta-rasa (*wonder) with soft speech (*mṛdūccāraṇe*); *śṛṅgāra* (love) with dense expression *(nibiḍōkti)*; *praśānta-rasa* (tranquility) with soft and serious words.

ಉ.ಮಾ.

ಉತ್ಸವದಿಂದೆ ಹಾಸ್ಯರಸಮಾ ಮಧುರೋಕ್ತಿಗಳಿಂದಮಲ್ತೆಬೀ
ಭತ್ಸರಸಾಂತರಂ ಶಿಥಿಲಬಂಧನದಿಂ ಸತತಂ ಭಯಾನಕೋ
ದ್ಯತ್ಸುರಸಂ ಕರಂ ವಿಷಮಬಂಧನದಿಂ ನೃಪತುಂಗದೇವಮಾ
ರ್ಗೋತ್ಸವಮೂರ್ಜಿತೋಕ್ತಿಗಳಿನಕ್ಕತಿರೌದ್ರರಸಂ ರಸಾವಹಂ ೧೦೦

ಉತ್ಸವದಿಂದೆ ಹಾಸ್ಯರಸಮ್ ಆ ಮಧುರ ಉಕ್ತಿಗಳಿಂದಮ್ ಅಲ್ತೆ ಬೀಭತ್ಸ ರಸಾಂತರಮ್ ಶಿಥಿಲ ಬಂಧನದಿನ್ ಸತತಮ್ ಭಯಾನಕ ಉದ್ಯತ್ ಸುರಸಮ್ ಕರಮ್ ವಿಷಮ ಬಂಧನದಿನ್ ನೃಪತುಂಗದೇವ ಮಾರ್ಗ ಉತ್ಸವಮ್ ಊರ್ಜಿತ ಉಕ್ತಿಗಳಿನ್ ಅಕ್ಕೆ ಅತಿ ರೌದ್ರ ರಸಮ್ ರಸಾವಹಮ್

ಹರ್ಷದಿಂದ ಕೂಡಿದ ಮಧುರೋಕ್ತಿಗಳಿಂದ ಹಾಸ್ಯರಸ, ಶಿಥಿಲ ಬಂಧದಿಂದ ಬೀಭತ್ಸರಸ, ವಿಷಮಬಂಧದಿಂದ ಭಯಾನಕರಸ, ಓಜೋಮಯ ಉಕ್ತಿಗಳಿಂದ ರೌದ್ರರಸ ಆಸ್ವಾದಯೋಗ್ಯವಾದುವೆಂದು ನೃಪತುಂಗದೇವನ ಮತ.

100. *Hāsya* (humor) involves rejoicing and comes with sweet words; *bībhatsa* (the macabre) is associated with a relaxed composition *(śithila bandha*);

bhayānaka with a sonically inconsistent composition; _raudra-rasa_ contains energetic expressions. This is the way of Nṛpatuṅga.

ಉ.ಮಾ.

ಮಾತುಗಳಾವುವಾನುಮುಪವರ್ಣಿತಮಾರ್ಗಯುತಪ್ರಯೋಗಸಂ
ಜಾತವಿಭಾಗದಿಂ ನೆಗೞ್ದ ಕನ್ನಡದೊಳ್ ಗುಣಮುಂ ತಗುಳ್ಗುಗುಂ
ನೀತಿನಿರಂತರಾನುಗತವೃತ್ತಿವಿಕಲ್ಪಿತಮುಂ ತದೀಯ ನಿ
ರ್ಣೀತಿಯನೀ ತೆಱತ್ತು ತಱಿಸಲ್ಗೆ ಬುಧೋತ್ತಮರುಕ್ತಿಪೂರ್ವಕಂ

೧೦೧

ಮಾತುಗಳ್ ಆವುವಾನುಮ್ ಉಪವರ್ಣಿತ ಮಾರ್ಗಯುತ ಪ್ರಯೋಗ ಸಂಜಾತ ವಿಭಾಗದಿನ್ ನೆಗೞ್ದ ಕನ್ನಡದೊಳ್ ಗುಣಮನ್ ತಗುಳ್ಗುಗುಮ್ ನೀತಿನಿರಂತರ ಅನುಗತ ವೃತ್ತಿ ವಿಕಲ್ಪಿತಮನ್ ತದೀಯ ನಿರ್ಣೀತಿಯನ್ ಈ ತೆಱತ್ತು ತಱಿಸಲ್ಗೆ ಬುಧೋತ್ತಮರ್ ಉಕ್ತಿಪೂರ್ವಕಮ್

ಯಾವ ಮಾತುಗಳೇ ಆಗಲಿ, ಅವು ಈವರೆಗೆ ಹೇಳಲಾದ ಮಾರ್ಗದ್ವಯ ವಿಭಾಗದ ಪ್ರಕಾರ ಪ್ರಯೋಗಿಸುವುದಾದರೆ ಕನ್ನಡದಲ್ಲಿ ಗುಣವೇ ಆಗುತ್ತದೆ. ನೀತಿನಿರಂತರನಾದ ನೃಪತುಂಗನು ಹೇಳಿರುವ ಭೇದಗಳನ್ನು ಅವುಗಳಿಗೆ ಹೇಳಿದ ಲಕ್ಷಣಗಳನ್ನು ಬುಧೋತ್ತಮರು ಪ್ರಯೋಗಪೂರ್ವಕವಾಗಿ ಈ ರೀತಿ ನಿಶ್ಚಯಿಸಲಿ.

101. Whatever may be the words used, if they follow the characteristic features of the two _mārgas_, they become meritorious. Let the learned take usage into consideration and follow the _mārgas_ formulated by Nṛpatuṅga.

ಮಾರ್ಗಾನುರೂಪಪದಪ್ರಯೋಗ

Usage of Words According to Mārga

ಉ.ಮಾ.

ನೋಡುವೆನಾ ಮಹೀಪತಿಯನರ್ಥಿಗಣಾರ್ಥಿತಕಲ್ಪವೃಕ್ಷನಂ
ಬೇಡುವೆನರ್ಥಸಂಚಯಮನೆಂಬುದಿದುತ್ತರಮಾರ್ಗವಾಚಕಂ

ನೀಡುಮುದಾತ್ತಚಾರುಗುಣನಂ ಮನದೊಳ್ ನೆಱೆ
ನೋಟ್ಟೆನಟ್ಟಿಯೊಳ್
ಕೂಡಿರವೇಟ್ಟೆನೆಂಬುದಿದು ದಕ್ಷಿಣಮಾರ್ಗವಿಚಕ್ಷಣೋದಿತಂ ೧೦೨

ನೋಡುವೆನ್ ಆ ಮಹೀಪತಿಯನ್ ಅರ್ಥಿಗಣ ಅರ್ಥಿತ ಕಲ್ಪವೃಕ್ಷನನ್ ಬೇಡುವೆನ್ ಅರ್ಥ ಸಂಚಯಮನ್ ಎಂಬುದು ಇದು ಉತ್ತರ ಮಾರ್ಗ ವಾಚಕಮ್. ನೀಡುಮ್ ಉದಾತ್ತ ಚಾರು ಗುಣನನ್ ಮನದೊಳ್ ನೆಱೆ ನೋಟ್ಟೆನ್ ಅಟ್ಟೆಯೊಳ್ ಕೂಡಿರವೇಟ್ಟೆನ್ ಎಂಬುದು ಇದು ದಕ್ಷಿಣ ಮಾರ್ಗ ವಿಚಕ್ಷಣ ಉದಿತಮ್

"ಬೇಡುವವರಿಗೆ ಬೇಡಿದ್ದನ್ನು ಕೊಡುವ ಕಲ್ಪವೃಕ್ಷವಾದ ಆ ಮಹೀಪತಿಯನ್ನು 'ನೋಡುವೆನು'. ಹಣದ ರಾಶಿಯನ್ನು 'ಬೇಡುವೆನು' ಎಂಬ ಪ್ರಯೋಗಗಳು ಉತ್ತರ ಮಾರ್ಗದ ಸೂಚಕಗಳು, ಉದಾತ್ತವಾದ ಮತ್ತು ಒಳ್ಳೆಯ ಗುಣಗಳಿರುವವನನ್ನು ಮನಸ್ಸಿನಲ್ಲಿ 'ನೆರೆನೋಳ್ಪೆನು', ಪ್ರೀತಿಯಿಂದ 'ಕೂಡಿರವೇಳ್ಪೆನು" ಎಂದು ಪ್ರಯೋಗಿಸಿದರೆ ಅದು ದಕ್ಷಿಣ ಮಾರ್ಗ.

'ನೋಡುವೆನ್', 'ಬೇಡುವೆನ್' ಎಂದು ಹೇಳಿದರೆ ಉತ್ತರ ಮಾರ್ಗವೆಂದೂ 'ನೆಱೆ ನೋಟ್ಟೆನ್', 'ಕೂಡಿರವೇಟ್ಟೆನ್' ಎಂದು ಹೇಳಿದರೆ ದಕ್ಷಿಣ ಮಾರ್ಗವೆಂದು ಹೇಳಲು ಸ್ಪಷ್ಟವಾದ ಕಾರಣ ತಿಳಿಯದು. ದಂಡಿ ಗುರುತಿಸಿದ ಉತ್ತರ ದಕ್ಷಿಣ ಶೈಲಿಗಳಿಗೂ ಶ್ರೀವಿಜಯನು ಉದಾಹರಿಸುತ್ತಿರುವ ಉತ್ತರ ದಕ್ಷಿಣ ಮಾರ್ಗಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿದೆ.

102. "I will see the king, who is a wish-granting tree (*kalpa-vṛkṣa*), for the needy ask for his financial help" is an example of the Northern Way (*uttara-mārga*). "I think of the noble and gracious king, gaze upon him, and ask for money" is an example of the Southern Way (*dakṣiṇa-mārga*).

This portion of the chapter is purely connected with Kannada word usage and hence it is written independent of the other sections to reflect the writing practices of the

day. By the usages cited by the author, we can only imagine that certain words (perhaps Sanskrit words, in most cases) render the expression as a reflection of the Northern Way.

ಉ.ಮಾ.

ಸೂಡುವೆನೆಂಬುದಲ್ಲದಣಮಾಗದು ಸೂೞ್ಪೆನಮೋಘಮೆಂಬುದುಂ
ಕೂಡುವೆನೆಂಬುದಲ್ಲದಿನಿಸಾವುದುಮಾಗದು ಕೂೞ್ಪೆನೆಂಬುದುಂ
ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದು ಕಾೞ್ಪೆನೆಂಬುದುಂ
ತೋಡುವೆನೆಂಬುದಲ್ಲದಿಡಲಾಗದು ನಿಕ್ಕುವ ತೋೞ್ಪೆನೆಂಬುದಂ

೧೦೩

ಸೂಡುವೆನ್ ಎಂಬುದು ಅಲ್ಲದೆ ಅಣಮ್ ಆಗದು ಸೂೞ್ಪೆನ್ ಅಮೋಘಮ್ ಎಂಬುದುಮ್ ಕೂಡುವೆನ್ ಎಂಬುದು ಅಲ್ಲದೆ ಇನಿಸು ಆವುದುಮ್ ಆಗದು ಕೂೞ್ಪೆನ್ ಎಂಬುದುಮ್ ಕಾಡುವೆನ್ ಎಂಬುದು ಅಲ್ಲದೆ ಸುಮಾರ್ಗದೊಳ್ ಆಗದು ಕಾೞ್ಪೆನ್ ಎಂಬುದುಮ್ ತೋಡುವೆನ್ ಎಂಬುದು ಅಲ್ಲದೆ ಇಡಲಾಗದು ನಿಕ್ಕುವ ತೋೞ್ಪೆನ್ ಎಂಬುದನ್

'ಸೂಡುವೆನ್' (ಧರಿಸುತ್ತೇನೆ) ಎನ್ನದೆ 'ಸೂೞ್ಪೆನ್' ಸರಿಯಲ್ಲ. 'ಕೂಡುವೆನ್' ಎನ್ನದೆ 'ಕೂೞ್ಪೆನ್' ಸರಿಯಲ್ಲ. 'ಕಾಡುವೆನ್' ಎಂಬುದಲ್ಲದೆ 'ಕಾೞ್ಪೆನ್' ಎಂದು ಹೇಳುವುದು ಸರಿಯಲ್ಲ. 'ತೋಡುವೆನ್' ಎನ್ನದೆ 'ತೋೞ್ಪೆನ್' ಎಂಬುದು ಸರಿಯಲ್ಲ.

103. Whatever be the *mārga,* '*sūḍuven*' (I will tie) is a correct usage and '*sūḻpen*' is not. Likewise: '*kūḍuven*' (I will join) is correct and '*kūḻpen*' is not; '*kāḍuven*' (I will give trouble) is correct and '*kāḻpen*' is not; '*tōḍuven*' (I will dig) is correct and '*tōḻpen*' is incorrect.

To make his point here, the author seems to cite archaic words that are not to be used in any *mārga.*

ಚಂಪಕಮಾಲೆ

> ಬರಿಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂ
> ತಿರಿಸುವೆನಂತನಂಗಸುಖಸಂಗತಮಂಗಳಕಾರಣಂಗಳಂ
> ತರಿಸುವೆನಾಂ ಮನೋನಯನವಲ್ಲಭನೊಳ್ ಮನದೊಂದಲಂಪಿನಿಂ
> ನೆರೆವೆನಮೋಘಮೆಂಬುದಿದು ದಕ್ಷಿಣಮಾರ್ಗವಿಶೇಷಭಾಷಿತಂ ೧೦೪

ಬರಿಸುವೆನ್ ಇಂದು ನಂದನ ವನಾಂತರದಲ್ಲಿಗೆ ಕಾಂತನನ್ ಸಮಂತು ಇರಿಸುವೆನ್ ಅಂತು ಅನಂಗ ಸುಖ ಸಂಗತ ಮಂಗಳ ಕಾರಣಂಗಳನ್ ತರಿಸುವೆನ್ ಆನ್ ಮನೋನಯನ ವಲ್ಲಭನೊಳ್ ಮನದ ಒಂದು ಅಲಂಪಿನಿನ್ ನೆರೆವೆನ್ ಅಮೋಘಮ್ ಎಂಬುದು ಇದು ದಕ್ಷಿಣ ಮಾರ್ಗ ವಿಶೇಷ ಭಾಷಿತಮ್

"ನಂದನವನದೆಡೆಗೆ ಕಾಂತನನ್ನು ಇಂದು 'ಬರಿಸುವೆನು'; ಅವನನ್ನು ಸಮಾಧಾನದಿಂದ 'ಇರಿಸುವೆನು'. ಅಲ್ಲಿಗೆ ಸಕಲ ಸುಖಭೋಗ ಸಾಧನಗಳಾದ ಮಂಗಳ ಸಾಮಗ್ರಿಗಳನ್ನೆಲ್ಲ 'ತರಿಸುವೆನು'; ಆ ಮನೋನಯನವಲ್ಲಭವನಲ್ಲಿ ಒಲವಿನಿಂದ 'ನೆರೆವೆನು" ಎಂಬ ರೀತಿಯ ಕ್ರಿಯಾರೂಪಗಳು ದಕ್ಷಿಣ ಮಾರ್ಗದ ವಿಶೇಷೋಕ್ತಿಗಳಾಗಿವೆ.

104. "I will make him come to the garden of enjoyment *(nandana-vana)*. I will keep him quiet. I will get all the materials for enjoyment. I will be with him, who is like the god Love." Verbs like the ones used here are special usages of the Southern Way (*dakṣiṇa-mārga*).

ಚಂ.ಮಾ.

> ಬರಿಪೆನಮೋಘಮಿಂದುಪವನಾಂತರದಲ್ಲಿಗೆ ನಲ್ಲನಂ ತಗು
> ಳ್ದಿರಿಪೆನನಾರತಂ ಸುರತರಾಗನಿರೂಪಣಕಾರಣಂಗಳಂ
> ತರಿಪೆನನಾಕುಳಂ ಮನದಲಂಪಿನೊಳಾ ಮದನೋಪಮಾನನೊಳ್
> ನೆರೆವೆನಭಂಗಮೆಂಬ ವಚನಂಗಳಿವುತ್ತರಮಾರ್ಗವರ್ತಿಗಳ್ ೧೦೫

ಬರಿಪೆನ್ ಅಮೋಘಮ್ ಇಂದು ಪವನಾಂತರದಲ್ಲಿಗೆ ನಲ್ಲನನ್ ತಗುಳ್ದು ಇರಿಪೆನ್ ಅನಾರತಮ್ ಸುರತರಾಗ ನಿರೂಪಣ ಕಾರಣಂಗಳನ್ ತರಿಪೆನ್ ಅನಾಕುಳಮ್ ಮನದ ಅಲಂಪಿನೊಳ್ ಆ ಮದನ ಉಪಮಾನನೊಳ್ ನೆರೆವೆನ್ ಅಭಂಗಮ್ ಎಂಬ ವಚನಂಗಳ್ ಇವು ಉತ್ತರಮಾರ್ಗ ವರ್ತಿಗಳ್

"ಇಂದು ನಲ್ಲನನ್ನು ತಪ್ಪದೆ ಉಪವನದ ಕಡೆಗೆ 'ಬರಿಪೆನು'; ಸಮಾಧಾನದಿಂದ ಅವನನ್ನು 'ಇರಿಪೆನು'; ಸುಖಭೋಗದ ಸಾಮಗ್ರಿಗಳನ್ನೆಲ್ಲ 'ತರಿಪೆನು'; ವ್ಯಾಕುಲವಿಲ್ಲದೆ ಮನದೊಲವಿನಿಂದ ಮನ್ಮಥನಿಗೆ ಸಮಾನನಾದ ಅವನಲ್ಲಿ 'ನೆರೆವೆನು" ಎಂಬ ಉಕ್ತಿಗಳು ಉತ್ತರ ಮಾರ್ಗಕ್ಕೆ ಸೇರಿದಂತಹವು.

105. "I will definitely make my lover come to the garden. I will keep him quiet. I will make all the preparations for our sexual enjoyment. I will be with him who is like the god Love without any obstruction." These are special features of the Northern Way (*uttara-mārga*).

Except for a change in the form of the verbs, there is no difference in the meaning of the verses in the two distinct *mārgas.*

ಚಂ.ಮಾ.

ಅನುಪಮನಂ ಬರಿಪ್ಪೆನನುರಾಗದೆ ನಲ್ಲನನಿಂದು ಮಿಕ್ಕನಂ
ದನವನದಲ್ಲಿಗಲ್ಲಿಗೆ ತರಿಪ್ಪೆನನಂಗಸುಖೋಚಿತಂಗಳಾ
ನನುನಯದಿಂದಿರಿಪ್ಪೆನಿನಿತುಂ ಸುರತಾಸವಸೇವನಾಸನಾ
ತನಸುಖದಿಂದಿರಿಪ್ಪೆನನುರಾಗದಿನೆಂಬುದಿದುತ್ತರೋತ್ತರಂ ೧೧೬

ಅನುಪಮನನ್ ಬರಿಪ್ಪೆನ್ ಅನುರಾಗದೆ ನಲ್ಲನನ್ ಇಂದು ಮಿಕ್ಕ ನಂದನವನದಲ್ಲಿಗೆ ಅಲ್ಲಿಗೆ ತರಿಪ್ಪೆನ್ ಅನಂಗ ಸುಖೋಚಿತಂಗಳಾನ್ ಅನುನಯದಿನ್ ಇಂದು ಇರಿಪ್ಪೆನ್ ಇನಿತುಮ್ ಸುರತ ಆಸವಸೇವನಾ ಸನಾತನ ಸುಖದಿಂದ ಇರಿಪ್ಪೆನ್ ಅನುರಾಗದಿನ್ ಎಂಬುದು ಇದು ಉತ್ತರೋತ್ತರಮ್

ಅನುಪಮನಾದ ನಲ್ಲನನ್ನು ಅನುರಾಗದಿಂದ 'ಬರಿಪ್ಪೆನ್'; ನಂದನವನದೆಡೆಗೆ 'ತರಿಪ್ಪೆನು' ಮನ್ಮಥ ಸುಖೋಚಿತವಾದವನ್ನು ಅನುನಯದಿಂದ 'ಇರಿಪ್ಪೆನು'; ಸುರತ ಮತ್ತು ಮದ್ಯಪಾನಾದಿಗಳಿಂದ, ಅನುರಾಗದಿಂದ 'ಇರಿಪ್ಪೆನು' ಎಂಬುದು ಉತ್ತರೋತ್ತರ.

ದಕ್ಷಿಣೋತ್ತರ ಮಾರ್ಗಗಳ ಜತೆಗೆ ಶ್ರೀವಿಜಯನು ಉತ್ತರೋತ್ತರ ಮಾರ್ಗವನ್ನು ಸೇರಿಸಿರುವುದು ವಿಶೇಷ. 'ಬರಿಪ್ಪೆನ್', 'ತರಿಪ್ಪೆನ್', 'ಇರಿಪ್ಪೆನ್' ಎಂಬ ಉಕ್ತಿಗಳನ್ನು ಈ ಮಾರ್ಗಕ್ಕೆ ಉದಾಹರಣೆಯಾಗಿ ಕೊಟ್ಟಿರುವುದನ್ನು ಗಮನಿಸ ಬಹುದು.

106. "Today, I will compel the incomparable lover to visit the garden of enjoyment. I will make all the preparations for our sexual enjoyment. I will persuade him to stay and enjoy sex, along with drinks, and all kinds of bodily pleasures." This is an example of an extreme Northern style (*uttarōttara*).

The only difference between the two *mārgas* is the extreme Northern style's usage of consonantal clusters in verbs. This is an additional categorization added by Śrīvijaya.

ಚಂ.ಮಾ.

ಪರಸುವೆನೆನ್ನದಾಂ ಪರಪೆನೆಂಬುದಿದಾಗದು ಚಿತ್ತನಾಥನೊಳ್
ಬೆರಸುವೆನೆನ್ನದಾಂ ಬೆರಪೆನೆಂಬುದಿದಾಗದು ಮಾರ್ಗಯುಗ್ಮದೊಳ್
ನಿರತಿಶಯಾನುಭಾವಭವನಪ್ಪ ಮಹಾನೃಪತುಂಗದೇವನಾ
ದರದೊಳೆ ಪೇಲ್ದ ಮಾರ್ಗಗತಿಯಿಂ ತಱಿಸಲ್ಗಿದನಿಂತೆ ಕಬ್ಬಿಗರ್ ೧೦೭

ಪರಸುವೆನ್ ಎನ್ನದೆ ಆನ್ ಪರಪೆನ್ ಎಂಬುದು ಇದು ಆಗದು, ಚಿತ್ತನಾಥನೊಳ್ ಬೆರಸುವೆನ್ ಎನ್ನದೆ ಆನ್ ಬೆರಪೆನ್ ಎಂಬುದು ಇದು ಆಗದು ಮಾರ್ಗಯುಗ್ಮದೊಳ್ ನಿರತಿಶಯ ಅನುಭಾವ ಭವನಪ್ಪ

ಮಹಾನೃಪತುಂಗದೇವನ್ ಆದರದೊಳೆ ಪೇೞ್ದ ಮಾರ್ಗಗತಿಯಿನ್ ತಱಿಸಲ್ಗೆ ಇದನ್ ಇಂತೆ ಕಬ್ಬಿಗರ್

ನಿರತಿಶಯ ಪ್ರಭಾವಶಾಲಿಯಾದ ಮಹಾನೃಪತುಂಗದೇವನು ಆದರದಿಂದ ಹೇಳಿದ ಮಾರ್ಗಗತಿಯಂತೆ 'ಪರಸುವೆನ್' ಎನ್ನಬಹುದೇ ಹೊರತು 'ನಾನು ಪರಪೆನ್' ಎನ್ನಲಾಗುವುದಿಲ್ಲ. ಹೃದಯೇಶ್ವರನಲ್ಲಿ 'ಬೆರಸುವೆನ್' ಎನ್ನದೆ 'ನಾನು ಬೆರಪೆನ್' ಎನ್ನಲಾಗದು. ಇದನ್ನು ತಿಳಿದು ಕವಿಗಳು ನಿರ್ಣಯಮಾಡಬೇಕು.

107. In both the *mārgas*, '*parasuven*' (I will bless) is to be used and not '*parapen*'; '*cittanāthanoḷ berasuven*' (I will join my beloved) is to be used and not '*berapen*'. The poets should thus deliberate on what has been intriguingly explained by the excellent thinker Nṛpatuṅga-dēva and accordingly decide the nature of *mārga* employed in a given verse.

ಚಂ.ಮಾ.

ಮನದೊಳಗಾಗಳುಂ ನಿಱಿಸದಾ ಮುಳಿಸಂ ಗತರಾಗಮೋಹನೊ
ಯ್ಯನೆ ಮುನಿನಾಥನೆಂಬ ವಚನಾಂತರಮಿಂತಿದು ದಾಕ್ಷಿಣಾತ್ಯಕಂ
ಮನದೊಳಗಾಗಳುಂ ನಿಱಿಸದೊಯ್ಯನೆ ಮೋಹಮನಂತೆ ರಾಗಮಂ
ಮುನಿಸುಮನೊಲ್ಲದಂ ಮುನಿಪನೆಂಬುದಿದಕ್ಕುಮುದೀಚ್ಯವಾಚಕಂ

೧೦೮

ಮನದೊಳಗೆ ಆಗಳುಮ್ ನಿಱಿಸದೆ ಆ ಮುಳಿಸನ್ ಗತ ರಾಗ ಮೋಹನ್ ಒಯ್ಯನೆ ಮುನಿನಾಥನ್ ಎಂಬ ವಚನಾಂತರಮ್ ಇಂತು ಇದು ದಾಕ್ಷಿಣಾತ್ಯಕಮ್. ಮನದೊಳಗೆ ಆಗಳುಮ್ ನಿಱಿಸದೆ ಒಯ್ಯನೆ ಮೋಹಮನ್ ಅಂತೆ ರಾಗಮನ್ ಮುನಿಸುಮನ್ ಒಲ್ಲದನ್ ಮುನಿಪನ್ ಎಂಬುದು ಇದು ಅಕ್ಕುಮ್ ಉದೀಚ್ಯ ವಾಚಕಮ್

"ಮನಸ್ಸಿನಲ್ಲಿ ಯಾವಾಗಲೂ ಕೋಪವನ್ನು ಇಟ್ಟುಕೊಳ್ಳದೆ ವಿಗತರಾಗ–ಮೋಹನನಾದವನೇ ನಿಜವಾಗಿಯೂ ಮುನಿನಾಥ" ಎಂಬುದು ದಕ್ಷಿಣ

ಮಾರ್ಗ. "ಮನಸ್ಸಿನಲ್ಲಿ ಯಾವಾಗಲೂ ಮೋಹವನ್ನೂ ರಾಗವನ್ನೂ ಕೋಪವನ್ನೂ ಸೇರಿಸದವನೇ ಮುನೀಶ್ವರ" ಎಂದರೆ ಉತ್ತರಮಾರ್ಗ.

ದಕ್ಷಿಣಮಾರ್ಗದಲ್ಲಿ ಗತರಾಗಮೋಹನೆಂಬ ಸಮಾಸ ಮುನಿನಾಥನೊಂದಿಗೆ ಅನ್ವಯಿಸುತ್ತದೆ. ಇದು ದಕ್ಷಿಣಮಾರ್ಗ. ಮೋಹ, ರಾಗ, ಕೋಪ ಎಂಬುವು 'ಸೇರಿಸದ' ಎಂಬ ಕ್ರಿಯಾಪದದೊಡನೆ ಅನ್ವಯಿಸಿದಾಗ ಉತ್ತರಮಾರ್ಗವೆಂದು ಹೇಳಲಾಗಿದೆ.

108. "The real lord of sages (*muni-nātha*) is the one who never feels angry in his mind and the one who is devoid of attachment and infatuation." This sentence is composed in the Southern Way. "A lord of sages (*munīśvara*) is one who never succumbs to infatuation, attachment, and anger." Expressed thus, it is the Northern Way.

ಚಂ.ಮಾ.

ತ್ರಿದಶಗಣೇಶಮೌಳಿಮಣಿಪೀಠನಿಷೇವಿಗಳೊಳ್ ಮುನೀಂದ್ರನಾ
ಪದಯುಗಳಂಗಳೊಳ್ ಮುದದೆ ಬಾಗುವೆನೆಂಬುದು ದಕ್ಷಿಣಾಯನಂ
ವಿದಿತಸುರಾಧಿರಾಜಮಕುಟಾಗ್ರಸಮರ್ಪಿತದೊಳ್ ಮುನೀಂದ್ರನಾ
ಪದಯುಗದೊಳ್ ಮನೋಮುದದೆ ಬಾಗುವೆನೆಂಬುದಿ
ದುತ್ತರಾಯಣಂ ೧೦೯

ತ್ರಿದಶ ಗಣೇಶ ಮೌಳಿ ಮಣಿ ಪೀಠ ನಿಷೇವಿಗಳೊಳ್ ಮುನೀಂದ್ರನಾ ಪದಯುಗಳಂಗಳೊಳ್ ಮುದದೆ ಬಾಗುವೆನ್ ಎಂಬುದು ದಕ್ಷಿಣಾಯನಮ್. ವಿದಿತ ಸುರಾಧಿರಾಜ ಮಕುಟಾಗ್ರ ಸಮರ್ಪಿತದೊಳ್ ಮುನೀಂದ್ರನಾ ಪದಯುಗದೊಳ್ ಮನೋಮುದದೆ ಬಾಗುವೆನ್ ಎಂಬುದು ಇದು ಉತ್ತರಾಯಣಮ್.

"ಸುರೇಂದ್ರನ ಮಣಿ ಕಿರೀಟದ ಸೇವೆಪಡೆದವುಗಳಾದ ಮುನೀಂದ್ರನ ಪದಯುಗಳಗಳಿಗೆ ಮುದದಿಂದ ಬಾಗುವೆನು" ಎಂದರೆ ದಕ್ಷಿಣಮಾರ್ಗ. "ಸುರಾಧಿರಾಜನ ಮಕುಟಾಗ್ರ ಸಮರ್ಪಿತವಾದ ಮುನೀಂದ್ರನ ಪದಯುಗಕ್ಕೆ ಸಂತೋಷದಿಂದ ಬಾಗುವೆನು" ಎಂಬುದು ಉತ್ತರಮಾರ್ಗ.

ಇಲ್ಲಿ ದಕ್ಷಿಣ ಮಾರ್ಗದಲ್ಲಿ 'ನಿಷೇವಿಗಳೊಳ್', 'ಪದಯುಗಳಂಗಳೊಳ್' ಎಂದು ಬಹುವಚನಪ್ರಯೋಗವಾದರೆ ಉತ್ತರಮಾರ್ಗದಲ್ಲಿ 'ಸಮರ್ಪಿತದೊಳ್', 'ಪದಯುಗದೊಳ್' ಎಂದು ಏಕವಚನ ಪ್ರಯೋಗವಾಗಿದೆ.

109. "I will prostrate before the great sage, whose feet are worshipped by the bejeweled crown of the lord of gods (Surēndra)." Expressed thus, it is the Southern Way. "With devotion, I will prostrate at the two feet of the great sage, which were touched by the lord of gods." This is and example of the Northern Way.

The first example renders "feet" and the adjectives in the sentence as plural number. In the second one, these same words are singular.

ಚಂ.ಮಾ.

ವಿಳಸಿತಸಸ್ಯಸಂಪದಭಿರಾಮಗುಣೋದಯೆ ತಾಳ್ದಿದಳ್ ಧರಾ
ಲಳನೆ ವಿಶಾಲಲಕ್ಷ್ಮಿಯನನಾರತಮೆಂಬುದು ದಕ್ಷಿಣಾಪಥಂ
ಜಳನಿಧಿಮೇಖಲಾವಲಯಿತಾಂಗಿ ಕರಂ ಸೊಗಯಿಪ್ಪುದಾಯ್ತು ಭೂ
ಲಳನೆ ವಿಶಾಲಲಕ್ಷ್ಮಿಯಿನನಾಕುಳಮೆಂಬುದಿದುತ್ತರಾಪಥಂ ೧೧೦

ವಿಳಸಿತ ಸಸ್ಯ ಸಂಪತ್ ಅಭಿರಾಮ ಗುಣೋದಯೆ ತಾಳ್ದಿದಳ್ ಧರಾಲಳನೆ ವಿಶಾಲಲಕ್ಷ್ಮಿಯನ್ ಅನಾರತಮ್ ಎಂಬುದು ದಕ್ಷಿಣಾಪಥಮ್. ಜಳನಿಧಿ ಮೇಖಲಾವಲಯಿತ ಅಂಗಿ ಕರಮ್ ಸೊಗಯಿಪ್ಪುದು ಆಯ್ತು ಭೂಲಳನೆ ವಿಶಾಲಲಕ್ಷ್ಮಿಯಿನ್ ಅನಾಕುಳಮ್ ಎಂಬುದು ಇದು ಉತ್ತರಾಪಥಮ್

"ಧರಾಲಲನೆ ಸಸ್ಯಸಂಪದದ ಸುಂದರಗುಣಸಮೇತವಾಗಿ ನಿರಂತರವಾಗಿ ಅಧಿಕ ಶೋಭೆಯನ್ನು ಪಡೆದಿದ್ದಾಳೆ" ಎಂಬುದು ದಕ್ಷಿಣಮಾರ್ಗ. "ಸಾಗರವೆಂಬ ಒಡ್ಯಾಣದಿಂದ ಸುತ್ತುವರಿಯಲ್ಪಟ್ಟ ನಡುವುಳ್ಳ ಭೂಲಲನೆ ಅಧಿಕ ಶೋಭೆಯಿಂದ ಸೊಬಗನ್ನು ಪಡೆಯಿತು" ಎಂದರೆ ಉತ್ತರಮಾರ್ಗ.

ದಕ್ಷಿಣಮಾರ್ಗದ ಉದಾಹರಣೆಯಲ್ಲಿ ಭೂದೇವಿಯನ್ನು ಕುರಿತ ಕ್ರಿಯಾಪದ ಸ್ತ್ರೀಲಿಂಗದಲ್ಲಿದೆ. ಉತ್ತರಮಾರ್ಗದ ಉದಾಹರಣೆಯಲ್ಲಿ ಅದು ನಪುಂಸಕಲಿಂಗದಲ್ಲಿದೆ.

110. An example of the Southern Way: "The glorious beauty of the vegetation has conferred Lady Earth with an extraordinary splendor." An example of the Northern Way: "Lady Earth, girdled by the ocean, possesses the beauty of an extraordinary splendor."

In the first example, the verb referring to Lady Earth is in the feminine gender while, in the second example, it is in the neuter gender.

ಗೀತಿಕೆ ನಿಕ್ಕುವಮಿಂತು ಮಾರ್ಗಯುಗದೊಳ್
ತಕ್ಕುದನಱಿಯೆ ಪೇೞ್ದಿನಿಸೊಂದುದ್ದೆಸಮಂ
ಮಿಕ್ಕಗುಣೋದಯರ್ ಕಳೆಯದೆಂತು ಸ
ಯ್ಯುಕ್ಕುಮಂತಾಗೆ ಬಗೆದು ಪೇೞ್ಗೆ ಕಬ್ಬದೊಳ್ ೧೧೧

ನಿಕ್ಕುವಮ್ ಇಂತು ಮಾರ್ಗಯುಗದೊಳ್ ತಕ್ಕುದನ್ ಅಱಿಯೆ ಪೇೞ್ದಿನ್ ಇನಿಸು ಒಂದು ಉದ್ದೆಸಮನ್ ಮಿಕ್ಕ ಗುಣೋದಯರ್ ಕಳೆಯದೆ ಎಂತು ಸಯ್ತು ಅಕ್ಕುಮ್ ಅಂತು ಆಗೆ ಬಗೆದು ಪೇೞ್ಗೆ ಕಬ್ಬದೊಳ್

ಮಾರ್ಗಯುಗದಲ್ಲಿ ಪ್ರಯೋಗಗಳನ್ನು ನಿರ್ಣಯಿಸಿ ತಿಳಿದ ಮಟ್ಟಿಗೆ ಹೇಳಿದ್ದೇನೆ. ಗುಣಾತಿಶಯದ ಕವಿಗಳು ಇದನ್ನು ಕಡೆಗಣಿಸದೆ ಹೇಗೆ ಸರಿ ಕಾಣುವುದೋ ಹಾಗೆ ಕಾವ್ಯದಲ್ಲಿ ಪ್ರಯೋಗ ಮಾಡಲಿ.

111. I have thus presented a few examples from both *mārgas.* Let others be considered and used in poems by the learned. Other kinds of sound-related tropes (*śabdālaṅkāras*) are difficult to detail.

ದುಷ್ಕರ ಕಾವ್ಯಬಂಧಗಳು

Difficult Poetic Compositions (*duṣkara-kāvya-bandha*)

....ಮಿಕ್ಕಶಬ್ದಾಲಂಕಾರಮಕ್ಕುಂ ದುಷ್ಕರಂ

ಶ್ಲೋಕ [ಗತಪ್ರತ್ಯಾಗತಂ ಗೂಢಚತುರ್ಥಂ ದ್ವ್ಯಕ್ಷರಾದಿಕಂ
ಅತಾಲವ್ಯಂ ನಿರೋಷ್ಠ್ಯಂ ಸರ್ವತೋಭದ್ರಂ ನಿರುತ್ತರಂ] ೧೧೧

ಇವೆಲ್ಲ ದುಷ್ಕರ ಕಾವ್ಯಬಂಧಗಳ ಹೆಸರುಗಳು.

ಶ್ಲೋಕ ಗೋಮೂತ್ರಿಕಂ ಸಯಮಕಂ । ಪ್ರೇಮದಿಂ ಗೋಪಿತಕ್ರಿಯಂ
ಶ್ರೀಮದರ್ಧಭ್ರಮಂ ಚಕ್ರ । ನಾಮಂ ಮುರಜಬಂಧಕಂ ॥ ೧೧೨

ಗೋಮೂತ್ರಿಕಮ್ ಸಯಮಕಮ್ ಪ್ರೇಮದಿನ್ ಗೋಪಿತಕ್ರಿಯಮ್ ಶ್ರೀಮತ್ ಅರ್ಧ ಭ್ರಮಮ್ ಚಕ್ರ ನಾಮಮ್ ಮುರಜ ಬಂಧಕಮ್

ಗೋಮೂತ್ರಿಕ, ಯಮಕ, ಗೋಪಿತಕ್ರಿಯ, ಅರ್ಧಭ್ರಮ, ಚಕ್ರಬಂಧ, ಮುರಜಬಂಧ–

ಗೋಮೂತ್ರಿಕ, ಯಮಕ, ಗೋಪಿತಕ್ರಿಯ, ಅರ್ಧಭ್ರಮ, ಚಕ್ರಬಂಧಾದಿಗಳೆಲ್ಲ ದುಷ್ಕರ ಕಾವ್ಯವರ್ಗಕ್ಕೆ ಸೇರುತ್ತವೆ. ಇವೆಲ್ಲ ದಂಡಿಯ ಪ್ರಭಾವದಿಂದ ಕವಿರಾಜಮಾರ್ಗದಲ್ಲಿ ಸೇರಿಕೊಂಡಿವೆ. ಇಲ್ಲಿ ಅನೇಕ ಕಾವ್ಯ ಪ್ರಭೇದಗಳನ್ನು ಶ್ಲೋಕದಲ್ಲಿ ಹೇಳಿರುವುದು ವಿಶೇಷ.

112. Some examples of difficult poetic compositions: the *gōmūtrika* design (a composition which can be arranged in the figure of the flow of ‘cow-urine’); the *yamaka* (‘doubling’ of syllables or sound-doubling); the *gōpita-kriya* (a poem where the ‘main action is concealed’), the *ardha-bhramaka* (a poem designed as a ‘half-rotation’), *cakra-bandha* (a composition with a ‘wheel’ design),

and *muraja-bandha* (a composition with a 'drum' design).

Inspired by Daṇḍin, Śrīvijaya has introduced some difficult figurative poetic compositions. The original verses are difficult enough and made even more difficult when copied in manuscripts. Hence it is very difficult to explain the examples given by the author, as he does not define them. Interestingly, they are written in *ślōka* meter, which is generally not used in Kannada poetry.

ಶ್ಲೋಕ ಇವು ದುಷ್ಕರಕಾವ್ಯಂಗಳ್ । ಸವಿಶೇಷವಿವರ್ತಿಗಳ್
ಸುವಿಚಾರಿತಮೀ ತೋರ್ಪೆ । ನಿವಱ ಲಕ್ಷ್ಯಭೇದಮಂ ॥ ೧೧೩

ಇವು ದುಷ್ಕರ ಕಾವ್ಯಂಗಳ್ ಸವಿಶೇಷ ವಿವರ್ತಿಗಳ್ ಸುವಿಚಾರಿತಮ್ ಈ ತೋರ್ಪೆನ್ ಇವಱ ಲಕ್ಷ್ಯ ಭೇದಮನ್

ಇವು ವಿಶಿಷ್ಟವಾದ ದುಷ್ಕರ ಕಾವ್ಯಗಳು. ಚೆನ್ನಾಗಿ ವಿಚಾರಮಾಡಿ ಇವುಗಳ ಲಕ್ಷ್ಯಭೇದಗಳನ್ನು ತೋರಿಸುವೆನು.

113. These are special compositions that are difficult to deal with. After good amount of thought, I will provide examples for these compositions.

ಗತಪ್ರತ್ಯಾಗತ
Recurring

ಶ್ಲೋಕ ಪದಪಾದಸಮಸ್ತಾರ್ಧ । ಗತಭೇದಚತುಷ್ಟಯಂ
ವಿದಿತಾಳಂಕ್ರಿಯಾಧಾರಂ । ಮೊದಲ್ ಪೇೞ್ದಿದು ದುಷ್ಕರಂ ॥ ೧೧೪

ಪದ ಪಾದ ಸಮಸ್ತ ಅರ್ಧಗತ ಭೇದ ಚತುಷ್ಟಯಮ್ ವಿದಿತ ಅಳಂಕ್ರಿಯಾಧಾರಮ್ ಮೊದಲ್ ಪೇೞ್ದಿದು ದುಷ್ಕರಮ್

ಪದ, ಪಾದ, ಸಮಸ್ತ, ಅರ್ಧಗತ ಎಂಬ ನಾಲ್ಕು ಭೇದಗಳಿವೆ. ಇವು ಪ್ರಸಿದ್ಧವಾದ ಅಲಂಕಾರದ ಆಧಾರದಿಂದ ಇರುತ್ತವೆ. ಮೊದಲು ಹೇಳಿದಂತೆ ಇವು ದುಷ್ಕರವಾದುವು.

114. There are four types of these compositions, each of which is based either on the word (*pada*), the metrical line (*pāda*), the full line of the verse (*samasta*), or the half-verse (*ardha*). As mentioned earlier, they are very difficult to deal with.

These four types are referred to as recurring or repeating (*gata-pratyāgata*) and example of them are given in the following verses.

ಗತಪ್ರತ್ಯಾಗತ : ಪದಗತ

ಶ್ಲೋಕ ಮುನ್ನಂ ತನ್ನಂ ತಾನೆ ತಾನೇ। ಕೆನ್ನಂ ಕೆನ್ನಂ ನಿರಂತರಂ
ಭಿನ್ನಂ ಬಂದಿಪ್ಪನಂತಿನ್ನುಂ। ತನ್ನಿಂ ತನಗಮೇವಳೋ (?) ೧೧೫

ಮುನ್ನಮ್ ತನ್ನಮ್ ತಾನೆ ತಾನೇ ಕೆನ್ನಮ್ ಕೆನ್ನಮ್ ನಿರಂತರಮ್ ಭಿನ್ನಮ್ ಬಂದಿಪ್ಪನ್ ಅಂತು ಇನ್ನುಮ್ ತನ್ನಿಮ್ ತನಗಮ್ ಏವಳೋ

ಇಲ್ಲಿ ಮುನ್ನಮ್, ತನ್ನಮ್, ತಾನೆ, ತಾನೇ ಮೊದಲಾದ ಪದಗಳಲ್ಲಿ ಪದಗಳು ಪುನರುಕ್ತವಾಗಿವೆ. ಈ ಕಾರಣದಿಂದ ಗತಪ್ರತ್ಯಾಗತದಲ್ಲಿ ಪದಗತವಾದುದಕ್ಕೆ ಉದಾಹರಣೆ.

ಇಲ್ಲಿರುವ ಅನೇಕ ಪದ್ಯಗಳು ದುಷ್ಕರ ಕಾವ್ಯಬಂಧಗಳಾಗಿರುವುದಲ್ಲದೆ ಪಾಠ ಪರಿಷ್ಕರಣಕ್ಕೂ ಮೀರಿ ಶಬ್ದಾರ್ಥಕ್ಲಿಷ್ಟತೆಗೆ ಉದಾಹರಣೆಗಳಾಗಿವೆ. ಆದುದರಿಂದ ಪದವಿಭಾಗ ಮತ್ತು ಅರ್ಥನಿರ್ಣಯ ಕಷ್ಟತರವಾಗಿದೆ.

115. Here is an example where the syllables and words are repeated (*pada-pratyāgata*): *munnaṁ-tannaṁ, tāne-tānē, kennaṁ-kennaṁ, tinnuṁ-tanniṁ*. It is, however, very difficult to fix the meaning of the verse.

ಶ್ಲೋಕ ಪೀನಂ ಕಾಡುಮದಕ್ಕೇಂ ಕೇ
ಳೇನ ಮಾನಳಿನಂ ಮದಾ
ತಾನಿಂತಾಳಿಜನಂ .... (?) ೧೧೬

ಇದು ಅಸಂಪೂರ್ಣವಾಗಿದ್ದು ಅರ್ಥ ಸ್ಪಷ್ಟವಾಗಿಲ್ಲ.

116. This is an example where syllables and words repeat (*pada-gata-pratyāgata*). The verse is not complete and the meaning is not clear.

ಶ್ಲೋಕ ನಾದಭೇದನನಾದಾನಾ। ನಾದಾನಾಮದನೋದನಾ
ನಾದನೋದಮನಾದಾನಾ। ನಾದಾನಾನದಭೇದನಾ (?) ೧೧೭

ಇದು ಸಮಸ್ತಗತ ಪ್ರತ್ಯಾಗತದ ಉದಾಹರಣೆ. ಇದು ಪ್ರತಿಲೋಮ ಯಮಕ ರಚನೆಗೆ ಉದಾಹರಣೆಯೂ ಆಗಿದೆ. ಮೊದಲನೆಯ ಪಾದ ಪುನರುಕ್ತವಾಗಿದ್ದು ಅದು ಪ್ರತಿಲೋಮ ರೀತಿಯಲ್ಲಿರುವುದನ್ನು ಗಮನಿಸಬಹುದು.

117. An example where the full line of a verse repeats is called *samasta-gata-pratyāgata.* Here, the first part is totally repeated, in reverse order, as the second part of the *ślōka*.

ಶ್ಲೋಕ ನಾನಮಾನಮಸೇನಾಸೇ। ಸೇನಾಸೇಮನಮಾನನಾ
ದೀನ ಮಾನಮನಾನಾದೀ। ದೀನಾನಾಮನ ಮಾನದೀ (?) ೧೧೮

ಇದು ಅರ್ಥಗತ ಶ್ಲೋಕಾರ್ಧಕ್ಕೆ ಉದಾಹರಣೆ. ಶ್ಲೋಕದ ಒಂದೊಂದು ಸಾಲಿನಲ್ಲಿ ಅರ್ಧದಷ್ಟು ಪ್ರತಿಲೋಮ ರೀತಿಯಲ್ಲಿ ಪುನರುಕ್ತವಾಗಿರುವುದನ್ನು ನೋಡಬಹುದು. ದಂಡಿ ಈ ರೀತಿಯ ಉದಾಹರಣೆಯನ್ನು ಕೊಟ್ಟಿದ್ದಾನೆ (೩.೭೪).

118. The example of a half-verse's repetition (*ardha-gata-pratyāgata*) contains two parts. In each part, half of the verse is repeated in reverse order.

ಶ್ಲೋಕ ಗತಪ್ರತ್ಯಾಗತೋಪಾತ್ತ । ಚತುಷ್ಟಯವಿಕಲ್ಪಮೀ
ಪ್ರತೀತಿ ತೋರ್ಪೆನಾ ಗೂಢ । ಚತುರ್ಥಂಗಳ ಲಕ್ಷ್ಯಮಂ ॥ ೧೧೯

ಗತ ಪ್ರತ್ಯಾಗತ ಉಪಾತ್ತ ಚತುಷ್ಟಯ ವಿಕಲ್ಪಮ್ ಈ ಪ್ರತೀತಿ ತೋರ್ಪೆನ್ ಆ ಗೂಢ ಚತುರ್ಥಂಗಳ ಲಕ್ಷ್ಯಮಮ್

ಗತ ಪ್ರತ್ಯಾಗತದ ಚತುಷ್ಟಯ ಪ್ರಭೇದಗಳು ಈ ರೀತಿ ಇವೆ. ಈಗ ಗೂಢಚತುರ್ಥಂಗಳ ಲಕ್ಷ್ಯಗಳನ್ನು ತೋರಿಸುತ್ತೇನೆ.

119. These are the four types of repetition verses (*gata-pratyāgata*). Now, I will give examples of four types of poems where the main action is concealed (*gūḍha-caturtha*).

ಗೂಢಚತುರ್ಥ

Four Types of "Concealed" Poems (*gūḍha-caturtha)*

ಶ್ಲೋಕ ಘನಸ್ತನಿತಮುಂ ಕೇಕಿ । ಸ್ವನಮುಂ ನೀರ ಧಾರೆಯುಂ
ಮನಂಬೆರ್ಚಿಕ್ಕುಮಿಂತೆತ್ತಂ । ಘನಮಿಂತು ಘನಸ್ತನೀ ॥ ೧೨೦

ಘನ ಸ್ತನಿತಮುಮ್ ಕೇಕಿ ಸ್ವನಮುಮ್ ನೀರ ಧಾರೆಯುಮ್ ಮನಮ್ ಬೆರ್ಚಿಕ್ಕುಮ್ ಇಂತು ಎತ್ತಮ್ ಘನಮ್ ಇಂತು ಘನಸ್ತನೀ

"ಘನವಾದ ಸ್ತನಗಳುಳ್ಳವಳೇ! ಗರ್ಜಿಸುವ ಮೋಡಗಳು, ನವಿಲಿನ ಕೂಗು, ಜಲಧಾರೆ– ಇವೆಲ್ಲವೂ ಘನವಾದುವೇ. ಇವು ಹೆದರಿಸುತ್ತವೆ."

'ಘನ' ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ಈ ಪದವನ್ನು ಮೇಘಗಳಿಗೆ, ನವಿಲಿನ ಧ್ವನಿಗೆ, ಘನವಾದ ವರ್ಷಕ್ಕೆ ಅನ್ವಯಿಸಲಾಗಿದೆ.

120. "Oh, lady with heavy breasts (*ghana-stani*)! The roaring cloud (*ghana-stanita*), the sound of peacocks (*kēki-svana*), and the pouring rain (*nīra-dhāre*) are all heavy. They terrify us."

The word *'ghana'* has multiple meanings. Here it is used in the context of "heavy" breasts, the "thick" clouds; the "lofty" sounds (of the peacock), and the "dense" flow of rain. Here, the word has four "hidden" meanings.

ಏಕಾಕ್ಷರ

Verse with a Single Syllable *(ēkākṣara)*

ಶ್ಲೋಕ ॥ **ನಿನ್ನಿಂ ನಿನ್ನನೆನೆ ನಿನ್ನಾ । ನಾನಾನನನನನ್ನನಂ**
ನೀನೇ ನನ್ನನ್ನನಾನಾನಾ । ನಿನ್ನೀನೇನನನೂನನಂ (?) ೧೨೧

ಇದರ ಅರ್ಥ ಸ್ಪಷ್ಟವಾಗಿಲ್ಲ, ದಂಡಿ ಏಕಾಕ್ಷರಕ್ಕೆ ಕೊಟ್ಟ ಉದಾಹರಣೆ ಕೂಡ ನಕಾರವನ್ನೇ ಒಳಗೊಂಡಿದೆ (೩.೯೫): ನೂನಂ ನುನ್ನಾನಿ ನಾನೇನ ನಾನನೇನಾನನಾನಿ ನಃ । ನಾನೇನಾ ನನು ನಾನೂನ್ ನೈ–ನೇನಾನಾನಿನೋ ನಿನೀಃ ॥

121. This verse only has the single letter 'n'. The meaning is not clear.

ದ್ವ್ಯಕ್ಷರ

Verse with Two Syllables (*dvyakṣara)*

ಶ್ಲೋಕ **ಮಾನಿನಿ ಮುನ್ನಮಾನ್ ನೀನೆ। ನೀನಾ ನಿನ್ನನುಮಾನಮೇನ್**
ಮಾನಮಾನಾನೆ ಮುನ್ನುನ್ನೈ । ಮಾನಮಾನನಮುಂ ನಿನ್ನಾ ॥ ೧೨೨

ಮಾನಿನಿ ಮುನ್ನಮ್ ಆನ್ ನೀನೆ, ನೀನ್ ಆನ್ ಇನ್ ಅನುಮಾನಮ್ ಏನ್? ಮಾನಮ್ ಆನ್ ಆನೆ ಮನ್ನುನ್ನೈ ಮಾನಮ್ ಆನನಮುಮ್ ನಿನ್ನಾ

'ನಾನು, ನೀನು ಒಂದೇ' ಎಂದು ಹೇಳಲು ಎರಡು ಅಕ್ಷರಗಳನ್ನು ಬಳಸಿ ಶ್ಲೋಕವನ್ನು ಬರೆದುದು ಮಾತ್ರ ಸ್ಪಷ್ಟವಾಗಿದೆ.

122. "Oh lady, stubborn with pride (*mānini)*! Why is there a doubt? I am not me. I am you. You are

not you. You are me." (Here, the second part of the verse is not clear).

The two letters – 'n' and 'm' – are used in the verse. We can draw some meaning from the first part of the verse but the second part is not at all clear.

ಅತಾಲವ್ಯ

Compositions with No Palatal Sounds *(atālavya)*

ಶ್ಲೋಕ ಕಿಡಿಪಂ ಬಾರಗೇ ಮೆಯ್ಯಂ। ಕಿಡಿಪಂ ಕಿಡಿಪಂ ತೆ ಮುಂ
ಕಿಡಿಪಂ ಪೋಕುಮೇ ತಾಮುಂ। ಕಿಡಿಸಲ್ ಸುಡು ಸೋಲಮೆ॥ ೧೨೩

ಈ ಶ್ಲೋಕದಲ್ಲಿ ತಾಲವ್ಯಾಕ್ಷರಗಳಾದ 'ಚಛಜಝ'ಗಳನ್ನು ಬಳಸಿಲ್ಲ. ಇದು ಮನ್ಮಥನನ್ನು ಕುರಿತು ಇಬ್ಬರು ಮಾಡುತ್ತಿರುವ ಸಂಭಾಷಣೆಯಂತೆ ತೋರುತ್ತದೆ. "ಮನ್ಮಥನು ಕಿರುಕುಳ ಕೊಡುತ್ತಾನೆ. ಅವನು ನನ್ನನ್ನು ಸಾಯಿಸುತ್ತಾನೆ. ಅವನು ನನ್ನನ್ನು ಸಾಯಿಸಿದರೆ ಅವರು ಹೋಗುತ್ತಾರೆಯೇ" ಎಂಬುದು ಇಲ್ಲಿ ಅರ್ಥ ಆಗಿರಬಹುದು. ಆದರೆ ಇದು ಸ್ಪಷ್ಟವಾಗಿಲ್ಲ.

123. "Come on, friend! He (the god of Love) will ruin the body. He will kill me. He will kill me. If he kills me, do they go away?"

This might be a conversation about the god of Love between a woman and her companion. The meaning of the final sentence is not clear. [What goes away? It is not clear, though perhaps it refers to the pains brought on my lovesickness that go away.]. In the verse, there are no palatal consonants (ca, cha, ja, jha, ñ). There are, however, without restriction, palatal vowels (i, ī, e, ē) in the sentences.

ಶ್ಲೋಕ ಮಾರುತೀ ಪರಮೋದಾರ। ದಾರನೊಳ್ ಕೂಡು ನಲ್ಲನೊಳ್

ಸಾರ ಕಾದಂಬಿನೀನಾಥ। ನಾರೂಢಗುಣಧಾಮನೊಳ್। ೧೨೪

ಮಾರುತೀ ಪರಮೋದಾರ ದಾರನೊಳ್ ಕೂಡು ನಲ್ಲನೊಳ್ ಸಾರ ಕಾದಂಬಿನೀನಾಥನ್ ಆರೂಢ ಗುಣಧಾಮನೊಳ್

"ಮಾರುತೀ! ಪರಮೋದಾರನೂ ಕಾದಂಬಿನೀನಾಥನೂ ಗುಣಾನ್ವಿತನೂ ಆದ ನನ್ನ ಪ್ರಿಯನ ಬಳಿ ಹೋಗಿ ಅವನನ್ನು ಕೂಡು"

ಇದು ಸೀತೆ ಮಾರುತಿಗೆ ಹೇಳುವ ಮಾತುಗಳಿರಬೇಕು. 'ಕಾದಂಬಿನಿ' ಎಂದರೆ ಮೇಘ. ಕಾದಂಬಿನೀನಾಥ ಮೇಘನಾಥ. ಇಲ್ಲಿ ಚಂದ್ರ ಅಥವಾ ರಾಮಚಂದ್ರನೆಂಬ ಅರ್ಥ ಇರಬಹುದು.

124. "O Māruti! Unite me with my husband, who is the most compassionate person, lustrous like the moon, and virtuous."

This is also another example of a composition with no palatal sounds.

ನಿರೋಷ್ಠ್ಯ

Compositions with No Labial Sounds (*nirōṣṭhya)*

ಶ್ಲೋಕ ನರನಾಯಕನಂ ನಿಂದಾ। ನಿರದೀಗಳೆ ಕಾಂತನಂ

ನೆರೆದೇನದಜೆಂದಿಲ್ಲಾ। ನೆರೆದಿರ್ದಾಗೆನಾಗೆನೇ॥ ೧೨೫

ಇದು ನಿರೋಷ್ಠ್ಯಕ್ಕೆ ಉದಾಹರಣೆ. ಇಲ್ಲಿ ಪ, ಫ, ಬ, ಭ, ಮಗಳನ್ನಲ್ಲದೆ ಉ, ಊ, ಒ, ಓಗಳನ್ನೂ ಬಳಸಿಲ್ಲ. "ನರನಾಯಕನಾದ ಕಾಂತನನ್ನು ನಾನು ನಿನ್ನೊಡನೆ ಬಂದು ಸೇರಿದರೆ ಪ್ರಯೋಜನವೇನು? ಅದರಿಂದ ಅವನೇ ಬಂದು (ಜಯಿಸಿ) ಇಲ್ಲಿ ಅವನನ್ನು ನಾನು ಕೂಡಿದಂತೆ ಎಂದಿಗೂ ಆಗುವುದಿಲ್ಲ" ಎಂದು ಈ ಪದ್ಯದ ಅಭಿಪ್ರಾಯ ಇರಬಹುದು.

125. "If I meet my beloved, an excellent person, what do I get? Even if I meet him, it will be as if I am begging him (to be with me)."

This verse has no labials (pa, pha, ba, bha, ma). Labial vowels (u, ū, o, ō) are also not used.

ಸರ್ವತೋಭದ್ರ

The "Good-on-all-sides" Palindrome Composition (*sarvatō-bhadra*)

ಶ್ಲೋಕ ದೀನಾದೀನಾ ನಾದೀನಾದೀ। ನಾನಿನ್ನಾನೇನೇನ್ನಾನಿನಾ
ದೀನಾದಾನಿನಿದಾನಾದೀ। ನಾನೇ ನಿನ್ನನ್ನನಿನೇನಾ (?) ೧೨೬

ಇದು ಬಂಧಕಾವ್ಯದ ಉದಾಹರಣೆ. ಇದರಲ್ಲಿ ಅಕ್ಷರಗಳನ್ನು ಒಂದು ಕ್ರಮದಲ್ಲಿ ಬಳಸಿ ಅವೇ ಅಕ್ಷರಗಳನ್ನು ಇನ್ನೊಂದು ಕ್ರಮದಲ್ಲೂ ಬಳಸುವಂತೆ ರಚನೆ ಮಾಡುತ್ತಾರೆ. ದಂಡಿ ಇದನ್ನು ಕುರಿತು ಹೇಳುವಾಗ "ತದಿಷ್ಟಂ ಸರ್ವತೋಭದ್ರಮ್ ಭ್ರಮಣಮ್ ಯದಿ ಸರ್ವತಃ" (೩.೮೦) ಎಂದಿದ್ದಾನೆ.

126. From the example given by the author, we understand that *sarvatō-bhadra* is a composition where the syllables in a line being read in one direction also holds good in reverse (*dīnādīnā-nādīnādī* etc.). Daṇḍin defines it like this: *tad iṣṭaṁ sarvatō-bhadraṁ bhramaṇaṁ yadi sarvataḥ* (3.80).

ನಿರುತ್ತರ

The "Startling" Composition *(niruttara)*

ಶ್ಲೋಕ ಪೆಱನಾವಂ ಧರಾಚಕ್ರ। ಕ್ಕೆಱೆಯಂ ಕೆಳೆಯಪ್ಪವಂ
ನೆಱೆಯಾರೆಣೆಯೆಂಬನ್ನಂ। ಕುಱಿತಬ್ಧಿಗೆ ಬನ್ನವಂ॥ ೧೨೭

ಪೆಱನ್ ಆವನ್ ಧರಾಚಕ್ರಕ್ಕೆ ಎಱೆಯನ್ ಕೆಳೆಯಪ್ಪವನ್ ನೆಱೆಯಾರ್ ಎಣೆಯೆಂಬನ್ನನ್ ಕುಱಿತು ಅಬ್ಧಿಗೆ ಬನ್ನಮನ್

ಧರಾಚಕ್ರಕ್ಕೆ ಒಡೆಯನು ಇನ್ನಾವನಿದ್ದಾನೆ? ನಿನಗೆ ಸರಿಸಮಾನ ಎಂದು ಹೇಳಲು ಇನ್ನಾರಿದ್ದಾರೆ? ಸಮುದ್ರಕ್ಕೆ ಭಂಗವನ್ನು ಉಂಟು ಮಾಡಿದವನು (ನೀನು).

ಸಾಗರಕ್ಕೆ ಸೇತುವೆಯನ್ನು ನಿರ್ಮಿಸಿ ಸಮುದ್ರರಾಜನಿಗೆ ಗರ್ವಭಂಗ ಮಾಡಿದ ಶ್ರೀರಾಮನ ಸಾಹಸ ಎಣೆಯಿಲ್ಲದ್ದೆಂಬುದನ್ನು ಇದು ಸೂಚಿಸುತ್ತದೆ.

127. "Is there anyone else who can cleave the ocean? What other king equals you who are all-encompassing?"

The referent of these lines is not clear but it seems to suggest the story of Rāma as he makes his way across the ocean.

ಗೋಮೂತ್ರಿಕಾಬಂಧ

The Zigzag "Cow-Urine" Composition (*gō-mūtrikā-bandha*)

ಶ್ಲೋಕ ಜಲದಾಗಮದಿಂ ಚಿತ್ತ । ಸ್ಖಲಿತಂ ಕೇಕಿನರ್ತನಂ
ಜಲದಾಗಮದಿಂ ಚಿತ್ತ । ಸ್ಖಲಿತಂ ಕೇಳ ನಲ್ಲನಂ ॥ ೧೨೮

ಜಲದ ಆಗಮದಿನ್ ಚಿತ್ತ ಸ್ಖಲಿತಮ್ ಕೇಕಿ ನರ್ತನಮ್ ಜಲದ ಆಗಮದಿನ್ ಚಿತ್ತ ಸ್ಖಲಿತಮ್ ಕೇಳ ನಲ್ಲನನ್

"ಮೋಡದ ಆಗಮನದಿಂದ ಚಿತ್ತ ಚಲಿಸಿದೆ, ನವಿಲು ಕುಣಿಯುತ್ತಿದೆ. ಮೋಡದ ಆಗಮನದಿಂದ ಚಿತ್ತ ಚಲಿಸಿದೆ, ನಲ್ಲನ ಬಗೆಗೆ ವಿಚಾರಿಸು"

ಗೋಮೂತ್ರದ ರೂಪದಲ್ಲಿ ಅಳವಡಿಸಬಹುದಾದ ಬಂಧವಿದು.

128. "With the advent of the clouds, the mind has become unsteady. The peacock dances. With the advent of the clouds, the mind has become unsteady. Inquire about the beloved."

In a *gō-mūtrikā-bandha,* the second part of the verse is repeated, to a certain extant, in order to create a visual design arranged in a zigzag pattern that might resemble the urine of a cow (*gō-mūtra*).

ಯಮಕ

Types of Twinning or Sound-doubling (*yamaka*)

ಶ್ಲೋಕ ಯಮಕಂ ಪಾದಪಾದಾರ್ಧ। ಸಮಶ್ಲೋಕಾದಿಗೋಚರಂ
ಪ್ರಮಿತಾದ್ಯಂತಮಧ್ಯೋಪ। ಕ್ರಮಾನೇಕಪ್ರಕಲ್ಪಿತಂ॥ ೧೨೯

ಯಮಕಮ್ ಪಾದ ಪಾದಾರ್ಧ ಸಮಶ್ಲೋಕಾದಿ ಗೋಚರಮ್ ಪ್ರಮಿತ ಆದ್ಯಂತಮ್ ಅಧ್ಯೋಪಕ್ರಮ ಅನೇಕ ಪ್ರಕಲ್ಪಿತಮ್

ಪಾದದಲ್ಲಿ, ಪಾದಾರ್ಧದಲ್ಲಿ, ಶ್ಲೋಕದಲ್ಲಿ ಆದ್ಯಂತಗಳಲ್ಲಿ ಅಥವಾ ಮಧ್ಯದಲ್ಲಿ ಬರಬಹುದು.

ಯಮಕ ಎಂಬುದು ಶಬ್ದಾಲಂಕಾರಗಳಲ್ಲಿ ಬಹಳ ಜನಪ್ರಿಯವಾದುದು. ದಂಡಿ ಇದರ ಸ್ವರೂಪವನ್ನು ಹೀಗೆ ಹೇಳಿದ್ದಾನೆ(೩.೧): “ಅವ್ಯಪೇತ–ವ್ಯಪೇತಾತ್ಮಾವ್ಯಾವೃತ್ತಿರ್ವರ್ಣ ಸಂಹತೇಃ । ಯಮಕಂ ತಚ್ಚಪಾದಾನಾಮಾದಿಮಧ್ಯಾಂತ ಗೋಚರಮ್ ॥” ಭಾಮಹನು ಯಮಕದ ಅನೇಕ ಪ್ರಭೇದಗಳನ್ನು ಹೇಳಿದ್ದಾನೆ.

129. The trope of *yamaka* (doubling of sounds, words, phrases, lines, etc.) is found in the metrical line, the half-line, or in the entire *ślōka.* It may occur at the beginning, at the end, or in the middle of it.

The trope of *yamaka* is the most popular of *śabdālaṅkāras*. Śrīvijaya has given only types of *yamaka,* but not a definition. Daṇḍin defines the trope in the following way: *avyapēta-vyapētātmā / vyāvṛttirvarṇa-saṁhatēḥ // yamakaṁ tacca pādānām / ādi-madhyānta-gōcaraṁ //* (3.1)

ಶ್ಲೋಕ ತಾರಾ ಜಾನಕಿಯುಂ ಪೋಗಿ। ತಾರಾ ತರಳನೇತ್ರೆಯುಂ
ತಾರಾಧಿಪತಿತೇಜಸ್ವಿ। ತಾರಾದಿ ವಿಜಯೋದಯಾ॥ ೧೩೦

ತಾರಾ ಜಾನಕಿಯನ್ ಪೋಗಿ ತಾರಾ ತರಳ ನೇತ್ರೆಯನ್ ತಾರಾಧಿಪತಿ ತೇಜಸ್ವಿತಾರಾದಿ ವಿಜಯ ಉದಯಾ

"ತಾರಾಪತಿಯಾದ ಚಂದ್ರನ ತೇಜಸ್ಸುಳ್ಳವನೇ! ತಾರೆಯನ್ನು ಗೆದ್ದವನೇ! ನಕ್ಷತ್ರಗಳಂತೆ ಚಲಿಸುವ ನೇತ್ರಗಳುಳ್ಳವಳಾದ ಜಾನಕಿಯನ್ನು ಕರೆದು ತಾ."

ಇದು ಆಂಜನೇಯನು ಶ್ರೀರಾಮಚಂದ್ರನಿಗೆ ಹೇಳುತ್ತಿರುವ ಮಾತು. ಇಲ್ಲಿ 'ತಾರಾ' ಎಂಬ ಅಕ್ಷರಗಳು ಪುನರುಕ್ತವಾಗಿವೆ.

130. "Oh, you with a moonlike glow, who has won over Tārā! Bring Jānakī, the woman with eyes that move like stars (*taraḷanētre*)."

This verse refers to the scene in the *Rāmāyaṇa,* spoken by Hanumān after returning from Laṅkā. The word *tārā* is repeated four times. The final *tārā* may denote the influence of stars and planets (*tārā-bala*) or the winning over of *Tārā,* the wife of Vālin (whom Rāma killed) who was then taken as a wife by Sugrīva.

ಶ್ಲೋಕ ಕಱಿಪಂ ತಂದು ನಿಕ್ಕುವಂ। ಕಟಿಪಂ ಕಳೆವಂ ಚಲಂ
ಕಱಿವಂ ಕಂಜನೇತ್ರೇ ತಾಂ। ಕಟಿವಂ ಬಱಿಕಾತನುಂ॥ ೧೩೧

ಕಟಿಪನ್ ತಂದು ನಿಕ್ಕುವಮ್ ಕಟಿಪನ್ ಕಳೆವನ್ ಚಲಮ್ ಕಟಿವನ್ ಕಂಜನೇತ್ರೇ ತಾನ್ ಕಟಿವನ್ ಬಟಿಕಾತನುಮ್

ಇಲ್ಲಿ ಕಟಿಪನ್ ಮತ್ತು ಕಟಿವನ್ ಪುನರುಕ್ತವಾಗಿವೆ. ಅರ್ಥ ಸ್ಪಷ್ಟವಾಗಿಲ್ಲ.

131. The word *kaḻipaṁ* is repeated in this verse, whose meaning is not clear.

ಶ್ಲೋಕ ದಾರು ದಾರುಣನಂ ದಾನ। ವಾರಿ ವಾರಿತಲೋಕನಂ
ಬಾರ ಬಾ ರಮಣಂ ನೋಡಾ। ಸಾರ ಸಾರಾಂಬುದಾಭಮಂ॥ ೧೩೨

ದಾರು ದಾರುಣನನ್ ದಾನವಾರಿ ವಾರಿತ ಲೋಕನನ್ ಬಾರ ಬಾ ರಮಣನ್ ನೋಡಾ ಸಾರ ಸಾರಾಂಬುದಾಭಮನ್

ಇಲ್ಲಿ ದಾರು, ವಾರಿ, ಬಾರ, ಸಾರ ಎಂಬ ಶಬ್ದಗಳು ಪುನರುಕ್ತವಾಗಿವೆಯಾದರೂ ಅರ್ಥ ಸ್ಪಷ್ಟವಾಗಿಲ್ಲ.

132. Although there is a repetition of the words *dāru, vāri, bāra,* and *sāra,* the meaning of this verse is not clear.

ಶ್ಲೋಕ ಸಾರಸಾರಸನಾದಾಮ। ಸಾರಸಾರಾನಿತಂಬೆಯಂ
ತಾರಾ ತಾರಾತರಂಗಾಭಾ। ಕಾರಾಕಾ ರಮಣೀಯೆಯಂ॥ ೧೩೩

ಇದರಲ್ಲಿ ಸಾರ, ತಾರಾ ಎಂಬುವು ಪುನರುಕ್ತವಾಗಿವೆ. ಬಹುಶಃ ಜಾನಕಿಯನ್ನು ಕರೆತರಬೇಕೆಂಬುದೇ ಆಶಯವಿರಬೇಕು.

133. Here, the words *sāra* and *tāra* are repeated although, again, the meaning of the verse is not clear.

ಶ್ಲೋಕ ಅಜೇಯಂ ಪೋಲ್ಗುಮಾ ಮತ್ತ | ಗಜಂ ವಾರಿಜನಾಭನಂ
ತ್ರಿಜಗನ್ಮೋದನಂ ಮತ್ತಂ | ನಿಜನೀಳಘನಾಭನಂ|| ೧೩೪

ಅಜೇಯಮ್ ಪೋಲ್ಗುಮ್ ಆ ಮತ್ತಗಜಮ್ ವಾರಿಜನಾಭನನ್ ತ್ರಿಜಗತ್ ಮೋದನನ್ ಮತ್ತಮ್ ನಿಜನೀಳಘನಾಭನನ್

"ಆ ಮದಿಸಿದಾನೆ ಅಜೇಯ. ಅದು ವಾರಿಜನಾಭನು, ತ್ರಿಲೋಕಗಳಿಗೆ ಮೋದವನ್ನು ಉಂಟುಮಾಡುವವನು, ನೀಲಮೇಘ (ಶ್ಯಾಮ)ನು ಆದ ವಿಷ್ಣುವನ್ನು ಹೋಲುತ್ತದೆ."

134. That is an unconquerable elephant. That resembles Vishnu having a lotus in his navel, giving happiness to all the three worlds and having the complexion of a cloud.

ಶ್ಲೋಕ ಲೋಕ ವೈದಿಕ ಸಾಮ್ಯೆಕ। ಲೋಕನಾಕಾರಕಾರಕಾ
ನಾಕಿ ನೂತಪದವ್ಯಕ್ತಿ। ಶ್ರೀಕಾಂತಾ ಮಮ ಕಾಮದಾ॥ ೧೩೫

ಶ್ಲೋಕ ವಾರಿ ವಾರಿಯೊಳಾದಾನಂ। ವಾರಿ ವಾರಿ ವಿತರ್ಕಮಂ
ವಾರಿ ವಾರಿಜವೋದಾನಂ। ವಾರಿವಾರಿಜನಾಭನೊಳ್॥ ೧೩೬

ಗೀತಿಕೆ ವರವಾರನಾರಿಯೊಳ್ ನೆರೆದೆನಾನೆಲ್ಲಿ ನೆರೆದಂ
ವರವಾರನಾರಿಯೊಳ್ ನೆರೆದೆನಾನೆಲ್ಲಿ ನೀಂ
ಪರದರಿಂ ತರಿಸುವರಿಂತಱೆಯ ನೆಲ್ಲಂ
ಪುರಿದು ಮಾಣದೆ ಕಾಣದಂತಿರಿಸಲಂಗಡಿಯೊಳ್ ೧೩೭

ಗೀತಿಕೆ ತಿಳಿಗೊಳನಂ ಪೂಗೊಳನನದಂ ನೆಗಟಿ
ಮುಳಿದು ಕೊಳ್ವಬಳಸೆ ನಾನದಂ ನೆ
ಗಳೆ ತಾನೆಡೆಮನಂಜಗನೆದಪ್ಪಲಾ
ಗಳೆ ನಂಬವನದೊಪ್ಪುವಂ ವನೇಚರಮದಂ (?) ೧೩೮

All of these other examples of *yamaka* repeat syllables (thus it is a *sabdālaṅkāra*), but it is not possible to extract any meaning out of them.

ಅರ್ಧಭ್ರಮಣ

"Half-Rotation" Compositions (*ardha-bhramaṇa*)

ಶ್ಲೋಕ ನರದಾರಪರಾನೋನೇ। ನರದಾರೇ ನರಾರಮಾ
ಅರಿದಯ್ತುಂದಾದರಿಕ್ಕುಂ। ಪರಿದಾನಪರಾದಿಯೆ (?) ೧೩೯

ಇದರ ಲಕ್ಷಣವನ್ನು ದಂಡಿ ಸರ್ವತೋಭದ್ರದ ಜತೆಯಲ್ಲೇ ಹೇಳಿದ್ದಾನೆ (೩.೮೦).

139. The example here presents half-rotating letters (*naradāra)*, where there is a repetition of syllables. Again, the meaning of the verse is not altogether clear. The definition given by Daṇḍin applies to both *ardha-bhramaṇa* and *sarvatō-bhadra : prāhur ardha-bhramaṁ nāma / ślōkārdha bhramaṇaṁ yadi // tad iṣṭaṁ sarvatō-bhadraṁ / bhramaṇaṁ yadi sarvataḥ // (3.80)*

ಮುರಜಬಂಧ

The "Drum" Composition (*muraja-bandha)*

ಶ್ಲೋಕ ವರದಾರಪರಾದನ್ಯಂ। ಪರದಾರಾಪರಾಧಮಂ
ನೆರೆದಾವದಿರಾದನ್ಯಂ। ಪರದಾರಾಪರಾಧಮಂ (?) ೧೪೦

ಇದು ಕೂಡ ಚಿತ್ರರೂಪದಲ್ಲಿ ತೋರಿಸಬೇಕಾದ ಬಂಧ ಕಾವ್ಯ. ಇದರ ಅರ್ಥವೂ ಸ್ಪಷ್ಟವಾಗಿಲ್ಲ.

140. An example of this figure is not given by Daṇḍin. It is again not at all easy to get any meaning from the example in the *Kavirājamārga*. In *muraja-bandha*, the third and sixth letters in each line are repeated.

ಕ್ರಿಯಾಗೋಪಕ

Compositions where the Verb is "Concealed" (*kriyā-gōpaka)*

ಶ್ಲೋಕ ಅರಸಿಯ ದಿವ್ಯಸೇವಾ। ದರದಿರದೀಗಡೆ ನಿ
ನ್ನರಸಿಯನೆಯ್ದುವಿನಂ। ಪರಿಜನಮಂ ಕಳಿಪಿಂ॥ ೧೪೧

ಕ್ರಿಯಾಗೋಪಕದಲ್ಲಿ ಕ್ರಿಯೆ ಗೋಪ್ಯವಾಗಿರಬೇಕು. ಇಲ್ಲಿ 'ಅರಸಿ' ಎಂದಾಗ 'ಅಱಸಿ' ಎಂಬ ಕ್ರಿಯೆ ಗೋಪ್ಯವಾಗಿದೆ ಎಂದು ಊಹಿಸಬಹುದು.

141. "You be in the service of the queen. Send attendants to serve the queen now itself."

There is a difference of opinion among scholars about the verb, which is hidden. It may be '*iru*' (to be), *'kaḷipu'* (to send), or '*arasu'* (to search).

ಚಕ್ರಬಂಧ

The Wheel-Design Composition (*cakra-bandha)*

ಶಾ.ವಿ. ಸಂತಂ ಬಾೞ್ವುದು ಮೀಱದಾ ನರಪನೊಳ್ ಸೌಜನ್ಯಲಕ್ಷ್ಮೀ ಮದಾಂ
ಧಂ ತನ್ನಿಚ್ಛೆಯ ಮೆಚ್ಚಿನಿಂ ಪರಗುಣೌದಾರ್ಯಾಭಿಮಾನಂಗಳಿಂ
ಪಿಂತಂ ನೋಡದೆ ಪಾಟಿಗೆಟ್ಟ ರಸನಿಂ ಬಾೞ್ವಂತೆ ಪೂಣ್ದಾಯ್ಯನಾ
ನಾಂ ತಂ ತಾಂ ಪಸತಂದನರ್ತಿ ಪಿರಿಗುಂ ದಾನಂಗಳಿಂ ಭೂಪನಾ

೧೪೨

ಬಂಧಕವಿತ್ವದಲ್ಲಿ ಚಕ್ರಬಂಧ ಬಹಳ ಮುಖ್ಯವಾದುದು. ಇದನ್ನು ಅನೇಕ ಕವಿಗಳು ತಮ್ಮ ಹೆಸರನ್ನು, ಕೃತಿಪತಿಯ ಹೆಸರನ್ನು ಅಡಕಗೊಳಿಸಲು ಬಳಸುತ್ತಾರೆ. ಆದರೆ ಈ ಪದ್ಯದಲ್ಲಿ ಅಂತಹ ಸೂಚನೆ ಯಾವುದೂ ಕಂಡುಬಂದಿಲ್ಲ. ಅರ್ಥವೂ ಸ್ಪಷ್ಟವಾಗಿಲ್ಲ. "ಆ ನರಪತಿಯ ಮಾತನ್ನು ಮೀರದೆ ಬಾಳಲಿ. ಹಿಂದಿನ ವಿಷಯಗಳನ್ನು ನೋಡದೆ ಅವನು ಶಾಂತವಾಗಿ ಬಾಳಲಿ. ಪ್ರೀತಿಯಿಂದ ಇರಲಿ. ತನ್ನ ಮಾತಿಗೆ ಕಟ್ಟುಬೀಳದ ಅರಸನಿಗೆ ಮಾರ್ಗದರ್ಶನ ನೀಡುವವನಿದ್ದಾನೆ. ರಾಜನ ದಾನಗಳಿಂದ ಎಲ್ಲ ಕಷ್ಟಗಳು ತೊಲಗಲಿ" ಎಂಬುದು ಇದರ ಅರ್ಥ ಇರಬಹುದು.

142. "Let the man who has an excess of benevolence follow the king. Not taking the past into account, let him live in peace, bestowed with the love and generosity of others. The king who could not keep his word now has a lord who can guide him in his life. Let the king's donations dispel all difficulties."

The meaning given above is the most that can be drawn from the *cakra-bandha* example given by the author. This *bandha* is the most popular of figurative compositions and also one of the more challenging ones. It is composed in Sanskrit meters, like *sragdharā-vṛtta* (21 syllables, with caesura's at every 7 syllables), and arranged in the form of a wheel. Also complicating the translation of the example above is that the text is faulty and does not clearly fit the

cakra-bandha. In this composition, the first and the last letters of the verse are supposed to be the same and the tenth letter should be repeated in all four lines. Letters should also be repeated in the last line, to make the rim of the wheel possible. All of these features are not followed in the available text.

ಪ್ರಹೇಳಿಕೆ

Riddle Compositions (*prahēlikā*)

ಗೀತಿಕೆ

ಅನುಗತಂ ಪೂರ್ವಕವಿಗಳಂ
ನೆನೆದಿನ್ನುಂ ಪೇೞ್ದೆಂ ದುಷ್ಕರೋಕ್ತಿಯು
ನ್ನನುಗತಕ್ರಮದೆ ಬಗೆದು ಹೇಳಿಕೆಯೊಳ್
ಜನಿತವಿಭೇದಮುಮಂ ಪೇೞ್ವೆಂಕಿಱಿದಂ ೧೪೩

ಅನುಗತಮ್ ಪೂರ್ವಕವಿಗಳನ್ ನೆನೆದು ಇನ್ನುಮ್ ಪೇೞ್ದೆನ್ ದುಷ್ಕರ ಉಕ್ತಿಯನ್ ಅನುಗತ ಕ್ರಮದೆ ಬಗೆದು ಹೇಳಿಕೆಯೊಳ್ ಜನಿತ ವಿಭೇದಮುಮನ್ ಪೇೞ್ವೆನ್ ಕಿಱಿದನ್

ಪೂರ್ವಕವಿಗಳನ್ನು ಕ್ರಮವಾಗಿ ನೆನೆದು ದುಷ್ಕರ ಉಕ್ತಿಗಳನ್ನು ಹೇಳಿದೆ. ಪ್ರಹೇಳಿಕೆಗಳಲ್ಲಿ ಉಂಟಾದ ಪ್ರಭೇದಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ.

143. By remembering and following earlier poets, I spoke about difficult compositions. Now, I will say something about types of riddles *(hēḷike = pahēlikā).*

The term *prahēlikā* has not been defined here. Daṇḍin defines it as a kind of "trick" or "skill" used for amusement at parties: *krīḍāgōṣṭī vinōdēṣu / taj-jñair ākīrṇa-mantraṇē // paravyāmōhanē cāpi / sōpayōgaḥ prahēlikā // (3.97).*

ಗೀತಿಕೆ

ಭಾವೆಯುಂ ನುಸುಳುಮಸ್ಪಷ್ಟಾಕ್ಷರಮು
ಮಾ ವರ್ಣವ್ಯತ್ಯಯಮುಂ ಬಿಂದುಚ್ಯುತಿಯುಂ

ಭಾವಿಸಿದೊರ್ನುಡಿಯುಂ ವರ್ಣಚ್ಯುತಮುಂ
ಕೇವಳಮವಱ ಭೇದಮಾ ಸುಸಮಂತಕಮುಂ ೧೪೪

ಭಾವೆಯುಮ್ ನುಸುಳುಮ್ ಅಸ್ಪಷ್ಟ ಅಕ್ಷರಮುಮ್ ಆ ವರ್ಣ ವ್ಯತ್ಯಯಮುಮ್ ಬಿಂದುಚ್ಯುತಿಯುಮ್ ಭಾವಿಸಿದ ಒರ್ನುಡಿಯುಮ್ ವರ್ಣಚ್ಯುತಮುಮ್ ಕೇವಳಮ್ ಅವಱ ಭೇದಮ್ ಆ ಸುಸಮಂತಕಮುಮ್

ಭಾವೆ, ನುಸುಳ್, ಅಸ್ಪಷ್ಟಾಕ್ಷರ, ವರ್ಣವ್ಯತ್ಯಯ, ಬಿಂದುಚ್ಯುತಿ, ಒರ್ನುಡಿ, ವರ್ಣಚ್ಯುತ ಮತ್ತು ಸಮಸ್ತಕ ಎಂಬುವು ಪ್ರಹೇಳಿಕೆಯ ಪ್ರಭೇದಗಳು.

ಇಲ್ಲಿ ಪ್ರಹೇಳಿಕೆಯ ಎಂಟು ಪ್ರಕಾರಗಳನ್ನು ಹೆಸರಿಸಲಾಗಿದೆಯೇ ಹೊರತು ಅದರ ಲಕ್ಷಣವನ್ನು ಹೇಳಿಲ್ಲ. ದಂಡಿ ಅದರ ಲಕ್ಷಣವನ್ನು ಹೇಳಿದ್ದಾನೆ (೩.೯೭) "ಕ್ರೀಡಾಗೋಷ್ಠಿವಿನೋದೇಷು ತಜ್ಜ್ಞೈರಾಕೀರ್ಣ–ಮಂತ್ರಣೇ। ಪರವ್ಯಾಮೋಹನೇ ಚಾಪಿ ಸೋಪಯೋಗಾಃ ಪ್ರಹೇಲಿಕಾಃ ॥"

144. Types of *prahēḷikā* named include: *bhāve, nusuḷ, aspakṣṭākṣara, varṇa-vyatyaya, bindu-cyuti, ornuḍi, varṇa-cyuta* and *samastaka*.

ಭಾವೆ

The Lady Riddle (*bhāve / bhāme*)

ಗೀತಿಕೆ ಸವಿಹಿತಮಪ್ಪ ಕರ್ಣಪೂರೋತ್ಪಳಮಂ
ಧವಳವಿಲೋಚನೆಯ ಗುಣಸುಂದರಮಂ
ಕಿವಿವರಂ ನೀಳ್ದನಯನಯುಗದೊಳೊ
ಪ್ಪುವವಳಾನವಯವದೇಕೆ ಕಳೆಯ ವೇಟ್ಟೆಂ ಪ್ರಿಯೆಯಂ ೧೪೫

ಸವಿಹಿತಮಪ್ಪ ಕರ್ಣಪೂರ ಉತ್ಪಳಮನ್ ಧವಳ ವಿಲೋಚನೆಯ ಗುಣಸುಂದರಮನ್ ಕಿವಿವರಮ್ ನೀಳ್ದ ನಯನಯುಗದೊಳ್ ಒಪ್ಪುವವಳಾನ್ ಅವಯವದೆ ಏಕೆ ಕಳೆಯವೇಟ್ಟೆನ್ ಪ್ರಿಯೆಯನ್

"ಬಿಳಿಯ ಕಣ್ಣುಗಳುಳ್ಳವಳು, ಗುಣಸುಂದರಿಯು, ಕಿವಿವರೆಗೆ ನೀಳವಾಗಿರುವ ಕಣ್ಣುಗಳಿರುವವಳು ಆದ ಪ್ರಿಯೆಗೆ ಕಿವಿಯಲ್ಲಿ ಚೆನ್ನಾಗಿ ಒಪ್ಪುವ ನೈದಿಲೆಯನ್ನು ತೆಗೆದುಬಿಡಬೇಕೆಂದು ನಾನೇಕೆ ಹೇಳಿದೆನು?"

ಭಾವೆ ಎಂಬುದು ಭಾಮೆಯ ಪರ್ಯಾಯಪದ ಅಥವಾ ತದ್ಭವ ಇರಬಹುದು. ದಂಡಿಯಲ್ಲಿ ಈ ಪ್ರಭೇದವಿಲ್ಲ. ಇದನ್ನು ಹೇಳಿದವರಲ್ಲಿ ಕವಿರಾಜಮಾರ್ಗಕಾರನೇ ಮೊದಲನೆಯವನಿರಬಹುದು. 'ಭಾಮಾ' ಎಂದರೆ ಸೊಕ್ಕಿನ ಹೆಣ್ಣು. ವಿಶಾಲನಯನೆಯಾದ ಪ್ರಿಯೆಗೆ ನೈದಿಲೆಯ ಆವಶ್ಯಕತೆ ಇಲ್ಲದ ಕಾರಣ ನಾಯಕನು ಅದನ್ನು ತೆಗೆದುಬಿಡುವಂತೆ ಹೇಳಿರಬಹುದು.

145. "Why did I ask my beloved lady, who has wide eyes extended up to her ear and a resplendent look, to remove the lily from her ear?"

There is no such riddle called *bhāve* in the *Kāvyādarśa.* Here, in the *Kavirājamārga*, it is also called *bhāme,* which means a prideful girl *(bhāmā*). As a riddle, the suggestion here might be that a young girl, with eyes wide like lilies, has a lover unhappy with having to ask his beloved to remove the lily from her hair, a lily that he finds makes her even more beautiful.

ನುಸುಳ್

The "Concealing" Riddle (*nusuḷ)*

ಗೀತಿಕೆ **ತಿರಿವುದದೊಂದು ಚಕ್ರದೊಳೆ ನಿಂದು ದಿವಾ**
ಕರನೆ ಮತ್ತರಿದು ಕಳೆವೊಡಂತದನಾವೆಡೆಯಿಂ
ದರಮೆಯಾಗಿ ನೆಲಸಿ ಕೆಲಕಾಲದಿಂ
ಪೊರೆದಿರದಱಿದ ಬೞಿಕೆ ತಾಂ ನೆಲದೊಳ್ ೧೪೬

ತಿರಿವುದು ಅದು ಒಂದು ಚಕ್ರದೊಳೆ ನಿಂದು ದಿವಾಕರನೆ ಮತ್ತರಿದು ಕಳೆವೊಡೆ ಅಂತು ಅದನ್ ಆವೆಡೆಯಿಂತೆ ಅರಮೆಯಾಗಿ ನೆಲಸಿ ಕೆಲಕಾಲದಿನ್ ಪೊರೆದು ಇರದೆ ಅಟಿದ ಬಟಿಕೆ ತಾನ್ ನೆಲದೊಳ್

"ಅದು ಒಂದು ಚಕ್ರದಲ್ಲೇ ಸುತ್ತುತ್ತದೆ. ಸೂರ್ಯನೇ ಅದನ್ನು ಕತ್ತರಿಸಿ ಹಾಕಿದರೆ ಯಾವುದೋ ದಿಕ್ಕಿನಲ್ಲಿ ಸ್ವಲ್ಪಕಾಲ ನೆಲಸಿದ್ದು, ಪೂರ್ತಿ ನಷ್ಟವಾದ ಬಳಿಕ ತಾನು ನೆಲದಲ್ಲಿ ಇರುವುದಿಲ್ಲ."

ಇದರ ಅರ್ಥ 'ಗಾಳಿ' ಎಂದು ಮುಳಿಯ ತಿಮ್ಮಪ್ಪಯ್ಯನವರು, 'ಚಕ್ರವಾಕ' ಎಂದು ಎಂ.ವಿ. ಸೀತಾರಾಮಯ್ಯನವರು, 'ಚಂದ್ರ' ಎಂದು ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಊಹಿಸಿದ್ದಾರೆ.

146. "It revolves in a circle. When the sun cuts part of it away, it still remains, in some direction, and after disappearing completely, it will not remain on the earth at all."

This is a riddle but the answer is uncertain. It may be 'wind', or a '*cakravāka*' bird, or the moon that disappears after the sunrise.

ಅಸ್ಪಷ್ಟಾಕ್ಷರ

Riddles Involving "Indistinct" Letters (*aspaṣṭākṣara*)

ಗೀತಿಕೆ ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನಮಾ
ನಟ್ಟುಬಡಿಸು ನಾಮಱಿಯದೆನಸುಂ ಸವಿಯಂ
ಪುಟ್ಟಿದಾರುಮಱಿಯರದಱ ಪೆಸರೊ
ಳಟ್ಟುದಂ ಪೇೞೆ ಕೇಳ್ದೇನೆಂದಱಿಯೆಂ ೧೪೭

ನೆಟ್ಟನೆ ತಾನ್ ಸವಿಯೊಳ್ ಒಂದಿರೆ ಭೋಜನಮ್ ಆನ್ ಅಟ್ಟು ಬಡಿಸು ನಾಮ್ ಅಱಿಯದ ಎನಸುಮ್ ಸವಿಯನ್ ಪುಟ್ಟಿದಾರುಮ್ ಅಱಿಯದೆ ಅದಱ ಪೆಸರೊಳ್ ಅಟ್ಟುದನ್ ಪೇೞೆ ಕೇಳ್ದು ಏನ್ ಎಂದಱಿಯೆನ್

"ರುಚಿಕರವಾದ ಭೋಜವನ್ನು, ನಾವು ತಿಳಿಯದ ಎಷ್ಟೋ ರುಚಿಯುಳ್ಳ ಅಡುಗೆಗಳನ್ನು ಬೇಗ ಅಡುಗೆ ಮಾಡಿ ಬಡಿಸು. ಯಾರೂ ಈವರೆಗೆ ತಿಳಿದಿರದ ಹೆಸರಿನಿಂದ ಅಡುಗೆ ಮಾಡಿದ್ದನ್ನು ತಿಳಿದು ಹೇಳಲಾಗಿ, ಅದನ್ನು ಕೇಳಿಯೂ ಅದೇನೆಂಬುದು ನಾನರಿಯೆ."

ಅಸ್ಪಷ್ಟವಾದ ಅಕ್ಷರಗಳು ಮತ್ತು ಅಸ್ಪಷ್ಟವಾದ ಅರ್ಥ ಇರುವ ಪ್ರಹೇಳಿಕೆ ಇದು. ಇಲ್ಲಿ 'ಆರುಂ ಅಱಿಯದ' ಎಂಬುದನ್ನು 'ಆಱುಂ ಅಱಿಯದ' ಎಂದು ಓದಿದರೆ ಅಥವಾ ಕೇಳಿದರೆ ಷಡ್ರಸಗಳು ಎಂದು ಅರ್ಥವಾಗುತ್ತದೆ.

147. "Cook and serve tasty dishes as a meal. Even after knowing that something cooked has never been tasted in one's life, you still cannot say what it is."

This is an example of a riddle with "indistinctive" letters. Here the 'r' of *ārum̀* is indistinct; if it is 'r' (flap), it means one thing; and, if it is 'ṟ' (trill), it means something else. Thus here, most probably, *'ārum̀ ariyada'* ("which is not known to anyone") is to be taken as *'āṟum̀ ariyada,* which means the "six tastes" (*ṣaḍruci*). If a dish has not been tasted, how can one comment on it? Thus, the reference here is to the six tastes in a meal.

ವರ್ಣವ್ಯತ್ಯಯ

Riddles Involving "Disorderly" Letters (*varṇa-vyatyaya*)

ಗೀತಿಕೆ ಆವನಾಮಕತ್ವಕ್ಷುಚಯುಂ
ಕ್ರಾದಿವನೊಚರಾಮಾಯ ದಷ್ಟಾ ಸಾಯದೆಗಳೊಳ್
ಸೇವಿಸೆವಮಲ ಹೈವಸುಮುಕ್ತಿ ಮಹಾ
ದೇವ ನಿನ್ನನ್ನನಪ್ವೊನಸಹಾಯಗುಣಂ (?) ೧೪೮

ಈ ಪ್ರಹೇಳಿಕೆ ಕವಿರಾಜಮಾರ್ಗದಲ್ಲಿ ಮಾತ್ರ ಕಂಡುಬರುತ್ತದೆ. ಹೆಸರೇ ಸೂಚಿಸುವಂತೆ ಇದರಲ್ಲಿ ವರ್ಣವ್ಯತ್ಯಯವಾಗಿದೆ ಮಾತ್ರವಲ್ಲ, ಅದನ್ನು ಸರಿಪಡಿಸುವುದೂ ಕಷ್ಟ. ಈ ಪದ್ಯದಲ್ಲಿ 'ಸೇವಿಸೆ ಮುಕ್ತಿ ಮಹಾದೇವ ನಿನ್ನನ್ನನಪ್ಪೊವ ಸಹಾಯಗುಣಮ್' ಎಂಬುದನ್ನು ಮಾತ್ರ ಸರಿಪಡಿಸಿ ಓದಬಹುದು.

148. The example here demonstrates the use of letters that cannot be put into order. This *prahēlikā* is found only in the *Kavirājamārga*.

ಬಿಂದುಚ್ಯುತಕ

Riddles Involving the "Loss of the Nasal Marker" (*bindu-cyutaka*)

ಗೀತಿಕೆ ಸೊಗಯಿಸುಗುಮಿಂದ್ರ ನೀಲಮಣಿಸನ್ನಿಭದೊಳ್
ಮಿಗೆ ಜಳನಿಧಿಯೊಳಗುದಿತದಿಂದಿರದ ವೋಲ್

ನೆಗೆದತಿಧವಳಮೂರ್ತಿಗೆ ಘನವಳಯಸದಗ್ಧ
ಗಗನದೊಳುಳಿದುಳಿದು ವಿಶಾಳಿತಾಶಾವಳಯಂ ೧೪೯

ಸೊಗಯಿಸುಗುಮ್ ಇಂದ್ರನೀಲ ಮಣಿ ಸನ್ನಿಭದೊಳ್ ಮಿಗೆ ಜಳನಿಧಿಯೊಳಗೆ ಉದಿತದಿಂದಿರದವೋಲ್ ನೆಗೆದು ಅತಿಧವಳ ಮೂರ್ತಿಗೆ ಘನವಳಯ ಸದಗ್ಧ ಗಗನದೊಳ್ ಉಳಿದುಳಿದು ವಿಶಾಳಿತ ಆಶಾವಳಯಮ್

"ಸಮುದ್ರದಲ್ಲಿ ಹುಟ್ಟಿದ ಅಶ್ವದಂತೆ (ಉಚ್ಚೈಶ್ರವಸ್ಸು, ದಿವ್ಯಾಶ್ವ) ಕಾಣಿಸಿಕೊಂಡ ಅತಿಧವಳಮೂರ್ತಿಗೆ (ಚಂದ್ರನಿಗೆ) ಮೋಡಗಳ ಸಮೂಹದಿಂದ ಕೂಡಿರುವ ಆಕಾಶದಲ್ಲಿ ಅಡಗಿರುವ ವಿಶಾಲವಾದ ದಿಕ್ಕುಗಳ ಸಮೂಹ ಇಂದ್ರನೀಲರತ್ನದಂತೆ ಸೊಗಯಿಸಿತು."

ಇಲ್ಲಿ ಬಿಂದುಲೋಪದಿಂದ ಅರ್ಥ ಸ್ಪಷ್ಟವಾಗಿಲ್ಲ. 'ಘನವಳಯ' ಎಂಬುದಕ್ಕೆ 'ಘನವಳಯಂ' ಎಂದು ಬಿಂದು ಸೇರಿಸಿದರೆ ಚಂದ್ರನ ಆಕೃತಿಯ ವರ್ತುಲ ಮನಸ್ಸಿಗೆ ಬರುತ್ತದೆಂದು ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಊಹಿಸಿದ್ದಾರೆ (೨೦೧೧, ಪು. ೧೫೯).

149. "The widened circle *(cakra)* of directions resembled sapphire. It is surrounded by clouds covering the brightly shining one (*candra,* the Moon), which is like the divine horse borne in the ocean."

We only get the meaning of "Moon" when a *bindu* (nasal marker, *anusvāra*) is added to '*ghana-valaya'*. Since one infers that there is a conscious loss of the *bindu* in the original verse (and thus needs to be filled in), the riddle composition is called *bindu-cyutaka.*

ಒರ್ನುಡಿ

Riddles Answered with "Only One Word" (*ornuḍi*)

ಗೀತಿಕೆ ಆವುದು ಬಾಗಿದುದುಮಧಿಕಂ ಬಸನಂ
ಕೇವಳಮಾಗೆ ನೆಗೆವುದುಚಿತಾವಯವದಂ

ದೇವದಿಂ ನಿಂದು ಸಿತಗನಂ ನುಡಿವುದದು
ಬಾವಿಸೆ ಬಗೆಗೊಳದಾರ ನೊರ್ನುಡಿಯಿಂ ೧೫೦

ಆವುದು ಬಾಗಿದುದುಮ್ ಅಧಿಕಮ್ ಬಸನಮ್ ಕೇವಳಮಾಗೆ ನೆಗೆವುದು ಉಚಿತಾವಯವದಿಂದೆ ಏವದಿನ್ ನಿಂದು ಸಿತಗನನ್ ನುಡಿವುದು ಅದು ಭಾವಿಸೆ ಬಗೆಗೊಳದೆ ಆರನ್ ಒರ್ನುಡಿಯಿನ್

"ಯಾವುದು ಬಾಗಿರುತ್ತದೆಯೋ, ಹೆಚ್ಚಾದ ವ್ಯಸನದಿಂದಾಗಿ ಶರೀರದ ಉಚಿತವಾದೆಡೆಯಿಂದ ಮೇಲೆ ನಿಮಿರುತ್ತದೆಯೋ, ಜುಗುಪ್ಸೆಯಾಗುವಂತೆ ಸ್ಥಾಯಿಯಾಗಿದ್ದು ಜಾರನನ್ನು ಹೀನೈಸುತ್ತದೆಯೋ ಅದು ವಿಚಾರಮಾಡಿದರೆ ಒರ್ನುಡಿಯಿಂದ ರಂಜಿಸುವುದು."

ಈ ಪ್ರಹೇಳಿಕೆಗೆ 'ಧ್ವಜ' ಎಂದು ಉತ್ತರವಿರುವಂತೆ ತೋರಿದರೂ ಪುರುಷನ ಜನನೇಂದ್ರಿಯವನ್ನು ಸೂಚಿಸುತ್ತಿರುವಂತೆ ಕಾಣುತ್ತದೆ.

150. "One that bends, which straightens out when needed to satisfy illicit desires, which both abuses and pleases one's paramour." This is a riddle answered with only one word (*ornuḍi*)."

The answer to the riddle is a single word (*ornuḍi*): flag (*dhvaja),* which also means a phallus. It is not clear how both meanings work in this verse.

ವರ್ಣಚ್ಯುತಕ

Riddles Involving the "Loss of Letters" *(varṇa-cyutaaka)*

ಗೀತಿಕೆ

ತಳಮಳಗುತ್ತುಂ ಜನಿತನಿಜಭೀತಿ ಮನಂ
ಗೊಳೆ ಕಳವಳಿಸಿ ಚರಿತರ್ ನಿಲಲಣ್ಮದೆ ಮೊ
ಕ್ಕಳವೊಳಗೆ ಸುಟಿದರರಸಂ ಮನದೊಳ್
ಮುಳಿದಸಿಯನೆ ನೋಡಿ ಪರಿವಾರದವರ್ ೧೫೧

ತಳಮಳಗುತ್ತುಮ್ ಜನಿತ ನಿಜಭೀತಿ ಮನಂಗೊಳೆ ಕಳವಳಿಸಿ ಚರಿತರ್ ನಿಲಲ್ ಅಣ್ಮದೆ ಮೊಕ್ಕಳಮ್ ಒಳಗೆ ಸುಟಿದರ್ ಅರಸನ್ ಮನದೊಳ್ ಮುಳಿದು ಅಸಿಯನೆ ನೋಡೆ ಪರಿವಾರದವರ್

"ಅರಸನು ಮನಸ್ಸಿನಲ್ಲಿ ಮುನಿಸಿಕೊಂಡು ಕತ್ತಿಯನ್ನು ನೋಡಲು, ಪರಿವಾರದವರು ತಳಮಳಿಸಿ, ತಮ್ಮಲ್ಲಿ ಹುಟ್ಟಿದ ಭೀತಿ ತಮ್ಮ ಮನಸ್ಸನ್ನು ಹಿಡಿದಿರಲು ಕಳವಳಪಟ್ಟು ಅಲ್ಲಿ ನಿಲ್ಲುವುದಕ್ಕೆ ಧೈರ್ಯ ಮಾಡದೆ ಪೂರ್ತಿಯಾಗಿ ಒಳಗಡೆ ಸೇರಿಕೊಂಡರು."

ಇದು ವರ್ಣಚ್ಯುತಕ. ಯಾವುದಾದರೂ ವರ್ಣಲೋಪವಾದಾಗ ಅದನ್ನು ಸೇರಿಸಿದರೆ ಅರ್ಥಸ್ಫುಟವಾಗುತ್ತದೆ. ಇಲ್ಲಿ 'ಅಸಿಯನೆ' ಎಂಬುದನ್ನು 'ಅರಸಿಯನೆ' ಎಂದು ತಿದ್ದಿ ಓದಿದರೆ ಹೆಚ್ಚು ಅರ್ಥಪೂರ್ಣವಾಗುವುದು.

151. "The king glanced at his knife (or his wife) with anger in his mind. The attendants were agitated and left the place out of fear."

This is an example of the *prahēlikā* known as *varṇa-cyutaka,* where a letter is added to a word to give it a more satisfying meaning. Here, if *'ra'* is added to the word *'asi' (knife)*, it becomes *'arasi'* (queen), changing the meaning of the sentence to indicate that the king is glancing at the queen, and not the knife, with anger.

ಸಮಸ್ತಕ

The "All-Inclusive" Riddle (*samastaka / samantaka)*

ಗೀತಿಕೆ

ವಿಗಳಿತರಾಗನಾವೊನಿನ್ನಾವುದಜೆಂ
ಸೊಗಯಿಸುಗುಂ ಕಟಕತ್ವಮಂ ಸಮರ್ಥಬಲಂ
ಬಗೆದೆನಗೊಯ್ಯನೆಸಗೆಯಿದುವೊಡಾ
ರಗಲಲಾಟಿಸುಗುಮದನೇವೇಟ್ಟಿಂ ಬನದೊಳ್(?) ೧೫೨

ಈ ಪದ್ಯದ ಪಾಠ ಅಶುದ್ಧವಾಗಿದೆ. ಇದರ ಹೆಸರೂ ಅನಿಶ್ಚಿತ. ಒಟ್ಟಿನಲ್ಲಿ ಇದರ ಅರ್ಥವನ್ನು ಊಹಿಸಿದರೆ "ವೀತರಾಗನಾದವನು ಅವನ ತಪಸ್ಸಿನಿಂದ

ಪ್ರಕಾಶಿಸುವನು. ಅಂತಹ ಸಮರ್ಥನು ಪ್ರಭುತ್ವವನ್ನು ಬೇರೆಯವರಿಗೆ ಒಪ್ಪಿಸಿ ಅರಣ್ಯಕ್ಕೆ ತೆರಳಿದರೆ ಹೇಳುವುದೇನಿದೆ" ಎಂಬುದು ಸಮಂಜಸವೆನಿಸುತ್ತದೆ.

152. "One who is dispassionate shines on account of his penance. If such an able person passes on governance and departs to a forest, what can I say now?"

As the text is not clear, it is difficult to fix an exact meaning. Based on the available text, even the composition of the riddle cannot be firmly decided upon.

ಉಪಸಂಹಾರ

Conclusion

ಪುಷ್ಪಿತಾಗ್ರ ಅತಿಶಯಧವಳೋಪನೀತಮಾರ್ಗೋ
ಚಿತಗತಿಭಾವಿತಮಾರ್ಗಳಂಕ್ರಿಯಾರ್ದಂ
ಚತುರಕವಿಜನಾನುಯಾತಸಾರ
ಸ್ವತಗುಣದೊಳ್ ಬಗೆದಂತೆ ಕೂಡಲಾರ್ಕುಂ ೧೫೩

ಅತಿಶಯಧವಳ ಉಪನೀತ ಮಾರ್ಗ ಉಚಿತಗತಿ ಭಾವಿತಮ್ ಆರ್ಗೆ ಅಳಂಕ್ರಿಯಾರ್ಥಮ್ ಚತುರ ಕವಿಜನ ಅನುಯಾತ ಸಾರಸ್ವತ ಗುಣದೊಳ್ ಬಗೆದಂತೆ ಕೂಡಲಾರ್ಕುಮ್

ಯಾರಿಗೆ ನೃಪತುಂಗೋಕ್ತವಾದ ಕ್ರಮದಿಂದ ಅಲಂಕಾರ-ವಿಚಾರ ಪ್ರತೀತವಾಗಿದೆಯೋ, ಅವರು ಚತುರಕವಿಗಳಿಂದ ಸೃಷ್ಟಿಯಾದ ಸಾರಸ್ವತಗುಣದಲ್ಲಿ ಬೇಕಾದ ಹಾಗೆ ಕೂಡಿಕೊಳ್ಳಲಾಗುತ್ತದೆ.

153. Whoever is aware of this treatise on figures of speech and thought (*alaṅkāras*), presented by *Atiśayadhavaḷa* (Nṛpatuṅga), will attach themselves to the literary merits achieved by the great poets.

This is the first of the concluding verses of the second chapter.

ಮಾಲಿನೀ ಬುಧಗುಣಗಣನಾತೀತಾಂತರಂ ಶಬ್ದತತ್ತ್ವಾಂ
ಬುಧಿ ವಿವಿಧವಿಧಾನಾಲಂಕ್ರಿಯಾವೀಚಿಮಾಲಾ
ವಿಧುರಗತಿವಿಲೋಡ್ಯಂ ತಳ್ತುನಿಲ್ತಪ್ಪುದಾ ವಾ
ಗಧಿಪವಚನಮಾಲಾಪಾವನೀಯಂ ಗಭೀರಂ ೧೫೪

ಬುಧಗುಣ ಗಣನಾತೀತ ಅಂತರಮ್ ಶಬ್ದತತ್ತ್ವ ಅಂಬುಧಿ ವಿವಿಧ ವಿಧಾನ ಅಲಂಕ್ರಿಯಾ ವೀಚಿ ಮಾಲಾ ವಿಧುರ ಗತಿ ವಿಲೋಡ್ಯಮ್ ತಳ್ತು ನಿಲ್ತಪ್ಪುದು ಆ ವಾಗಧಿಪ ವಚನ ಮಾಲಾ ಪಾವನೀಯಮ್ ಗಭೀರಮ್

ವಿದ್ವಾಂಸರ ಗುಣಗಣನೆಗೂ ಮೀರಿದ ಶಬ್ದತತ್ತ್ವ ಸಾಗರದೊಳಗೆ ವಿವಿಧ ಅಲಂಕಾರಗಳೆಂಬ ತರಂಗ ಮಾಲೆಗಳಿವೆ. ವಾಗಧಿಪನಾದ ನೃಪತುಂಗನ ಉಕ್ತಿಮಾಲೆಗಳಿಂದ ಆ ಆಳವಾದ ಕಡಲಿನ ಅಂತರಾಳ ಕೂಡ ಸುಂದರವಾಗಿ, ಪಾವನೀಯವಾಗಿ ಗಂಭೀರವಾಗಿ ನಿಲ್ಲುವಂತಾಗಿದೆ.

154. Within the ocean of language, there are many (passing) waves of *alaṅkāras.* With the help of these strings of verses composed by Nṛpatuṅga, the lord of speech (*vāgīśa*), even the deep waters of the ocean can be churned and made auspicious and permanent.

ಉ.ಮಾ. ಭಾವಿಸಿ ಶಬ್ದ ತತ್ತ್ವಸಮಯಸ್ಥಿತಿಯಂ ಕುಱಿತೊಂದಶೇಷಭಾ
ಷಾವಿಷಯೋಕ್ತಿಯಂ ಬಗೆದು ನೋಡಿ ಪುರಾಣಕವಿಪ್ರಭುಪ್ರಯೋ
ಗಾವಿಳಸದ್ಗುಣೋದಯಮನಾಯ್ದವಱಿಂ ಸಮೆದೊಂದು ಕಾವ್ಯದಿಂ
ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ ೧೫೫

ಭಾವಿಸಿ ಶಬ್ದ ತತ್ತ್ವ ಸಮಯ ಸ್ಥಿತಿಯನ್ ಕುಱಿತು ಒಂದು ಅಶೇಷ ಭಾಷಾವಿಷಯ ಉಕ್ತಿಯನ್ ಬಗೆದು ನೋಡಿ ಪುರಾಣ ಕವಿಪ್ರಭು ಪ್ರಯೋಗಾವಿಳ ಸದ್ಗುಣ ಉದಯಮನ್ ಆಯ್ದು ಅವಱಿನ್ ಸಮೆದು ಒಂದು ಕಾವ್ಯದಿನ್ ಶ್ರೀವಿಜಯಪ್ರಭೂತ ಮುದಮನ್ ತನಗೆ ಆಗಿಸಿದೊನ್ ಕವೀಶ್ವರನ್

ಶಬ್ದತತ್ತ್ವದ ಶಾಸ್ತ್ರ ಸ್ಥಿತಿಯನ್ನು ಪರಿಭಾವಿಸಿ, ಸಕಲ ಭಾಷಾ ವಿಷಯಗಳಲ್ಲಿರುವ ಉಕ್ತಿಗಳನ್ನು ವಿಚಾರ ಮಾಡಿ, ಪ್ರಾಚೀನ ಮಹಾಕವಿಗಳ ಪ್ರಯೋಗಗಳ ಸದ್ಗುಣಗಳನ್ನು ಆಯ್ದುಕೊಂಡು, ಅವುಗಳ ಮೂಲಕ ರಚಿಸಿದ ಒಂದು ಕಾವ್ಯದಿಂದ ಶ್ರೀವಿಜಯಪ್ರಭೂತವಾದ ಸಂತೋಷವನ್ನು ತಾನು ಪಡೆದುಕೊಳ್ಳುವವನೇ ಕವೀಶ್ವರನು.

155. Reflecting on the nature of linguistic usages over time and observing them in several languages, if one makes Śrīvijaya's text his own and selects the meritorious usages of great poets to write his own poem, then he will become the Lord of Poets.

ಇದು ಪರಮಶ್ರೀ ನೃಪತುಂಗದೇವಾನುಮತಮಪ್ಪ
ಕವಿರಾಜಮಾರ್ಗದೊಳ್
ಶಬ್ದಾಲಂಕಾರವರ್ಣನಾನಿರ್ಣಯಂ ದ್ವಿತೀಯಪರಿಚ್ಛೇದಂ

This is the end of the second chapter of the *Kavirājamārgaṁ*, which, with the approval of Nṛpatuṅgadēva, describes the characteristic features of figures of sound and word (*śabdālaṅkāras*).

ಕವಿರಾಜಮಾರ್ಗಂ

KAVIRĀJAMĀRGAṀ

ತೃತೀಯಪರಿಚ್ಛೇದಂ

CHAPTER THREE

ಅರ್ಥಾಲಂಕಾರಪ್ರಕರಣಂ

Figures of Thought and Meaning (*arthālaṅkāra-prakaraṇaṁ*)

ಕಂ. ಶ್ರೀವಿದಿತಾರ್ಥಾಲಂಕಾ
ರಾವಳಿಯ ವಿವಿಧಭೇದವಿಭವಾಸ್ಪದಮಂ
ಭಾವಿಸಿ ಬೆಸಸಿದನಖಿಳಧ
ರಾವಲ್ಲಭನಿಂತಮೋಘವರ್ಷನೃಪೇಂದ್ರಂ ೧

ಶ್ರೀವಿದಿತ ಅರ್ಥಾಲಂಕಾರಾವಳಿಯ ವಿವಿಧ ಭೇದ ವಿಭವಾಸ್ಪದಮನ್ ಭಾವಿಸಿ ಬೆಸಸಿದನ್ ಅಖಿಳ ಧರಾವಲ್ಲಭನ್ ಇಂತು ಅಮೋಘವರ್ಷ ನೃಪೇಂದ್ರನ್

ವಿವಿಧ ಭೇದಗಳಿಗೆ ತಾಣವಾಗಿರುವ ಪ್ರಸಿದ್ಧ ಅರ್ಥಾಲಂಕಾರಗಳನ್ನು ವಿಚಾರಮಾಡಿ ಅಮೋಘವರ್ಷ ನೃಪತುಂಗನು ಈ ರೀತಿ ನಿರ್ಣಯಿಸಿದನು.

1. The great Nṛpatuṅga Amōghavarṣa, lord of the whole world, has presented different types of the glorious poetic figures of thought and meaning (*arthālaṅkāras*).

ವರಜಾತಿರೂಪಕಾರ್ಥಾಂ
ತರವಿನ್ಯಾಸಾತಿರೇಕ ಯಾಥಾಸಂಖ್ಯಾ

ಸ್ಥಿರದೀಪಕೋಪಮಾಬಂ
ಧುರಾತಿಶಯಸದೃಶಯೋಗಿತಾಕ್ಷೇಪಂಗಳ್ ೨

ಶ್ಲೇಷೋತ್ಪ್ರೇಕ್ಷಾ ಸೂಕ್ಷ್ಮವಿ
ಶೇಷ ಸಮಾಹಿತ ಸಮಾಸ ಪರ್ಯಾಯೋಕ್ತ್ಯಾ
ನ್ವೇಷ ವಿರೋಧಾಪ್ರಸ್ತುತ
ಶೇಷನಿದರ್ಶನ ಸಹೋಕ್ತಿಸಂಕೀರ್ಣಂಗಳ್ ೩

ನುತಪರಿವೃತ್ತಿವ್ಯಾಜ
ಸ್ತುತಿ ಹೇತು ವಿಭಾವನಾ ಲವೋದಾತ್ತಾಪ
ಹ್ನುತಿ ರಸವದೂರ್ಜಿತ ವ್ಯಾ
ವೃತಿ ಪ್ರಿಯತರಾಶಿಗಳ್ ಕ್ರಮಾದ್ಯುಕ್ತಂಗಳ್ ೪

ವಿದಿತಾರ್ಥಾಲಂಕಾರಾ
ಸ್ಪದಭೇದಂಗಳ್ ಪುರಾಣಶಾಸ್ತ್ರೋಕ್ತಂಗಳ್
ತದನುಮತಲಕ್ಷ್ಯಲಕ್ಷಣ
ನಿದರ್ಶನಂಗಳನನುಕ್ರಮೋಕ್ತಿಯೆ ಪೇೞ್ವೆಂ ೫

'ಜಾತಿ', 'ರೂಪಕ', 'ಅರ್ಥಾಂತರವಿನ್ಯಾಸ', 'ಅತಿರೇಕ', 'ಯಥಾಸಂಖ್ಯ', 'ದೀಪಕ', 'ಉಪಮಾ', 'ಅತಿಶಯ', 'ಸದೃಶಯೋಗಿತಾ', 'ಆಕ್ಷೇಪ', 'ಶ್ಲೇಷ', ಉತ್ಪ್ರೇಕ್ಷಾ, 'ಸೂಕ್ಷ್ಮ', 'ವಿಶೇಷ', 'ಸಮಾಹಿತ', 'ಸಮಾಸ', 'ಪರ್ಯಾಯೋಕ್ತಿ', 'ವಿರೋಧ', 'ಅಪ್ರಸ್ತುತ', 'ನಿದರ್ಶನ', 'ಸಹೋಕ್ತಿ', 'ಸಂಕೀರ್ಣ', 'ಪರಿವೃತ್ತಿ', 'ವ್ಯಾಜಸ್ತುತಿ', 'ಹೇತು', 'ವಿಭಾವನಾ', 'ಲವ', 'ಉದಾತ್ತ', 'ಅಪಹ್ನುತಿ', 'ರಸವತ್', 'ಊರ್ಜಿತ', 'ವ್ಯಾವೃತಿ', 'ಪ್ರಿಯತರ' (ಪ್ರೇಯಸ್), 'ಆಶಿ' (ಆಶೀಃ)–ಇವು ಕ್ರಮವಾಗಿ ಉಕ್ತವಾಗಿರುವ ಅಲಂಕಾರಗಳು. ಈ ಪ್ರಸಿದ್ಧ ಅಲಂಕಾರ ಪ್ರಭೇದಗಳು ಪುರಾಣ ಶಾಸ್ತ್ರೋಕ್ತವಾದುವು. ಅವುಗಳನ್ನು ಅನುಸರಿಸಿ ಲಕ್ಷ್ಯಲಕ್ಷಣ ನಿದರ್ಶನಗಳನ್ನು ಕ್ರಮವಾಗಿ ಹೇಳುತ್ತೇನೆ.

2-5. These are some of the different types of *arthālaṅkārās* mentioned in traditional texts on

> **poetics: *jāti, rūpaka, arthāntara-vinyāsa, atirēka, yathāsaṅkhya, dīpaka, upamā, atiśayōkti, sadṛśayōgitā, ākṣēpa, ślēṣa, utprēkṣā, sūkṣma, viśēṣa, samāhita, samāsōkti, paryāyōkti, virōdha, aprastuta-praśaṁsā, nidarśana, sahōkti, saṅkīrṇa, parivṛtti, vyājastuti, hētu, vibhāvanā, lava, udātta, apahnuti, rasavat, ūrjita, vyāvṛtti, priyatara (prēyas), āśīḥ*. Below I give the characteristics of each of these *alaṅkāras* with examples, in this order.**

Here, Śrīvijaya lists 34 *alaṅkāras* but also adds *bhāvika* and *dhvani,* making the list a total of 36.

ಜಾತಿ(ಸ್ವಭಾವೋಕ್ತಿ)

Depiction of the Natural State / Factual Depiction (*jāti / svabhāvōkti*)

ಭಾವಿಸಿ ಸಮಸ್ತವಸ್ತುವಿ
ಭಾವಿತ ಜಾತಿಕ್ರಿಯಾಗುಣದ್ರವ್ಯಸ್ವಾ
ಭಾವಿಕಗುಣಮಂ ಪೇೞ್ವುದು
ಕೇವಲಮಾ ಜಾತಿಯೆಂಬ ಸದಳಂಕಾರಂ ೬

ಭಾವಿಸಿ ಸಮಸ್ತ ವಸ್ತು ವಿಭಾವಿತ ಜಾತಿ ಕ್ರಿಯಾ ಗುಣ ದ್ರವ್ಯ ಸ್ವಾಭಾವಿಕ ಗುಣಮನ್ ಪೇೞ್ವುದು ಕೇವಲಮ್ ಆ ಜಾತಿ ಎಂಬ ಸದಳಂಕಾರಮ್

ಸಮಸ್ತ ವಸ್ತುಗಳ ಸ್ವಾಭಾವಿಕವಾದ ಜಾತಿ, ಕ್ರಿಯಾ, ಗುಣ, ದ್ರವ್ಯಗಳನ್ನು (ವಾಸ್ತವಿಕವಾಗಿ ಇರುವಂತೆ) ಹೇಳುವುದು 'ಜಾತಿ' ಎಂಬ ಸದಲಂಕಾರ.

ಇದನ್ನೇ 'ಸ್ವಭಾವೋಕ್ತಿ' ಎಂದು ಕರೆಯುತ್ತಾರೆ. ದಂಡಿ ಇದರ ಲಕ್ಷಣವನ್ನು ಎರಡು ಶ್ಲೋಕಗಳಲ್ಲಿ ಹೇಳಿದ್ದಾನೆ. "ನಾನಾವಸ್ಥಂ ಪದಾರ್ಥಾನಾಂ ರೂಪಂ ಸಾಕ್ಷಾದ್ವಿವೃಣ್ವತೀ। ಸ್ವಭಾವೋಕ್ತಿಶ್ಚ ಜಾತಿಶ್ಚೇತ್ಯಾದ್ಯಾ ಸಾಲಂಕೃತಿ–ರ್ಯಥಾ॥" (೨.೮); "ಜಾತಿಕ್ರಿಯಾಗುಣದ್ರವ್ಯ ಸ್ವಭಾವಾಖ್ಯಾನಮೀದೃಶಂ । ಶಾಸ್ತ್ರೇಷ್ವಸ್ಯೈವ ಸಾಮ್ರಾಜ್ಯಂ ಕಾವ್ಯೇಷ್ವಪ್ಯೇತದೀಪ್ಸತಂ ॥" (೨.೧೩).

6. The depiction of an object's natural state, action, quality and substance is the *alaṅkāra* called *jāti.*

The figure of *jāti* is also referred to as *svabhāvōkti* (*Kāvyādarśa, 2.8)*. The definition of *jāti* in the *Kavirājamārga* resembles the words of Daṇḍin (2.13): *jāti-kriyā-guṇa-dravya svabhāvākhyānam-īdṛśaṁ / śāstrēṣvasyaiva sāmrājyaṁ kāvyēṣvapyētad īpsitaṁ //*

ಧವಳಾಪಾಂಗಂ ಕೇಕಾ
ರವಮುಖರಂ ಹರಿತಶಾಬಲಾಂಕಕಳಾಪಂ
ನವಿಲಾದಂ ಸೊಗಯಿಸುಗುಂ
ಸುವಿನೀಲಾಯತಗಳಂ ಪಯೋದಾಗಮದೊಳ್ ೭

ಧವಳ ಅಪಾಂಗಮ್ ಕೇಕಾರವ ಮುಖರಮ್ ಹರಿತ ಶಾಬಲಾಂಕ ಕಳಾಪಮ್ ನವಿಲ್ ಆದಮ್ ಸೊಗಯಿಸುಗುಮ್ ಸುವಿನೀಲಾಯತ ಗಳಮ್ ಪಯೋದ ಆಗಮದೊಳ್

"ಮಳೆಗಾಲದ ಆಗಮನವಾದಾಗ ಬಿಳಿಯ ಕಡೆಗಣ್ಣ ನೋಟಗಳಿರುವ, ಗಟ್ಟಿಯಾಗಿ ಕೂಗುವ, ಹಸಿರು ಮತ್ತು ಮಿಶ್ರವರ್ಣದಿಂದ ಕೂಡಿರುವ ಗರಿಗಳುನ್ನುಳ್ಳ, ನೀಲವೂ ಉನ್ನತವೂ ಆದ ಕೊರಳಿರುವ ನವಿಲು ತುಂಬ ಸೊಗಸಾಗಿರುವುದು."

ನವಿಲಿನ ಜಾತಿಯ ಸ್ವಭಾವವನ್ನು ರಮಣೀಯವಾಗಿ ಹೇಳಿರುವುದಕ್ಕೆ ಉದಾಹರಣೆ. ದಂಡಿ ಜಾತಿ ಸ್ವಭಾವವನ್ನು ಹೇಳಲು ಗಿಳಿಯ ವರ್ಣನೆ ಮಾಡಿದ್ದಾನೆ.

7. "The peacock with its glossy look, its distinctive sound, its green mixed feathers and long blue neck, looks pretty at the arrival of the monsoon clouds."

This is an example for *jāti-svabhāva* (an object's natural state).

ಅರೆಮುಚ್ಚಿ ಕಣ್ಗಳಂ ವನ
ಕರಿ ಮೆಲ್ಲದ ಲಲಿತಸಲ್ಲಕೀಪಲ್ಲವಮಂ
ಸ್ಮರವಶದಿಂದಿರ್ದುದು ನಿಜ
ಕರೇಣುಪೇಚಕನಿರೂಪಿತಾಯತಹಸ್ತಂ ೮

ಅರೆ ಮುಚ್ಚಿ ಕಣ್ಗಳನ್ ವನಕರಿ ಮೆಲ್ಲದೆ ಲಲಿತ ಸಲ್ಲಕೀ ಪಲ್ಲವಮನ್ ಸ್ಮರವಶದಿಂದೆ ಇರ್ದುದು ನಿಜ ಕರೇಣು ಪೇಚಕ ನಿರೂಪಿತ ಆಯತ ಹಸ್ತಮ್

"ಕಣ್ಣುಗಳನ್ನು ಅರೆಮುಚ್ಚಿ ಕಾಡಾನೆಯು ಎಳೆಯ ಸಲ್ಲಕೀಲತೆಯ (ಆನೆ ಬೇಲದ) ಚಿಗುರನ್ನು ಮೆಲ್ಲದೆಯೇ ತನ್ನ ಹೆಣ್ಣಾನೆಯ ತುದಿಬಾಲದಿಂದ ತನ್ನ ನಿಡಿದಾದ ಸೊಂಡಿಲನ್ನು ಸವರಿಸಿಕೊಳ್ಳುತ್ತಾ ಕಾಮವಶವಾಗಿದ್ದಿತು."

ಕಾಮಾವಸ್ಥೆಯನ್ನು ವರ್ಣಿಸುತ್ತಿರುವುದರಿಂದ ಇದು ಕ್ರಿಯಾ ಸ್ವಭಾವೋಕ್ತಿ.

8. "The infatuated wild elephant, with eyes half-closed, leaving his chewing of the tender *sallakī* leaves, rubbed his trunk on the tail of the she-elephant."

ಆಮೀಳನಮಂ ಕಣ್ಗಳೊ
ಳಾ ಮನದೊಳಗೊಸಗೆಯಂ ಶರೀರದೊಳೆತ್ತಂ
ರೋಮಾಂಚಕಂಚುಕಂ ಮದಿ
ರಾಮದವಾಗಿಸೆ ತೆಗಟ್ಟಿನಾಕೆಯ ನುಡಿಯೊಳ್ ೯

ಆಮೀಳನಮನ್ ಕಣ್ಗಳೊಳ್ ಆ ಮನದೊಳಗೆ ಒಸಗೆಯನ್ ಶರೀರದೊಳ್ ಎತ್ತಮ್ ರೋಮಾಂಚ ಕಂಚುಕಮ್ ಮದಿರಾಮದಮ್ ಆಗಿಸೆ ತೆಗಟ್ಟಿನ್ ಆಕೆಯ ನುಡಿಯೊಳ್

"ಮದ್ಯದ ಮದದಿಂದ ಕಣ್ಣುಗಳಲ್ಲಿ ಮುಚ್ಚುವಿಕೆಯನ್ನು (ಆಮೀಲನ), ಮನಸ್ಸಿನಲ್ಲಿ ಅನುರಾಗವನ್ನು, ಮೈಯಲ್ಲಿ ರೋಮಾಂಚವೆಂಬ ಕುಪ್ಪಸವನ್ನು, ನುಡಿಯಲ್ಲಿ ತೊದಲನ್ನು (ಉಂಟುಮಾಡಿತು)."

9. "Intoxication made her eyes close, her mind affectionate and, covered with a blouse of bristling hair, her speech a lisp."

Here, the qualities of intoxication have been listed and hence, it qualifies as an example of *guṇa-svabhāva* (the nature of an object's qualities).

ತಳಮಿತಮಧ್ಯೆಯನಾಯತ
ವಿಳೋಳಲೋಚನೆಯನುನ್ನತಸ್ತನಯುಗೆಯಂ
ಲಳಿತವಿಲಾಸಿನಿಯಂ ಕೋ
ಮಳಾಂಗಿಯಂ ಪೃಥುನಿತಂಬಬಿಂಬೆಯನುೞಿದಂ ೧೦

ತಳಮಿತ ಮಧ್ಯೆಯನ್ ಆಯತ ವಿಳೋಳ ಲೋಚನೆಯನ್ ಉನ್ನತ ಸ್ತನಯುಗೆಯನ್ ಲಳಿತ ವಿಲಾಸಿನಿಯನ್ ಕೋಮಳಾಂಗಿಯನ್ ಪೃಥು ನಿತಂಬ ಬಿಂಬೆಯನ್ ಉೞಿದನ್

"ಕೃಶವಾದ ನಡುವಿನವಳು, ವಿಶಾಲಚಂಚಲನೇತ್ರೆಯು, ಉನ್ನತ ಸ್ತನವುಳ್ಳವಳು, ಲಲಿತವಿಲಾಸಿನಿಯು, ಕೋಮಲಾಂಗಿಯು, ಗುರುನಿತಂಬಿನಿಯು ಆದವಳನ್ನು ಅವನು ತೊರೆದನು."

ಹೆಣ್ಣಿನ ಅಂಗಗಳ ವಾಸ್ತವಿಕ ವರ್ಣನೆ ಇರುವುದರಿಂದ ಇದು ದ್ರವ್ಯ ಸ್ವಭಾವೋಕ್ತಿ.

10. "He left that lady with slim waist, wide and blinking eyes, large breasts, graceful and delicate body."

This is an example for *dravya-svabhāva* (the nature of an object's parts or substances).

ಅತಿಶಯಧವಳಧರಾಧಿಪ
ಮತದಿಂದಂ ಜಾತಿಯೆಂಬಳಂಕಾರಮನಿಂ
ತತಿನಿಪುಣರಱಿಗೆ ತೋರ್ಪೆಂ
ಶ್ರುತಿಸುಭಗಮೆನಿಪ್ಪ ರೂಪಕಾಲಂಕೃತಿಯಂ ೧೧

ಅತಿಶಯಧವಳಧರಾಧಿಪ ಮತದಿಂದಮ್ ಜಾತಿ ಎಂಬ ಅಳಂಕಾರಮನ್ ಇಂತು ಅತಿನಿಪುಣರ್ ಅಱಿಗೆ ತೋರ್ಪೆನ್ ಶ್ರುತಿಸುಭಗಮ್ ಎನಿಪ್ಪ ರೂಪಕ ಅಲಂಕೃತಿಯನ್

ಅತಿಶಯಧವಳನ (ನೃಪತುಂಗನ) ಮತದಿಂದ 'ಜಾತಿ' ಎಂಬ ಅಲಂಕಾರ ವನ್ನು ಅತಿನಿಪುಣರು ಈ ರೀತಿ ಅರಿತುಕೊಳ್ಳಲಿ. ಮುಂದೆ ಶ್ರುತಿಸುಭಗವಾದ ರೂಪಕಾಲಂಕಾರವನ್ನು ತೋರಿಸುವೆನು.

11. Let the knowledgeable people know the trope of *jāti,* with the approval of *atiśayadhavaḷa* (Nṛpatuṅga). Now I present the pleasing *rūpakālaṅkāra.*

ರೂಪಕಾಲಂಕಾರ

Metaphor (*rūpaka)*

ರೂಪಕಮೆಂಬುದು ಪೆಱವಱ
ರೂಪಾದಿ ಗುಣಂಗಳಾನಭೇದೋಕ್ತಿಗಳಿಂ
ರೂಪಿಸುವುದಿಂತು ಬಾಹುಲ
ತಾ ಪಾದಾಂಬುಜ ಮುಖೇಂದು ನಯನಾಳಿಗಳಿಂ ೧೨

ರೂಪಕಮ್ ಎಂಬುದು ಪೆಱವಱ ರೂಪಾದಿ ಗುಣಂಗಳಾನ್ ಅಭೇದೋಕ್ತಿಗಳಿನ್ ರೂಪಿಸುವುದು ಇಂತು ಬಾಹುಲತಾ ಪಾದಾಂಬುಜ ಮುಖೇಂದು ನಯನಾಳಿಗಳಿನ್

ಬೇರೆಯವುಗಳ ರೂಪ, ಗುಣ ಮುಂತಾದವನ್ನು ಪ್ರಕೃತ ವಸ್ತುಗಳಲ್ಲಿ ಅಭೇದಾರೋಪ ಮಾಡಿ ರೂಪಿಸುವುದೇ 'ರೂಪಕ' ಎಂಬ ಅಲಂಕಾರ. ಬಾಹುಲತೆ (ಬಾಹು ಎಂಬ ಲತೆ), ಪಾದಾಂಬುಜ (ಪಾದವೆಂಬ ಕಮಲ), ಮುಖೇಂದು (ಮುಖವೆಂಬ ಚಂದ್ರ), ನಯನಾಳಿ (ಕಣ್ಣು ಎಂಬ ದುಂಬಿ) – ಇಂತಹವು ಉದಾಹರಣೆಗಳು.

ದಂಡಿ ರೂಪಕ ಲಕ್ಷಣವನ್ನು ಹೇಳುವಾಗ "ಉಪಮ್ಮೈವ ತಿರೋಭೂತ ಭೇದಾರೂಪಕಮುಚ್ಯತೆ" (೨.೬೬) ಎಂದು ಹೇಳಿ ಉಪಮಾನ ಉಪಮೇಯಗಳ ನಡುವೆ ಭೇದಗೋಚರವಾಗದ ಉಪಮೆಯೇ ರೂಪಕ ಎಂದಿದ್ದಾನೆ.

12. *Rūpaka* shows two things as one by removing the difference in qualities between one thing (the subject of the comparison) and another thing (the

object of comparison), to identify shared qualities, as in these examples: *bāhu-latā* (creeper-arms), *pādāmbuja* (lotus-feet), *mukhēndu* (moon-face), *nayanāḷi* (bee-eyes).

ಸ್ಮಿತಕುಸುಮಮಧರಪಲ್ಲವ
ಮತಿಶಯನಯನಾಳಿ ಬಾಹುಶಾಖಂ ಕಾಂತಾ
ಲತೆಯೆಂದಿಂತು ಸಮಸ್ತಾ
ಶ್ರಿತಂ ಸಮಸ್ತಂ ಸಮಸ್ತರೂಪಕಮಕ್ಕುಂ ೧೩

ಸ್ಮಿತ ಕುಸುಮಮ್ ಅಧರ ಪಲ್ಲವಮ್ ಅತಿಶಯ ನಯನಾಳಿ ಬಾಹುಶಾಖಮ್ ಕಾಂತಾಲತೆ ಎಂದು ಇಂತು ಸಮಸ್ತ ಆಶ್ರಿತಮ್ ಸಮಸ್ತಮ್ ಸಮಸ್ತ ರೂಪಕಮ್ ಅಕ್ಕುಮ್

ಸಮಾಸದ ಮೂಲಕ ರೂಪಿತವಾಗಿರುವ ಸಮಸ್ತ ರೂಪಕಾಲಂಕಾರಕ್ಕೆ ಉದಾಹರಣೆಗಳು: ನಗೆ ಹೂವು, ತುಟಿಚಿಗುರು, ಕಣ್ದುಂಬಿ, ಬಾಹು ಶಾಖೆ, ಕಾಂತಾಲತೆ.

ದಂಡಿಯ ಲಕ್ಷ್ಯಪದ್ಯಗಳನ್ನು ಸ್ವಲ್ಪ ಮಾರ್ಪಡಿಸಿ (೨.೬,೭) ಶ್ರೀವಿಜಯನು ಉದಾಹರಣೆಗಳನ್ನು ಕೊಟ್ಟಿದ್ದಾನೆ.

13. The following metaphors are based on compounds and, therefore, called "compounded metaphors" (*samasta-rūpaka*): *smitā-kusuma* (flower- smile), *adhara-pallava* (sprout-lips), *nayanāḷi* (bee-eyes), *śākhā-bhuja* (branch-limbs), and *kāntā-late* (creeper-lady).

Daṇḍin did not name it *samasta-rūpaka,* but the definition and examples for general *rūpaka* are comparable to the examples given above (Daṇḍin, 2.36).

ಕುಸುಮಂ ಸ್ಮಿತಮಳಿನಯನಂ
ಕಿಸಲಯಮಧರಂ ಭುಜದ್ವಯಂ ವಿಟಪಂ ಮ

ತ್ತಸುವಲ್ಲಭೆ ಲತೆಯೆಂಬುದಿ
ದಸಮಸ್ತಂ ವ್ಯಸ್ತರೂಪಕಕ್ರಮಮಖಿಲಂ ೧೪

ಕುಸುಮಮ್ ಸ್ಮಿತಮ್ ಅಳಿನಯನಮ್ ಕಿಸಲಯಮ್ ಅಧರಮ್ ಭುಜದ್ವಯಮ್ ವಿಟಪಮ್ ಮತ್ತೆ ಅಸುವಲ್ಲಭೆ ಲತೆ ಎಂಬುದು ಇದು ಅಸಮಸ್ತಮ್ ವ್ಯಸ್ತ ರೂಪಕ ಕ್ರಮಮ್ ಅಖಿಲಮ್

ಸಮಾಸವಲ್ಲದ ರೂಪಕಗಳ ಕ್ರಮವಿದು : 'ಹೂವೇನಗೆ', 'ದುಂಬಿಯೇ ಕಣ್ಣು', 'ಚಿಗುರೇ ತುಟಿ', 'ಮರದ ಕೊಂಬೆಯೇ ಭುಜದ್ವಯ', 'ಪ್ರಾಣಕಾಂತೆಯೇ ಲತೆ.'

14. Metaphors that are outside of a compound are called *non-compounded* metaphors (*vyasta-rūpaka*): "The flower is a smile, the bees are eyes, the sprouts are lips, the branches of a tree are limbs, and the lady is a tree-creeper."

ಸ್ಫುರಿತಾಧರಪಲ್ಲವೆ ಬಂ
ಧುರಲೋಚನಕುಸುಮೆ ಲೋಲಭುಜಶಾಖೆ ಮನೋ
ಹರೆ ಕಾಂತೆಯೆಂಬುದವಯವ
ನಿರೂಪಣಕ್ರಮದಿನವಯವಂ ರೂಪಕದೊಳ್ ೧೫

ಸ್ಫುರಿತ ಅಧರ ಪಲ್ಲವೆ ಬಂಧುರ ಲೋಚನ ಕುಸುಮೆ ಲೋಲ ಭುಜ ಶಾಖೆ ಮನೋಹರೆ ಕಾಂತೆ ಎಂಬುದು ಅವಯವ ನಿರೂಪಣ ಕ್ರಮದಿನ್ ಅವಯವಮ್ ರೂಪಕದೊಳ್

"ಪಂಚಲಾಧರ ಪಲ್ಲವದವಳು, ಸುಂದರ ನೇತ್ರ ಕುಸುಮದವಳು, ಚಲಿಸುವ ಭುಜಶಾಖೆಯವಳು, ಮನೋಹರವಾದ ಕಾಂತೆ" ಎಂಬುದು ಅವಯವ ನಿರೂಪಣ ಕ್ರಮದಿಂದ ಅವಯವ ರೂಪಕವಾಗುತ್ತದೆ.

ಇಲ್ಲಿ ಒಂದೊಂದು ಅವಯವಗಳನ್ನು ರೂಪಿಸಿರುವುದರಿಂದ ಸಾವಯವ ರೂಪಕವಾಗಿದೆ.

15. Metaphors that depict *parts or aspects* (here, of the body) are called *avayava-rūpaka*: "The

attractive lady has trembling sprout-lips, beautiful flower-eyes, and moving branch-limbs."

Here, because the various "aspects" or "parts" (*avayava*) of her body are identified with sprouts, flowers and branches, the lady can be identified with a tree-creeper.

ತರಳತರಲೋಚನಂ ನಿ
ರ್ಭರರಾಗರಸಂ ಮುಖಾರವಿಂದಂ ನಿನ್ನಾ
ದೊರೆಕೊಳಿಸಿದೊಸಗೆಯೇಂ ಬಂ
ಧುರಮೆಂಬುದಿದವಯವಿ ಕ್ರಮಂ ರೂಪಕದೊಳ್ ೧೬

ತರಳತರ ಲೋಚನಮ್ ನಿರ್ಭರ ರಾಗ ರಸಮ್ ಮುಖಾರವಿಂದಮ್ ನಿನ್ನಾ ದೊರೆಕೊಳಿಸಿದ ಒಸಗೆಯೇನ್ ಬಂಧುರಮ್ ಎಂಬುದು ಇದು ಅವಯವಿ ಕ್ರಮಮ್ ರೂಪಕದೊಳ್

"ಚಂಚಲನೇತ್ರವೂ ನಿರ್ಭರ ಪ್ರೇಮರಸಾನ್ವಿತವೂ ಆದ ನಿನ್ನ ಮುಖಾರವಿಂದ ಉಂಟುಮಾಡುತ್ತಿರುವ ಆನಂದ ಅದೆಷ್ಟು ಮನೋಹರ" ಎಂಬುದು ಅವಯವಿ ರೂಪಕ.

ಇಲ್ಲಿ ಅವಯವಿಯಾದ ಮುಖವನ್ನು ಮಾತ್ರ ರೂಪಿಸಿ ಉಳಿದುವನ್ನು ನಮ್ಮ ಊಹೆಗೆ ಬಿಟ್ಟಿರುವುದರಿಂದ ಅವಯವಿ ರೂಪಕ.

16. "Your lotus-face has fickle eyes, filled with lovely sap that has brought so much joy to me. What a beauty!" This is an *avayavi-rūpaka.*

Here, the face is the primary object (*avayavi*) and the *avayavas* (aspects or parts) are left to the imagination of the reader.

ಮೃದುತರಕಪೋಲಫಲಕಂ
ವದನಾಂಬುಜಮಾಯತೋನ್ನತಭ್ರೂಚಾಪಂ

ಮುದಮಂ ಪಡೆದತ್ತೆನಗೆಂ
ಬುದು ವಿಷಮಿತರೂಪವಿಷಮರೂಪಕಮಕ್ಕುಂ ೧೭

ಮೃದುತರ ಕಪೋಲ ಫಲಕಮ್ ವದನ ಅಂಬುಜಮ್ ಆಯತ ಉನ್ನತ ಭ್ರೂಚಾಪಮ್ ಮುದಮನ್ ಪಡೆದತ್ತು ಎನಗೆ ಎಂಬುದು ವಿಷಮಿತ ರೂಪ ವಿಷಮ ರೂಪಕಮ್ ಅಕ್ಕುಮ್

"ಮೃದುತರಕಪೋಲ ಫಲಕ ಇರುವುದೂ ವಿಶಾಲವಾದ ಮತ್ತು ಉನ್ನತವಾದ ಭ್ರೂಚಾಪವಿರುವುದೂ ಆದ ವದನಾಂಬುಜವು ನನಗೆ ಆನಂದವನ್ನು ಉಂಟುಮಾಡಿದೆ" ಎಂಬುದು ವಿಷಮ ರೂಪಕ.

ಇಲ್ಲಿ ಕಪೋಲಫಲಕ, ಭ್ರೂಚಾಪ ಎಂದಾಗ ಇವುಗಳಿಗೂ ವದನಾಂಬುಜ ಎಂಬ ಅಂಗಿಗೂ ಯಾವ ಸಂಬಂಧವೂ ಕಾಣದೆ ಇರುವುದರಿಂದ ಇದು ವಿಷಮ ರೂಪಕ.

17. "The lotus-face, soft cheeks, and raised bow-eyebrows made me happy." This metaphor has an uneven character (lotus-face / bow-eyebrows / soft cheeks) and, hence, it is called an *uneven metaphor* (*viṣama-rūpaka*).

Here *rūpaka* is employed to describe the face and eyebrows, but the cheeks are left out.

ಜಿನಚರಣನಖಾದರ್ಶಂ
ವಿನಮಿತಾಮರರಾಜರಾಜವದನಪ್ರತಿಮಂ
ಮನದೊಳ್ ಸಲೆ ನಿಲ್ಕೆಂಬುದು
ವಿನಿಶ್ಚಿತವಿಶೇಷಣೋರುರೂಪಕಮಕ್ಕುಂ ೧೮

ಜಿನ ಚರಣ ನಖ ಆದರ್ಶಮ್ ವಿನಮಿತ ಅಮರ ರಾಜ ರಾಜ ವದನ ಪ್ರತಿಮಮ್ ಮನದೊಳ್ ಸಲೆ ನಿಲ್ಕೆ ಎಂಬುದು ವಿನಿಶ್ಚಿತ ವಿಶೇಷಣ ಉರು ರೂಪಕಮ್ ಅಕ್ಕುಮ್

"ನಮಸ್ಕರಿಸಿದ ದೇವೇಂದ್ರನ ಚಂದ್ರವದನದ ಪ್ರತಿಬಿಂಬ ಇರುವ ಜಿನಪಾದದ ಉಗುರೆಂಬ ಕನ್ನಡಿ ನಮ್ಮ ಮನಸ್ಸಿನಲ್ಲಿ ಎಂದೆಂದಿಗೂ ನಿಲ್ಲಲಿ" ಎಂಬುದು ವಿಶೇಷಣ ರೂಪಕ.

'ಜಿನಪಾದನಖಾದರ್ಶಮ್' ಎಂಬುದು ವಿಶೇಷ್ಯ. ಇಲ್ಲಿ ನಖ ಎಂಬುದೇ ಕನ್ನಡಿಯಾದ್ದರಿಂದ ರೂಪಕ. 'ದೇವೇಂದ್ರನ ಚಂದ್ರವದನ' ವಿಶೇಷಣ. ವಿಶೇಷಣವೂ ಸೇರಿದಂತೆ ರೂಪಕವಾಗಿರುವುದರಿಂದ ವಿಶೇಷಣ ರೂಪಕ. ದಂಡಿಯಲ್ಲಿರುವ ಹರಿಪಾದವನ್ನು ಇಲ್ಲಿ ಕವಿ ಜಿನಪಾದವನ್ನಾಗಿ ಮಾಡಿದ್ದಾನೆ (೨.೮೧):"ಹರಿಪಾದಶ್ಶಿರೋಲಗ್ನ ಜಹ್ನುಕನ್ಯಾ ಜಲಾಂಶುಕಃ । ಜಯತ್ಯಸುರನಿಶ್ಶಂಕ ಸುರಾನಾಂದೋತ್ಸವಧ್ವಜಃ ॥"

18. "Let the nail-mirrors on the Jina's feet, which bear the image of the moon-like face of the prostrated lord of the gods, firmly stay in my mind." This is an example of *a metaphor which takes an adjective* (*viśēṣaṇa-rūpaka*).

Here the metaphor of the nail-mirror is presented as having an image of a prostrating Indra, which serves as an adjective to the nail-mirror. It is to be noted that the example in *Kāvyādarśa* refers to Viṣṇu, whereas this example refers to the Jina.

ಕಮಲಾಕರದೊಳ್ ಸಂಕೋ
ಚಮನಟಲಂ ಚಕ್ರವಾಕದೊಳ್ ಮಾಡದು ನಿ
ನ್ನ ಮುಖೇಂದುಬಿಂಬಮಿಂದುಗೆ
ಸಮನೆಂಬುದು ಮಿಗೆ ವಿರುದ್ಧ ರೂಪಕಮಕ್ಕುಂ ೧೯

ಕಮಲಾಕರದೊಳ್ ಸಂಕೋಚಮನ್ ಅಟಲಮ್ ಚಕ್ರವಾಕದೊಳ್ ಮಾಡದು ನಿನ್ನ ಮುಖೇಂದುಬಿಂಬಮ್ ಇಂದುಗೆ ಸಮಮ್ ಎಂಬುದು ಮಿಗೆ ವಿರುದ್ಧ ರೂಪಕಮ್ ಅಕ್ಕುಮ್

"ನಿನ್ನ ಮುಖಚಂದ್ರಬಿಂಬ ಕಮಲವನದಲ್ಲಿ ಮುದುಡುವಿಕೆಯನ್ನು, ಚಕ್ರವಾಕಕ್ಕೆ ದುಃಖವನ್ನು ಉಂಟುಮಾಡದು. ಆದರೂ ಅದು ಚಂದ್ರ" ಎಂಬುದು ವಿರುದ್ಧ ರೂಪಕವಾಗುತ್ತದೆ.

ಚಂದ್ರನಕಾರ್ಯ ನಿರ್ವಹಿಸಿದಿದ್ದರೂ ಅವಳ ಮುಖ ಚಂದ್ರಬಿಂಬವೇ ಎಂದು ಹೇಳುವುದು ವಿರುದ್ಧವೇ ಸರಿ.

19. "Even though your moon- face did not make the lotuses in the lotus pond contract, nor did it make the *cakravāka* birds suffer separation, your face is still similar to the moon." This type of metaphor where there is a contradiction in the expression is known as a *metaphor-with-contradiction* (*viruddha-rūpaka*).

ಕುಲಗಿರಿಯಯ್ ಗೌರವದಿಂ
ನೆಲನಯ್ ಸ್ಥೈರಣೆಯಿನಿಂದುವಯ್ ಶಾಂತಿಯಿನಾ
ಜಲನಿಧಿಯಯ್ ಗುಣ್ಪಿಂದೆಂ
ದಲಸದೆ ಪೇಟ್ಗಿಂತು ಹೇತುರೂಪಕವಿಧಿಯಂ ೨೦

ಕುಲಗಿರಿಯಯ್ ಗೌರವದಿನ್ ನೆಲನಯ್ ಸ್ಥೈರಣೆಯಿನ್ ಇಂದುವಯ್ ಶಾಂತಿಯಿನ್ ಆ ಜಲನಿಧಿಯಯ್ ಗುಣ್ಪಿಂದೆ ಎಂದು ಅಲಸದೆ ಪೇಟ್ಗೆ ಇಂತು ಹೇತುರೂಪಕ ವಿಧಿಯನ್

"ನೀನು ಗೌರವದಲ್ಲಿ ಕುಲಗಿರಿ. ಸಹನೆಯಲ್ಲಿ ಭೂಮಿ, ಶಾಂತಿಯಲ್ಲಿ ಚಂದ್ರ, ಆಳದಲ್ಲಿ ಸಾಗರ". ಹೀಗೆ ಹೇತು ರೂಪಕವನ್ನು ಹೇಳಬೇಕು.

20. "Because of greatness, you are a *kula-giri* (*kula* mountain): in endurance you are the earth, in coolness you are the moon, in depth you are an ocean." This metaphor gives reasons for the mountain's greatness and is thus a metaphor that *gives reasons* (*hētu-rūpaka*).

ಕುಮುದಾನಂದಕರವತಿ
ಕಮಲಾಕರರಾಗಹರಮುದಾರಂ ನಿನ್ನಾ
ವಿಮಳಯಶೋವಿಧುವೆಂಬುದು
ಕಮನೀಯಂ ಶ್ಲೇಷರೂಪಕಾಲಂಕಾರಂ ೨೧

ಕುಮುದ ಆನಂದ ಕರಮ್ (ಕು ಮುದ ಆನಂದ ಕರಮ್), ಅತಿ ಕಮಲಾಕರ ರಾಗ ಹರ (ಕಮಲಾ ಕರ ರಾಗ ಹರ), ಉದಾರನ್ ನಿನ್ನಾ ವಿಮಳ ಯಶೋವಿಧು ಎಂಬುದು ಕಮನೀಯಮ್ ಶ್ಲೇಷ ರೂಪಕ ಅಲಂಕಾರಮ್

"ನಿನ್ನ ವಿಮಲ ಯಶಶ್ಚಂದ್ರನು ನೈದಿಲೆಗಳಿಗೆ ಆನಂದವನ್ನು ಉಂಟುಮಾಡುವವನು (ನೀನು ಭೂಮಿಯ ಸಂತೋಷ ಆನಂದಗಳಿಗೆ ಕಾರಣನಾದವನು), ಕಮಲವನದ ಕೆಂಬಣ್ಣವನ್ನು ಅಥವಾ ಪ್ರೀತಿಯನ್ನು ಅಪಹರಿಸುವವನು (ಲಕ್ಷ್ಮಿಯ ಕರವನ್ನು ಪ್ರೀತಿಯನ್ನು ಪಡೆದವನು)." ಹೀಗೆ ಹೇಳಿದರೆ ಕಮನೀಯವಾದ ಶ್ಲೇಷ ರೂಪಕ ಅಲಂಕಾರ.

ಶ್ಲೇಷಾಲಂಕಾರದಲ್ಲಿ ಒಂದು ಶಬ್ದಕ್ಕೆ ವಿವಿಧ ಅರ್ಥಗಳನ್ನು ಗ್ರಹಿಸುವುದಿದೆ. ಇದನ್ನೇ ರೂಪಕಕ್ಕೆ ಅನ್ವಯಿಸಿದಾಗ ಶ್ಲೇಷರೂಪಕವಾಗುತ್ತದೆ.

21. "Your unblemished fame-moon (*yaśō-vidhu*) makes the lily happy, drawing back its love from the lotus pond." This is the beautiful *slēṣa-rūpaka,* a metaphor built on the *fusion* of two or more meanings.

The words in the original text can have more than one meaning with or without splitting the words. For example: *kumudānanda* = bliss of the lily / *ku-muda-ānanda* = the joyous and blissful earth; *kamalākara-rāga-hara* = taking out the redness or love from the lotus pond / *kamalā-kara-rāga-hara* = taking out, or appropriating, the passion of Lakṣmī.

ಪರಿಚಿತಸನಾಭಿರಾಗಾಂ
ಕುರಜಲಸೇಚಂ ವಿರೋಧಿತರುದವದಹನಂ
ಪರಮೋದಯರವಿಗಗನಂ
ಪರಾಕ್ರಮುವದೆನೆ ವಿಭಿನ್ನರೂಪಕಮಕ್ಕುಂ ೨೨

ಪರಿಚಿತ ಸನಾಭಿ ರಾಗಾಂಕುರ ಜಲಸೇಚಮ್ ವಿರೋಧಿ ತರು ದವ ದಹನಮ್ ಪರಮೋದಯ ರವಿ ಗಗನಮ್ ಪರಾಕ್ರಮಮ್ ಅದು ಎನೆ ವಿಭಿನ್ನ ರೂಪಕಮ್ ಅಕ್ಕುಮ್

"ನಿನ್ನ ಪರಾಕ್ರಮವು ಪರಿಚಿತರಾದ ಬಂಧುಗಳ ಪ್ರೇಮಾಂಕುರಕ್ಕೆ ಜಲಸೇಚಕ (ನೀರೆರೆಯುವ ಮೋಡ), ವಿರೋಧಿಗಳೆಂಬ ಮರಗಳಿಗೆ ಕಾಳ್ಗಿಚ್ಚು, ಪರಮಾಭ್ಯುದಯವೆಂಬ ಸೂರ್ಯನು ಮೂಡುವ ಗಗನ" ಎಂದರೆ ಅದು ವಿಭಿನ್ನ ರೂಪಕ.

ಇಲ್ಲಿ ಪರಾಕ್ರಮವೊಂದನ್ನು ಮೋಡವೆಂದೂ ಕಾಳ್ಗಿಚ್ಚೆಂದೂ ಗಗನವೆಂದೂ ಮೂರು ರೀತಿ ಹೇಳಿರುವುದರಿಂದ ವಿಭಿನ್ನ ರೂಪಕ.

22. "Your valor is the water-pouring cloud to the love-sprout, the burning fire to the tree-enemies, and the prosperity-sun to the sky." Expressed in such a way makes this verse a *vibhinna-rūpaka,* a metaphor where the subject of comparison takes *distinctive* objects of comparison.

Valor, as the subject of the comparison, is variously involved with different metaphors, depending on the object of comparison (cloud, fire, or sky).

ವದನಾಂಬುಜರಂಗದೊಳೀ
ಮದಾಲಸಭ್ರೂಲತಾವಿಲಾಸಿನಿ ಲೀಲಾ
ಸ್ಪದನೃತ್ಯಮನಾಗಿಸಿದ
ಪ್ಪುದಿದೆಂಬುದು ರೂಪಕೋರುರೂಪಕಮಕ್ಕುಂ ೨೩

ವದನಾಂಬುಜ ರಂಗದೊಳ್ ಈ ಮದಾಲಸ ಭ್ರೂಲತಾ ವಿಲಾಸಿನಿ ಲೀಲಾಸ್ಪದ ನೃತ್ಯಮನ್ ಆಗಿಸಿದಪ್ಪುದು ಇದು ಎಂಬುದು ರೂಪಕ ಉರು ರೂಪಕಮ್ ಅಕ್ಕುಮ್

"ಮುಖಕಮಲವೆಂಬ ರಂಗಸ್ಥಲದಲ್ಲಿ ಮದಾಲಸಳಾದ ಭ್ರೂಲತೆಯೆಂಬ ವಿಲಾಸಿನಿ ಲೀಲಾಸ್ಪದವಾದ ನೃತ್ಯವನ್ನು ಮಾಡುತ್ತಿರುವಳು" ಎಂಬಲ್ಲಿ ರೂಪಕರೂಪಕ.

ಒಂದು ರೂಪಕದಲ್ಲೇ ಇನ್ನೊಂದು ರೂಪಕ ಇರುವುದು. ರೂಪಕ–ರೂಪಕ. 'ವದನಾಂಬುಜರಂಗ' ಎಂಬುದು ಒಂದು ರೂಪಕ. ಅದರಲ್ಲೇ 'ವದನಾಂಬುಜ' ಎಂಬ ಇನ್ನೊಂದು ರೂಪಕವಿದೆ. 'ಭ್ರೂಲತಾವಿಲಾಸಿನಿ' ಎಂದಾಗಲೂ ರೂಪಕ. ಅದರಲ್ಲೇ 'ಭ್ರೂಲತೆ' ಎಂಬ ಇನ್ನೊಂದು ರೂಪಕವಿದೆ.

23. "The creeper-eyebrow, which is a glamorous lady, dances gracefully on the stage of the lotus-face" is and example of a *rūpaka-rūpaka,* a metaphor *based on a metaphor*.

ವದನಮಿದಲ್ತಂಬುರುಹಂ
ಮದಲೋಲವಿಲೋಚನಂಗಳಲ್ಲವಿವಳಿಗಳ್
ಮುದಮಲ್ತಿದು ವಿಕಸನಮೆಂ
ಬಿದನಿಂಬೆನೆ ಬಗೆಗೆ ರೂಪಕಾಪಹ್ನುತಿಯಂ ೨೪

ವದನಮ್ ಇದು ಅಲ್ತು ಅಂಬುರುಹಮ್. ಮದಲೋಲ ವಿಲೋಚನಂಗಳ್ ಅಲ್ಲಮ್ ಇವು ಅಳಿಗಳ್, ಮುದಮ್ ಅಲ್ತು ಇದು ವಿಕಸನಮ್ ಎಂಬ ಇದನ್ ಇಂಬು ಎನೆ ಬಗೆಗೆ ರೂಪಕ ಅಪಹ್ನುತಿಯನ್

"ಇದು ಮುಖವಲ್ಲ, ಕಮಲ. ಇವು ಮುದಲೋಲ ನಯನಗಳಲ್ಲ, ದುಂಬಿಗಳು. ಇದು ಸಂತೋಷವಲ್ಲ, ವಿಕಸನ" ಇದನ್ನು ಹೀಗೆ ಹೇಳಿದರೆ ಅದಕ್ಕೆ ರೂಪಕಾಪಹ್ನುತಿ ಎಂದು ಹೆಸರು.

ಒಂದು ವಸ್ತುವನ್ನು ಅದಲ್ಲವೆಂದು ಅಲ್ಲಗಳೆಯುವುದು ಅಥವಾ ಮರೆಯಿಸುವುದು ಅಪಹ್ನುತಿ. ಈ ಉದಾಹರಣೆಯಲ್ಲಿ ಅಪಹ್ನುತಿ ಮತ್ತು ರೂಪಕ ಕೂಡಿರುತ್ತವೆ.

24. "This is not a face; this is a lotus. These are not intoxicated eyes; these are bees. This is not joy; this is spiritual awakening." These are examples

of *rūpakāpahnuti,* metaphors built on the *denial or concealment* of a certain quality of the subject.

If something is denied or concealed, it becomes *apahnuti.* As the face and others items above are identified with lotus, etc., it becomes *rūpaka.*

ಮೊಗಮೆಂಬಂಬುಜದಲರಾ
ನಗೆಯೆಂಬ ವಿಕಾಸಮೊಪ್ಪುವುದಱೊಳ್ ಸುೞಗುಂ
ಮಿಗೆ ಕಣ್ಗಳೆಂಬ ತುಂಬಿಗ
ಳೊಗೆದೊಸಗೆಯಿನೆನೆ ಸಂಯುಕ್ತ ರೂಪಕಮಕ್ಕುಂ ೨೫

ಮೊಗಮ್ ಎಂಬ ಅಂಬುಜದ ಅಲರಾ ನಗೆ ಎಂಬ ವಿಕಾಸಮ್ ಒಪ್ಪುವುದಱೊಳ್ ಸುೞಗುಮ್ ಮಿಗೆ ಕಣ್ಗಳ್ ಎಂಬ ತುಂಬಿಗಳ್ ಒಗೆದು ಒಸಗೆಯಿನ್ ಎನೆ ಸಂಯುಕ್ತ ರೂಪಕಮ್ ಅಕ್ಕುಮ್

"ಮುಖವೆಂಬ ತಾವರೆಹೂವಿನ ನಗೆಯೆಂಬ ವಿಕಾಸದಲ್ಲಿ ಕಣ್ಣುಗಳೆಂಬ ದುಂಬಿಗಳು ಸಂತೋಷದಿಂದ ಸುಳಿಯುತ್ತಿವೆ" ಎಂಬುದು ಯುಕ್ತರೂಪಕ.

ಇಲ್ಲಿರುವ ರೂಪಕಗಳಲ್ಲಿ ಮುಖಾಂಬುಜ, ನಗೆ ವಿಕಾಸ, ಕಣ್ದುಂಬಿ ಎಂಬ ಮೂರೂ ಸಮುಚಿತವಾಗಿ ಅಥವಾ ಯುಕ್ತವಾಗಿ ಇರುವುದರಿಂದ ಇದು ಯುಕ್ತ ರೂಪಕ.

25. "The eyes-like-bees are happily revolving around the blossoming-smile of the lotus-face." This is an example of a *yukta-rūpaka,* a metaphor that is built on the *unity* of several features.

There is unity here between the face, the smile, and the eyes. The metaphor also connects the lotus, its blossoming, and the bees.

ನಗೆಯೆಂಬ ನೆವದೆ ಬೆಳಗೀ
ಮೊಗಮೆಂಬೀ ನೆವದೆ ತಿಂಗಳೊಳಗೆಸೆದಾದಂ

ಸೊಗಯಿಸಿ ತೋರ್ಕುಂ ಲೋಚನ
ಯುಗಮೆಂಬೀ ನೆವದೆ ಲಕ್ಷ್ಮಮೆನೆ ತದ್ವ್ಯಾಜಂ ೨೬

ನಗೆ ಎಂಬ ನೆವದೆ ಬೆಳಗು ಈ ಮೊಗಮ್ ಎಂಬ ಈ ನೆವದೆ ತಿಂಗಳೊಳಗೆ ಎಸೆದ ಆದಮ್ ಸೊಗಯಿಸಿ ತೋರ್ಕುಂ ಲೋಚನ ಯುಗಮ್ ಎಂಬ ಈ ನೆವದೆ ಲಕ್ಷ್ಮಮ್ ಎನೆ ತದ್ವ್ಯಾಜಮ್

"ನಗೆಯೆಂಬ ನೆವದಿಂದ ಬೆಳಗನ್ನು, ಮುಖವೆಂಬ ನೆವದಿಂದ ಚಂದ್ರನನ್ನು, ಎರಡು ಕಣ್ಣುಗಳೆಂಬ ನೆವದಿಂದ ಕಳಂಕವನ್ನು ಸೊಗಯಿಸಿ ತೋರುತ್ತಿದೆ" ಎಂದಾಗ ಅದು ವ್ಯಾಜ ರೂಪಕ.

26. "The moonlight that makes a pretense of a smile looks attractive, as the moon as a pretense of the face, and the dark blemish of the two eyes." This is an example of a *vyāja-rūpaka,* a metaphor built on *pretence.*

ವರ ರೂಪಕಭೇದಮನಿಂ
ತಿರೆ ಪೇಟ್ದಿಂ ಕಿಱಿದನುೞಿದುದಂ ಲಕ್ಷ್ಯದೊಳಾ
ದರದಱಿಗೆ ತೋರ್ಪೆನರ್ಥಾಂ
ತರವಿನ್ಯಾಸಕ್ಕೆ ಲಕ್ಷ್ಯಲಕ್ಷಣಯುಗಮಂ ೨೭

ವರ ರೂಪಕ ಭೇದಮನ್ ಇಂತು ಇರೆ ಪೇೞ್ದಿನ್ ಕಿಱಿದನ್ ಉೞಿದುದನ್ ಲಕ್ಷ್ಯದೊಳ್ ಆದರದೆ ಅಱಿಗೆ ತೋರ್ಪೆನ್ ಅರ್ಥಾಂತರ ವಿನ್ಯಾಸಕ್ಕೆ ಲಕ್ಷ್ಯ ಲಕ್ಷಣ ಯುಗಮನ್

ಶ್ರೇಷ್ಠವಾದ ರೂಪಕಭೇದಗಳನ್ನು ಸಂಕ್ಷೇಪವಾಗಿ ಈ ರೀತಿ ಹೇಳಿದ್ದೇನೆ. ಉಳಿದವನ್ನು ಲಕ್ಷ್ಯಗಳಿಂದಲೇ ಅರಿತುಕೊಳ್ಳಬೇಕು ಮುಂದೆ ಅರ್ಥಾಂತರ ನ್ಯಾಸಕ್ಕೆ ಲಕ್ಷ್ಯಲಕ್ಷಣಗಳನ್ನು ತೋರಿಸುತ್ತೇನೆ.

27. These in brief, are the types of the fine trope called *rūpaka*. Let other tropes be understood now, with examples. I first define and give

examples of a trope called *arthāntara-vinyāsa*, the *introduction of another matter* to substantiate a previous statement and obtain a desired meaning.

ಅರ್ಥಾಂತರ(ವಿ)ನ್ಯಾಸ

Introducing Another Matter as a Substantiation (*arthāntara-vinyāsa)*

ದೊರೆಕೊಳೆ ಪೇೞ್ದರ್ಥಮನಾ
ದರದಿಂ ಸಾಧಿಸಲೆ ವೇಡಿ ಪೆಱತೊಂದರ್ಥಾಂ
ತರಮಂ ಪೇೞ್ವುದದರ್ಥಾಂ
ತರವಿನ್ಯಾಸಾಖ್ಯಮದಱವೀ ಭೇದಂಗಳ್ ೨೮

ದೊರೆಕೊಳೆ ಪೇೞ್ದ ಅರ್ಥಮನ್ ಆದರದಿನ್ ಸಾಧಿಸಲೆ ವೇಡಿ ಪೆಱತೊಂದು ಅರ್ಥಾಂತರಮನ್ ಪೇೞ್ವುದು ಅದು ಅರ್ಥಾಂತರ ವಿನ್ಯಾಸ ಆಖ್ಯಮ್ ಅದಱವು ಈ ಭೇದಂಗಳ್

ವರ್ಣಿಸಿದ ಒಂದು ಅರ್ಥವನ್ನು ಪ್ರತಿಪಾದಿಸುವುದು ಅರ್ಥಾಂತರ (ವಿ)ನ್ಯಾಸ. ಅದರ ಭೇದಗಳು ಈ ರೀತಿ ಇವೆ.

ಪ್ರಸ್ತುತಾರ್ಥವನ್ನು ಅಪ್ರಸ್ತುತಾರ್ಥದಿಂದ ಸಮರ್ಥಿಸುವುದನ್ನು ಅರ್ಥಾಂತರ ನ್ಯಾಸವೆನ್ನುತ್ತಾರೆ. ದಂಡಿ ಇದನ್ನು ಹಿಗೆ ನಿರ್ವಚಿಸಿದ್ದಾನೆ (೨.೧೬೯): "ಜ್ಞೇಯಃ ಸೋಽರ್ಥಾಂತರನ್ಯಾಸೋ ವಸ್ತುಪ್ರಸ್ತುತ್ಯ ಕಿಂಚನ । ತತ್ಸಾಧನ ಸಮರ್ಥಸ್ಯ ನ್ಯಾಸೋ ಯೋಽನ್ಯಸ್ಯ ವಸ್ತುನಃ ॥"

ಸಕಲವ್ಯಾಪಿ ವಿಶೇಷ
ಪ್ರಕಾಶಕಮಯುಕ್ತಕಾರಿ ಯುಕ್ತಾಯುಕ್ತಂ
ಪ್ರಕಟಶ್ಲೇಷ ವಿರುದ್ಧಾ
ತ್ಮಕಂ ವಿರುದ್ಧಂ ವಿಪರ್ಯಯಂ ಯುಕ್ತಾರ್ಥಂ ೨೯

ಸಕಲವ್ಯಾಪಿ, ವಿಶೇಷ ಪ್ರಕಾಶಕ, ಯುಕ್ತಕಾರಿ, ಯುಕ್ತಾಯುಕ್ತ, ಪ್ರಕಟಶ್ಲೇಷ, ವಿರುದ್ಧಾತ್ಮಕ, ವಿಪರ್ಯಯ, ಯುಕ್ತಾರ್ಥ

(ಅರ್ಥಾಂತರನ್ಯಾಸದ ಭೇದಗಳು) : ಸಕಲವ್ಯಾಪಿ, ವಿಶೇಷ ಪ್ರಕಾಶಕ, ಯುಕ್ತಕಾರಿ, ಯುಕ್ತಾಯುಕ್ತ, ಪ್ರಕಟಶ್ಲೇಷ, ವಿರುದ್ಧಾತ್ಮಕ, ವಿಪರ್ಯಯ, ಯುಕ್ತಾರ್ಥ.

28-29. Introducing another matter to substantiate a previous statement is called *arthāntara-vinyāsa.* The following are examples for different types of this trope: *sakala-vyāpi* (universal), *viśēṣa-prakāśakaṁ* (specific), *āyukta-kāri, yuktāyuktaṁ* (correct and incorrect), *prakaṭa-ślēṣa* (invested with the fusion of multiple meanings), *viruddhātmakaṁ, viruddhaṁ* (contradictory to what is expected), *viparyayaṁ* (reversal of what is expected) *and yuktārthaṁ.*

ಸತತೋದಯನಪ್ರತಿಹತ
ಗತಿ ತೀವ್ರಂ ತದ್ದಿನಾಧಿನಾಥನುಮಸ್ತಂ
ಗತನಾದನಂತೆ ನಿಯತ
ಪ್ರತೀತಿಯಂ ಕಳೆಯಲಕ್ಕುಮೇ ವ್ಯಾಪಕಮಂ ೩೦

ಸತತೋದಯನ್ ಅಪ್ರತಿಹತಗತಿತೀವ್ರನ್ ತತ್ ದಿನಾಧಿನಾಥನುಮ್ ಅಸ್ತಂಗತನಾದನಂತೆ ನಿಯತ ಪ್ರತೀತಿಯನ್ ಕಳೆಯಲ್ ಅಕ್ಕುಮೇ ವ್ಯಾಪಕಮನ್

"ಸತತ ಅಭ್ಯುದಯ ಉಳ್ಳವನು, ಅಡ್ಡಿಯಿಲ್ಲದ ತೀವ್ರಗತಿಯುಳ್ಳವನು ಆದ ದಿನಾಧಿನಾಥನೂ ಅಸ್ತಂಗತನಾದನು" ಎಂದು ಹೇಳಬೇಕಾದ ಪ್ರಕೃತಾರ್ಥ ವನ್ನು ಮೀರುವಂತೆ ಹೇಳುವುದು ವ್ಯಾಪಕ.

ಅಪ್ರತಿಹತಗತಿ ಇರುವ ಸೂರ್ಯನು ಕೂಡ ಅಸ್ತಂಗತನಾದನೆಂದು ಹೇಳಿರು ಮವುದರಿಂದ ಇದು ವ್ಯಾಪಕ ಎಂಬ ಅರ್ಥಾಂತರನ್ಯಾಸವಾಗಿದೆ. ಸೂರ್ಯ ನಂತಹವನೂ ಸಕಲವ್ಯಾಪಿಯಾದ ಬೇರೊಂದು ಶಕ್ತಿಗೆ ಮಣಿದಿರಬೇಕೆಂಬ ಸೂಚನೆ ಇದೆ. ದಂಡಿ ಇದನ್ನು ವಿಶ್ವವ್ಯಾಪಿ ಎಂದು ಕರೆದಿದ್ದಾನೆ.

30. "Even the lord of the day (Sun) who always rises, irresistible and strong, has gone down. Can anyone, therefore, escape from the established order?"

This is an example of a substantiation that takes on an "all-pervasive" or universalizing character (*sakala-vyapi*). Daṇḍin calls it *viśva-vyāpī.* His definition and the example in the *Kavirājamārga* also resemble the *ślōka* given in the *Kāvyādarśa*: *bhagavantau jagan-nētrē sūrya-candrāmasāvapi / paśya gacchata ēvāstaṁ niyatiḥ kēna laṅghyatē //* (2.172)

ಸರಸಿಜಬಾಂಧವನಸ್ತಾಂ
ತರಗತನಾಗಿರೆ ಸರೋಜಿನೀವನಮಾದಂ
ಕೊರಗುತ್ತೆ ಮುಗಿಗುಮೀಶ್ವರ
ವಿರಹದೆ ಶೋಕಾಕುಲಂ ವಿಶೇಷಾಪ್ತಜನಂ ೩೧

ಸರಸಿಜ ಬಾಂಧವನ್ ಅಸ್ತಾಂತರಗತನ್ ಆಗಿರೆ ಸರೋಜಿನೀವನಮ್ ಆದಮ್ ಕೊರಗುತ್ತೆ ಮುಗಿಗುಮ್ ಈಶ್ವರ ವಿರಹದೆ ಶೋಕ ಆಕುಲಮ್ ವಿಶೇಷ ಆಪ್ತ ಜನಮ್

"ಸರಸಿಜ ಬಾಂಧವನು (ಸೂರ್ಯನು) ಅಸ್ತಂಗತನಾಗಿರಲು ಕಮಲವನವು ವಿಶೇಷವಾಗಿ ಕೊರಗುತ್ತ ಮುಚ್ಚಿಕೊಳ್ಳುವುದು. ಈಶ್ವರ ವಿರಹದಿಂದ ವಿಶೇಷ ಆಪ್ತಜನ ಶೋಕಾಕುಲವಾಗುವುದು."

ಸೂರ್ಯನು ಅಸ್ತಂಗತವಾದ ವಿಷಯವನ್ನು ಹೇಳಿ ಅದನ್ನು ಸಮರ್ಥಿಸಲು ಒಂದು ವಿಶೇಷವಾದ ಅಪ್ರಕೃತ ಸಂದರ್ಭವನ್ನು ಹೇಳುವುದು ವಿಶೇಷ ಪ್ರಕಾಶಕವೆಂಬ ಅರ್ಥಾಂತರನ್ಯಾಸ.

31. "When the close friend of lotuses (the Sun) goes down in the west, the lotuses in the garden contract with sorrow. Separation from their lord makes loyal people sorrowful."

This is an example of *viśēṣa-prakāśaka* (a type of substantiation that brings to light a "special" [*viśēṣa*] kind of expression). Both the proposed meaning (first sentence) and the substantiation (second sentence) are specially designed here.

ಮಲಯಾನಿಲನುಂ ಮಲಯಜ
ಜಲಮುಂ ಶಶಿಕಿರಣಮುಂ ವಿಯೋಗಿಗಳೆರ್ದೆಯೊಳ್
ನೆಲಸಿರ್ದುವಟಿಲೆ ಪಾಪದ
ಫಲಮಾದುದಯುಕ್ತಕಾರಿ ಕಾಮುಕಜನದಾ ೩೨

ಮಲಯಾನಿಲನುಮ್ ಮಲಯಜ ಜಲಮುಮ್ ಶಶಿ ಕಿರಣಮುಮ್ ವಿಯೋಗಿಗಳ ಎರ್ದೆಯೊಳ್ ನೆಲಸಿರ್ದುವು ಅಟಿಲೆ ಪಾಪದ ಫಲಮ್ ಆದುದು ಅಯುಕ್ತಕಾರಿ ಕಾಮುಕ ಜನದಾ

"ಮಲಯಮಾರುತ, ಶ್ರೀಗಂಧರಸ, ಚಂದ್ರನ ಶೀತಲಕಿರಣ ವಿಯೋಗಿಗಳ ಎದೆಯಲ್ಲಿ ತಾಪವನ್ನೇ ಉಂಟುಮಾಡಿದುವು. ಕಾಮುಕಜನದ ಪಾಪದ ಫಲವೇ ಸಂತಾಪವಾಯಿತು" ಎಂಬುದು ಅಯುಕ್ತಕಾರಿ.

'ಪಾಪದ ಫಲ ಒಳ್ಳೆಯದಾಗಲಾರದು' ಎಂಬ ನೀತಿವಾಕ್ಯ ಇರುವುದರಿಂದ ಇದು ಅಯುಕ್ತಕಾರಿ ಅರ್ಥಾಂತರನ್ಯಾಸ. ಪಾಪ ಅಯುಕ್ತಕಾರಿ. ಆದುದರಿಂದ ಈ ಹೆಸರು ಬಂದಿದೆ. ದಂಡಿ ಕೊಟ್ಟ ಉದಾಹರಣೆ (೨.೧೭೬) : "ಮಧುಪಾನ ಕಲಾತ್ ಕಂಠಾನ್ನಿರ್ಗತೋಽಪ್ಯಲಿನಾಃ ಧ್ವನಿಃ । ಕಟುರ್ಭವತಿ ಕರ್ಣಸ್ಯ ಕಾಮಿನಾಂ ಪಾಪಮೀದೃಶಮ್ ॥" ಮಧುಪಾನ ಮಾಡಿದಾಗ ದುಂಬಿಗಳ ಕಂಠಧ್ವನಿ ಕೂಡ ಕರ್ಕಶವಾಗುತ್ತದೆಂಬುದು ಅಯುಕ್ತ ಕಾರ್ಯಕ್ಕೆ ಉದಾಹರಣೆ.

32. "(Although they are cool), the cool breeze (*malayānila*), sandal liquid (*malayaja-jala*) and the rays of the moon, made the separated lovers heated with sorrow. The sin of a lustful person causes sorrow." This substantiation lacks propriety (*ayukta-kāri*).

In most edited texts of the *Kavirājamārga*, the name of this trope appears as *yukta-kāri* (propriety). But, a similar example in *Kāvyādarśa* gives the name as *ayukta-kāri.* As another type of substantiation called *yuktārtha* is also given by Śrīvijaya, the present one should be *ayukta-kāri.* The example in Daṇḍin's text for *ayuktakāri* is as follows (2.176): *madhu-pāna-kalāt kaṇṭhān-nirgatō'py alinaṁ dhaniḥ / kaṭurbhavati karṇasya kāminām pāpam īdṛśaṁ //*

ಹರಿಣಧರಂ ಸೊಗಯಿಸಿದಂ
ತಿರೆ ಕುಸುಮಿತಚೂತವಿತತಿ ಸೊಗಯಿಸಿತೆನಸುಂ
ಸುರಭಿ ಸುಮನಸ್ವಿ ದೋಷಾ
ಕರವಿಲಸಿತಮಪ್ಪೊಡಿಂತು ಯುಕ್ತಾಯುಕ್ತಂ **೩೩**

ಹರಿಣಧರನ್ ಸೊಗಯಿಸಿದಂತೆ ಇರೆ ಕುಸುಮಿತ ಚೂತ ವಿತತಿ ಸೊಗಯಿಸಿತು ಎನಸುಮ್ ಸುರಭಿ ಸುಮನಸ್ವಿ ದೋಷಾಕರ ವಿಲಸಿತಮ್ ಅಪ್ಪೊಡೆ ಇಂತು ಯುಕ್ತಾಯುಕ್ತಮ್

ಹರಿಣಧರನು (ಚಂದ್ರ) ಸೊಗಯಿಸಿದಂತೆ ಕುಸುಮಿತವಾದ ಮಾವಿನ ವನವೂ ಸೊಗಯಿಸಿತು. ವಸಂತನಾದರೋ ಮಹಾಪುರುಷ. ಆದರೆ ದೋಷಾಕರನಾದ ಚಂದ್ರನೂ ಸುಖಕಾರಿಯಾಗುವುದಾದರೂ ಹೇಗೆ.

ಜಿಂಕೆಯ ಗುರುತುಳ್ಳ ಚಂದ್ರ ಸುಂದರವಾಗಿರುತ್ತಾನೆ. ಆದರೆ ಅವನು ದೊಷಾಕರನು ಕೂಡ (ಕಲಂಕಗಳಿಗೆ ಆಕರ ಮತ್ತು ರಾತ್ರಿಯನ್ನು ಮಾಡುವವನು). ವಸಂತನ ಕಾರ್ಯ ಯುಕ್ತವಾದರೆ ಚಂದ್ರನದು ಅಯುಕ್ತ. ಆದುದರಿಂದ ಇದು ಯುಕ್ತಾಯುಕ್ತ,

33. "As the moon looks beautiful, the flowered mango tree also looks beautiful. In every way, Spring (*surabhi*) is a good-hearted person. But, how can one who "makes the night" (*dōṣākara,* i.e the Moon, or "a treasury [*ākara*] of flaws [*dōṣa*]") do something good?" This is an example of a

substantiation which is both proper and improper (*yuktāyukta*).

Here, in the first part of the stanza, the Moon is said to be beautiful but, in the second part, it is also said to be *dōṣākara* (a "treasury of flaws"), hence it is both proper (*yukta*) and improper (*ayukta*).

ದಿನನಾಯಕನಪರದಿಗಂ
ಗನೆಯೊಳ್ ನೆರೆದುದಿತರಾಗನಾದಂ ಪೀನಂ
ಜನಿಯಿಸುಗುಮಧಿಕರಾಗಮ
ನೆನಸುಮಪಕ್ರಮದೆ ವಾರುಣೀಸಂಶ್ಲೇಷಂ ೩೪

ದಿನನಾಯಕನ್ ಅಪರ ದಿಗಂಗನೆಯೊಳ್ ನೆರೆದು ಉದಿತ ರಾಗನ್ ಆದನ್ ಪೀನಮ್ ಜನಿಯಿಸುಗುಮ್ ಅಧಿಕ ರಾಗಮನ್ ಎನಸುಮ್ ಅಪಕ್ರಮದೆ ವಾರುಣೀ ಸಂಶ್ಲೇಷಮ್

"ದಿನನಾಯಕನಾದ ಸೂರ್ಯನು ಪಶ್ಚಿಮ ದಿಕ್ಕು ಎಂಬ ಸ್ತ್ರೀಯೊಂದಿಗೆ ಕೂಡಿಕೊಂಡು ಬಹುವಾಗಿ ಪ್ರೀತಿಯುಳ್ಳವನಾದನು (ಅಥವಾ ರಕ್ತವರ್ಣದಿಂದ ಕಾಣಿಸಿಕೊಂಡನು). ಅಕ್ರಮವಾಗಿ ವಾರುಣಿಯನ್ನು (ವರುಣನ ದಿಕ್ಕು ಪಶ್ಚಿಮ, ಮದ್ಯವನ್ನು) ಕೂಡಿಕೊಳ್ಳುವುದರಿಂದ (ಸೇವಿಸುವುದರಿಂದ) ಅಧಿಕ ರಾಗ (ಪ್ರೀತಿ, ರಕ್ತವರ್ಣ) ಉಂಟಾಗಿದೆ."

ಇಲ್ಲಿ 'ಸಂಶ್ಲೇಷ' ಎಂಬುದರಲ್ಲೂ ಆಲಿಂಗನ ಮತ್ತು ಶ್ಲೇಷಾಲಂಕಾರ ಎಂಬ ಅರ್ಥಗಳನ್ನು ಸೂಚಿಸಲಾಗಿದೆ.

34. "The Lord of the Day (the Sun), filled with love, united with the Lady West. Anyone who embraces Vāruṇa (the Lady West) will have love." This is and example of a substantiation which fuses one or more meanings (*saṁślēṣa*).

This is an example of *ślēṣa-sahita-arthāntara-vinyāsa.* Here the word '*rāga*' means both "love" and "redness."

Vāruṇi means "The Lady West," or "an intoxicating drink." Here *vāruṇi* gives "love" (in the case of the Lady West) or "redness" (in the case of the intoxicating drink).

ಸರಿದಧಿಪತಿಯಂ ದೋಷಾ
ಕರನಂತರ್ಮಲಿನನಾಗಿಯುಂ ಪೆರ್ಚಿಸುಗುಂ
ಪರಿಣತಕಲಾಕಲಾಪಂ
ಪರಿವರ್ಧಕನಕ್ಕುಮತಿವಿರುದ್ಧಾತ್ಮಕನುಂ ೩೫

ಸರಿತ್ ಅಧಿಪತಿಯನ್ ದೋಷಾಕರನ್ ಅಂತರ್ಮಲಿನನ್ ಆಗಿಯುಮ್ ಪೆರ್ಚಿಸುಗುಮ್ ಪರಿಣತ ಕಲಾಕಲಾಪಮ್ ಪರಿವರ್ಧಕನ್ ಅಕ್ಕುಮ್ ಅತಿ ವಿರುದ್ಧಾತ್ಮಕನುಮ್

"ದೋಷಾಕರನು(ಚಂದ್ರನು) ಅಂತರ್ಮಲಿನನಾದರೂ ಸಮುದ್ರವನ್ನು ಉಕ್ಕಿಸುವನು. ಪರಿಣತ ಕಲಾಪರಿಪೂರ್ಣನಾದವನು ವಿರುದ್ಧವಾದ ಎಷ್ಟು ದೋಷಗಳಿದ್ದರೂ ಪರಿವರ್ಧಕನೇ ಆಗಿರುತ್ತಾನೆ."

ವಿರುದ್ಧಾತ್ಮಕನಾದ ಚಂದ್ರನನ್ನು ಉಲ್ಲೇಖಿಸಿ ವಿರುದ್ಧಾತ್ಮಕ ಅರ್ಥಾಂತರನ್ಯಾಸವನ್ನು ಹೇಳಿರುವುದು ವಿಶೇಷ. ಈ ಲಕ್ಷ್ಯಕ್ಕೆ ಮೂಲ ದಂಡಿಯ ಶ್ಲೋಕ (೨.೧೭೫): "ಜಗದಾನಂದಯತ್ಯೇಷ ಮಲಿನೋಽಪಿ ನಿಶಾಕರಃ । ಅನುಗೃಹ್ಣಾತಿ ಹಿ ಪರಾನ್ ಸದೋಷೋಽಪಿ ದ್ವಿಜೇಶ್ವರಃ ॥"

35. "Even while possessed of an inner blemish and a maker of night, he (the Moon) makes the Lord of the Ocean swell. One who is a complete embodiment of the arts (the Moon) makes others joyous." Because this substantiation is "contradictory" to what is expected, it is called *viruddhātmakam*.

One who is a complete embodiment of arts (*pariṇata-kalākalāpa*) also means the Moon (*kalā* means both the "arts" as well as "the digits of the moon"). As the moon is

dōṣākara ("the maker of night") and *antarmalinan* ("possessed of an inner blemish"), it is also *pariṇata-kalākalāpa* ("a complete embodiment of the arts"). Since the substantiation here contradicts the earlier qualities of the Moon, it is said to be *viruddhātmaka.*

ಪರಿತಾಪಮನೆನಗೆ ನಿಶಾ
ಕರನಾಗಿಸುಗುಂ ವಸಂತಸಮಯಾನುಗತಂ
ಸುರಭಿಸಮಯೋದಿತಂ ಹಿಮ
ಕರನಟಿಲಂ ಪಡೆವನೆಂಬುದಿದು ವಿಪರೀತಂ ೩೬

ಪರಿತಾಪಮನ್ ಎನಗೆ ನಿಶಾಕರನ್ ಆಗಿಸುಗುಮ್ ವಸಂತ ಸಮಯಾನು ಗತನ್ ಸುರಭಿ ಸಮಯ ಉದಿತನ್ ಹಿಮಕರನ್ ಅಟಿಲನ್ ಪಡೆವನ್ ಎಂಬುದು ಇದು ವಿಪರೀತಮ್

"ವಸಂತನೊಡನೆ ಸಮಾಗಮಗೊಂಡ ನಿಶಾಕರನು(ಚಂದ್ರನು) ನನಗೆ ಸಂತಾಪವನ್ನುಂಟು ಮಾಡುತ್ತಿರುವನು. ವಸಂತಮಾಸದಲ್ಲಿ ಉದಯಗೊಂಡ ಹಿಮಕರನು ತಾನೂ ಸಂತಾಪಗೊಳ್ಳುವನೆಂಬುದು ವಿಪರೀತವಾಗಿದೆ."

ಬೇರೆಯವರಲ್ಲಿ ಸಂತಾಪವನ್ನು ಉಂಟುಮಾಡುವ ಚಂದ್ರನೂ ಸಂತಾಪ ಗೊಳ್ಳುವನೆಂದು ಹೇಳುವುದು ಅಸ್ವಾಭಾವಿಕ ಅಥವಾ ವಿಪರೀತವೆಂದು ಹೇಳಬಹುದು.

36. If the cooling moon gives others sorrow, it should also become sorrowful. But, as the "cool-rayed" moon (*himakara*), he should remain cool. As this is not the case, the substantiation here is a reversal of what is expected (*viparīta*).

ಉರಿಪಿತ್ತಶೋಕಪಲ್ಲವ
ವಿರಚಿತಶಯನೀಯಮೆನ್ನ ಮೆಯ್ಯುಂ ಪೀನಂ
ಸ್ಫುರದನಲಪ್ರತಿನಿಧಿ ತ
ತ್ಸ್ವರೂಪಗುಣಮಕ್ಕುಮೆಂಬುದೆಂದುಂ ಯುಕ್ತಂ ೩೭

ಉರಿಪಿತ್ತು ಅಶೋಕ ಪಲ್ಲವ ವಿರಚಿತ ಶಯನೀಯಮ್ ಎನ್ನ ಮೆಯ್ಯನ್ ಪೀನಮ್ ಸ್ಫುರತ್ ಅನಲ ಪ್ರತಿನಿಧಿ ತತ್ ಸ್ವರೂಪಗುಣಮ್ ಅಕ್ಕುಮ್ ಎಂಬುದು ಎಂದುಮ್ ಯುಕ್ತಮ್

"ಅಶೋಕದ ತಳಿರುಗಳಿಂದ ಮಾಡಿದ ಹಾಸಿಗೆ ನನ್ನ ಮೈಯನ್ನು ತುಂಬ ಉರಿಸಿತು. ಉರಿಬೆಂಕಿಯನ್ನು ಹೋಲುವ ಅದು ಸಮಾನವಾದ ಗುಣವನ್ನೇ ಹೊಂದಿರುವುದು ಯುಕ್ತವೇ ಸರಿ."

ಅಶೋಕದ ಬಣ್ಣ ಬೆಂಕಿಯ ಬಣ್ಣವೇ ಆಗಿರುವುದರಿಂದ ಅದರ ಗುಣವೂ ಸಮಾನವಾಗಿದೆ ಎಂದಿರುವುದರಿಂದ ಇದು ಯುಕ್ತಾರ್ಥ. ದಂಡಿ ಇದನ್ನು ಯುಕ್ತಕಾರಿ ಎಂದಿದ್ದಾನೆ (೨.೧೭೭) ಮತ್ತು ಇದೇ ರೀತಿಯ ಲಕ್ಷ್ಯವನ್ನು ಕೊಟ್ಟಿದ್ದಾನೆ.

37. "The bed made of *aśōka* sprouts really burns my body. As a representative of fire ("having a red color"), it has the same quality." This substantiation is understood as correct or proper (*yukta*).

Daṇḍin's gives a similar example for *yukta-kāri* (2.177).

ಸಂತತಮಿಂತೆಸೆವಷ್ಟಾ
ರ್ಥಾಂತರವಿನ್ಯಾಸಭೇದಮಂ ಬಗೆಗೆ ಬುಧರ್
ಮುಂತಣ ಲಕ್ಷಣಲಕ್ಷ್ಯಯು
ಗಾಂತರ್ಗತಭೇದಮಕ್ಕುಮಾ ವ್ಯತಿರೇಕಂ ೩೮

ಸಂತತಮ್ ಇಂತು ಎಸೆವ ಅಷ್ಟ ಅರ್ಥಾಂತರ ವಿನ್ಯಾಸ ಭೇದಮನ್ ಬಗೆಗೆ ಬುಧರ್ ಮುಂತಣ ಲಕ್ಷಣ ಲಕ್ಷ್ಯಯುಗ ಅಂತರ್ಗತ ಭೇದಮ್ ಅಕ್ಕುಮ್ ಆ ವ್ಯತಿರೇಕಮ್

ಈ ರೀತಿ ಅರ್ಥಾಂತರನ್ಯಾಸದ ಎಂಟು ಪ್ರಭೇದಗಳನ್ನು ವಿದ್ವಾಂಸರು ತಿಳಿದುಕೊಳ್ಳಲಿ. ಮುಂದೆ ವ್ಯತಿರೇಕಾಲಂಕಾರದ ಲಕ್ಷಣ ಲಕ್ಷ್ಯ ಮತ್ತು ಅಂತರ್ಗತ ಭೇದಗಳು ಉಕ್ತವಾಗಿವೆ.

38. In such a manner, let scholars understand the various types of *arthāntara-vinyāsa*. Now, what follows are the definition and examples of *vyatirēka* (distinction).

ವ್ಯತಿರೇಕ
Distinction (*vyatirēka)*

ಆದಿ ಪ್ರತೀತಿಯಿಂ ಶ
ಬ್ದಾದರದಿಂ ಸದೃಶಮಾದ ವಸ್ತುದ್ವಯದೊಳ್
ಭೇದಮನಱಿಪುವುದುಚಿತಗು
ಣೋದಯಕೃತವಾಕ್ಯವಿಸ್ತರಂ ವ್ಯತಿರೇಕಂ ೩೯

ಆದಿ ಪ್ರತೀತಿಯಿನ್ ಶಬ್ದ ಆದರದಿನ್ ಸದೃಶಮ್ ಆದ ವಸ್ತು ದ್ವಯದೊಳ್ ಭೇದಮನ್ ಅಱಿಪುವುದು ಉಚಿತ ಗುಣ ಉದಯ ಕೃತ ವಾಕ್ಯ ವಿಸ್ತರಮ್ ವ್ಯತಿರೇಕಮ್

ಎರಡು ವಸ್ತುಗಳ ಸಾದೃಶ್ಯ ಅರ್ಥಬಲದಿಂದ ತಿಳಿದು ಬರುತ್ತಿರುವಾಗ, ಅಥವಾ ಶಬ್ದಗಳಿಂದ ಉಕ್ತವಾಗುತ್ತಿರುವಾಗ ಅವುಗಳಲ್ಲಿ ಒಂದಕ್ಕಿಂತ ಇನ್ನೊಂದರಲ್ಲಿ ಗುಣೋದಯ ಕೃತವಾದ ಭೇದ ಹೇಗಿದೆಯೆಂಬುದನ್ನು ವಾಕ್ಯದಲ್ಲಿ ತೋರಿಸುವುದೇ ವ್ಯತಿರೇಕಾಲಂಕಾರ.

ಇದು ದಂಡಿ ಹೇಳಿದ ಲಕ್ಷಣದ ಅನುವಾದವೇ ಆಗಿದೆ (೨.೧೮೦): "ಶಬ್ದೋಪಾತ್ತೇ ಪ್ರತೀತೇ ವಾ ಸದೃಶ್ಯೇ ವಸ್ತುನೋರ್ದ್ವಯೋಃ । ತತ್ರ ಯದ್ಭೇದಕಥನಂ ವ್ಯತಿರೇಕಃ ಸ ಕಥ್ಯತೇ ॥"

39. When the similarity between two objects is known by convention or by the words themselves, if the distinguishing quality is explained in a separate line, the trope is known as *vyatirēka* (distinction).

This is basically a translation of Daṇḍin's definition (2.180): *śabdōpāttē pratītē vā sādṛśyē vastunōr dvayōḥ / tatra yadbhēdakathanaṁ vyatirēkaḥ sa kathyatē //*

ಶ್ರೀವನಿತಾಪ್ರಸವದಿನಾ
ಲಾವಣ್ಯದಿನತಿಗಭೀರಭಾವದೆ ನೀನಿಂ
ತಾ ವಾರಿಧಿಯಂ ಪೋಲ್ತಯ್
ಕೇವಲಭೇದಂ ದ್ವಿತೀಯ ಲಲಿತಾಕಾರಂ ೪೦

ಶ್ರೀ ವನಿತಾ ಪ್ರಸವದಿನ್ ಆ ಲಾವಣ್ಯದಿನ್ ಅತಿ ಗಭೀರ ಭಾವದೆ ನೀನ್ ಇಂತು ಆ ವಾರಿಧಿಯನ್ ಪೋಲ್ತಯ್ ಕೇವಲ ಭೇದಮ್ ದ್ವಿತೀಯ ಲಲಿತ ಆಕಾರಮ್

ಲಕ್ಷ್ಮೀದೇವಿಗೆ ಜನ್ಮ ನೀಡಿರುವುದರಿಂದ, ಆ ಲಾವಣ್ಯದ ಕಾರಣದಿಂದ (ಚೆಲುವಿನ ಕಾರಣದಿಂದ ಅಥವಾ ಲವಣದ ಸಂಬಂಧದಿಂದ), ಗಂಭೀರಭಾವದಿಂದ (ಗಂಭೀರ ಸ್ವಭಾವದಿಂದ ಅಥವಾ ಆಳವಾಗಿರುವುದರಿಂದ) ನೀನು ಆ ಸಾಗರವನ್ನು ಹೋಲುತ್ತಿರುವೆ. ಆದರೆ ಕೇವಲ ಭೇದವೆಂದರೆ ನಿನಗಿರುವ ಲಲಿತಾಕಾರ.

ಹೋಲಿಸತಕ್ಕಂತಹ ಎರಡು ವಿಷಯಗಳಲ್ಲಿ ವ್ಯತ್ಯಾಸವನ್ನು ಹೇಳುವುದರಿಂದ ಇದು ಏಕವ್ಯತಿರೇಕ. ದಂಡಿ ಇದೇ ರೀತಿಯ ಉದಾಹರಣೆಯನ್ನು ಕೊಟ್ಟಿದ್ದಾನೆ (೨.೧೮೧) : "ಧೈರ್ಯಲಾವಣ್ಯಗಾಂಭೀರ್ಯ ಪ್ರಮುಖೈಸ್ತ್ವಮುದನ್ವತಃ । ಗುಣೈಸ್ತುಲ್ಯೋಸಿ ಭೇದಸ್ತು ವಪುಷೈವೇದೃಶೇನ ತೇ ॥

40. In giving birth to Lakṣmī (the goddess of wealth), you resemble the ocean, in charm (literally, "saltiness" or *lāvaṇya*) and in profundity. The only difference is that you possess a graceful (human) shape."

As the difference here is between two comparable things, it is an example of an *ēka-vyatirēka* (a distinction in a "single" feature). It can be compared with Daṇḍin's example (2.181): *dhairya-lāvanya-gaṁbhīrya-pramukhais tvam udanvataḥ / guṇais tulōsi bhēdas tu vapuṣaivēdṛśēna tē //*

ಪರಮೋದಯರಿರ್ ಕಮಲಾ
ಕರಬೋಧಕರಿರ್ ದಿನೇಶನುಂ ನೀನುಂ ಭಾ

ಸ್ಕರನನಿಯತವೃತ್ತಕ್ರಮ
ನರಸಾ ನಿನ್ನಂತೆ ನಿಯತವೃತ್ತಸ್ಥಿತನೇಂ ೪೧

ಪರಮೋದಯರಿರ್ ಕಮಲಾಕರ ಬೋಧಕರಿರ್ ದಿನೇಶನುಮ್ ನೀನುಮ್ ಭಾಸ್ಕರ ನಿಯತ ವೃತ್ತ ಕ್ರಮನ್ ಅರಸಾ ನಿನ್ನಂತೆ ನಿಯತ ವೃತ್ತ ಸ್ಥಿತನ್ ಏನ್

"ಅರಸನೇ! ನೀನೂ ಸೂರ್ಯನೂ ಪರಮೋದಯವುಳ್ಳವರು, ಕಮಲಾಕರ ಬೋಧಕರು (ಕಮಲವನವನ್ನು ಅರಳಿಸುವವನು, ರಾಜ್ಯಲಕ್ಷ್ಮಿಯನ್ನು ಪಡೆದವನು). ಆದರೆ ಭಾಸ್ಕರನ ಸಂಚಾರ ಅನಿಯತ ವೃತ್ತದಲ್ಲಿ (ನಿಯಮಬದ್ಧವಾಗಿರದ ಸಂಚಾರ ಪಥದಲ್ಲಿ) ನಡೆಯುತ್ತದೆ. ಅವನು ನಿನ್ನಂತೆ ನಿಯತವೃತ್ತದಲ್ಲಿರುವವನೇನು?"

ಇಲ್ಲಿ ಸೂರ್ಯನಲ್ಲಿರುವ ಭಿನ್ನಗುಣವನ್ನು, ರಾಜನಲ್ಲಿರುವ ಭಿನ್ನ ಗುಣವನ್ನು ಬೇರೆ ಬೇರೆ ತೋರಿಸುವುದರಿಂದ ಇದು ಉಭಯವ್ಯತಿರೇಕ.

41. "O King, you and the Sun are always rising, and both of you make the *kamala* flourish. [The word 'kamala' refers to either the kingdom's prosperity [*rājyalakṣmi*], in the case of the king, or the lotus, in the case of the Sun.] The Sun revolves in an irregular circle. Does it move in a consistent orbit like you, O King?"

This is an example of an *ubhaya-vyatirēka* (distinction in "both" aspects). Here, the distinctive characteristics of both the Sun and the King are presented.

ಪರಿಣತಗುಣರಿರ್ ಕಾಂತೋ
ತ್ಕರರಿರ್ ನಿಜಸೌಖ್ಯರಿರ್ ನಿಶಾನಾಯಕನುಂ
ನರಪಾ ನೀನುಂ ದೋಷಾ
ಕರನಾ ಶಶಿ ನೀನುದಾರಗುಣಸಮುದಯನಯ್ ೪೨

ಪರಿಣತ ಗುಣರಿರ್ ಕಾಂತೋತ್ಕರರಿರ್ ನಿಜಸೌಖ್ಯರಿರ್ ನಿಶಾ ನಾಯಕನುಮ್ ನರಪಾ ನೀನುಮ್ ದೋಷಾಕರನ್ ಆ ಶಶಿ ನೀನ್ ಉದಾರ ಗುಣ ಸಮುದಯನಯ್

"ನರಾಧಿಪಾ! ನೀನೂ ನಿಶಾನಾಯಕನಾದ ಚಂದ್ರನೂ ಇಬ್ಬರೂ ಪರಿಣತಗುಣರು, ಕಮನೀಯತೆಯಿಂದ ಕೂಡಿದವರು. ಆದರೆ ಚಂದ್ರನು ದೋಷಾಕರನು (ಕಲಂಕವುಳ್ಳವನು ಮತ್ತು ರಾತ್ರಿಯನ್ನು ಉಂಟುಮಾಡುವವನು). ನೀನು ಉದಾರಗುಣ ಪ್ರಪೂರ್ಣನು."

ಇಲ್ಲಿ 'ದೋಷಾಕರ' ಎಂಬುದಕ್ಕೆ ಎರಡರ್ಥಗಳು ಇರುವುದರಿಂದ ಇದು ಶ್ಲೇಷವ್ಯತಿರೇಕದ ಉದಾಹರಣೆ.

42. "O, King! You and the lord of the night (the Moon) have a seasoned character. You are both sources of beauty and have your own pleasing qualities. The Moon is a *dōṣākara* ("possessed of blemishes" as well as "one who makes the night"). You, however, have only majestic qualities."

Referring to the Moon, the author says that he is a *dōṣākara,* which means one who possesses blemishes as well as one who makes the night. The verse here can be compared with two *ślōkas* of Daṇḍin (2.185 and 186). This is an example of *ślēṣa-vyatirēka* (a distinction based on a word's or phrase's multiple meanings).

ಅಲಘುಭುಜನಾಗಿಯುಂ ನಿ
ಶ್ಚಲನಾಗಿಯುಮಖಿಳಭೂಭೃದುತ್ತುಂಗತೆಯೊಳ್
ನೆಲಸಿಯುಮೆಯ್ದದು ನಿನ್ನಾ
ವಿಲಸಿತಮಂ ಮೇರು ಕಠಿನಭೋಗಾಧಾರಂ **೪೩**

ಅಲಘು ಭುಜನ್ ಆಗಿಯುಮ್ ನಿಶ್ಚಲನ್ ಆಗಿಯುಮ್ ಅಖಿಳ ಭೂಭೃತ್ ಉತ್ತುಂಗತೆಯೊಳ್ ನೆಲಸಿಯುಮ್ ಎಯ್ದದು ನಿನ್ನಾ ವಿಲಸಿತಮನ್ ಮೇರು ಕಠಿನ ಭೋಗ ಆಧಾರಮ್

ನಿಡಿದಾದ ಭುಜಗಳಿರುವವನಾದರೂ ನಿಶ್ಚಲನಾದರೂ ಅಖಿಲ ಪರ್ವತಗಳಲ್ಲಿ ಉನ್ನತವಾಗಿದ್ದರೂ ಕಠಿನ ಸ್ಪರ್ಶಕ್ಕೆ ಆಧಾರವಾಗಿರುವ ಮೇರು ನಿನ್ನ ಸೊಬಗನ್ನು ಪಡೆಯಲಾಗುವುದಿಲ್ಲ.

ಇದು ಸಾಕ್ಷೇಪ ವ್ಯತಿರೇಕಕ್ಕೆ ಉದಾಹರಣೆ.

43. "Though he has long arms, an immovable position, and greatness among mountains, Mount Mēru cannot gain your glory, as the mountain has hardness to it."

As there is reproach in this verse, the nature of the distinction is one "with reproach" (*sākṣēpa-vyatirēka*). Compare this verse with Daṇḍin's 2.187.

ಪಾರ್ಥಿವಗುಣಯುತಮಾಗಿಯು
ಮರ್ಥಿತಫಲದಾಯಿಯಾಗಿಯುಂ ನಿನ್ನೊಳ್ ತಾಂ
ವ್ಯರ್ಥತೆಯಂ ಪಡೆಗುಂ ಪರ
ಮಾರ್ಥಮಚೇತನತೆಯಿಂದೆ ಕಲ್ಪಕುಜಾತಂ **೪೪**

ಪಾರ್ಥಿವ ಗುಣಯುತಮ್ ಆಗಿಯುಮ್ ಅರ್ಥಿತ ಫಲದಾಯಿ ಆಗಿಯುಮ್ ನಿನ್ನೊಳ್ ತಾನ್ ವ್ಯರ್ಥತೆಯನ್ ಪಡೆಗುಮ್ ಪರಮಾರ್ಥಮ್ ಅಚೇತನತೆಯಿಂದೆ ಕಲ್ಪ ಕುಜಾತಮ್

"ಪೃಥ್ವಿಯ ಗುಣದಿಂದ ಕೂಡಿದ್ದರೂ (ಅಥವಾ ಕ್ಷತ್ರಿಯ ಗುಣದಿಂದ ಕೂಡಿದ್ದರೂ) ಕೋರಿದ ಫಲವನ್ನು ಕೊಡುತ್ತಿದ್ದರೂ ಕಲ್ಪವೃಕ್ಷವು ಅಚೇತನ ವಾದುದರಿಂದ ವ್ಯರ್ಥವೇ ಆಗಿರುತ್ತದೆ."

ಅಚೇತನವಾಗಿರುವುದೇ ವ್ಯರ್ಥವಾಗಿರಲು ಕಾರಣವೆಂದು ಹೇಳಿರುವುದರಿಂದ ಇದು ಸಹೇತುಕ ವ್ಯತಿರೇಕ.

44. "Even though it has a relationship with the earth (*pārthiva*) and gives it anything it needs, the "divine, wish-fulfilling" *kalpa* tree is useless because it is motionless."

The word *pārthiva* signifies a relationship with the earth or a king. This example resembles the previous one (*sāpēkṣa-vyatirēka)* but here the reason for the distinction (motionlessness) makes it a *sahētuka-vyatirēka* (a distinction based on a reason). The verse is comparable to the example given by Daṇḍin (2.188).

ಮದಮುದಿತಾಳಿಕದಂಬಂ
ಮೃದುವಿಳಸಿತಸರಸಕೇಸರಂ ಸರಸಿರುಹಂ
ವದನಮಿದು ಲೋಲಲೋಚನ
ಮುದಿತಂ ಸ್ಮಿತದಶನವಸನರಾಗೋಪಚಿತಂ ೪೫

ಮದ ಮುದಿತ ಅಳಿ ಕದಂಬಮ್ ಮೃದು ವಿಳಸಿತ ಸರಸ ಕೇಸರಮ್ ಸರಸಿರುಹಮ್ ವದನಮ್ ಇದು ಲೋಲ ಲೋಚನ ಮುದಿತಮ್ ಸ್ಮಿತ ದಶನವಸನ ರಾಗೋಪಚಿತಮ್

"ಕಮಲ ಮೃದುವಿಲಸಿತವಾದ ಸರಸ ಕೇಸರಗಳನ್ನು ತಳೆದಿದೆ. ದುಂಬಿಯ ಸಮೂಹ ಸೊಕ್ಕೇರಿ ಮುದವನ್ನು ಪಡೆದಿದೆ. ವದನವು ಚಂಚಲ ನೇತ್ರಗಳಿಂದ ಆನಂದ ಪಡೆದಿದೆ. ನಗುವ ಚೆಂದುಟಿಗಳ ಕೆಂಪಿನಿಂದ ರಂಜಿತವಾಗಿದೆ."

ಇಲ್ಲಿ ಕಮಲಕ್ಕೂ ಮುಖಕ್ಕೂ ಸಂಬಂಧವಿಲ್ಲದಿದ್ದರೂ ಸಾದೃಶ್ಯವನ್ನು ಹೇಳಿ ಅವುಗಳ ಭೇದವನ್ನೂ ಹೇಳಿರುವುದರಿಂದ ಸದೃಶ ವ್ಯತಿರೇಕಾಲಂಕಾರ. ದಂಡಿ ಇದೇ ರೀತಿಯ ಉದಾಹರಣೆಯನ್ನು ಕೊಟ್ಟಿದ್ದಾನೆ (೨.೧೮೩) : "ತ್ವನ್ಮುಖಂ ಪುಂಡರೀಕಂ ಚ ಫುಲ್ಲೇ ಸುರಭಿಗಂಧಿನೀ । ಭ್ರಮದ್ಭ್ರಮರ ಮಂಭೋಜಮ್ ಲೋಲನೇತ್ರಮ್ ಮುಖಂತು ತೇ ॥

45. "The lotus has made the bees joyous by intoxicating them, on account of its soft, attractive, and juicy pollen. Your face has charmingly darting eyes, smiling lips, and the beauty of redness."

Here the comparison between the lotus and the face is explicit (*vācya*), even though it is a comparison based on different qualities. Hence it is referred to as a distinction where the similitude is explicit (*vācya-sadṛśa-vyatirēka*). See Daṇḍin's example (2.193).

ಶರದಂಬರಮುಂ ಮತ್ತೀ
ಸರವರಮುಂ ವಿಳಸದತನುಧವಳಚ್ಛವಿಗಳ್
ಹರಿಣಾಂಕಾಲಂಕೃತಮಂ
ಬರಮೀ ಕೊಳಮುಚಿತರಾಜಹಂಸೋತ್ತಂಸಂ ೪೬

ಶರತ್ ಅಂಬರಮುಮ್ ಮತ್ತೆ ಈ ಸರವರಮುಮ್ ವಿಲಸತ್ ಅತನು ಧವಳಚ್ಛವಿಗಳ್ ಹರಿಣಾಂಕ ಅಲಂಕೃತಮ್ ಅಂಬರಮ್ ಈ ಕೊಳಮ್ ಉಚಿತ ರಾಜಹಂಸ ಉತ್ತಂಸಮ್

"ಶರತ್ಕಾಲದ ಆಕಾಶವೂ ಈ ಸರೋವರವೂ ಎರಡೂ ಅತಿಶಯವಾದ ಬಿಳಿ ಕಾಂತಿಯನ್ನು ಪಡೆದಿವೆ. (ಆದರೆ) ಆಕಾಶವು ಚಂದ್ರನಿಂದ ಅಲಂಕೃತವಾಗಿದೆ, ಈ ಕೊಳ ರಾಜಹಂಸಗಳಿಂದ ಭೂಷಿತವಾಗಿದೆ."

ಇಲ್ಲಿ ಆಕಾಶಕ್ಕೂ ಸರೋವರಕ್ಕೂ ಇರುವ ಸಾಮ್ಯಾಂಶಗಳಲ್ಲಿ ಬಿಳಿಪನ್ನು ವಾಚ್ಯವಾಗಿ ಹೇಳಿ ನಿರ್ಮಲತ್ವಾದಿ ಅಂಶಗಳನ್ನು ಸೂಚ್ಯ ಮಾಡಿರುವುದರಿಂದ ಪ್ರತೀಯಮಾನ ವ್ಯತಿರೇಕವಾಗಿದೆ.

46. "Both the autumn sky and this pond are extremely bright. The sky is ornamented by the Moon and the pond is decorated by the Royal Swans (*rājahaṁsa*)."

This is an example of *pratīyamāna-vyatirēka*, where the distinction is built on the suggestion (*pratīyamāna*) of the sky and pond's distinction, as different reasons are given for the similarity of the sky and pond's brightness and purity.

ಅಮದಾಲಸಲೋಚನಲೀ
ಲಮಪಾಸ್ತಭ್ರೂಲತಾವಿಲಾಸವಿಶೇಷಂ
ಕಮಲಮದು ಪೋಲದೀ ನಿ
ನ್ನ ಮುಖಮನಿಂತೆತ್ತಮುಕ್ತಗುಣಭೂಷಣಮಂ ೪೭

ಅಮದಾಲಸ ಲೋಚನ ಲೀಲಮ್ ಅಪಾಸ್ತ ಭ್ರೂಲತಾ ವಿಲಾಸ ವಿಶೇಷಮ್ ಕಮಲಮ್ ಅದು ಪೋಲದು ಈ ನಿನ್ನ ಮುಖಮನ್ ಇಂತು ಎತ್ತಮ್ ಉಕ್ತ ಗುಣ ಭೂಷಣಮನ್

"ಮದದಿಂದ ಅಲಸವಾದ ಲೋಚನಲೀಲೆಯಿಲ್ಲದ, ಹುಬ್ಬೆಂಬ ಬಳ್ಳಿಯು ತೋರುವ ಸೊಬಗಿಲ್ಲದ ಕಮಲವು ಈ ಗುಣಗಳೆಲ್ಲ ಇರುವ ನಿನ್ನ ಮುಖವನ್ನು ಹೇಗೂ ಹೋಲುವುದಿಲ್ಲ."

ಇಲ್ಲಿ ವಾಚ್ಯವಾಗಿ ಹೋಲಿಕೆಯಿಲ್ಲವೆಂದು ಹೇಳುತ್ತಿದ್ದರೂ ಸೂಚ್ಯವಾಗಿ ಇತರ ಅಂಶಗಳಲ್ಲಿ ಹೋಲಿಕೆಯಿರುವುದಾಗಿ ಹೇಳುತ್ತಿರುವುದರಿಂದ ಇದು ಪ್ರತೀಯಮಾನ ಸಾದೃಶ್ಯ ವ್ಯತಿರೇಕ.

47. "Lacking the charm of intoxicating eyes and the wonder of graceful creeper-like eyebrows, the lotus is not comparable to your face."

Here, the distinction is explicit but there is a suggestion that the lotus and the face resemble each other in all other qualities, like their softness and general beauty. Hence, here the distinction is built on a suggested similitude (*pratīyamāna-sādṛśya-vyatirēka*).

ಅನಲನಿನದಾಹ್ಯಕಳಂಕ
ಮನನಿಳತಪನೀಯಧೂಳಿಯಾನಜಲಕ್ಷಾ
ಲನಮನನಾಕಲಶೋಷ್ಯಮ
ನನಿಯತಕರ್ದಮಮನಯಶಮಂ ತೊಱೆಗಱೆವಂ ೪೮

ಅನಲನಿನ್ ಅದಾಹ್ಯಕಳಂಕಮ್ ಅನನಿಳ ತಪನೀಯ ಧೂಳಿಯಾನ್ ಅಜಲ ಕ್ಷಾಲನಮನ್ ಅನಾಕಲ ಶೋಷ್ಯಮನ್ ಅನಿಯತ ಕರ್ದಮಮನ್ ಅಯಶಮನ್ ತೊಱೆಗೆ ಅಱೆವನ್

ಬೆಂಕಿಯಿಂದ ಸುಟ್ಟರೂ ಹೋಗದ ಕಲಂಕ, ಗಾಳಿಯಿಂದ ಚೊಕ್ಕಟವಾಗದ ಧೂಳಿ, ನೀರಿನಿಂದ ತೊಳೆಯಲಾಗದ ಮತ್ತು ಬಿಸಿಲಿನಿಂದ ಒಣಗಿಸಲಾಗದ ಕೆಸರು ಜ್ಞಾನಿಯಾದವನು ಇವನ್ನು ತೊರೆಯಲಿ.

ಇಲ್ಲಿ ಅಪಕೀರ್ತಿಯನ್ನು ಕೆಸರೆಂದು ಹೇಳಿದರೂ ಅದು ವಿಶೇಷವಾದ ಕೆಸರೆಂದು ಸೂಚಿಸಿರುವುದರಿಂದ ಇದು ಸಜಾತಿ ವ್ಯತಿರೇಕವಾಗಿದೆ.

48. "Infamy is a blemish that cannot be burnt away by fire, dirt that cannot be blown away by the wind, a type of mud that cannot be cleaned by water or dried by sunlight. An intelligent person, therefore, should avoid it."

Here, infamy is compared to two types of mud – one cleaned with water and the other dried by sunlight. Because the distinction lies within the same category (of mud), this trope is called a *sajātīya-vyatirēka* ("distinction within the same category").

ಯಥಾಸಂಖ್ಯ

The Trope of Sequentiality (*yathāsaṅkhya)*

ವ್ಯತಿರೇಕವಿಕಲ್ಪಮನನು
ಗತಕ್ರಮ ವಿಶೇಷಗುಣಕೃತಾಂತಮನಱಿಗೀ
ಮತದಿಂ ಯಾಥಾಸಂಖ್ಯಾ
ಪ್ರತೀತಿಯಂ ತೋರ್ಪೆನನ್ವಿತಾನನ್ವಿತಮಂ ೪೯

ವ್ಯತಿರೇಕ ವಿಕಲ್ಪಮನ್ ಅನುಗತ ಕ್ರಮ ವಿಶೇಷ ಗುಣ ಕೃತಾಂತಮನ್ ಅಱಿಗೆ ಈ ಮತದಿನ್ ಯಾಥಾಸಂಖ್ಯ ಪ್ರತೀತಿಯನ್ ತೋರ್ಪೆನ್ ಅನ್ವಿತ ಅನನ್ವಿತಮನ್

ಮೇಲೆ ಹೇಳಿದ ಕ್ರಮಮದಲ್ಲಿ ವ್ಯತಿರೇಕ ಪ್ರಭೇದಗಳನ್ನು ವಿಶೇಷಗುಣವನ್ನು ಅರಿಯಬೇಕು. ಈ ರೀತಿ ಯಥಾಸಂಖ್ಯದ ಅನ್ವಿತ ಮತ್ತು ಅನನ್ವಿತ ಎಂಬ ಪ್ರಭೇದಗಳನ್ನು ಕುರಿತು ಹೇಳುತ್ತೇನೆ.

49. Let the special qualities and the types of *vyatirēka* be known in the order of above presentation. Now, I present the trope of sequentiality (*yathāsaṅkhya*), which is of two types: consistent (*anvita*) and inconsistent (*ananvita*).

ಅಳಕಾನನನಯನಂಗಳಿ
ನಳಿನಳಿನೋತ್ಪಳವಿಳಾಸಮಂ ಗೆಲ್ದುದಱಿಂ
ಕಳಹಂಸಲೀಲಗಮನೇ
ಕೊಳನಂ ನೀಂ ಪೋಲ್ವೆಯೆಂಬುದನುಗತಮಕ್ಕುಂ ೫೦

ಅಳಕ ಆನನ ನಯನಂಗಳಿನ್ ಅಳಿ ನಳಿನ ಉತ್ಪಳ ವಿಳಾಸಮನ್ ಗೆಲ್ದುದಱೆನ್ ಕಳಹಂಸ ಲೀಲ ಗಮನೇ ಕೊಳನನ್ ನೀನ್ ಪೋಲ್ವೆ ಎಂಬುದು ಅನುಗತಮ್ ಅಕ್ಕುಮ್

"ಕಲಹಂಸದಂತಹ ವಿಲಾಸದ ಗಮನ ಇರುವವಳೇ! ನಿನ್ನ ಕೂದಲು, ಮುಖ ಮತ್ತು ನಯನಗಳಿಂದ ನೀನು ದುಂಬಿ, ಕಮಲ ಮತ್ತು ಕನ್ನೈದಿಲೆಗಳ ವಿಲಾಸವನ್ನು ಗೆದ್ದುದರಿಂದ ನೀನು ಕೊಳವನ್ನು ಹೋಲುತ್ತಿರುವೆ" ಎಂಬುದು ಅನುಗತ (ಅನ್ವಿತ) ಯಥಾಸಂಖ್ಯ."

50. "O lady with the gait of a swan! As you win over the charm of the lilies with your hair, face, and eyes, you resemble the pond itself." This is an example of a "consistent" sequentiality (*anugata* or *anvita* type of *yathāsaṅkhya).*

This is virtually the same example for *yathāsaṅkhya* given in Daṇḍin (1.89).

ನಳಿನೋತ್ಪಳಾಳಿರುಚಿಗಳ
ನಳಕವಿಲೋಚನಮುಖಂಗಳಿಟ್ಕುಳಿಗೊಳೆ ನೀಂ
ತಿಳಿಗೊಳನನೆ ಪೋಲ್ತಿರ್ದುಂ
ತಿಳಿಯದುದೇಕೆಂಬುದಿಂತನನ್ವಯಮದಱೊಳ್ ೫೧

ನಳಿನ ಉತ್ಪಳ ಅಳಿ ರುಚಿಗಳನ್ ಅಳಕ ವಿಲೋಚನ ಮುಖಂಗಳ್ ಇಱ್ಕುಳಿಗೊಳೆ ನೀನ್ ತಿಳಿಗೊಳನನೆ ಪೋಲ್ತಿರ್ದುಮ್ ತಿಳಿಯದುದು ಏಕೆ ಎಂಬುದು ಇಂತು ಅನನ್ವಯಮ್ ಅದಱಿಕೊಳ್

ಕಮಲ, ಕನ್ನೈದಿಲೆ, ದುಂಬಿಗಳ ಕಾಂತಿಯನ್ನು ನಿನ್ನ ಕೂದಲು, ಕಣ್ಣು ಮತ್ತು ಮುಖಗಳು ಕೀಳುಮಾಡುತ್ತಿರುವುದರಿಂದ, ನೀನು ಕೊಳವನ್ನು ಹೋಲುತ್ತಿದ್ದರೂ ಅದೇಕೆ ಎಂದು ತಿಳಿಯುತ್ತಿಲ್ಲ" ಎಂಬುದು ಅನನ್ವಿತ (ಅನನ್ವಯ) ಯಥಾಸಂಖ್ಯ.

ಇಲ್ಲಿ ಮೊದಲು ಹೇಳಿದ ಕ್ರಮಕ್ಕೆ ವಿರುದ್ಧವಾದ ಕ್ರಮದಲ್ಲಿ ನಿರ್ದಿಷ್ಟ ವಿಷಯಗಳನ್ನು ಅನ್ವಯಿಸಬೇಕಾಗಿರುವುದರಿಂದ ಅನನ್ವಿತ.

51. "As your forelocks, eyes, and face won over the lotus, the lilies and the bees, you resemble a pond. Are you not aware of this fact?" This is an "inconsistent" sequentiality (*ananvaya* or *ananvita* type of *yathāsaṅkhya*).

ನಿಗದಿತಯಾಥಾಸಂಖ್ಯಾ
ನುಗತ ವ್ಯತಿರೇಕಯುಗಳಲಕ್ಷ್ಯಮಿವಕ್ಕುಂ
ಬಗೆಗಾ ದೀಪಕದ ವಿಭಾ
ಗಗತಿಯನೀ ಭೇದಲಕ್ಷ್ಯಲಕ್ಷಣಯುಗದಿಂ ೫೨

ನಿಗದಿತ ಯಾಥಾಸಂಖ್ಯ ಅನುಗತ ವ್ಯತಿರೇಕ ಯುಗಳ ಲಕ್ಷ್ಯಮ್ ಇವು ಅಕ್ಕುಮ್ ಬಗೆಗೆ ಆ ದೀಪಕದ ವಿಭಾಗ ಗತಿಯನ್ ಈ ಭೇದ ಲಕ್ಷ್ಯ ಲಕ್ಷಣ ಯುಗದಿನ್

ನಿಗದಿತವಾದ ಯಥಾಸಂಖ್ಯದ ಅನುಗತ ಮತ್ತು ವ್ಯತಿರೇಕದ (ಅನನುಗತದ) ಎರಡು ಪ್ರಭೇದಗಳನ್ನು ಕೊಡಲಾಯಿತು. ಮುಂದೆ ಹೇಳುವ ದೀಪಕ ಲಕ್ಷ್ಯಲಕ್ಷಣಗಳನ್ನು ಅರಿಯುವಂತಾಗಲಿ.

52. Here the comparison is not consistent, in that the sequence comes in a reverse order. These,

therefore, are the “consistent” and “inconsistent” types of *yathāsaṅkhya.* Now, let the definition and examples for *dīpaka* (the “illuminator”) be understood.

ದೀಪಕ

The Trope of the “Illuminator” *(dīpaka)*

ಜಾತಿಕ್ರಿಯಾಗುಣದ್ರ
ವ್ಯಾತಿಶಯವಿಶೇಷಿಯಪ್ಪ ಪದಮೊರ್ವುೞಿ ನಿಂ
ದೀ ತೆಱದಿನುೞಿದ ವಾಕ್ಯಸ
ಮೇತಿಗಮುಪಕಾರಯೋಗ್ಯದೀಪಕಮಕ್ಕುಂ ೫೩

ಜಾತಿ ಕ್ರಿಯಾ ಗುಣ ದ್ರವ್ಯ ಅತಿಶಯ ವಿಶೇಷಿಯಪ್ಪ ಪದಮೊರ್ವುಟಿನಿಂದೆ ಈ ತೆಱದಿನ್ ಉಟಿದ ವಾಕ್ಯ ಸಮೇತಿಗಮ್ ಉಪಕಾರ ಯೋಗ್ಯ ದೀಪಕಮ್ ಅಕ್ಕುಮ್

ಜಾತಿ, ಕ್ರಿಯೆ, ಗುಣ, ದ್ರವ್ಯಗಳ ಅತಿಶಯ ವಾಚಕವಾದ ಪದ ಒಂದೆಡೆಯಲ್ಲಿ ಮಾತ್ರ ಪ್ರಯುಕ್ತವಾದರೂ ಇಡಿಯ ವಾಕ್ಯಸಮುದಾಯಕ್ಕೆಲ್ಲ ಉಪಕಾರವಾದರೆ ಅದು ದೀಪಕ.

ಈ ಲಕ್ಷಣ ದಂಡಿಯ ಶ್ಲೋಕವನ್ನು ಅನುಸರಿಸುತ್ತದೆ (೨.೯೭): “ಜಾತಿ ಕ್ರಿಯಾಗುಣದ್ರವ್ಯವಾಚಿನೈಕತ್ರ ವರ್ತಿನಾ । ಸರ್ವವಾಕ್ಯೋಪಕಾರಶ್ಚೇತ್ ತಮಾಹು ದೀರ್ಪಕಂ ಯಥಾ॥”

53. If a word indicating a category, an action, a quality or a substance is used at one place but is applicable to the whole sentence, it is called a *dīpaka* (the “illuminator”).

The example and definition given in *Kavirājamārga* is comparable to Daṇḍin's 2.97: *jāti-kriyā-guṇa-dravya-vācinaikatra vartinā/sarvavākyōpakāraś cēt tam āhur dīpakaṁ yathā //*

ಮಲಯಾನಿಲನೊಯ್ಯನೆ ಪ
ಣ್ತೆಲೆಯಂ ನೆಲೆಯಿಂ ಕಟಿಲ್ಚುಗುಂ ವಿಟಪಿಗಳೊಳ್
ವಿಲಸಿತ ಕಳಿಕಾಕುಳಕೋ
ಮಲಾಂಕುರಮನಂತೆ ಪಡೆಗುಮವಱಿಡೆಯಿಡೆಯೊಳ್ ೫೪

ಮಲಯಾನಿಲನ್ ಒಯ್ಯನೆ ಪಣ್ತೆಲೆಯನ್ ನೆಲೆಯಿನ್ ಕಟಿಲ್ಚುಗುಮ್ ವಿಟಪಿಗಳೊಳ್ ವಿಲಸಿತ ಕಳಿಕಾಕುಳ ಕೋಮಲ ಅಂಕುರಮನಂತೆ ಪಡೆಗುಮ್ ಅವಱಿಡೆಯಿಡೆಯೊಳ್

"ಮಲಯಾನಿಲನು ಮೆಲ್ಲನೆ ಹಣ್ಣೆಲೆಗಳನ್ನು ಕಳಚಿ ಉದುರಿಸುವನು. ಅಲ್ಲದೆ ಅವುಗಳಲ್ಲಿ ಎಡೆಯೆಡೆಗೂ ಮೊಗ್ಗುಗಳ ಕೋಮಲವಾದ ಮೊಳಕೆಗಳನ್ನು ಉಂಟುಮಾಡುವನು."

ಇಲ್ಲಿ ಹಣ್ಣೆಲೆಗಳನ್ನು ಉದುರಿಸುವ ತಂಗಾಳಿ ಮತ್ತು ಮೊಳಕೆಗಳನ್ನು ಉಂಟುಮಾಡುವ ತಂಗಾಳಿ ಬೇರೆಯಾಗಿದ್ದರೂ ಎರಡು ಕ್ರಿಯೆಗಳಿಗೂ ಒಂದೇ ಕರ್ತೃಪದವಾದ ಮಲಯಾನಿಲನನ್ನು ಹೇಳಿರುವುದರಿಂದ ಜಾತ್ಯನುಗತ ಆದಿದೀಪಕ. ದಂಡಿ ಕೂಡ ತೆಂಕಣಗಾಳಿ ಹಣ್ಣೆಲೆಗಳನ್ನು ಉದುರಿಸುತ್ತದೆಂದೂ ಕೃಶಾಂಗಿಯ ಮಾನವನ್ನೂ ಹೋಗಲಾಡಿಸುವುದೆಂದೂ ಹೇಳಿದ್ದಾನೆ (೨.೯೮).

54. "The cool wind from the *Malaya* region (*malayānila*) will cause the ripe leaves to fall slowly from the trees. The wind also makes lovely sprouts and soft buds to emerge in between (the branches)."

Even though the wind that makes the leaves fall and the wind that makes the sprouts and buds emerge are different, they belong to the same category. Since the verse starts with a word indicating a "category" (*jāti*) – the wind – it is called a *jātyanugata-ādi-dīpaka.*

ತಿರಿತರ್ಕುಮಮಳಜಳನಿಧಿ
ಪರಿಖಾವೃತಭೂಮಿಭಾಗಮಂ ಭರದೆ ಜಳಾ

ಕರವಿಕ್ಷೇಪಕಕಕುದಂ
ತರಮಂ ಸವಿಶೇಷರುಚಿರಸಂಭವನಿಧಿಯಾ (?) ೫೫

ತಿರಿತರ್ಕುಮ್ ಅಮಳ ಜಳನಿಧಿ ಪರಿಖಾವೃತ ಭೂಮಿ ಭಾಗಮನ್ ಭರದೆ ಜಳಾಕರ ವಿಕ್ಷೇಪಕ ಕಕುದಂತರಮನ್ ಸವಿಶೇಷ ರುಚಿರ ಸಂಭವ ನಿಧಿಯಾ

"ಸ್ವಚ್ಛ ಸಾಗರವೆಂಬ ಕಂದಕದಿಂದ ಸುತ್ತುವರಿಯಲ್ಪಟ್ಟ ಭೂಮಿಭಾಗದಲ್ಲಿ ಮೇಘಗಳು ಓಡಾಡುವ ದಿಗಂತರಾಳದಲ್ಲಿ ಅಲೆದಾಡುತ್ತವೆ."

ಕ್ರಿಯಾನುಗತ ಆದಿ ದೀಪಕದಲ್ಲಿ ಪದ್ಯಾದಿಯಲ್ಲಿರುವ ಕ್ರಿಯಾಪದ (ತಿರಿತರ್ಕುಮ್) ಎರಡು ಕರ್ತೃಗಳಿಗೂ ಅನ್ವಯಿಸಬೇಕು. ಈ ಪದ್ಯ ಅಪಪಾಠವಾಗಿರುವುದರಿಂದ ಅರ್ಥ ಸ್ಪಷ್ಟವಾಗಿಲ್ಲ.

55. "Your (elephants?) wander upon the earth, which is surrounded by an ocean-moat. Your qualities wander in the horizons where the clouds roam about."

The original Kannada verse begins with the verb 'to wander' and, since it begins with an "action" (*kriyā*), it is called a *kriyā-dīpaka.* The example in the *Kavirājamārga* follows Daṇḍin (2.99): *caranti catur aṁbhōdhi-vēlōdyānēṣu dantinaḥ / cakravālādri-kunjēṣu kundabhāsō guṇāś ca tē //*

ವಿಶದತರಮಾಯ್ತು ಗುಣಮಣಿ
ವಿಶೇಷಭೂಷಣದಿನೀ ತ್ವದೀಯಾಕಾರಂ
ಶಶಧರಕಿರಣಾಭ ಬ'ವ
ದ್ಯಶೋವಿತಾನದಿನಶೇಷಮಾಶಾವಳಯಂ ೫೬

ವಿಶದತರಮ್ ಆಯ್ತು ಗುಣಮಣಿ ವಿಶೇಷ ಭೂಷಣದಿನ್ ಈ ತ್ವದೀಯ ಆಕಾರಮ್ ಶಶಧರ ಕಿರಣಾಭ ಭವತ್ ಯಶೋವಿತಾನ ದಿನಶೇಷಮ್ ಆಶಾವಳಯಮ್

"ಗುಣಗಳೆಂಬ ಮಣಿಭೂಷಣಗಳಿಂದ ಈ ನಿನ್ನ ಆಕೃತಿಯೂ ಚಂದ್ರಕಿರಣ ಸದೃಶವಾದ ಯಶಸ್ಸಿನಿಂದ ಸಕಲ ದಿಙ್ಮಂಡಲವೂ ಬೆಳಗಿಸಲ್ಪಟ್ಟಿದೆ."

ಪದ್ಯಾದಿಯಲ್ಲಿರುವ 'ವಿಶದತರಮ್' ಗುಣವಾಚಕ. ಇದೇ ಗುಣವಾಚಕ ಸಮಾನವಾಗಿ ಆಕೃತಿಗೂ ದಿಙ್ಮಂಡಲಕ್ಕೂ ಅನ್ವಯವಾಗುವುದರಿಂದ ಇದು ಗುಣಾನುಗತ ಆದಿದೀಪಕ.

56. "Your appearance is bright with virtues that are jewel ornaments. With your moon-like fame, the entire circle of directions is brightened."

Here the verse begins with a quality (brightness) that applies both to the appearance and the directions. Hence it is "quality"-based *dīpaka* (*guṇa-dīpaka*).

ದಿವಸಕರನುದಯಗಿರಿಶಿಖ
ರವಿಶೇಷವಿಭೂಷಣಂ ತಮೋರಿಪುಬಳಮಂ
ಪ್ರವಿಲೀನಂ ಮಾಡಿದನವ
ಯವದೊಳ್ ತಾರಾವಿತಾನತೇಜಮನಟಿದಂ ೫೭

ದಿವಸಕರನ್ ಉದಯ ಗಿರಿ ಶಿಖರ ವಿಶೇಷ ವಿಭೂಷಣಮ್ ತಮೋರಿಪು ಬಳಮನ್ ಪ್ರವಿಲೀನಮ್ ಮಾಡಿದನ್ ಅವಯವದೊಳ್ ತಾರಾ ವಿತಾನ ತೇಜಮನ್ ಅಟಿದನ್

"ಸೂರ್ಯನು ಉದಯಗಿರಿಯ ಶಿಖರಕ್ಕೆ ವಿಶೇಷ ವಿಭೂಷಣವಾಗಿ ಮೂಡಿ ಕತ್ತಲೆಂಬ ರಿಪುಸೈನ್ಯವನ್ನು ನಾಶಮಾಡಿದನು. ತನ್ನ ಅವಯವಗಳಿಂದ ನಕ್ಷತ್ರಗಳ ತೇಜವನ್ನು ಕೂಡ ನಾಶಮಾಡಿದನು."

ಇಲ್ಲಿ ಆದಿಯಲ್ಲಿ ಬಂದಿರುವ ಸೂರ್ಯನೆಂಬ ದ್ರವ್ಯವಾಚಕ ಕರ್ತೃಪದ ಎರಡು ಕ್ರಿಯೆಗಳಿಗೆ ಸಮಾನವಾಗಿ ಅನ್ವಯವಾಗುವುದರಿಂದ ಇದು ದ್ರವ್ಯ ದೀಪಕ.

57. "One who makes the day (the Sun), having become a special kind of ornament to the peak of the Eastern Mountain, has dissolved the army of

the darkness-enemy. He also destroyed the luster of the stars."

This verse begins with the Sun as an "element" (*dravya*) [here an ornament] that destroys the enemy (darkness) and the stars. Hence this trope is called a *dravya-dīpaka* and the example given here is comparable with Daṇḍin's 2.101.

ದೀಪಕಮಾ ಜಾತ್ಯಾದಿನಿ
ರೂಪಕಮಿಂತಕ್ಕುಮಾದಿಯೊಳ್ ಮಧ್ಯಾಂತ
ವ್ಯಾಪಕಮನದಂ ತಱಿಸ
ಲ್ಗೀ ಪೇೞ್ದ ವಿಕಲ್ಪಲಕ್ಷ್ಯದೊಳ್ ಕವಿಮುಖ್ಯರ್ ೫೮

ದೀಪಕಮ್ ಆ ಜಾತ್ಯಾದಿ ನಿರೂಪಕಮ್ ಇಂತು ಅಕ್ಕುಮ್ ಆದಿಯೊಳ್ ಮಧ್ಯ ಅಂತ ವ್ಯಾಪಕಮನ್ ಅದನ್ ತಱಿಸಲ್ಗೆ ಈ ಪೇೞ್ದ ವಿಕಲ್ಪ ಲಕ್ಷ್ಯದೊಳ್ ಕವಿಮುಖ್ಯರ್

ದೀಪಕದ ಜಾತ್ಯಾದಿ ಪ್ರಭೇದಗಳು ಆದಿಯಲ್ಲಿ ಬರುವುದನ್ನು ತೋರಿಸಿದ್ದಾಯಿತು. ಮಧ್ಯ ಮತ್ತು ಅಂತಗಳಲ್ಲಿ ಬರುವ ಪ್ರಭೇದಗಳನ್ನೂ ಮೇಲೆ ಹೇಳಿದ ಲಕ್ಷ್ಯಗಳ ಮಾದರಿಯಲ್ಲೇ ಕವಿಮುಖ್ಯರು ತಿಳಿದುಕೊಳ್ಳಲಿ.

58. Here, *jāti* and other varieties of *dīpaka* have been shown, all of which occur at the beginning of the verse (*ādi-dīpakā*). There are *dīpakas* that come in the middle and at the end also. These should be understood by observing the models set forth by great poets.

Śrīvijaya does not explicitly deal with the *dīpakas* that occur in the middle and end of verses. Examples of these varieties of *dīpaka* can be found Daṇḍin's work and also, as Śrīvijaya says here, in the usages of great poets.

ಉಪಮೆ

Simile (*upamē*)

ನಾನಾ ವಸ್ತು ವಿಭೇದಮ
ನೇನಾನುಂ ತೆಱದೆ ಪೋಲ್ಕೆಮಾಡುವುದುಪಮಾ
ಮಾನಿತಸದಳಂಕಾರಮ
ನೂನವಿಕಲ್ಪಪ್ರಪಂಚಮೀ ತೆಱನದಱಾ ೫೯

ನಾನಾ ವಸ್ತು ವಿಭೇದಮನ್ ಏನಾನುಮ್ ತೆಱದೆ ಪೋಲ್ಕೆ ಮಾಡುವುದು ಉಪಮಾನಿತ ಸದಳಂಕಾರಮ್ ಅನೂನ ವಿಕಲ್ಪ ಪ್ರಪಂಚಮ್ ಈ ತೆಱನ್ ಅದಱಾ

ನಾನಾ ವಸ್ತು ಪ್ರಕಾರಗಳನ್ನು ಏನಾದರೊಂದು ರೀತಿಯಿಂದ ಹೋಲಿಸುವುದು ಉಪಮಾ ಎಂದು ಪ್ರಖ್ಯಾತಿ ಪಡೆದ ಅಲಂಕಾರ. ಅದರ ಪ್ರಭೇದಗಳು ಈ ರೀತಿ ಇವೆ.

59. Comparing different objects in the some way or the other is the popular *alaṅkāra* called *upamē* (simile). What follows are types of this *alaṅkāra*.

ವನರುಹದಂತೆ ಮುಖಂ ಲೋ
ಚನಮೆಸೆವುತ್ಪಳದ ವೋಲ್ ತಳಂ ತಳಿರಂತೆಂ
ದನುರೂಪಮಾಗಿ ಪೇೞ್ದೊಡ
ದೆನಸುಂ ವಸ್ತೂಪಮಾನಮೆಂಬುದುಂ ಪೆಸರಿಂ ೬೦

ವನರುಹದಂತೆ ಮುಖಮ್ ಲೋಚನಮ್ ಎಸೆವ ಉತ್ಪಳದವೋಲ್ ತಳಮ್ ತಳಿರಂತೆ ಎಂದು ಅನುರೂಪಮಾಗಿ ಪೇೞ್ದೊಡೆ ಅದು ಎನಸುಮ್ ವಸ್ತೂಪಮಾನಮ್ ಎಂಬುದುಮ್ ಪೆಸರಿನ್

“ಮುಖವು ಕಮಲದಂತೆ, ಕಣ್ಣು ಸೊಗಸಾದ ಕನ್ನೈದಿಲೆಯಂತೆ, ಅಂಗೈ ಚಿಗುರಿನಂತೆ ಎಂದು ಒಂದನ್ನು ಇನ್ನೊಂದರೊಡನೆ ಅನುರೂಪಮಾಗಿ ಹೋಲಿಸಿ ಹೇಳಿದರೆ ಅದು ವಸ್ತೂಪಮೆ.

ಇಲ್ಲಿ ಎರಡು ವಸ್ತುಗಳ ಹೋಲಿಕೆಯನ್ನು ಹೇಳಿರುವುದರಿಂದ ಇದು ವಸ್ತೂಪಮೆ.

60. "The face is like a lotus, the eyes are like beautiful black lilies, the palm of the hand is like a tender leaf." If objects (*vastu*) are comparable (in terms of their shared qualities), it is called *vastūpamāna* (a simile comparing objects).

ತಳಿರ್ಗಳವೋಲ್ ಮೆಲ್ಲಿದುವೀ
ತಳಂಗಳಳಿಕುಳದ ವೋಲ್ ವಿನೀಳಂಗಳ್ ನಿ
ನ್ನಳಕಾಳಿಗಳೆಂಬುದನಾ
ಕುಳಮಿಲ್ಲದೆ ವಿಬುಧರಱಿಗೆ ಧರ್ಮೋಪಮೆಯಂ ೬೧

ತಳಿರ್ಗಳವೋಲ್ ಮೆಲ್ಲಿದುವು ಈ ತಳಂಗಳ್ ಅಳಿ ಕುಳದವೋಲ್ ವಿನೀಳಂಗಳ್ ನಿನ್ನ ಅಳಕಾಳಿಗಳ್ ಎಂಬುದನ್ ಆಕುಳಮ್ ಇಲ್ಲದೆ ವಿಬುಧರ್ ಅಱಿಗೆ ಧರ್ಮೋಪಮೆಯನ್

"ಈ ಅಂಗೈಗಳು ಚಿಗುರುಗಳಂತೆ ಮೃದುವಾಗಿವೆ. ಕೇಶಗಳು ದುಂಬಿಗಳಂತೆ ಕಪ್ಪಾಗಿವೆ." ಇದನ್ನು ಸಂದೇಹವಿಲ್ಲದೆ ವಿಬುಧರು ಧರ್ಮೋಪಮೆ ಯೆಂದರಿಯಬೇಕು.

ಇಲ್ಲಿ 'ಮೃದುವಾಗಿವೆ', 'ಕಪ್ಪಾಗಿವೆ' ಎಂದು ಸಾಧಾರಣಧರ್ಮವನ್ನು ಹೇಳಿರುವುದರಿಂದ ಧರ್ಮೋಪಮೆ.

61. "The palms are soft like tender leaves, your forelocks are black like bees." If expressed thus, without a doubt this is a simile based on "qualities" (*dharma*) and called *dharmōpamā* (a simile comparing qualities).

ನಿನ್ನ ಮುಖದಂತೆ ಕಮಳಮಿ
ದುನ್ನಿದ್ರಂ ನಿನ್ನ ತಳದ ವೋಲಾರಕ್ತಂ
ನನ್ನಯಿನೀ ಪಲ್ಲವಮೆನೆ
ಸನ್ನುತರೂಪಿಂ ವಿಪರ್ಯಯೋಪಮಮಕ್ಕುಂ ೬೨

ನಿನ್ನ ಮುಖದಂತೆ ಕಮಳಮ್ ಇದು ಉನ್ನಿದ್ರಮ್ ನಿನ್ನ ತಳದವೋಲ್ ಆರಕ್ತಮ್ ನನ್ನಿಯಿನ್ ಈ ಪಲ್ಲವಮ್ ಎನೆ ಸನ್ನುತ ರೂಪಿನ್ ವಿಪರ್ಯಯ ಉಪಮಮ್ ಅಕ್ಕುಮ್

"ಈ ಕಮಲವು ನಿನ್ನ ಮುಖದಂತೆ ಅರಳಿದೆ. ಈ ತಳಿರು ನಿನ್ನ ಅಂಗೈಯಂತೆ ಕೆಂಪಾಗಿದೆ" ಎಂದು ಹೇಳಿದರೆ ಅದು ವಿಪರ್ಯಯೋಪಮೆ ಆಗುತ್ತದೆ.

ಇಲ್ಲಿ ಉಪಮೇಯವಾದ ಮುಖವನ್ನು ಉಪಮಾನವನ್ನಾಗಿ, ಉಪಮಾನವಾದ ಕಮಲವನ್ನು ಉಪಮೇಯವನ್ನಾಗಿ ಮಾಡಲಾಗಿದೆ. ದಂಡಿ ಇದನ್ನು ವಿಪರ್ಯಾಸೋಪಮೆ ಎಂದಿದ್ದಾನೆ. ಇದಕ್ಕೆ ಪ್ರತೀಪಾಲಂಕಾರವೆಂಬ ಹೆಸರಿದೆ.

62. "This lotus blossomed like your face; this tender leaf is red like your palm." This simile is understood as employing a "reversal" (*viparyaya*) and thus called *viparyayōpamā* (a simile involving a reversal).

Here the objects of comparison (lotus and tender leaves) are depicted as subjects of comparison, contrary to expectations. Daṇḍin refers to a simile that reverses the object and subject of comparison as *viparyāsōpamā* (2.17). This trope is also called *pratīpa.*

ಕಮಳಮಿದು ನಿನ್ನ ಮುಖದಂ
ತೆ ಮುಖಮುಮೀ ಕಮಳದಂತೆ ನಿಕ್ಕುವಮೆಂದಿಂ
ತಮರ್ದಿರೆ ಪೇೞ್ದುದನಱಿಗು
ತ್ತಮರನ್ಯೋನ್ಯೋಪಮಾನನಾಮಾಂಕಿತಮಂ ೬೩

ಕಮಳಮ್ ಇದು ನಿನ್ನ ಮುಖದಂತೆ ಮುಖಮುಮ್ ಈ ಕಮಳದಂತೆ ನಿಕ್ಕುವಮ್ ಎಂದು ಇಂತು ಅಮರ್ದಿರೆ ಪೇೞ್ದುದನ್ ಅಱಿಗೆ ಉತ್ತಮರ್ ಅನ್ಯೋನ್ಯ ಉಪಮಾನ ನಾಮಾಂಕಿತಮ್

"ಈ ಕಮಲವು ನಿನ್ನ ಮುಖದಂತಿದೆ, ಈ ನಿನ್ನ ಮುಖವೂ ನಿಜವಾಗಿ ಕಮಲದಂತಿದೆ" ಎಂದು ಹೇಳಿದರೆ ಅದು ಅನ್ಯೋನ್ಯೋಪಮೆ ಎಂದು ವಿದ್ವಾಂಸರು ತಿಳಿಯಬೇಕು.

ಇಲ್ಲಿ ಮುಖವು ಕಮಲದಂತೆ ಎಂದೂ ಕಮಲವು ಮುಖದಂತೆ ಎಂದೂ ಹೇಳಿರುವುದರಿಂದ ಇದು ಅನ್ಯೋನ್ಯೋಪಮೆ. ಇದಕ್ಕೆ ಉಪಮೇಯೋಪಮೆ ಎಂಬುದು ಇನ್ನೊಂದು ಹೆಸರು.

63. "The lotus is like your face and the face is like the lotus." Scholars refer to this kind of simile as "reciprocal" (*anyōnyōpamā*).

This simile is also called a simile where the subject of the comparison (*upameya*) is also rendered the object of comparison (*upamēyōpamā*). The example Śrīvijaya gives is similar to that of Daṇḍin's (2.18): *tavānanam ivāṁbhōjam aṁbhōjam iva tē mukhaṁ.*

ಸರಸಿಜದೊಳ್ ನಿನ್ನ ಮುಖಂ
ತರುಣೀಸದೃಶಂ ಸಮಂತು ಪೋಲದು ಪೆಱತಂ
ನಿರುತಮಿದೆಂಬುದು ನಿಯಮಾಂ
ತರಿತಂ ನಿಯಮೋಪಮಾವಿಕಲ್ಪಿತಭಾವಂ ೬೪

ಸರಸಿಜದೊಳ್ ನಿನ್ನ ಮುಖಮ್ ತರುಣೀ ಸದೃಶಮ್ ಸಮಂತು ಪೋಲದು ಪೆಱತನ್ ನಿರುತಮ್ ಇದು ಎಂಬುದು ನಿಯಮಾಂತರಿತಮ್ ನಿಯಮೋಪಮಾ ವಿಕಲ್ಪಿತ ಭಾವಮ್

"ತರುಣೀ! ನಿನ್ನ ಮುಖವು ಕಮಲವೊಂದನ್ನು ಮಾತ್ರ ಹೋಲುವುದು. ಬೇರೆ ಇನ್ನಾವ ವಸ್ತುವನ್ನೂ ಹೋಲದು" ಎಂದು ನಿಯಮವನ್ನು ಹಾಕಿದಾಗ ಅದು ನಿಯಮೋಪಮೆಯಾಗುತ್ತದೆ.

64. "Oh, young lady! Your face resembles only the lotus and nothing else." Because this simile plays on a "restriction" (*niyama*), where the comparison is with one object and no other, it is called a *niyamōpamā* (a "restricted" simile).

Here, the comparison is restricted to one object. Daṇḍin also defines this simile in a similar way (2.19): *ity anya-sāmya-vyāvṛttēr iyaṁ*.

ಕಮಳಮಿದನ್ನೆಗಮೀ ನಿ
ನ್ನ ಮುಖದೊಳೋರಂತೆ ಪೆಱದುಮಿದಱೊಳ್ ಸದೃಶಂ
ಸಮವಾಯಮುಳ್ಳೊಡೆಲ್ಲಂ
ಸಮನಿಸುಗಂತೆಂಬುದನಿಯಮೋಪಮೆಯಕ್ಕುಂ ೬೫

ಕಮಳಮ್ ಇದು ಅನ್ನೆಗಮ್ ಈ ನಿನ್ನ ಮುಖದೊಳ್ ಓರಂತೆ ಪೆಱದುಮ್ ಇದಱೊಲ್ ಸದೃಶಮ್ ಸಮವಾಯಮ್ ಉಳ್ಳೊಡೆ ಎಲ್ಲಮ್ ಸಮನಿಸುಗೆ ಅಂತು ಎಂಬುದು ಅನಿಯಮ ಉಪಮೆ ಅಕ್ಕುಮ್

"ಕಮಲವು ನಿನ್ನ ಮುಖಕ್ಕೆ ಸದೃಶ. ಅದರಂತೆಯೇ ಸಾಮ್ಯವನ್ನುಳ್ಳ ಮಿಕ್ಕೆಲ್ಲ ವಸ್ತುಗಳು ಕೂಡ" ಎಂದಾಗ ಅದು ಅನಿಯಮೋಪಮೆಯಾಗುತ್ತದೆ.

ಇಲ್ಲಿ ಯಾವ ನಿಯಮವೂ ಇಲ್ಲದೆ ಇರುವುದರಿಂದ ಅನಿಯಮೋಪಮೆ.

65. "Lotus resembles your face, likewise other things which are similar also resemble." If said like this, it is *aniyamōpamā* (unrestricted simile).

ವದನಂ ಮದೀಯಲೋಚನ
ಮುದಾವಹಂ ಕಮಳಮಳಿಕುಳೋತ್ಸವಜನಕಂ
ವಿದಿತವಿಭೇದಕ್ರಮಮಿಂ
ತಿದಲ್ಲದಿಲ್ಲೆಂಬುದತಿಶಯೋಪಮೆ ಸತತಂ ೬೬

ವದನಮ್ ಮದೀಯ ಲೋಚನ ಮುದಾವಹಮ್ ಕಮಳಮ್ ಅಳಿಕುಳ ಉತ್ಸವ ಜನಕಮ್ ವಿದಿತ ವಿಭೇದ ಕ್ರಮಮ್ ಇಂತು ಇದು ಅಲ್ಲದೆ ಇಲ್ಲ ಎಂಬುದು ಅತಿಶಯೋಪಮೆ ಸತತಮ್

"ನಿನ್ನ ಮುಖವು ನನ್ನ ನೇತ್ರಗಳಿಗೆ ಸಂತೋಷಕರವಾಗಿದೆ. ಕಮಲವು ದುಂಬಿಗಳಿಗೆ ಹರ್ಷವನ್ನುಂಟುಮಾಡುತ್ತದೆ. ಇದಲ್ಲದೆ ಅವಕ್ಕೆ ಬೇರೇನೂ ವ್ಯತ್ಯಾಸವಿಲ್ಲ" ಎಂಬುದು ಅತಿಶಯೋಪಮೆ.

ಉಪಮಾನೋಪಮೇಯಗಳ ಸಾದೃಶ್ಯದ ಮಾತಿನೊಂದಿಗೆ ಅವುಗಳಲ್ಲಿರುವ ವ್ಯತ್ಯಾಸವೊಂದನ್ನು ಹೇಳುವುದರಿಂದ ಇದು ಅತಿಶಯೋಪಮೆ.

66. "Your face pleases my eyes. The lotus gives happiness to the bees. Except for this, there is no difference between them." This is called a simile built on an exaggeration (*atiśayōpamā*).

While presenting a similarity between the subject and the object of comparison, *only one* difference has been highlighted. Hence, it is a simile (*upamē*) built on an exaggeration (*atiśaya*).

ಈಕೆಯ ವದನಾಕಾರಮ
ನೇಕಾಂತಂ ಪೋಲ್ವೆನೆಂಬುದರ್ಕಾಗಿ ಕನ
ತ್ಕೋಕನದಕ್ಕಿಂದುಗಮುಂ
ಟಾಕಾಂಕ್ಷಣಮದಱೊಳೆಂಬುದುಪಮೋತ್ಪ್ರೇಕ್ಷಂ ೬೭

ಈಕೆಯ ವದನಾಕಾರಮನ್ ಏಕಾಂತಮ್ ಪೋಲ್ವೆನ್ ಎಂಬುದರ್ಕಾಗಿ ಕನತ್ ಕೋಕನದಕ್ಕೆ ಇಂದುಗಮುಮ್ ಉಂಟು ಆಕಾಂಕ್ಷಣಮ್ ಅದಱೊಳ್ ಎಂಬುದು ಉಪಮೋತ್ಪ್ರೇಕ್ಷಮ್

"ಈಕೆಯ ಮುಖಾಕೃತಿಯನ್ನು ಸಂಪೂರ್ಣವಾಗಿ ಹೋಲಬೇಕೆಂಬ ಆಸೆ ಕೆಂದಾವರೆಗೂ ಚಂದ್ರನಿಗೂ ಉಂಟು" ಎಂಬುದು ಉಪಮೋತ್ಪ್ರೇಕ್ಷೆ.

ಇದನ್ನು ದಂಡಿಯಂತೆ (೨.೨೩) ಉತ್ಪ್ರೇಕ್ಷಿತೋಪಮೆ ಎಂದು ಹೇಳುವುದು ಸಮಂಜಸ. ಏಕೆಂದರೆ ಇದು ಉತ್ಪ್ರೇಕ್ಷಿತವಾದ ಉಪಮೆಯೇ ಹೊರತು ಉತ್ಪ್ರೇಕ್ಷೆಯಲ್ಲ. ಕೆಂದಾವರೆಗೂ ಚಂದ್ರನಿಗೂ ಹೇಗಾದರೂ ಮುಖಸಾದೃಶ್ಯವನ್ನು ಸಂಪಾದಿಸಬೇಕೆಂಬ ಆಕಾಂಕ್ಷೆ ಇದೆ.

67. "The red lotus and the Moon desire to resemble the shape of her face, in every respect." This is an "imaginative ascription" (*utprēkṣā*) based on a simile (*upamē*) and is thus called an *upamōtprēkṣā.* Daṇḍin rightly calls it *utprēkshi-tōpamā* as it is a simile based on imaginative ascription.

ಕಮಳಂ ಲಲಿತಭ್ರೂವಿ
ಭ್ರಮಮಂ ವಿಲಸಿತವಿಲೋಲಲೋಚನಯುಗಮಂ
ಸಮವಾಯಮುಳ್ಳೊಡದು ನಿ
ನ್ನ ಮೊಗಕ್ಕೆಣೆಯೆಂಬುದದ್ಭುತೋಪಮೆ ನಿಯತಂ ೬೮

ಕಮಳಮ್ ಲಲಿತ ಭ್ರೂ ವಿಭ್ರಮಮನ್ ವಿಲಸಿತ ವಿಲೋಲ ಲೋಚನ ಯುಗಮನ್ ಸಮವಾಯಮ್ ಉಳ್ಳೊಡೆ ಅದು ನಿನ್ನ ಮೊಗಕ್ಕೆ ಎಣೆ ಎಂಬುದು ಅದ್ಭುತೋಪಮೆ ನಿಯತಮ್

"ಕಮಲವು ಲಲಿತವಾದ ಭ್ರೂವಿಲಾಸವನ್ನು ಚಲಿಸುವ ಕಣ್ಣುಗಳನ್ನು ಕೂಡಿಕೊಳ್ಳುವುದಾದರೆ ನಿನ್ನ ಮುಖಕ್ಕೆ ಸಮಾನವಾಗುತ್ತದೆ" ಎಂಬುದು ಅದ್ಭುತೋಪಮೆ.

ಕಲ್ಪಿತವಾದ ಅಂಶದಿಂದ ಮುಖವು ಕಮಲಕ್ಕಿಂತ ಹೆಚ್ಚಿನ ಚೆಲುವನ್ನು ಪಡೆದಿರುವುದು ಆಶ್ಚರ್ಯವಾದುದರಿಂದ ಇದು ಅದ್ಭುತೋಪಮೆ.

68. "Only if the lotus attains the beautiful charm of your eyebrows and dancing eyes will it be similar to you." This is a simile built on a wondrous scenario (*adbhutōpamā*).

This simile suggests that the face has a wondrous beauty, superior to the lotus.

ಕಮಳವಿಮೋಹದಿನೀ ನಿ
ನ್ನ ಮೊಗಕ್ಕೆಱಗುವುದು ತೊಱೆವುದಾ ಸರಸಿಜಮಂ
ಭ್ರಮರಂ ವದನಮಿದಲ್ತೆಂ
ದು ಮೋಹದಿಂದೆಂಬುದಿದುವೆ ಮೋಹೋಪಮಿತಂ ೬೯

ಕಮಳ ವಿಮೋಹದಿನ್ ಈ ನಿನ್ನ ಮೊಗಕ್ಕೆ ಎಱಗುವುದು ತೊಱೆವುದು ಆ ಸರಸಿಜಮನ್ ಭ್ರಮರಮ್ ವದನಮ್ ಇದು ಅಲ್ತು ಎಂದು ಮೋಹದಿಂದೆ ಎಂಬುದು ಇದುವೆ ಮೋಹೋಪಮಿತಮ್

"ಕಮಲವೆಂಬ ಮೋಹದಿಂದ ಭ್ರಮರ ನಿನ್ನ ಮುಖಕ್ಕೆ ಬಂದೆರಗುತ್ತಿದೆ, ಕಮಲವನ್ನು ತೊರೆಯುತ್ತಿದೆ" ಎಂಬುದು ಮೋಹೋಪಮೆ.

ಕಮಲದ ಮೇಲೆ ಮೋಹ ಭ್ರಾಂತಿಯಿಂದ ಆಗಿದೆ. ಇದನ್ನು ದಂಡಿ ಕೂಡ ಮೊಹೋಪಮಾ ಎಂದಿದ್ದಾನೆ (೨.೨೫).

69. "Fascinated with the lotus, the bee falls upon your face, leaving behind the lotus." Thinking that the face is a lotus in a state of "fascination" or "delusion" (*moha*) makes this a simile of fascination (*mōhōpamita*).

As this simile is one of "fascination" or "delusion," it is also called *bhrāntimad- alaṅkāra.*

ಸರಸಿಜಮೋ ಮೊಗಮೋ ಮೇಣ್
ದ್ವಿರೇಫಮೋ ಲೋಲನಯನಯುಗಮೋ ಮನದೊಳ್
ಪಿರಿದುಂ ಸಂಶಯಮೆಂಬುದು
ನಿರಂತರಂ ಸಂಶಯೋಪಮಾಲಂಕಾರಂ ೭೦

ಸರಸಿಜಮೋ ಮೊಗಮೋ ಮೇಣ್ ದ್ವಿರೇಫಮೋ ಲೋಲ ನಯನ ಯುಗಮೋ ಮನದೊಳ್ ಪಿರಿದುಮ್ ಸಂಶಯಮ್ ಎಂಬುದು ನಿರಂತರಮ್ ಸಂಶಯೋಪಮಾಲಂಕಾರಮ್

"ಇದು ಕಮಲವೋ ಮುಖವೋ? ಇದು ದುಂಬಿಯೋ ಅಥವಾ ಚಂಚಲ ನೇತ್ರವೋ? ಮನಸ್ಸಿನಲ್ಲಿ ದೊಡ್ಡ ಸಂಶಯವುಂಟಾಗಿದೆ' ಎಂಬುದು ಸಂಶಯೋಪಮಾಲಂಕಾರ.

ದಂಡಿ ಕೂಡ ಸಂಶಯೋಪಮೆಗೆ ಇದೇ ಉದಾಹರಣೆಯನ್ನು ಕೊಟ್ಟಿದ್ದಾನೆ (೨.೨೬) : 'ಕಿಂ ಪದ್ಮಮನ್ತರ್ಭ್ರಾಂತಾಲಿ ಕಿಂ ತೇ ಲೋಲೇಕ್ಷಣಂ ಮುಖಮ್ । ಮಮ ದೋಲಾಯತೇ ಚಿತ್ತಮಿತೀಯಂ ಸಂಶಯೋಪಮಾ॥"

70. "Is it a lotus or face? Is it a bee or two darting eyes?" Where such a doubt exists, the simile is one based on "doubt" or "uncertainty" (*samasya*).

This is otherwise called *sandēhālaṅkāra.*

ಸರಸಿರುಹಮಿಂದುದೀಧಿತಿ
ಪರಾಜಿತಶ್ರೀವಿಲಾಸಮೀ ನಿನ್ನ ಮುಖಂ
ಹರಿಣಧರವಿಜಯಶೋಭಾ
ಕರಮೆಂಬುದಿದೂರ್ಜಿತೋಪಮಾನವಿಭಾಗಂ ೭೦

ಸರಸಿರುಹಮ್ ಇಂದು ದೀಧಿತಿ ಪರಾಜಿತ ಶ್ರೀವಿಲಾಸಮ್ ಈ ನಿನ್ನ ಮುಖಮ್ ಹರಿಣಧರ ವಿಜಯ ಶೋಭಾಕರಮ್ ಎಂಬುದು ಇದು ಊರ್ಜಿತೋಪಮಾನ ವಿಭಾಗಮ್

"ಚಂದ್ರನ ಕಾಂತಿಯಿಂದ ಪರಾಜಿತವಾದ ಶ್ರೀವಿಲಾಸವುಳ್ಳದ್ದು ಕಮಲ. ಈ ನಿನ್ನ ಮುಖ ಚಂದ್ರನನ್ನು ಗೆಲ್ಲುವ ಶೋಭೆಯುಳ್ಳದ್ದು" ಎಂದು ಹೇಳಿದರೆ ಊರ್ಜಿತೋಪಮೆ.

ದಂಡಿ ಇದನ್ನು ನಿರ್ಣಯೋಪಮೆ ಎಂದಿದ್ದಾನೆ (೨.೨೭). ಚಂದ್ರನಿಗಿಂತ ಹೆಚ್ಚಿನ ಕಾಂತಿ ಇರುವುದಾಗಿ ಹೇಳಿ ನಿರ್ಣಯ ಮಾಡಿರುವುದರಿಂದ ಇದನ್ನು ಊರ್ಜಿತೋಪಮೆ ಎನ್ನಲಾಗಿದೆ.

71. "The lotus is defeated by the luster of the moon. But your face has the charm that wins over the moon." This is a simile that establishes the "strength" or "excellence" (*ūrjita)* of the subject of comparison over the object of comparison and is thus called *ūrjitōpamā.*

As it is established that the face is better than the lotus, it is called *ūrjitōpamā.* Daṇḍin [2.27] calls it a simile of "ascertainment" (*nirṇayōpamā*).

ಪರಮಶ್ರೀನಿಳಯಂ ಶಶ
ಧರಕಾಂತಿವಿರೋಧಿರೋಚಿ ವದನಂ ನಿನ್ನಾ
ಸರಸಿರುಹದ ವೋಲೆಂಬುದು
ನಿರುತಂ ಶ್ಲೇಷೋಪಮಾವಿಕಲ್ಪವಿಶೇಷಂ ೭೨

ಪರಮ ಶ್ರೀನಿಳಯಮ್ ಶಶಧರ ಕಾಂತಿ ವಿರೋಧಿ ರೋಚಿ ವದನಮ್ ನಿನ್ನಾ ಸರಸಿರುಹದವೋಲ್ ಎಂಬುದು ನಿರುತಮ್ ಶ್ಲೇಷೋಪಮಾ ವಿಕಲ್ಪ ವಿಶೇಷಮ್

“ನಿನ್ನ ಮುಖವು ಕಮಲದಂತೆ ಶ್ರೀನಿಲಯ ಮತ್ತು ಶಶಧರ ಕಾಂತಿವಿರೋಧಿ” ಎಂಬುದು ಶ್ಲೇಷೋಪಮೆಯ ಭೇದ.

ಮುಖ ಕಮಲದಂತೆ ‘ಶ್ರೀನಿಲಯ’ ಎಂದು ಹೇಳಿದಾಗ ಚೆಲುವಿಗೆ ಆಶ್ರಯ ಎಂದೂ ಲಕ್ಷ್ಮಿಗೆ ಆಶ್ರಯ ಎಂದೂ ಶ್ಲೇಷೆಯಿದೆ. ‘ಶಶಧರಕಾಂತಿ ವಿರೋಧಿ’ ಎಂದಾಗ ಚಂದ್ರನಕಾಂತಿಯನ್ನು ಮೀರಿದ್ದು ಎಂದೂ ಚಂದ್ರನಕಾಂತಿಗೆ ಮುಕುಲಿತವಾಗುವುದು (ಕಮಲ) ಎಂದೂ ಅರ್ಥವಾಗುತ್ತದೆ. ದಂಡಿಯ ಶ್ಲೋಕವೂ ಈ ಲಕ್ಷ್ಯವನ್ನೇ ಹೋಲುತ್ತದೆ (೨.೨೮): “ಶಿಶಿರಾಂಶು ಪ್ರತಿಸ್ಪರ್ಧಿ ಶ್ರೀಮತ್ ಸುರಭಿಗಂಧಿ ಚ । ಅಂಭೋಜಮಿವ ತೇ ವಕ್ತ್ರಮಿತಿ ಶ್ಲೇಷೋಪಮಾ ಸ್ಮೃತಾ॥”

72. “Like a lotus (*kamala*), your face is also an abode of beauty (*śrīnilaya*) and an enemy of moonlight.” This is an example of a simile with a “fusion” of multiple meanings (*slēṣōpamā*).

The word *kamala* means both lotus and *Lakṣmi*, goddess of wealth and beauty. The word *śrīnilaya* means both an abode of beauty and the seat of *Lakṣmī.* The example given here is comparable to the one given by Daṇḍin (2.28): *śiśirāṁśu pratispardhi śrīmat surabhi-gandhi ca / ambhōjamiva tē vaktramiti ślēṣōpamā smṛtā //*

ಸರಸೀಜಂ ಸರಜಂ ಶಶ
ದ'ರಬಿಂಬಮದತಿಕಳಂಕಿತಂ ನಿನ್ನ ಮೊಗಂ
ನಿರುಪಮಮಾಗಿಯುಮವಱೊಳ್
ದೊರೆಯೆಂಬುದನಱಿದುಕೊಳ್ಗೆ ನಿಂದೋಪಮೆಯಂ ೭೩

ಸರಸೀಜಮ್ ಸರಜಮ್ ಶಶಧರ ಬಿಂಬಮ್ ಅದು ಅತಿ ಕಳಂಕಿತಮ್ ನಿನ್ನ ಮೊಗಮ್ ನಿರುಪಮಮ್ ಆಗಿಯುಮ್ ಅವಱೊಳ್ ದೊರೆ ಎಂಬುದನ್ ಅಱಿದುಕೊಳ್ಗೆ ನಿಂದೋಪಮೆಯನ್

“ಕಮಲವು ಧೂಳಿನಿಂದ ಕೂಡಿದ್ದು. ಚಂದ್ರಬಿಂಬ ಕಳಂಕಿತ. ನಿನ್ನ ಮುಖ ಹೀಗೆ ನಿರುಪಮವಾಗಿದ್ದರೂ ಅದು ಅವುಗಳಿಗೆ ಸಮಾನ” ಎಂಬುದು ನಿಂದೋಪಮೆ.

ಉಪಮಾನಗಳಲ್ಲಿ ದೋಷವನ್ನು ತೋರಿಸಿ ಉಪಮಾನಕ್ಕೆ ಯೋಗ್ಯವಾದುವಲ್ಲ ಎಂದು ಸೂಚಿಸಿರುವುದರಿಂದ ನಿಂದೋಪಮೆ. ಈ ಲಕ್ಷ್ಯ ದಂಡಿಯ ಶ್ಲೋಕವನ್ನು ಹೋಲುತ್ತದೆ (೨.೩೦):

73. "The lotus has pollen dust (*sarajaṁ*). The one who bears a rabbit (the Moon) displays a prominent stain. Though your face is not comparable to them, it is similar." This is a simile that suggests a "reproach" (*nindā*) and is thus called *nindōpamā*.

This example is comparable to Daṇḍin's (2.30).

ಅಮೃತಭವಂ ಶಿಶಿರಕರಂ
ಕಮಳಂ ಜಗದೇಕಪಾವನೀಯ ಶ್ರೀಕಂ
ಸಮನವಱೊಳ್ ನಿನ್ನ ಮೊಗಂ
ಕ್ರಮದೆಂಬುದನಱಿವುದಾ ಪ್ರಶಂಸೋಪಮೆಯಂ ೭೪

ಅಮೃತ ಭವಮ್ ಶಿಶಿರ ಕರಮ್ ಕಮಳಮ್ ಜಗದೇಕ ಪಾವನೀಯ ಶ್ರೀಕಮ್ ಸಮಮ್ ಅವಱೊಳ್ ನಿನ್ನ ಮೊಗಮ್ ಕ್ರಮದೆ ಎಂಬುದನ್ ಅಱಿವುದು ಆ ಪ್ರಶಂಸೋಮೆಯನ್

"ಶೀತಲಕರನಾದ ಚಂದ್ರ ಅಮೃತಭವ (ನೀರಿನಲ್ಲಿ ಹುಟ್ಟಿದವನು). ಕಮಲವು ಜಗದೇಕಪಾವನೀಯ ಮತ್ತು ಚೆಲುವಿನದು. ನಿನ್ನ ಮುಖ ಅವುಗಳಿಗೆ ಸಮಾನ." ಇದು ಪ್ರಶಂಸೋಪಮೆ.

ಉಪಮಾನಗಳ ಗುಣಾತಿಶಯವನ್ನು ಹೇಳುವುದರಿಂದ ಇದು ಪ್ರಶಂಸೋಪಮೆ.

74. "One who has cool rays (the Moon) was born in the ocean of milk. The lotus is the abode of the sacred goddess *Lakṣmī.* Your face is similar to them." This is a simile that expresses praise (*praśaṁsā*) and is called *praśaṁsōpamā*.

The example given here can be compared with Daṇḍin's *2.31*.

ಶರದುದಿತಶಿಶಿರಕರನುಂ
ಸರಸಿರುಹಮುಮೀ ತ್ವದೀಯ ವದನಮುಮಿನಿತುಂ
ದೊರೆಕೊಳಿಸುವೊಡೆ ಪರಸ್ಪರ
ವಿರೋಧಿಗಳ್ ನಿರುತಮೆನೆ ವಿರೋಧೋಪಮಿತಂ ೭೫

ಶರದುದಿತ ಶಿಶಿರಕರನುಮ್ ಸರಸಿರುಹಮುಮ್ ಈ ತ್ವದೀಯ ವದನಮುಮ್ ಇನಿತುಮ್ ದೊರೆಕೊಳಿಸುವೊಡೆ ಪರಸ್ಪರ ವಿರೋಧಿಗಳ್ ನಿರುತಮ್ ಎನೆ ವಿರೋಧೋಪಮಿತಮ್

"ಶರತ್‌ಕಾಲದಲ್ಲಿ ಉದಯಿಸಿದ ಚಂದ್ರ, ಕಮಲ ಮತ್ತು ನಿನ್ನ ಈ ಮುಖ ಸದೃಶವಾದವು ಎಂದು ಹೇಳೋಣವೆಂದರೆ ಅವು ಯಾವಾಗಲೂ ಪರಸ್ಪರ ವಿರೋಧಿಗಳು" ಎಂದು ಹೇಳಿದರೆ ಅದು ವಿರೋಧೋಪಮೆ.

ಶರತ್ಕಾಲದ ಚಂದ್ರ ರಾತ್ರಿಯಲ್ಲಿ ಮಾತ್ರ ಪ್ರಕಾಶಿಸುತ್ತಾನೆ, ಕಮಲ ಚಂದ್ರ ವಿರೋಧಿ. ಆದರೆ ಮುಖ ಆ ಎರಡನ್ನೂ ಹೋಲುತ್ತದೆ. ಈ ಲಕ್ಷ್ಯ ದಂಡಿಯ ಶ್ಲೋಕವನ್ನು ಅನುಸರಿಸುತ್ತದೆ (೨.೩೩): "ಶತಪತ್ರಂ ಶರಚ್ಚಂದ್ರಸ್ತ್ವದಾನನಮಿತಿ ತ್ರಯಮ್ । ಪರಸ್ಪರವಿರೋಧೀತಿ ಸಾ ವಿರೋಧೋಪಮಾ ಮತಾ ॥"

75. "An attempt can be made to compare your face with the autumn moon and with the lotus, but they are enemies (to your face)." This is a simile suggesting "contradiction" (*virōdha*) and is thus called *virōdhōpamā*.

The example given here can be compared with Daṇḍin's (2.33), but the approach is different: *śatapatraṁ śaraccandrastvadānanamiti trayaṁ / paraspara virōdhīti sā virōdhōpamā matā //*

ಅಳಿಗಳಿವು ಕಣ್ಗಳಲ್ತಿವು
ನಳಿನಮಿದೀ ವದನಮಲ್ತುನಿಜಕಾಮಿನಿಯಾ
ತಿಳಿದಿಂತು ಪೇಟ್ವೊಡಿದು ಮೊ
ಕ್ಕಳಮುಪಮಾಖ್ಯಾತಮಪ್ಪ ತತ್ವಾಖ್ಯಾನಂ ೭೬

ಅಳಿಗಳ್ ಇವು ಕಣ್ಗಳ್ ಅಲ್ತು ಇವು ನಳಿನಮ್ ಇದು ಈ ವದನಮ್ ಅಲ್ತು ನಿಜಕಾಮಿನಿಯಾ ತಿಳಿದು ಇಂತು ಪೇೞ್ದೊಡೆ ಇದು ಮೊಕ್ಕಳಮ್ ಉಪಮಾಖ್ಯಾತಮಪ್ಪ ತತ್ತ್ವಾಖ್ಯಾನಮ್

“ಇವು ಕಾಂತೆಯ ಕಣ್ಣುಗಳಲ್ಲ, ದುಂಬಿಗಳು. ಇದು ಕಮಲ, ಮುಖವಲ್ಲ”. ಈ ರೀತಿ ತಿಳಿದುಕೊಂಡು ಹೇಳಿದರೆ ತತ್ತ್ವಾಖ್ಯಾನೋಪಮೆಯಾಗುತ್ತದೆ.

ದಂಡಿಯಲ್ಲಿರುವ ಉದಾಹರಣೆ ಇದಕ್ಕೆ ವಿರುದ್ಧವಾಗಿದೆ. ಅಲ್ಲಿ ‘ಇದು ಪದ್ಮವಲ್ಲ, ಮುಖ. ಇವು ದುಂಬಿಗಳಲ್ಲ ಕಣ್ಣುಗಳು’ ಎಂದು ಹೇಳಲಾಗಿದೆ. ಸಂದೇಹಕ್ಕೆ ಆಸ್ಪದವಿಲ್ಲದಂತೆ ಹೇಳುವುದು ಎರಡು ಉದಾಹರಣೆಗಳಿದ್ದರೂ ಹೇಳುವ ರೀತಿ ಭಿನ್ನವಾಗಿದೆ. ದಂಡಿಯ ಶ್ಲೋಕ (೨.೩೬) : “ನ ಪದ್ಮಂ ಮುಖಮೇವೇದಂ ನ ಭೃಂಗೌ ಚಕ್ಷುಷೀ ಇಮೇ । ಇತಿ ವಿಸ್ಪಷ್ಟ ಸಾದೃಶ್ಯಾತ್ ತತ್ತ್ವಾಖ್ಯಾನೋಪಮೈವ ಸಾ ॥”

76. “These are not the eyes, these are bees. This is not the face of the lady; truly, on can say that it is a lotus.” This is a simile that expresses, with conviction, an “ascertainment” (*tattvākhyāna*).

This trope resembles another trope called *apahnuti.* However, when the ascertainment is expressed with conviction, it is called *tattvākhyāna.* Daṇḍin clarifies the issue in this way (2.36): *na padmaṁ mukhamēvēdaṁ na bhṛṁgau cakṣuṣī imē / iti vispaṣṭa sādṛśyāt tattvākhyānōpamaiva sā //*

ಹರಿಣಧರ ಸರಸಿಜಂಗಳ್
ದೊರೆಯಲ್ತಿವು ತನಗೆ ತಾನೆ ದೊರೆ ನಿನ್ನ ಮೊಗಂ
ನಿರುಪಮಮೆಂಬುದನಱಿವುದು
ನಿರುತಮಸಾಧಾರಣೋಪಮೋದಯವಿಧಿಯಂ 77

ಹರಿಣಧರ ಸರಸಿಜಂಗಳ್ ದೊರೆಯಲ್ತು ಇವು ತನಗೆ ತಾನೆ ದೊರೆ ನಿನ್ನ ಮೊಗಮ್ ನಿರುಪಮಮ್ ಎಂಬುದನ್ ಅಱಿವುದು ನಿರುತಮ್ ಅಸಾಧಾರಣೋಪಮ ಉದಯ ವಿಧಿಯಮ್

"ಚಂದ್ರ, ಕಮಲ ನಿನ್ನ ಮುಖಕ್ಕೆ ಸಮಾನವಲ್ಲ. ನಿನ್ನ ಮುಖ ತನಗೆ ತಾನೆ ಸಮಾನ. ಅದು ನಿರುಪಮ" ಎಂಬುದನ್ನು ಅಸಾಧಾರಣೋಪಮೆ ಎಂದರಿವುದು.

ಇದು ದಂಡಿಯ ಲಕ್ಷ್ಯವನ್ನೇ ಅನುಸರಿಸಿದೆ (೨.೩೭): "ಚಂದ್ರಾರವಿಂದಯೋಃ ಕಾಂತಿ ಮತಿಕ್ರಮ್ಯ ಮುಖಂ ತವ । ಆತ್ಮನೈವಾಭವತ್ ತುಲ್ಯಮಿತ್ಯಸಾಧಾರಣೋಪಮಾ॥"

77. "The Moon and the lotus are not comparable to your face. Let it be known that your face is incomparable and can only be compared with itself." This is an example of a simile that conveys the "extraordinary" nature (*asādhāraṇa*) of the subject of comparison and is thus called *asādhāraṇopamā*.

This simile is also called *ananvaya*, a comparison where the subject has "no relationship" (*ananvaya*) with any comparable object other than itself. Daṇḍin calls it *asādhāraṇōpamā* (2.37).

ನುತಶಿಶಿರಕಿರಣಕಾಂತಿ
ಪ್ರತತಿಯನೊಡಗೂಡಿ ಮಾಡಿದವೊಲಾಯಿತ್ತಿಂ
ತತಿಶಯಮೀ ನಿನ್ನ ಮುಖಂ
ನಿತಾಂತಮೆಂಬಾಗಳಱಿಗಭೂತೋಪಮೆಯಂ ೭೮

ನುತ ಶಿಶಿರ ಕಿರಣ ಕಾಂತಿ ಪ್ರತತಿಯನ್ ಒಡಗೂಡಿ ಮಾಡಿದವೊಲ್ ಆಯಿತ್ತು ಇಂತು ಅತಿಶಯಮ್ ಈ ನಿನ್ನ ಮುಖಮ್ ನಿತಾಂತಮ್ ಎಂಬಾಗಳ್ ಅಱಿಗೆ ಅಭೂತೋಪಮೆಯನ್

"ನಿನ್ನ ಮುಖದ ಸೌಂದರ್ಯ ನಿಜವಾಗಿಯೂ ಚಂದ್ರನ ಕಾಂತಿಯ ಸಾರವನ್ನೆಲ್ಲ ಸಂಗ್ರಹಿಸಿಕೊಂಡು ನಿರ್ಮಿಸಿದಂತಿದೆ" ಎಂದಾಗ ಅದು ಅಭೂತೋಪಮೆ ಎಂದರಿಯಬೇಕು.

ಇಲ್ಲಿ ಚಂದ್ರನ ಕಾಂತಿಯ ಸಾರವನ್ನೆಲ್ಲ ಸಂಗ್ರಹಿಸಿ ನಿರ್ಮಿಸಿದಂತಿದೆ ಎಂದು ಹೇಳಿದರೆ ದಂಡಿ ಕಮಲಗಳ ಕಾಂತಿಯ ಸಾರವನ್ನು ತೆಗೆದು ಒಂದೆಡೆಯಿಟ್ಟಂತೆ ಎಂದಿದ್ದಾನೆ (೨.೩೮). ಉಪಮಾನ ಅಸಿದ್ಧವಾಗಿರುವುದರಿಂದ ಇದು ಅಭೂತೋಪಮೆ.

78. "The beauty of your face really looks like the gathered essence of all the brightness of the Moon." Stated thus, this is a simile based on something "unprecedented" (*abhūta*) and is called *abhūtōpamā.*

Śrīvijaya follows the example of Daṇḍin (2.38): *sarvapadma-prabhāsāraḥ samāhṛta iva kvacit/tvadānanaṁ vibhātīti tāmabhūtōpamāṁ viduḥ //*

ಹರಿಣಧರನೊಳ್ ವಿಷಂ ಮಲ
ಯರುಹದೊಳನಲಾರ್ಚಿ ನಿನ್ನ ವದನೋದರದೊಳ್
ಪರುಷತರವಚನಮಪ್ಪುದು
ದುರವಾಪಮಿದಿಂತಸಂಭವೋಪಮಮಕ್ಕುಂ ೭೯

ಹರಿಣಧರನೊಳ್ ವಿಷಮ್, ಮಲಯರುಹದೊಳ್ ಅನಲಾರ್ಚಿ, ನಿನ್ನ ವದನೋದರದೊಳ್ ಪರುಷತರ ವಚನಮ್ ಅಪ್ಪುದು ದುರವಾಪಮ್ ಇದು ಇಂತು ಅಸಂಭವೋಪಮಮ್ ಅಕ್ಕುಮ್

"ಚಂದ್ರನಲ್ಲಿ ವಿಷ, ಶ್ರೀಗಂಧದ ಮರದಲ್ಲಿ ಅಗ್ನಿಯ ಜ್ವಾಲೆ, ನನ್ನ ಬಾಯಿಯಲ್ಲಿ ಪರುಷತರ ವಚನ ದೊರಕುವುದು ಅಸಾಧ್ಯ." ಹೀಗೆ ಹೇಳಿದರೆ ಅದು ಅಸಂಭವೋಪಮೆ.

ಇದೇ ಲಕ್ಷ್ಯವನ್ನು ದಂಡಿ ಅಸಂಭಾವಿತೋಪಮಾ ಎಂದಿದ್ದಾನೆ (೨.೩೯) : "ಚಂದ್ರಬಿಂಬಾದಿವ ವಿಷಂ ಚಂದನಾದಿವ ಪಾವಕಃ । ಪರುಷಾ ವಾಗಿತೋ ವಕ್ತ್ರಾದಿತ್ಯಸಂಭಾವಿತೋಪಮಾ ॥"

79. "It is impossible to receive harsh words from you, as it is impossible to get poison from the Moon or

fire from the sandal tree." Stated thus, this is a simile based on something "impossible" (*asambhava*) and is called *asambhavōpamā*.

Daṇḍin calls it *asambhāvitōpamā* (2.39)

ಮಲಯರುಹಶಿಶಿರಕರಶೀ
ತಲಿಕಾಕರಕೇಂದುಕಾಂತಜಲಶೀತಲಮೀ
ಲಲನಾಲಿಂಗನಸುಖಕರ
ವಿಲಾಸಮೆಂಬುದು ಬಹೂಪಮಾನವಿಕಲ್ಪಂ ೮೦

ಮಲಯರುಹ ಶಿಶಿರ ಕರ ಶೀತಲಿಕಾಕರಕ ಇಂದುಕಾಂತ ಜಲ ಶೀತಲಮ್ ಈ ಲಲನಾಲಿಂಗನ ಸುಖಕರ ವಿಲಾಸಮ್ ಎಂಬುದು ಬಹೂಪಮಾನ ವಿಕಲ್ಪಮ್

"ಈ ಕಾಂತೆಯ ಆಲಿಂಗನ ಸುಖವಿಲಾಸ ಚಂದನಜಲ, ಚಂದ್ರಕಿರಣ, ತಂಪಾದ ಆಲಿಕಲ್ಲು ಮತ್ತು ಚಂದ್ರಕಾಂತಜಲಗಳಂತೆ ಶೀತಲವಾಗಿರು ವುದು" ಎಂದಾಗ ಅದು ಬಹೂಪಮೆ.

ಅನೇಕ ಉಪಮಾನಗಳಿಗೆ ಹೋಲಿಸಿರುವುದರಿಂದ ಇದು ಬಹೂಪಮೆ. ದಂಡಿ ಕೂಡ ಇದೇ ರೀತಿಯ ಲಕ್ಷ್ಯವನ್ನು ಕೊಟ್ಟಿದ್ದಾನೆ (೨.೪೦): "ಚಂದ ನೋದಕ ಚಂದ್ರಾಂಶು ಚಂದ್ರಕಾಂತಾದಿ ಶೀತಲಃ । ಸ್ಪರ್ಶಸ್ತವೇತ್ಯತಿಶಯಂ ಬೋಧ ಯಂತೀ ಬಹೂಪಮಾ ॥"

80. "The pleasant embrace of this lady is as cool as sandal juice, moon rays, and the water of the *candrakāntā* (moonlight) stone." Stated thus, this is a simile with "multiple" (*bahu*) items and is called *bahūpamā.*

The example here is similar to the one given by Daṇḍin (2.40): *candanōdaka-candrāṁśu-candrakāntādi-śītalaḥ / sparśastavētyatiśayaṁ bōdhayantī bahūpamā //*

ಜನಿತಪ್ರಗಲ್ಭದೊಳ್ ಮಾಂ
ತನದೊಳ್ ಮಾಹಾತ್ಮ್ಯದೊಳ್ ನಿಜೋದಾರತೆಯೊಳ್
ಅನುಪಮಗುಣದೊಳ್ ಶ್ರೀಶಂ
ಘನಮೆನೆ ಮಾಲೋಪಮಾನಭೇದಮಿದಕ್ಕುಂ ೮೧

ಜನಿತ ಪ್ರಗಲ್ಭದೊಳ್ ಮಾಂತನದೊಳ್ ಮಾಹಾತ್ಮ್ಯದೊಳ್ ನಿಜ ಉದಾರತೆಯೊಳ್ ಅನುಪಮಗುಣದೊಳ್ ಶ್ರೀಶನ್ ಘನಮ್ ಎನೆ ಮಾಲೋಪಮಾನ ಭೇದಮ್ ಇದಕ್ಕುಮ್

"ಔನ್ನತ್ಯದಲ್ಲಿ, ಹಿರಿತನದಲ್ಲಿ, ಮಾಹಾತ್ಮ್ಯದಲ್ಲಿ, ಔದಾರ್ಯದಲ್ಲಿ, ಅನುಪಮ ಗುಣದಲ್ಲಿ ಲಕ್ಷ್ಮೀಶನು ಘನವಾದವನು" ಎಂಬುದು ಮಾಲೋಪಮೆ.

ಹಿಂದಿನ ವಾಕ್ಯದ ವಸ್ತುವೇ ಮುಂದಿನ ವಾಕ್ಯದ ಉಪಮಾನವಾಗಿ ಮಾಲೆಯಂತಿರುವುದರಿಂದ ಇದು ಮಾಲೋಪಮೆಯಾಗಿದೆ.

81. "As there is greatness in a majestic person and generosity in greatness, just so is the husband of Lakṣmī (Viṣṇu) great in generosity." Stated thus, this is a simile that is built on a "succession" or "row" (*mālā*) of images and is called *mālōpamā*.

ಭವದೀಯ ವದನಮಾಲೋ
ಲವಿಲೋಚನಮಧರರಾಗಮಣಿವಿಲಸಿತಮುಂ
ಪ್ರವಿಕಸಿತಾಂಬುಜವನಮಂ
ಸವಿಶೇಷಂ ಪೋಲ್ಗುಮೆನ್ಗೆ ವಾಕ್ಯೋಪಮೆಯಂ ೮೨

ಭವದೀಯ ವದನಮ್ ಆಲೋಲ ವಿಲೋಚನಮ್ ಅಧರ ರಾಗ ಮಣಿ ವಿಲಸಿತಮುಮ್ ಪ್ರವಿಕಸಿತ ಅಂಬುಜವನಮನ್ ಸವಿಶೇಷಮ್ ಪೋಲ್ಗುಮ್ ಎನ್ಗೆ ವಾಕ್ಯೋಪಮೆಯನ್

"ಚಂಚಲ ನೇತ್ರಗಳ ಮತ್ತು ತುಟಿಗಳ ಕೆಂಪು ಮಣಿಗಳ ವಿಲಾಸದಿಂದ ಕೂಡಿದ ನಿನ್ನ ಮುಖವು ಚೆನ್ನಾಗಿ ವಿಕಾಸ ಹೊಂದಿದ ಕಮಲವನವನ್ನು ವಿಶೇಷವಾಗಿ ಹೋಲುತ್ತಿದೆ" ಎಂದರೆ ಅದು ವಾಕ್ಯೋಪಮೆ.

ಇಲ್ಲಿ ಉಪಮಾನ ಮತ್ತು ಉಪಮೇಯಗಳು ವಿಶೇಷಣ ವಿಶೇಷ್ಯಗಳಿಂದ ಕೂಡಿ ವಾಕ್ಯಾರ್ಥಗಳಾಗಿವೆ.

82. "Your face, with its darting eyes, is beautiful with its ruddy gem-like shine of morning; it resembles a fully blossomed lotus garden." Stated thus, it is a simile that relies on the syntax of the "sentence" (*vākya*) and is thus called *vākyōpamā.*

Here the subject of the comparison – the face – and the object of comparison – the lotus garden – take the form of a sentence. Hence it is *vākyōpamā.*

ವಿಪರೀತಂ ತರುತತಿಯವೊ
ಲಪರಾಗಂಸಿದ್ಧಭೂಮಿವೋಲ್ ಪದ್ಮಿನಿವೋ
ಲುಪಗತವಿಭ್ರಮರಹಿತಂ
ಕುಪಿತಾಕೃತಿಯೆಂಬುದುಪಮೆ ಸಂಧಾನಾಂಕಂ ೮೩

ವಿಪರೀತಮ್ ತರುತತಿಯವೊಲ್ ಅಪರಾಗಮ್ ಸಿದ್ಧಭೂಮಿವೋಲ್ ಪದ್ಮಿನಿವೋಲ್ ಉಪಗತ ವಿಭ್ರಮ ರಹಿತಮ್ ಕುಪಿತಾಕೃತಿ ಎಂಬುದು ಉಪಮೆ ಸಂಧಾನಾಂಕಮ್

"ಕೋಪಗೊಂಡ ನಿನ್ನ ಆಕೃತಿಯು ಮರಗಳಂತೆ 'ವಿಪರೀತ' (ಪಕ್ಷಿಗಳಿಂದ ಕೂಡಿದ್ದು, ಆಕೃತಿಯ ವಿರುದ್ಧ ಮುಖಭಾವ ಇರುವಂತಹುದು), ಸಿದ್ಧಭೂಮಿಯಂತೆ 'ಅಪರಾಗ' (ಧೂಳಿ ಇಲ್ಲದ್ದು, ಪ್ರೇಮವಿಲ್ಲದ್ದು), ಪದ್ಮಿನಿಯಂತೆ 'ಉಪಗತ ವಿಭ್ರಮ' (ವಿಲಾಸದಿಂದ ಕೂಡಿದ್ದು, ಆಕೃತಿಯು ಭ್ರಾಂತಿ ಹೀನವಾಗಿರುವಂತಹದು)." ಹೀಗಿರುವುದು ಸಂಧಾನಾಂಕ.

ದಂಡಿಯಲ್ಲಿ ಈ ಪ್ರಭೇದವಿಲ್ಲ. ಇಲ್ಲಿ ವಿಶೇಷಣಗಳು ಮಾತ್ರ ಶ್ಲಿಷ್ಟವಾಗಿ ಬಂದಿವೆ.

83. "Your angry appearance is twisted [having birds] (*viparītaṁ)* like a tree, is passionless [without dust] (*aparaga*) like the raw earth, and is gracefully charming [unconfused] (*vibhrama*) like the lotus-like lady (*padminī*)." This is a simile that

is marked by a string of items whose meanings are "joined" or "unified" with other meanings (*sandhānāṅka*).

This type of simile is not given in the *Kāvyādarśa*. Here the adjectives for the objects have "joined" meanings: the tree is *viparīta* = twisted / *vi* + *parīta* = having birds; the earth is *aparāga* = passionless/ *a* + `*parāga* = having no dust; the lotus-like lady is *upagata-vibhrama* = charming / *vi* + *bhrama* = unconfused.

ಪ್ರತಿವಸ್ತೂಪಮಿತಾಲಂ
ಕೃತಮಿಂತಕ್ಕುಂ ಧರಾಧಿಪಾ ನಿನ್ನನ್ನಂ
ವಿತತಯಶನಿಲಯ ತಾರಾ
ಪತಿದಿನಕರಸದೃಶತೇಜನೆಂಬುದುಮುಂಟೇ ೮೪

ಪ್ರತಿವಸ್ತೂಪಮಿತ ಅಲಂಕೃತಮ್ ಇಂತು ಅಕ್ಕುಮ್ ಧರಾಧಿಪಾ ನಿನ್ನನ್ನಮ್ ವಿತತ ಯಶ ನಿಲಯ ತಾರಾಪತಿ ದಿನಕರ ಸದೃಶ ತೇಜನ್ ಎಂಬುದುಮ್ ಉಂಟೇ

"ಪ್ರತಿವಸ್ತೂಪಮೆಯ ಲಕ್ಷ್ಯ ಹೀಗಿರುತ್ತದೆ: "ಧರಾಧಿಪಾ! ನಿನ್ನ ಹಾಗೆ ವಿಶಾಲ ಯಶೋನಿಧಿಯು ಸೂರ್ಯಚಂದ್ರರಿಗೆ ಸದೃಶವಾದ ತೇಜಸ್ವಿಯು ಇನ್ನೊಬ್ಬನೆಲ್ಲಾದರುಂಟೆ?"

ಇಲ್ಲಿ ರಾಜನು ವಸ್ತು, ಅವನನ್ನು ಹೋಲುವವನು ಪ್ರತಿವಸ್ತು. ಇಲ್ಲಿ ಪ್ರತಿವಸ್ತುವಿಗೆ ಅಸ್ತಿತ್ವವಿಲ್ಲ ಎನ್ನಲಾಗಿದೆ. ಈ ಲಕ್ಷಣವನ್ನು ದಂಡಿ ಹೇಳಿದ್ದಾನೆ (೨.೪೬): "ವಸ್ತು ಕಿಂಚಿದುಪನ್ಯಸ್ಯ ನ್ಯಸನಾತ್ತತ್ಸಧರ್ಮಣಃ । ಸಾಮ್ಯಪ್ರತೀತಿರಸ್ತೀತಿ ಪ್ರತಿವಸ್ತೂಪಮಾ ಯಥಾ॥"

84. "Oh King! Is there anyone, anywhere, who is a treasure of fame and lustrous like the Sun and Moon?" This is a simile where parallel characteristics are drawn between two different objects *(prativastūpamā)*.

The definition and example here are comparable to Daṇḍin's (2.47): *naikōpi tvādṛśōdyāpi jāyamānēṣu rājaṣu / nanu dvitīyō nāstyēva pārijātasya pādapaḥ //*

ಸುರಗಿರಿವೋಲ್ ಧೈರ್ಯದಿನಂ
ಬರಮಣಿವೋಲ್ ತೇಜದಿಂ ಶಶಾಂಕಂಬೋಲ್ ಬಂ
ಧುರಕಾಂತಿಗುಣದಿನೆಂದಿಂ
ತಿರೆ ಪೇೞ್ವುದನಱಿದುಕೊಳ್ಗೆ ಹೇತೂಪಮೆಯಂ ೮೫

ಸುರಗಿರಿವೋಲ್ ಧೈರ್ಯದಿನ್ ಅಂಬರ ಮಣಿವೋಲ್ ತೇಜದಿನ್ ಶಶಾಂಕಂಬೋಲ್ ಬಂಧುರ ಕಾಂತಿ ಗುಣದಿನ್ ಎಂದು ಇಂತು ಇರೆ ಪೇೞ್ವುದನ್ ಅಱಿದುಕೊಳ್ಗೆ ಹೇತೂಪಮೆಯನ್

"ಧೈರ್ಯದಿಂದ ಮೇರುಪರ್ವತದಂತೆ, ತೇಜಸ್ಸಿನಿಂದ ಸೂರ್ಯನಂತೆ, ರುಚಿರಕಾಂತಿಯಿಂದ ಚಂದ್ರನಂತೆ ಇರುವೆ" ಎಂದು ಹೇಳುವುದನ್ನು ಹೇತೂಪಮೆಯೆಂದು ಅರಿಯಬೇಕು.

ದಂಡಿಯ ಶ್ಲೋಕದಲ್ಲಿ ಧೈರ್ಯಕ್ಕೆ ಸಾಗರವನ್ನು ಹೇಳಲಾಗಿದೆ. ಇದನ್ನು ಬಿಟ್ಟರೆ ಅಲ್ಲಿಯ ಲಕ್ಷ್ಯ ಪ್ರಸ್ತುತ ಪದ್ಯವನ್ನೇ ಹೋಲುತ್ತದೆ (೨.೫೦).

85. "You are Mēru-mountain-like in courage, Sun-like in splendor, and Moon-like in shining beauty." Let this be understood as a simile accompanied with reasons (*hētūpamā*).

If there is a reason involved in making the comparison, it is called *hētūpamā.* A similar example is given by Daṇḍin (2.50).

ಹೀನಾಧಿಕಗುಣದೋಷವಿ
ತಾನಮುಮಂ ಲಿಂಗವಚನಭೇದಂಗಳುಮಂ
ಮಾನಧನರಱಿದು ಪೇೞ್ಗನು
ಮಾನಕ್ಕವಿರುದ್ಧಮಾಗೆ ಲಕ್ಷ್ಯಾಗಮದೊಳ್ ೮೬

ಹೀನ ಅಧಿಕ ಗುಣ ದೋಷ ವಿತಾನಮುಮನ್ ಲಿಂಗ ವಚನ ಭೇದಂಗಳುಮನ್ ಮಾನಧನರ್ ಅಱಿದು ಪೇೞ್ಗೆ ಅನುಮಾನಕ್ಕೆ ಅವಿರುದ್ಧಮಾಗೆ ಲಕ್ಷ್ಯಾಗಮದೊಳ್

ಹೀನೋಪಮೆ, ಅಧಿಕೋಪಮೆ ಮುಂತಾದವು ಯಾವಾಗ ಗುಣ ವೆನಿಸುವುವು, ಯಾವಾಗ ದೋಷವೆನಿಸುವವು ಎಂಬುದನ್ನು, ಅದೇ ರೀತಿ ಭಿನ್ನ ಲಿಂಗ ವಚನಗಳು ಯಾವಾಗ ಗುಣ, ಯಾವಾಗ ದೋಷ ಎಂಬುದನ್ನು ಅರಿದು ಮಾನಧನರಾದ ವಿದ್ವಾಂಸರು ಯುಕ್ತಿಗೆ ವಿರೋಧ ಬಾರದಂತೆ ಲಕ್ಷ್ಯಗಳಲ್ಲಿ ಪ್ರಯೋಗ ಮಾಡಲಿ.

86. Self-respecting people who are learned should know what is inferior and what is superior (*hīnādhika*), understand what is meritorious and what is not, and be aware of which gender and number a word ought to take.

ನಿನ್ನಂತೆ ಸುರೇಶ್ವರನು
ತ್ಪನ್ನಮಹೈಶ್ವರ್ಯನೆಂಬುದುಂ ಜಲನಿಧಿ ತಾಂ
ಸನ್ನುತಗಭೀರನೆಂಬುದು
ಮಿನ್ನದು ಹೀನಾಧಿಕಪ್ರಶಂಸಾನುಗುಣಂ ೮೭

ನಿನ್ನಂತೆ ಸುರೇಶ್ವರನ್ ಉತ್ಪನ್ನ ಮಹೈಶ್ವರ್ಯನ್ ಎಂಬುದುಮ್ ಜಲನಿಧಿ ತಾನ್ ಸನ್ನುತ ಗಭೀರನ್ ಎಂಬುದುಮ್ ಇನ್ನದು ಹೀನ ಅಧಿಕ ಪ್ರಶಂಸಾನುಗುಣಮ್

"ನಿನ್ನಂತೆ ದೇವೇಂದ್ರನು ಮಹೈಶ್ವರ್ಯವುಳ್ಳವನು" ಎನ್ನುವುದೂ "ನಿನ್ನಂತೆ ಸಮುದ್ರನು ಗಾಂಭೀರ್ಯ ಸಂಪನ್ನನು" ಎನ್ನುವುದೂ ಹೀನಾಧಿಕ ಪ್ರಶಂಸಾನುಗುಣವಾಗುತ್ತದೆ.

ಉಪಮೇಯಕ್ಕಿಂತ ಹೆಚ್ಚಿನ ಗುಣಾತಿಶಯವುಳ್ಳ ಉಪಮಾನದೊಡನೆ ಹೋಲಿಸಿರುವುದು ಗುಣವೇ ಆಗಿದೆ.

87. "Dēvēndra is excessively wealthy like you." "The ocean is very deep like you." Stated thus, there is an awareness of what is inferior and superior (*hīnādhika*) and, therefore, a praiseworthy usage."

ಕೊಳದಂತಂಬರಮತಿನಿ
ರ್ಮಳಮೀತಂ ಸ್ವಾಮಿಭಕ್ತನೆಂದುಂ ನಾಯ್ವೋ
ಳಿಳೆಯೊಳ್ ಕರಮೆಂಬುದಿದ
ಗ್ಗಳಮಾ ಹೀನಾಧಿಕಪ್ರಶಂಸಾದೋಷಂ ೮೮

ಕೊಳದಂತೆ ಅಂಬರಮ್ ಅತಿ ನಿರ್ಮಳಮ್ ಈತನ್ ಸ್ವಾಮಿಭಕ್ತನ್ ಎಂದುಮ್ ನಾಯ್ವೋಲ್ ಇಳೆಯೊಳ್ ಕರಮ್ ಎಂಬುದು ಇದು ಅಗ್ಗಳಮ್ ಆ ಹೀನಾಧಿಕ ಪ್ರಶಂಸಾದೋಷಮ್

"ಆಕಾಶವು ಕೊಳದಂತೆ ಅತಿನಿರ್ಮಳವಾಗಿದೆ," "ಈತ ಭೂಮಿಯಲ್ಲಿ ನಾಯಿಯಂತೆ ತುಂಬಾ ಸ್ವಾಮಿಭಕ್ತನು" ಹೀಗೆ ಹೇಳುವುದು ಹೀನಾಧಿಕದೋಷ.

ಉಪಮಾನ ಹೀನವಾಗಿ ಉಪಮೇಯವೇ ಅಧಿಕವೆನಿಸಿಬಿಟ್ಟರೆ ಅದು ಹೀನಾಧಿಕ ಉಪಮೆಗೆ ಸಂಬಂಧಿಸಿದ ದೋಷವಾಗುತ್ತದೆ. ದಂಡಿಯ ಶ್ಲೋಕ ಇದಕ್ಕೆ ಮೂಲ (೨.೫೫): "ಹಂಸೀವ ಧವಲಶ್ಚಂದ್ರಃ ಸರಾಂಸೀವಾಮಲಂ ನಭಃ । ಭರ್ತೃಭಕ್ತೋ ಭಟಃಶ್ವೇವ ಖದ್ಯೋತೋ ಭಾತಿ ಭಾನುವತ್ ॥

88. "The sky is clear like a pond." "A dedicated servant in the world is eternally like a dog." Stated thus, there is a fault in the comparison, in terms of awareness of what is inferior and superior.

If the object of comparison (here: dog) is represented as inferior to the subject (the servant), it is a fault. Daṇḍin gives a similar example (2.55).

ಪುರುಷಂಬೋಲೀಕೆ ಕರಂ
ಪುರುಷಾಕೃತಿಯೆಂಬುದಿಂತು ನಾನಾ ಲಿಂಗಂ
ನಿರುತಂ ಪ್ರಾಣಂಗಳವೊಲ್
ನರಪಂ ಪ್ರಿಯನೆಂಬುದಿಂತು ನಾನಾ ವಚನಂ ೮೯

ಪುರುಷಂಬೋಲ್ ಈಕೆ ಕರಮ್ ಪುರುಷ ಆಕೃತಿ ಎಂಬುದು ಇಂತು ನಾನಾ ಲಿಂಗಮ್ ನಿರುತಮ್ ಪ್ರಾಣಂಗಳವೊಲ್ ನರಪನ್ ಪ್ರಿಯನ್ ಎಂಬುದು ಇಂತು ನಾನಾ ವಚನಮ್

"ಈಕೆ ಪುರುಷನಂತೆ ಪುರುಷಾಕೃತಿಯವಳು" ಎನ್ನುವಾಗ ಲಿಂಗಭೇದವಿದೆ. "ಪ್ರಾಣಗಳ ಹಾಗೆ ರಾಜನು ಪ್ರಿಯನಾಗಿರುವನು" ಎನ್ನುವಾಗ ವಚನ ಭೇದವಿದೆ.

ಉಪಮೇಯ ಸ್ತ್ರೀಲಿಂಗದಲ್ಲಿ, ಉಪಮಾನ ಪುಲ್ಲಿಂಗದಲ್ಲಿ ಇರುವುದರಿಂದ ಭಿನ್ನ ಲಿಂಗಗಳಿವೆ. 'ನರಪನ್' ಎಂದಾಗ ಉಪಮೇಯ ಏಕವಚನದಲ್ಲಿ 'ಪ್ರಾಣಂಗಳವೊಲ್' ಎಂದಾಗ ಉಪಮಾನ ಬಹುವಚನದಲ್ಲಿವೆ.

89. "Like a man she has taken the form of a man" accounts for a difference in gender. "Like the vital breaths (of life), the king is beloved" accounts for a difference in number (with the breaths being plural).

By giving the above examples, the author suggests that discrepancies in gender and number are not faults if they are properly used in accordance with the context.

ಇಂತುಪಮಾಕ್ರಮಮನಪ
ರ್ಯಂತಂ ಗುಣಗಣಮನಱಿದು ಪೇೞ್ಗೆ ಕವೀಶರ್
ಸಂತತಮಿಂತಕ್ಕುಂ ಕಾಂ
ತಾಂತಿಕಮತಿಶಯದ ಲಕ್ಷ್ಯಲಕ್ಷಣಯುಗದಿಂ ೯೦

ಇಂತು ಉಪಮಾಕ್ರಮಮನ್ ಅಪರ್ಯಂತಮ್ ಗುಣಗಣಮನ್ ಅಱಿದು ಪೇೞ್ಗೆ ಕವೀಶರ್ ಸಂತತಮ್ ಇಂತು ಅಕ್ಕುಮ್ ಕಾಂತಾಂತಿಕಮ್ ಅತಿಶಯದ ಲಕ್ಷ್ಯ ಲಕ್ಷಣ ಯುಗದಿನ್

ಹೀಗೆ ಉಪಮಾಲಂಕಾರದ ಪ್ರಭೇದಗಳನ್ನು, ಅದರ ಅನಂತ ಗುಣಾವಳಿಯನ್ನು ತಿಳಿದು ಯಾವಾಗಲೂ ಕವೀಶ್ವರರು ಕಾವ್ಯರಚನೆ ಮಾಡಬೇಕು. ಇನ್ನು ಅತಿ ರಮಣೀಯವಾದ ಅತಿಶಯಾಲಂಕಾರದ ಲಕ್ಷ್ಯಲಕ್ಷಣಗಳು ಹೀಗಿರುತ್ತವೆ.

90. Great poets thus know the merits and demerits in the use of similes in their poetic compositions. What follows is the definition of the trope of "exaggeration" or "hyperbole" (*atiśayōkti*), along with examples.

ಅತಿಶಯೋಕ್ತಿ

Hyperbole (*atiśayōkti*)

ಮೇರೆಗಳೆದಿರೆ ವಿಶೇಷವಿ
ಚಾರಮನಧಿಕೋಕ್ತಿಯೊಳ್ ತಗುಳ್ಚುವುದಕ್ಕುಂ
ಸಾರತರಮತಿಶಯಾಲಂ
ಕಾರಂ ಮತ್ತದಱ ಲಕ್ಷ್ಯಮೀ ತೆಱನಕ್ಕುಂ ೯೧

ಮೇರೆಗಳೆದು ಇರೆ ವಿಶೇಷ ವಿಚಾರಮನ್ ಅಧಿಕ ಉಕ್ತಿಯೊಳ್ ತಗುಳ್ಚುವುದು ಅಕ್ಕುಮ್ ಸಾರತರಮ್ ಅತಿಶಯಾಲಂಕಾರಮ್ ಮತ್ತೆ ಅದಱ ಲಕ್ಷ್ಯಮ್ ಈ ತೆಱನ್ ಅಕ್ಕುಮ್

(ಲೋಕವ್ಯವಹಾರದ) ಮೇರೆಯನ್ನು ಮೀರಿ ವಿಶೇಷ ವಿಚಾರವನ್ನು ವಿಷಯದಲ್ಲಿ ತಂದು ಸೇರಿಸುವುದು ಅತಿಶಯೋಕ್ತಿ. ಅದರ ಲಕ್ಷ್ಯ ಈ ರೀತಿ ಇರುತ್ತದೆ.

ದಂಡಿಯ ಮೂಲಶ್ಲೋಕ ಈ ರೀತಿ ಇದೆ(೨.೨೧೪): "ವಿವಕ್ಷಾ ಯಾ ವಿಶೇಷಸ್ಯ ಲೋಕಸೀಮಾತಿವರ್ತಿನೀ । ಅಸಾವತಿಶಯೋಕ್ತಿಃ ಸ್ಯಾದಲಂಕಾ ರೋತ್ತಮಾ ಯಥಾ॥"

91. A special idea that crosses the limits of worldly convention and conveys something beyond the norm is called *atiśayālaṅkāra* or the "trope of hyperbole." What follows is an example.

ಗೈರಿಕರಸಾರ್ದ್ರಮಂ ಸಿಂ
ದೂರದೆ ತಲೆವೆಟಿದುದಂ ಕರಂ ಕಂಡುಂಸಂ
ಧ್ಯಾರಾಗದೊಳಱಿಯದೆ ಮದ
ವಾರಣಮಂ ಸೋಂಕಿ ಕೆಲದೊಳೊಯ್ಯನೆ ಪೋದೆಂ ೯೨

ಗೈರಿಕ ರಸ ಆರ್ದ್ರಮನ್ ಸಿಂದೂರದೆ ತಲೆವಟೆದುದನ್ ಕರಮ್ ಕಂಡುಮ್ ಸಂಧ್ಯಾರಾಗದೊಳ್ ಅಱಿಯದೆ ಮದವಾರಣಮನ್ ಸೋಂಕಿ ಕೆಲದೊಳ್ ಒಯ್ಯನೆ ಪೋದೆನ್

"ಗೈರಿಕೆ ಎಂಬ ಕೆಂಪಾದ ಶಿಲಾಧಾತುವಿನಿಂದ ತೊಯ್ದಿದ್ದ, ಸಿಂದೂರದ ಕೆಂಪಿನಿಂದ ತಲೆಯ ಮೇಲೆಲ್ಲ ಬಳಿಯಲಾಗಿದ್ದ ಮದ್ದಾನೆಯನ್ನು ಸಂಧ್ಯಾರಾಗದ ಸಮಯದಲ್ಲಿ ಕಂಡರೂ ಅದು ಆನೆಯೆಂದು ತಿಳಿಯದೆ ಪಕ್ಕದಲ್ಲೇ ಅದನ್ನು ಹಾಯ್ದುಕೊಂಡೇ ಹೋದೆನು."

ಸಂಧ್ಯಾರಾಗದಲ್ಲಿ ಆನೆಯನ್ನೇ ಗುರುತಿಸಲಾರದಷ್ಟು ಲೋಕಸೀಮಾತಿ ವರ್ತಿನಿ ಯಾಗಿರುವುದರಿಂದ ಇದು ಅತಿಶಯೋಕ್ತಿ.

92. "I saw a rutting elephant in twilight wet with a reddish chalk (*gairikā*), its head colored with red vermillion (*sindūra*). Without knowing it to be an elephant, I passed by its side touching it."

The author wants to suggest the extreme redness of the twilight through this exaggerated image of the reddened elephant. The redness of twilight here exceeds the redness of *gairikā dhātu* (a red-colored stone used for redness) and *sindūra* (a red-colored flower).

ಮಲಯಜಚರ್ಚಿತೆಯಂ ಕೇ
ವಲಧವಳಾಭರಣೆಯಂ ದುಕೂಲಾಂಬರೆಯಂ

ಕೆಲದೊಳ್ ನಿಲೆಯುಂ ಜ್ಯೋತ್ಸ್ನಾ
ವಿಲಾಸದೊಳ್ ಬಗೆದೆನಿಲ್ಲ ನಲ್ಲಳನಿನಿಸಂ ೯೩

ಮಲಯಜ ಚರ್ಚಿತೆಯನ್ ಕೇವಲ ಧವಳ ಆಭರಣೆಯನ್ ದುಕೂಲ ಅಂಬರೆಯನ್ ಕೆಲದೊಳ್ ನಿಲೆಯುಮ್ ಜ್ಯೋತ್ಸ್ನಾವಿಲಾಸದೊಳ್ ಬಗೆದೆನಿಲ್ಲ ನಲ್ಲಳನ್ ಇನಿಸಮ್

"ಶ್ರೀಗಂಧ ಲೇಪಿಸಿಕೊಂಡವಳು, ಕೇವಲ ಬಿಳಿಯ ಆಭರಣಗಳನ್ನು ಧರಿಸಿದವಳು, ರೇಷ್ಮೆಬಟ್ಟೆಯನ್ನು ಧರಿಸಿದವಳು ಆದ ನಲ್ಲೆ ಪಕ್ಕದಲ್ಲಿಯೇ ನಿಂತರೂ ಬೆಳ್ದಿಂಗಳ ಪ್ರಭಾವದಿಂದ ನಲ್ಲೆಯನ್ನು ಸ್ವಲ್ಪವೂ ಅರಿಯಲಾರದೆ ಹೋದೆನು."

ಇದೇ ರೀತಿಯ ಉದಾಹರಣೆ ದಂಡಿಯ ಕಾವ್ಯಾದರ್ಶದಲ್ಲಿದೆ (೨.೨೧೫): "ಮಲ್ಲಿಕಾಮಾಲಭಾರಿಣ್ಯಃ ಸರ್ವಾಂಗೀಣಾರ್ದ್ರಚಂದನಾಃ । ಕ್ಷೌಮವತ್ಯೋ ನ ಲಕ್ಷ್ಯನ್ತೇ ಜ್ಯೋತ್ಸ್ನಾಯಾಮಭಿಸಾರಿಕಾಃ ॥"

93. "My beloved lady was standing very close to me smearing her body with sandal paste, having white ornaments and wearing white silk saree. But, I was not aware of her presence in the shining moonlight."

This verse can be compared with Daṇḍin's examples 2.215, 216.

ಆಶಾವಳಯಿತಲೋಕಾ
ಕಾಶಮಿದೇನತಿವಿಶಾಲಮೋ ನಿನ್ನ ಯಶೋ
ರಾಶಿಯನಿಂದುದ್ಯುತಿಯ ನಿ
ಕಾಶಮನೊಳಕೊಳ್ಗುಮಳವಿಗಟಿದಿರ್ದುದುಮಂ ೯೪

ಆಶಾ ವಳಯಿತ ಲೋಕಾಕಾಶಮ್ ಇದೇನ್ ಅತಿ ವಿಶಾಲಮೋ ನಿನ್ನ ಯಶೋರಾಶಿಯನ್ ಇಂದು ದ್ಯುತಿಯ ನಿಕಾಶಮನ್ ಒಳಕೊಳ್ಗುಮ್ ಅಳವಿಗೆ ಅಟಿದು ಇರ್ದುದುಮನ್

"ದಿಕ್ಕುಗಳಿಂದ ಬಳಸಲ್ಪಟ್ಟಿರುವ ಈ ಲೋಕಾಂತರ್ಗತ ಆಕಾಶವು ಅದೆಷ್ಟು ವಿಶಾಲವೋ! ಅಳೆಯಲು ಅಶಕ್ಯವಾಗಿರುವ ನಿನ್ನ ಚಂದ್ರಧವಳಯಶೋ ರಾಶಿಯನ್ನು ಕೂಡ ಅದು ತನ್ನಲ್ಲಿ ಒಳಗೊಳ್ಳುತ್ತಿದೆಯಲ್ಲ!"

ಇದು ಆಧಿಕ್ಯಾತಿಶಯೋಕ್ತಿ. ದಂಡಿ ಇದೇ ರೀತಿಯ ಲಕ್ಷ್ಯವನ್ನು ಕೊಟ್ಟಿದ್ದಾನೆ (೨.೨೧೯): "ಅಹೋ ವಿಶಾಲಂ ಭೂಪಾಲ ಭುವನ ತ್ರಿತಯೋದರಮ್ । ಮಾತಿ ಮಾತುಮಶಕ್ಯೋಽಪಿ ಯಶೋರಾಶಿರ್ಯದತ್ರ ತೇ॥"

94. "This sky surrounded by directions is such a wide one! It includes within itself your moonlight-like fame which is impossible to measure."

This example is comparable to the one given by Daṇḍin (2.219).

ಸದೃಶಯೋಗಿತಾ

Joining Similar Things (*sadṛśa-yōgitā)*

ಸ್ತುತಿನಿಂದೆಗಳಿಂ ಸವಿವ
ಕ್ಷಿತಗುಣದೊಳ್ ಸದೃಶಮಾಗಿ ಪೇೞ್ವುದು ಪೆಱತಂ
ನುತಸದೃಶಯೋಗಿತಾಲಂ
ಕೃತಿಲಕ್ಷಣಮಕ್ಕುಮಿಂತು ತದುದಾಹರಣಂ ೯೫

ಸ್ತುತಿ ನಿಂದೆಗಳಿನ್ ಸವಿವಕ್ಷಿತ ಗುಣದೊಳ್ ಸದೃಶಮ್ ಆಗಿ ಪೇೞ್ವುದು ಪೆಱತನ್ ನುತ ಸದೃಶಯೋಗಿತ ಅಲಂಕೃತಿ ಲಕ್ಷಣಮ್ ಅಕ್ಕುಮ್ ಇಂತು ತತ್ ಉದಾಹರಣಮ್

ಸ್ತುತಿ ಮತ್ತು ನಿಂದೆಗಳನ್ನು ಹೇಳಲು ಪ್ರಕೃತವಸ್ತುವನ್ನು ವಿವಕ್ಷಿತ ಗುಣಾತಿಶಯವಿರುವ ಇತರ ವಸ್ತುಗಳೊಂದಿಗೆ ಸಮೀಕರಿಸಿ ಹೇಳುವುದು ಸದೃಶಯೋಗಿತೆ.

ಇದರ ಮೂಲ ದಂಡಿಯಲ್ಲಿ ಹೀಗಿದೆ(೨.೩೩೦): "ವಿವಕ್ಷಿತಗುಣೋತ್ಕೃಷ್ಟೈರ್ಯತ್ ಸಮೀಕೃತ್ಯ ಕಸ್ಯಚಿತ್ । ಕೀರ್ತನಮ್ ಸ್ತುತಿನಿಂದಾರ್ಥಂ ಸಾ ಮತಾ ತುಲ್ಯಯೋಗಿತಾ ॥"

95. Saying that the subject of comparison is similar to another in possessing the same quality in order to express praise or rebuke is *sadṛśayōgitā.*

This follows Daṇḍin's definition of *tulya-yōgitā* (2.330): *vivakṣita-guṇōtkṛṣṭairyat samīkṛtya kaśyacit / kīrtanaṁ stuti-nindārthaṁ sā matā tulya-yōgitā //*

ಅಮರಾಧಿರಾಜ ಹುತವಹ
ಯಮ ನೈರ್ಋುತ ವರುಣ ವಾಯು ಯಕ್ಷೇಶಾನ
ಕ್ರಮದಿನವರೆಣ್ಬರಂತು
ತ್ತಮನಯ್ ನೀಂ ನವಮಲೋಕಪಾಳನೆಯವರೊಳ್ ೯೬

ಅಮರ ಅಧಿರಾಜ ಹುತವಹ ಯಮ ನೈರ್ಋುತ ವರುಣ ವಾಯು ಯಕ್ಷ ಈಶಾನ ಕ್ರಮದಿನ್ ಅವರ್ ಎಣ್ಬರ್ ಅಂತು ಉತ್ತಮನಯ್ ನೀನ್ ನವಮ ಲೋಕಪಾಳನೆ ಅವರೊಳ್

"ಇಂದ್ರ, ಅಗ್ನಿ, ಯಮ, ನೈರ್ಋುತ, ವರುಣ, ವಾಯು, ಯಕ್ಷ, ಈಶಾನ ಎಂಬ ಅನುಕ್ರಮದಲ್ಲಿರುವ ಎಂಟು ದಿಕ್ಪಾಲಕರಲ್ಲಿ ನೀನು ಉತ್ತಮನು ಮತ್ತು ಒಂಬತ್ತನೆಯ ದಿಕ್ಪಾಲಕನಾಗಿರುವೆ."

'ನವಮ ಲೋಕಪಾಲಕ' ಎಂದು ಹೇಳದಿದ್ದರೂ ಅಸಾಧಾರಣ ಲೋಕಪಾಲನೆಂದು ಹೇಳಿ ತುಲ್ಯಯೋಗಿತಾಲಂಕಾರದ ಉದಾಹರಣೆಯನ್ನು ದಂಡಿ ಕೊಟ್ಟಿದ್ದಾನೆ (೨.೩೩೧): "ಯಮಃ ಕುಬೇರೋ ವರುಣಃ ಸಹಸ್ರಾಕ್ಷೋಭ ವಾನಪಿ ಬಿಭ್ರತ್ಯನನ್ಯವಿಷಯಾಂ ಲೋಕಪಾಲ ಇತಿ ಶ್ರುತಿಮ್॥" ಇಲ್ಲಿ ನಾಲ್ಕು ದಿಕ್ಪಾಲಕರನ್ನು ಮಾತ್ರ ಹೆಸರಿಸಲಾಗಿದೆ.

96. "Along with Indra, Agni, Yama, Nirṛti, Varuṇa, Vāyu, Yakṣa and Īśāna – the (eight) lords of directions – you are the ninth lord of the world."

Daṇḍin mentions only four of the lords of directions (2.331), but Śrīvijaya gives the names of all the eight lords and his subject (probably Nṛpatuṅga) as the ninth lord (*lōkapāla*).

ಜಲದದ ನೆೞಲುಂ ಪರಪುಂ
ವಿಲಾಸಮುಂ ಬೆಳಗುವುದಿತವಿದ್ಯುಲ್ಲತೆಯುಂ
ನೆಲಸವು ಚಲಂಗಳಾದಂ
ವಿಲಾಸಿನೀಜನದ ನಲ್ಮೆಯುಂ ಸಂಗಮಮುಂ ೯೭

ಜಲದದ ನೆೞಲುಮ್ ಪರಪುಮ್ ವಿಲಾಸಮುಮ್ ಬೆಳಗುವ ಉದಿತ ವಿದ್ಯುಲ್ಲತೆಯುಮ್ ನೆಲಸವು ಚಲಂಗಳ್ ಆದಮ್ ವಿಲಾಸಿನೀ ಜನದ ನಲ್ಮೆಯುಮ್ ಸಂಗಮಮುಮ್

"ಮೋಡದ ನೆಳಲು, ಹರಹು, ವಿಲಾಸ, ಬೆಳಗುವ ಮಿಂಚುಬಳ್ಳಿ, ವಿಲಾಸಿನಿಯರ ನಲ್ಮೆ ಮತ್ತು ಸಮಾಗಮಗಳು ಚಂಚಲವಾದುವು; ಸ್ಥಿರವಾದುವಲ್ಲ."

ಇದು ದಂಡಿಯ ಶ್ಲೋಕವನ್ನು ಅನುಸರಿಸುತ್ತದೆ (೨.೩೩೨): "ಸಂಗತಾನಿ ಮೃಗಾಕ್ಷೀಣಾಂ ತಡಿದ್ವಿಲಸಿತಾನಿ ಚ । ಕ್ಷಣದ್ವಯಂ ನ ತಿಷ್ಠಂತಿ ಘನಾರಬ್ಧಾನ್ಯಪಿ ಸ್ವಯಮ್ ॥"

97. "These things are not constant: the shadows of a cloud, the spread and loveliness of the creeper-like lightning, and the affection of and union with a charming lady."

This example can be compared with the example in *Kāvyādarṣa* 2.332.

ಉಪಮಿತಭೇದೋಕ್ತಿಕ್ರಮ
ಮಪರಿಮಿತಾಖ್ಯಾಕೃತಿಪ್ರಯೋಗಾನುಗತಂ
ನೃಪತುಂಗದೇವಮತದಿಂ
ದುಪಮಾಭೇದಂಗಳಿಂದೆ ತಱಿಸಲ್ಗಱಿವಂ ೯೮

ಉಪಮಿತ ಭೇದೋಕ್ತಿ ಕ್ರಮಮ್ ಅಪರಿಮಿತ ಆಖ್ಯಾಕೃತಿ ಪ್ರಯೋಗ ಅನುಗತಮ್ ನೃಪತುಂಗದೇವ ಮತದಿಂದೆ ಉಪಮಾ ಭೇದಂಗಳಿಂದೆ ತಱಿಸಲ್ಗೆ ಅಱಿವನ್

ಉಪಮಿತ ಭೇದಗಳ ಕ್ರಮ ಅಪರಿಮಿತವಾದ ಕವಿಪ್ರಯೋಗಗಳಲ್ಲಿ ಕಂಡುಬರುತ್ತದೆ. ನೃಪತುಂಗದೇವನ ಮತದಂತೆ ಉಪಮಾಭೇದಗಳಿಂದ ಬಲ್ಲವರು ನಿರ್ಣಯಿಸಬೇಕು.

98. Expressions that make comparisons are innumerable. The previous examples of the simile are found in usages from literary works and in the views of Nṛpatuṅgadēva expressed here.

ವಿದಿತಾರ್ಥವಿಪರ್ಯಾಸಾ
ಸ್ಪದಮೆ ದಲಾಕ್ಷೇಪಮೆಂಬಳಂಕಾರಂ ಮ
ತ್ತದಱ ವಿಶೇಷವಿಭಾಗಮ
ನುದಾಹರಣಮಾರ್ಗದಿಂ ಪ್ರಯೋಗಿಸಿ ತೋರ್ಪೆಂ ೯೯

ವಿದಿತ ಅರ್ಥ ವಿಪರ್ಯಾಸ ಆಸ್ಪದಮೆ ದಲ್ ಆಕ್ಷೇಪಮೆಂಬ ಅಳಂಕಾರಮ್ ಮತ್ತೆ ಅದಱ ವಿಶೇಷ ವಿಭಾಗಮನ್ ಉದಾಹರಣ ಮಾರ್ಗದಿನ್ ಪ್ರಯೋಗಿಸಿ ತೋರ್ಪೆನ್

ಪ್ರಸಿದ್ಧವಾದ ಅರ್ಥ ವಿಪರ್ಯಾಸಕ್ಕೆ ಆಸ್ಪದವಾಗಿರುವುದು ಆಕ್ಷೇಪವೆಂಬ ಅಲಂಕಾರ. ಅದರ ವಿಶೇಷ ಪ್ರಕಾರಗಳನ್ನು ಉದಾಹರಣೆಗಳ ಮೂಲಕ ಪ್ರಯೋಗಿಸಿ ತೋರಿಸುತ್ತೇನೆ.

ದಂಡಿ ಇದನ್ನು ಕುರಿತು ಹೇಳುವಾಗ ನಿಷೇಧದ ಉಕ್ತಿಯೇ ಆಕ್ಷೇಪವೆಂದಿದ್ದಾನೆ (೨.೧೨೦).

99. Denying the conventionally understood meaning is a figure of speech called "refutation" (*ākṣēpa*). I show here the special types of it, with examples.

Daṇḍin (2.120) simply defines *ākṣēpa* as an "expression that refutes" (*pratiṣēdhōktir ākṣēpaḥ*).

ಆಕ್ಷೇಪ
Refutation (*ākṣēpa*)

ಮೃದುತರಮಾರ್ಗದೆ ಕೆನ್ನಂ
ಮದನಶರಾನೀಕಮೊಯ್ಯನೊಲವಂ ಪಡೆಗುಂ
ಹೃದಯಮನದವಟಿಲಿಂದುಱಿ
ವಿದಾರಿಸುವುದಿಂತು ಕುಸುಮಮಯಮಲ್ತದಱಿಂ ೧೦೦

ಮೃದುತರ ಮಾರ್ಗದೆ ಕೆನ್ನಮ್ ಮದನ ಶರಾನೀಕಮ್ ಒಯ್ಯನೆ ಒಲವನ್ ಪಡೆಗುಮ್ ಹೃದಯಮನ್ ಅದವಟಿಂದೆ ಉಱಿ ವಿದಾರಿಸುವುದು ಇಂತು ಕುಸುಮಮಯಮ್ ಅಲ್ತು ಅದಱಿನ್

"ಮೃದುತರವಾದ ಮಾರ್ಗದಿಂದಲೇ ಮನ್ಮಥನ ಪುಷ್ಪಬಾಣವು ತಪ್ಪದೆ ಒಲವನ್ನು ಪಡೆಯುವುದು. ಹೃದಯವನ್ನು ಬೇಗುದಿಯಿಂದ ಸೀಳುತ್ತದೆಯಾದ ಕಾರಣ ಅದು ಹೂವೇ ಅಲ್ಲ."

ಮೊದಲು ಮನ್ಮಥನ ಪುಷ್ಪಬಾಣ ಮೃದುತರವಾದುದೆಂದು ಹೇಳಿ ಮತ್ತೆ ಅದನ್ನು ಆಕ್ಷೇಪಿಸಿರುವುದರಿಂದ ಇದು ವೃತ್ತಾಕ್ಷೇಪ.

100. "The arrow of Madana, the maddening god of love, obtains love in a soft way. As it breaks the heart in an unbearable manner, however, it is not a flower."

This is an example of a "refutation of something (tentatively) established" (*vṛttākṣēpa*), as it refutes something it tentatively ascertains first.

ಧನಮುಂ ನೆರಪದೆ ವಿದ್ಯಾ
ಧನಮುಂ ಮಾಡದೆ ತಗುಳ್ದು ನೆಗಟದೆ ತಪದೊಳ್
ಮನುಜತ್ವಮಫಲಮಾಯ್ತೆಂ
ತೆನಗೆಂಬುದನಱಿವುದನುಶಯಾಕ್ಷೇಪಕಮುಂ ೧೦೧

ಧನಮನ್ ನೆರಪದೆ ವಿದ್ಯಾಧನಮನ್ ಮಾಡದೆ ತಗುಳ್ದು ನೆಗಟದೆ ತಪದೊಳ್ ಮನುಜತ್ವಮ್ ಅಫಲಮಾಯ್ತು ಎಂತು ಎನಗೆ ಎಂಬುದನ್ ಅಱಿವುದು ಅನುಶಯ ಆಕ್ಷೇಪಕಮನ್

"ಧನವನ್ನು ಸಂಗ್ರಹಿಸದೆ, ವಿದ್ಯಾಧನವನ್ನು ಗಳಿಸದೆ, ತಪೋನುಷ್ಠಾನವನ್ನೂ ಸಾಧಿಸದೆ ನನ್ನ ಮನುಷ್ಯ ಜನ್ಮ ನಿಷ್ಫಲವಾಯಿತು" ಎಂದು ಹೇಳಿದರೆ ಅದು ಅನುಶಯಾಕ್ಷೇಪಕ.

ಅನುಶಯ ಎಂದರೆ ಪಶ್ಚಾತ್ತಾಪ. ಇಲ್ಲಿ ಪಶ್ಚಾತ್ತಾಪದಿಂದ ಕೂಡಿದ ಆಕ್ಷೇಪವಿದೆ. ಇದು ದಂಡಿಯ ಉದಾಹರಣೆಯನ್ನು ಅನುಸರಿಸುತ್ತದೆ (೨.೧೬೧): "ಅರ್ಥೋ ನ ಸಂಭೃತಃ ಕಶ್ಚಿನ್ನ ವಿದ್ಯಾ ಕಾಚಿದಾರ್ಜಿತಾ । ನ ತಪಃ ಸಂಚಿತಂ ಕಿಂಚಿದ್ಗತಂ ಚ ಸಕಲಂ ವಯಃ ॥"

101. "Not having earned money or the wealth that comes from knowledge or practicing penance, my existence as a human being has borne no fruit." Stated thus, it is a "refutation based on regret" (*anuśayākṣēpa*).

The example closely follows Daṇḍin's (2.161): *arthō na saṁbhṛtaḥ kaścinna vidyā kācidārjitā / na tapaḥ sancitaṁ kincidgataṁ ca sakalaṁ vayaḥ //*

ಸರಸಿಜವಿರೋಧಿ ಕಾಂತ್ಯಾ
ಕರಮಮೃತಮಯಂ ತ್ವದೀಯ ಮುಖಶಶಿಯುಂಟಾ
ಗಿರೆ ಶಶಿಯದೇವುದೆಂಬುದು
ನಿರುತಂ ಶ್ಲೇಷಾನುವಿದ್ಧಮಪ್ಪಾಕ್ಷೇಪಂ ೧೦೨

ಸರಸಿಜ ವಿರೋಧಿ ಕಾಂತಿ ಆಕರಮ್ ಅಮೃತಮಯಮ್ ತ್ವದೀಯ ಮುಖ ಶಶಿ ಉಂಟಾಗಿರೆ ಶಶಿ ಅದೇವುದು ಎಂಬುದು ನಿರುತಮ್ ಶ್ಲೇಷ ಅನುವಿದ್ಧಮಪ್ಪ ಆಕ್ಷೇಪಮ್

"ಕಮಲದ ವಿರೋಧಿಯಾ ಕಾಂತಿಯ ಆಕರವೂ ಅಮೃತಮಯವೂ ಆದ ನಿನ್ನ ಮುಖಚಂದ್ರ ದೊರೆತಿರುವಾಗ ಆ ಚಂದ್ರನ ಅಗತ್ಯವೇನಿದೆ" ಎಂಬುದು ಶ್ಲೇಷಾನುವಿದ್ಧ ಆಕ್ಷೇಪ.

'ಸರಸಿಜ ವಿರೋಧಿ' ಎಂದಾಗ ಚಂದ್ರನಿಗೂ ಕಮಲದ ಕಾಂತಿಯನ್ನು ಸೋಲಿಸುವ ಮುಖಕ್ಕೂ ಅನ್ವಯವಾಗುತ್ತದೆ. 'ಮುಖಚಂದ್ರನೇ ಸಾಕು' ಎಂದಾಗ

ಆಕ್ಷೇಪವಿದೆ. ಈ ಲಕ್ಷ್ಯ ದಂಡಿಯ ಶ್ಲೋಕವನ್ನು ಅನುಸರಿಸುತ್ತದೆ (೨.೧೫೯) : "ಅಮೃತಾತ್ಮನಿ ಪದ್ಮಾನಾಂ ದ್ವೇಷ್ಟರಿ ಸ್ನಿಗ್ಧತಾರಕೇ । ಮುಖೇಂದೌ ತವ ಸತ್ಯಸ್ಮಿನ್ನ ಪರೇಣ ಕಿಮಿಂದುನಾ ॥"

102. "Where is the necessity of the Moon when truly your face-moon acts as an enemy of the lotus and a source of light, and is full of ambrosia?" Stated thus, it is a "refutation based on a fusion of multiple meanings" (*ślēṣākṣēpa*).

Here the qualities of moon (*sarasija-virōdhi, kāntyākara, amṛtamaya*) apply both to the moon and to the face of the lady. This example can be compared with Daṇḍin's (2.159): *amṛtātmani padmānāṁ dvēṣṭari snigdhatārakē / mukhēndau tava satyasminnaparēṇa kimindunā //*

ವರ ಹಂಸಕದಂಬಕಮದು
ಶರದಂಬುದಮಲ್ತು ಮುಖರನೂಪುರಸಂವಾ
ದಿರವಂ ನೆಗಟ್ದಪ್ಪುದು ಬಂ
ಧುರಮದಱಿಂದಿದಱಿಕೊಳೆಂಬುದುಪಮಾಕ್ಷೇಪಂ ೧೦೩

ವರ ಹಂಸ ಕದಂಬಕಮ್ ಅದು ಶರತ್ ಅಂಬುದಮ್ ಅಲ್ತು ಮುಖರ ನೂಪುರ ಸಂವಾದಿ ರವಮ್ ನೆಗಟ್ದು ಅಪ್ಪುದು ಬಂಧುರಮ್ ಅದಱಿಂದೆ ಇದಱಿಕೊಳ್ ಎಂಬುದು ಉಪಮಾಕ್ಷೇಪಮ್

"ಅದು ಶ್ರೇಷ್ಠವಾದ ಹಂಸಗಳ ಸಮೂಹ, ಶರತ್ಕಾಲದ ಮೇಘವಲ್ಲ. ಏಕೆಂದರೆ ಕಾಲ್ಗೆಜ್ಜೆಗಳ ಮಧುರವಾದ ಧ್ವನಿ ಕೇಳಿ ಬರುತ್ತಿದೆ" ಎಂಬುದು ಉಪಮಾಕ್ಷೇಪ.

ಇದೇ ತರಹದ ಉದಾಹರಣೆಯನ್ನು ದಂಡಿ ಸಂಶಯಾಕ್ಷೇಪಕ್ಕೆ ಲಕ್ಷ್ಯವಾಗಿ ಕೊಟ್ಟಿದ್ದಾನೆ (೨.೧೬೩) : "ಕಿಮಯಂ ಶರದಂಭೋದಃ ಕಿಂ ವಾ ಹಂಸ ಕದಂಬಕಮ್ । ರುತಂ ನೂಪುರ ಸಂವಾದಿ ಶ್ರೂಯತೇ ತನ್ನ ತೋಯದಃ ॥"

ಕವಿರಾಜಮಾರ್ಗದ ಉದಾಹರಣೆಯಲ್ಲಿ ಸಂಶಯಕ್ಕಿಂತ 'ನೂಪುರರವಕ್ಕೆ' ಹೋಲಿಕೆ ಸ್ಪಷ್ಟವಾಗಿದೆ.

103. "This is a group of swans, not an autumnal cloud. There is a beautiful sound (coming from the swans), similar to the clamor of anklets, that can be heard." Stated thus, this is a "refutation based on a simile" (*upamākṣēpa*).

The same example is given by Daṇḍin (2.163) to explain a "refutation based on a doubt" (*saṁśayākṣēpa*): *kimayaṁ śaradaṁbōdaḥ kiṁ vā haṁsa-kadaṁbakam / rutaṁ nūpura-saṁvādi śrūyatē tanna tōyadaḥ* // Śrīvijaya feels here that the comparison raises a doubt, since clouds cannot make the sound of anklets that swans do, even though the dense group of swans resembles the cloud in appearance.

ಮದಕರಿಯೋ ಘನಸಮಯಾಂ
ಬುದಮೋ ಘನಮಲ್ತು ನೆಗೞ್ದುದದಱೊಳ್ ಸಪ್ತ
ಚ್ಛದಗಂಧಸುರಭಿ ಪದುಳಂ
ಮದಕರಿಯೆನೆ ನೆನೆಗೆ ಸಂಶಯಾಕ್ಷೇಪಕಮಂ ೧೦೪

ಮದಕರಿಯೋ ಘನಸಮಯ ಅಂಬುದಮೋ ಘನಮ್ ಅಲ್ತು ನೆಗೞ್ದುದು ಅದಱೊಳ್ ಸಪ್ತಚ್ಛದ ಗಂಧ ಸುರಭಿ ಪದುಳಮ್ ಮದಕರಿ ಎನೆ ನೆನೆಗೆ ಸಂಶಯ ಆಕ್ಷೇಪಕಮನ್

"ಇದು ಮದಕರಿಯೋ ಮಳೆಗಾಲದ ಮೋಡವೋ? ಮೋಡವಲ್ಲ, ಏಕೆಂದರೆ ಅದರಲ್ಲಿ ಏಳೆಲೆಬಾಳೆಯ ಸುಗಂಧ ಸುಖಾವಹವಾಗಿದೆ. ಆದುದರಿಂದ ಇದು ಮದಕರಿಯೇ," ಎಂದು ಹೇಳಿದರೆ ಅದು 'ಸಂಶಯಾಕ್ಷೇಪ'.

ಇಲ್ಲಿ ಸಂಶಯ ಸ್ಪಷ್ಟವಾಗಿದೆ. ಸಂಶಯವನ್ನು ವ್ಯಕ್ತಮಾಡಿ ಅದನ್ನು ಆಕ್ಷೇಪಿಸಿರುವುದರಿಂದ ಸಂಶಯಾಕ್ಷೇಪ.

104. "Is it a rutting elephant or is it a rain-cloud? It is not a cloud; it carries the fragrance of the seven-leafed (*saptacchada*) tree. Hence, it is a rutting elephant." States thus, the trope is called a "refutation based on a doubt" (*saṁśayākṣēpa*).

Unlike the previous example (104), here doubtfulness is explicit and not suggested.

ಮಾನಧನಾ ಪೊಗಟಿಸಲೇಂ
ದಾನಿಯೆ ನೀನುಂತೆ ನಿನ್ನ ಕಸವರಮೆಂದುಂ
ದೀನಾನಾಥರ ಕೆಯ್ಯದು
ದಾನಿಯದೆಂತೆಂಬುದಿಂತು ಹೇತ್ವಾಕ್ಷೇಪಂ ೧೦೫

ಮಾನಧನಾ ಪೊಗಟಿಸಲ್ ಏನ್ ದಾನಿಯೆ ನೀನ್ ಉಂತೆ ನಿನ್ನ ಕಸವರಮ್ ಎಂದುಮ್ ದೀನಾನಾಥರ ಕೆಯ್ ಅದು ದಾನಿ ಅದೆಂತು ಎಂಬುದು ಇಂತು ಹೇತು ಆಕ್ಷೇಪಮ್

"ಮಾನಧನನೆ, ನೀನು ಅಂತಹ ದಾನಿಯೆಂದು ಹೊಗಳಿಸುವುದೆಂತು? ನಿನ್ನ ಹೊನ್ನೆಲ್ಲ ದೀನಾನಾಥರ ಕೈಯಲ್ಲಿಯ ಆಸ್ತಿಯೇ ಆಗಿದೆ ಎಂದ ಮೇಲೆ ನೀನು ದಾನಿ ಆಗುವುದಾದರೂ ಹೇಗೆ" ಎಂಬುದು 'ಹೇತ್ವಾಕ್ಷೇಪ'.

ದಂಡಿಯ ಕಾವ್ಯಾದರ್ಶದಲ್ಲಿಯೂ ಇದೇ ರೀತಿಯ ಉದಾಹರಣೆಯಿದೆ (೨.೧೬೭): "ನ ಸ್ತೂಯಸೇ ನರೇಂದ್ರ ತ್ವಂ ದದಾಸೀತಿ ಕದಾಚನ । ಸ್ವಮೇವ ಮತ್ವಾ ಗೃಹ್ಣಂತಿ ಯತಸ್ತ್ವದ್ಧನಮರ್ಥಿನಃ ॥"

105. "Ah, the honorable man! We cannot get you to be praised as a donor. All your gold is already in the hands of needy people." Stated thus, the trope is called a "refutation based on a reason" (*hētvākṣēpa*).

This is similar to the example given by Daṇḍin (2.167): *na stūyasē narēndra tvaṁ dadāsīti kadācana / svamēva matvā gr̥hṇanti yatas tvaddhanam arthinaḥ //*

ವ್ಯತಿರೇಕವಿಕಲ್ಪಮಿದೆಂ
ದತಿಶಯಧವಳೋಪದೇಶಮಾರ್ಗಕ್ರಮದಿಂ
ದತಿನಿಪುಣರಱಿದುಕೊಳ್ಗನು
ಮಿತಿಯಿಂದಾಕ್ಷೇಪಮೆಂಬಳಂಕಾರಮುಮಂ ೧೦೬

ವ್ಯತಿರೇಕ ವಿಕಲ್ಪಮ್ ಇದು ಎಂದು ಅತಿಶಯ ಧವಳ ಉಪದೇಶ ಮಾರ್ಗ ಕ್ರಮದಿಂದೆ ಅತಿನಿಪುಣರ್ ಅಱಿದುಕೊಳ್ಗೆ ಅನುಮಿತಿಯಿಂದೆ ಆಕ್ಷೇಪಮ್ ಎಂಬ ಅಳಂಕಾರಮುಮನ್

ವ್ಯತಿರೇಕಾಲಂಕಾರದ ಪ್ರಭೇದವೇ ಈ ಆಕ್ಷೇಪಾಲಂಕಾರವೆಂದು ನೃಪತುಂಗನ ಉಪದೇಶಮಾರ್ಗಕ್ರಮದಿಂದ ಊಹಿಸಿ ವಿಬುಧರು ಅರಿತುಕೊಳ್ಳಬೇಕು.

ಉಪಮೇಯದಲ್ಲಿ ಉಪಮಾನಕ್ಕಿಂತ ಹೆಚ್ಚಿನ ವಿಶೇಷಾಂಶವನ್ನು ಗಮನಿಸಿ 'ಆಕ್ಷೇಪ' ಪ್ರವೃತ್ತವಾಗುತ್ತದೆ. 'ವ್ಯತಿರೇಕ' ವಿಧಿರೂಪವಾಗಿದ್ದರೆ 'ಆಕ್ಷೇಪ' ನಿಷೇಧ ರೂಪದಲ್ಲಿರುತ್ತದೆ.

106. Understanding that the trope of "refutation" (*ākṣēpa*) is a type of the trope "distinction" (*vyatirēka),* let scholars see the method of Nṛpatuṅga (*Atiśaya-dhavaḷa*).

೧೧. ಪ್ರತಿಪದಾರ್ಥತತ್ತ್ವಭೇದದೊಳ್
ಪ್ರತಿಷೇಧಮಂ ನೆಗಱ್ಗುಮನಿತೆ ಮಾಱ್ಕೆಯಿಂ
ದತಿಶಯಾಕ್ಷೇಪಗಣನಾವ್ಯತಿ
ಗತಿ ನೃಪತುಂಗದೇವಮಾರ್ಗದೊಳ್ ೧೦೭

ಪ್ರತಿಪದ ಅರ್ಥ ತತ್ತ್ವ ಭೇದದೊಳ್ ಪ್ರತಿಷೇಧಮನ್ ನೆಗಱ್ಗುಮ್ ಅನಿತೆ ಮಾಱ್ಕೆಯಿಂದೆ ಅತಿಶಯ ಆಕ್ಷೇಪ ಗಣನಾ ವ್ಯತಿಗತಿ ನೃಪತುಂಗದೇವ ಮಾರ್ಗದೊಳ್

ನೃಪತುಂಗ ದೇವನ ಮಾರ್ಗದಂತೆ ಉಕ್ತವಾದ ಪ್ರತಿಯೊಂದು ಪದಾರ್ಥದ ವಿಷಯದಲ್ಲಿ ಯಾವದಾದರೊಂದು ಅಂಶದ ನಿಷೇಧವೇ ಆಕ್ಷೇಪದ ಎಲ್ಲಾ ಪ್ರಕಾರಗಳಲ್ಲೂ ಕಂಡುಬರುತ್ತದೆ.

107. According to Nṛpatuṅga's reckoning, in every expression of "refutation", there is some kind of denial.

ಶ್ಲೇಷ

Fusion of Two or More Meanings *(ślēṣa)*

ನಾನಾರ್ಥಮೇಕರೂಪಾ
ಧೀನವಚೋರಚಿತಮಪ್ಪೊಡಕ್ಕುಂ ಶ್ಲೇಷಂ
ಮಾನಿತಮಳಂಕ್ರಿಯಾನುವಿ
ಧಾನಂ ಮತ್ತಿಂತು ತದುಪಲಕ್ಷ್ಯವಿಕಲ್ಪಂ ೧೦೮

ನಾನಾರ್ಥಮ್ ಏಕ ರೂಪ ಅಧೀನ ವಚೋರಚಿತಮಪ್ಪೊಡೆ ಅಕ್ಕುಮ್ ಶ್ಲೇಷಮ್ ಮಾನಿತಮ್ ಅಳಂಕ್ರಿಯಾನುವಿಧಾನಮ್ ಮತ್ತೆ ಇಂತು ತತ್ ಉಪಲಕ್ಷ್ಯ ವಿಕಲ್ಪಮ್

ಏಕರೂಪಾನ್ವಿತವಾದ ಶಬ್ದಕ್ಕೆ ನಾನಾರ್ಥಗಳಿದ್ದರೆ ಅದು 'ಶ್ಲೇಷ' ಆಗುತ್ತದೆ. ಇದರ ಪ್ರಭೇದಗಳು ಹೀಗಿರುತ್ತವೆ.

ಶ್ಲಿಷ್ಟವನ್ನು ಕುರಿತು ಹೀಗೆ ಲಕ್ಷಣ ಹೇಳಿದ್ದಾನೆ (೨.೩೧೦) : "ಶ್ಲಿಷ್ಟಮಿಷ್ಟ ಮನೇಕಾರ್ಥಮೇಕರೂಪಾನ್ವಿತಂ ವಚಃ । ತದಭಿನ್ನಪದಂ ಭಿನ್ನಪದಪ್ರಾಯಮಿತಿ ದ್ವಿಧಾ ॥"

108. When there is a *fusion* of two or more meanings (*ślēṣa*), it is the famous *ślēṣālaṅkāra.* Different types of this trope follow.

One can compare the definition given here with Daṇḍin's (2.310): *śliṣṭamiṣṭamanēkārthamēkarūpānvitaṁ vacaḥ.*

ಉದಯಾರೂಢಂ ಕಾಂತ್ಯಾ
ಸ್ಪದನನುರಕ್ತಾತ್ಮಮಂಡಳಂ ಕುಮುದಕರಂ

ಮೃದುತರಕರಂಗಳಿಂದತಿ
ಮುದಮಂ ಲೋಕಕ್ಕೆ ಪಡೆಗುಮಿಂತೀ ರಾಜಂ ೧೦೯

ಉದಯ ಆರೂಢನ್ ಕಾಂತಿ ಆಸ್ಪದನ್ ಅನುರಕ್ತ ಆತ್ಮ ಮಂಡಳನ್ ಕುಮುದಕರನ್ ಮೃದುತರಕರಗಳಿಂದೆ ಲೋಕಕ್ಕೆ ಪಡೆಗುಮ್ ಇಂತು ಈ ರಾಜನ್

"ಉದಯಾರೂಢನು, ಕಾಂತಿಗೆ ಆಶ್ರಯನು, ಅನುರಕ್ತ ಆತ್ಮ ಮಂಡಲನು ಕುಮುದಕರನು ಮೃದುತರಕರಂಗಳಿಂದ ಲೋಕಕ್ಕೆ ಹರ್ಷಾತಿಶಯವನ್ನು ಉಂಟುಮಾಡುವನು."

ರಾಜ ಎಂದರೆ ಚಂದ್ರ ಅಥವಾ ಅರಸ. ಉದಯಾಚಲವನ್ನೇರಿದವನು, ಕಾಂತಿಗೆ ಆಶ್ರಯನು, ಕೆಂಪಾದ ಬಿಂಬವುಳ್ಳವನು, ಕನ್ನೈದಿಲೆಗಳನ್ನು ಅರಳಿಸುವವನು ಚಂದ್ರ. ಅತಿಶಯವಾದ ಅಭ್ಯುದಯವುಳ್ಳವನು, ಕಾಂತಿಯುತನು, ಮಾಂಡಲಿಕ ರಾದ ರಾಜರ ಅನುರಾಗಕ್ಕೆ ಪಾತ್ರನಾದವನು, ಭೂಮಿಗೆ ಸಂತೋಷವುಂಟು ಮಾಡುವವನು, ಕಡಮೆ ತೆರಿಗೆ (ಕರ)ಗಳನ್ನು ಹಾಕುವವನು ಅರಸ. ಈ ಉದಾಹರಣೆಯ ಮೂಲ ದಂಡಿಯ ಶ್ಲೋಕ (೨.೩೧೧): "ಅಸಾವುದಯ ಮಾರೂಢಃ ಕಾಂತಿಮಾನ್ ರಕ್ತಮಂಡಲಃ । ರಾಜಾ ಹರತಿ ಲೋಕಸ್ಯ ಹೃದಯಂ ಮೃದುಭಿಃ ಕರೈಃ ॥"

109. "The Moon rises, shines, has a red orb, pleases lilies, and makes the world happy with its soft rays."

Rāja (the Moon) also means "king." All the attributes to the Moon, therefore, also apply to the king. The words used for the Moon also carry another meaning that makes other interpretations possible. Thus, both the Moon and the king rise = *udayārūḍha*; both are *kāntyāspada* =a source of brightness; *anurakta-manḍala* =having a red orb (the Moon) or one who has devoted chieftains (the king); *kumudakara* = pleases lilies (the Moon), pleases the world (the king). The example from Daṇḍin (2.311) is the source

for Śrīvijaya: *asāvudayamārūḍhaḥ kāntimān rakta-maṇḍalaḥ / rājā harati lōkasya hṛdayaṁ mṛdubhiḥ karaiḥ.* The only difference is that Daṇḍin calls the trope a "fusion of two or more meanings that is based on the same words" (*abhinnapada-ślēṣa*).

ವಿಪುಳತರಕಟಕನುದ್ಯ
ದ್ದ್ವಿಪಹರಿಮಹಿಷೀನಿಷೇವ್ಯನುನ್ನತಪಾದಂ
ವ್ಯುಪನೀತಶ್ರೀಫಲದಂ
ವಿಪರೀತಕನಪ್ಪನಂತು ಭೂಭೃನ್ನಾಥಂ ೧೧೦

ವಿಪುಳತರ ಕಟಕನ್ ಉದ್ಯತ್ ದ್ವಿಪ ಹರಿ ಮಹಿಷೀ ನಿಷೇವ್ಯನ್ ಉನ್ನತ ಪಾದನ್ ವ್ಯುಪನೀತ ಶ್ರೀಫಲದನ್ ವಿಪರೀತಕನಪ್ಪನ್ ಅಂತು ಭೂಭೃತ್ ನಾಥನ್

"ಭೂಭೃನ್ನಾಥನು(ರಾಜನು; ಪರ್ವತರಾಜನು) ವಿಪುಲತರ ಕಟಕನು (ವಿಶಾಲವಾದ ರಾಜಧಾನಿಯುಳ್ಳವನು; ವಿಶಾಲವಾದ ಪಾರ್ಶ್ವವುಳ್ಳವನು), ದ್ವಿಪಹರಿಮಹಿಷೀನಿಷೇವ್ಯನು (ಆನೆ, ಕುದುರೆ, ರಾಣಿ– ಇವರಿಂದ ಸಂಸೇವ್ಯನು; ಆನೆ, ಸಿಂಹ ಮತ್ತು ಎಮ್ಮೆ ಇರುವವನು, ಉನ್ನತಪದನು (ಉನ್ನತವಾದ ಪದವಿಯುಳ್ಳವನು; ಎತ್ತರವಾದ ತಪ್ಪಲು ಪ್ರದೇಶ ಉಳ್ಳವನು), ವ್ಯುಪನೀತ ಶ್ರೀಫಲದನು (ತನ್ನ ಸಿರಿಯನ್ನು ದಾನಮಾಡು ವವನು; ಬಿಲ್ವ ಫಲವನ್ನುಳ್ಳವನು), ವಿಪರೀತಕನು (ಶತ್ರುಗಳಿಗೆ ಪ್ರಚಂಡನು; ಹಕ್ಕಿಗಳಿಂದ ಕೂಡಿದವನು)"

ಇದು ಅರಸನಿಗೆ ಮತ್ತು ಪರ್ವತ ರಾಜನಿಗೆ ಅನ್ವಯವಾಗುವಂತೆ ಹೇಳಿದ ಶ್ಲೇಷ.

110. "This king/mountain who holds the earth (*bhūbṛnnātha*) has a big capital city/a wide frame (*vipula-kaṭaka*). The king/mountain is served by elephants, horses, and the queen/ buffaloes (*dvīpa-hari-mahiṣī-saṁsēvyan*). The king/mountain has a great position/an elevated hillside (*unnata-pādaṁ*). The king/mountain donates all

the wealth he acquires/ gives forth the Bilva fruit other mountains do not (*vyapanīta-śrī-phaladaṁ*). The king/mountain surpasses his enemies/is filled with birds (*viparītan*).”

Here there is a fusion of meanings associated with both the king and the lord of mountains (*bhūbṛnnātha*).

ನೆರೆದ ವಿಸಂವಾದಂ ಪಂ
ಜರಶುಕತತಿಯೊಳ್ ಕುಲಾಲಗೇಹಂಗಳೊಳಂ
ಪರಚಕ್ರಭ್ರಾಂತಿಗಳ
ಧ್ವರದೊಳೆ ನೆಗಟ್ದುಂ ಮಹಾಹವಧ್ವನಿ ನಿಯತಂ ೧೧೧

ನೆರೆದ ವಿಸಂವಾದಮ್ ಪಂಜರ ಶುಕತತಿಯೊಳ್ ಕುಲಾಲ ಗೇಹಂಗಳೊಳಮ್ ಪರ ಚಕ್ರ ಭ್ರಾಂತಿಗಳ್ ಅಧ್ವರದೊಳೆ ನೆಗಟ್ದುಮ್ ಮಹಾಹವ ಧ್ವನಿ ನಿಯತಮ್

“ವಿಸಂವಾದಮ್ (ಹಕ್ಕಿಗಳ ಧ್ವನಿ) ಪಂಜರದ ಗಿಳಿಗಳಲ್ಲಿ ಇದೆ. ಪರಚಕ್ರಭ್ರಾಂತಿ (ಚಕ್ರಸುತ್ತುವಿಕೆ) ಕುಂಬಾರರ ಮನೆಗಳಲ್ಲಿದೆ. ಮಹಾಹವ ಧ್ವನಿ (ಆಹವ ಎಂದರೆ ಯುದ್ಧ, ಹವ ಎಂದರೆ ಹವನ ಅಥವಾ ಯಾಗ) ಯಾಗಗಳಲ್ಲಿ ಮಾತ್ರ ಇದೆ.”

‘ವಿಸಂವಾದ’ ಎಂದರೆ ಅಸಾಂಗತ್ಯ ಎಂಬ ಅರ್ಥವಿದೆ. ‘ಪರಚಕ್ರ ಭ್ರಾಂತಿ’ ಎಂದರೆ ಶತ್ರುಬಲದ ಭ್ರಾಂತಿ ಎಂದು ಕೂಡ ಅರ್ಥ. ‘ಮಹಾಹವ’ ಎಂದರೂ ಯುದ್ಧ ಮತ್ತು ಯಾಗ ಎಂಬ ಅರ್ಥಗಳಿವೆ.

111. “The sound of birds (*visaṁvāda)* is heard only in the parrot cages. The sound is not there (*visaṁvāda*) in any other houses. The rotation of the wheel *(paracakra-bhrānti)* is found in the potter’s house. Invasion from the enemy is only an illusion *(paracakra-bhrānti)*. The sound from ritual sacrifices (*mahā-hava-dhvani*) is heard.”

Here there is a "fusion of meanings conditionally restricted by the context" (*niyama-ślēṣa*).

See also Daṇḍin (2.319). This trope is also called "restrictive prohibition" (*parisaṅkhyā*).

ಅರಿಗೋತ್ರಭೇದಿ ವಿಬುಧೇ
ಶ್ವರನಲ್ಲಂ ಧೃತಕಳಾಕಳಾಪಂ ದೋಷಾ
ಕರನಲ್ಲಂ ವಿದಿತೋಮಾ
ವರನಾತ್ತ ಭುಜಂಗನಲ್ಲನೀ ಭೂಪಾಳಂ ೧೧೨

ಅರಿಗೋತ್ರ ಭೇದಿ ವಿಬುಧೇಶ್ವರನ್ ಅಲ್ಲಮ್ ಧೃತಕಳಾ ಕಳಾಪಮ್ ದೋಷಾಕರನ್ ಅಲ್ಲಮ್ ವಿದಿತ ಉಮಾವರನಾತ್ತ ಭುಜಂಗನ್ ಅಲ್ಲಮ್ ಈ ಭೂಪಾಳನ್

"ಈ ರಾಜ ಅರಿಗೋತ್ರಭೇದಿ (ಪರ್ವತಗಳನ್ನು ಭೇದಿಸುವವನು; ಶತ್ರುಗಳನ್ನು ನಾಶಮಾಡುವವನು), ಆದರೆ ಇಂದ್ರನಲ್ಲ. ಇವನು ಧೃತಕಳಾ ಕಳಾಪನು (ಒಳ್ಳೆಯ ಕಲಾಕಲಾಪವುಳ್ಳವನು, ಕಾಂತಿಯಿಂದ ಕೂಡಿದವನು), ಆದರೆ ದೋಷಾಕರನಾದ ಚಂದ್ರನಲ್ಲ. ಉಮೆಯ ವರನು (ಶಿವನು, ಕೀರ್ತಿವನಿತೆಯ ಪತಿ) ಆದರೆ ಶಿವನಲ್ಲ."

112. "This king breaks his enemy's clan/mountain (*gōtra* or the *gōtra* mountain), but he is not the lord of gods (*vibudhēśvara).* He is an expert in arts (*kalālalāpa*), but not the one who has any blemishes (*dōṣākara*). He is the husband of Umā, the lord of Lady Fame (*umāpati).*"

ವರರೂಪಕಾದ್ಯಳಂಕಾ
ರರಚನೆಯೊಳ್ ಮುನ್ನೆ ಪೇೞ್ದು ಬಂದೆಂ ಕೆಲವಂ
ದೊರೆಕೊಳೆ ಬಗೆಗೀ ತೆಱದಿಂ
ನಿರಂತರವಿರುದ್ಧನಿಯಮಿತಶ್ಲೇಷೆಗಳಂ ೧೧೩

ವರ ರೂಪಕಾದಿ ಅಳಂಕಾರ ರಚನೆಯೊಳ್ ಮುನ್ನೆ ಪೇೞ್ದು ಬಂದೆನ್ ಕೆಲವನ್ ದೊರೆಕೊಳೆ ಬಗೆಗೆ ಈ ತೆಱದಿನ್ ನಿರಂತರ ವಿರುದ್ಧ ನಿಯಮಿತ ಶ್ಲೇಷೆಗಳನ್

ವರ ರೂಪಕಾದಿ ಅಲಂಕಾರ ರಚನೆಯನ್ನು ಕುರಿತು ಹೇಳುವಾಗ (ಶ್ಲೇಷೆಯ) ಕೆಲವನ್ನು ಹೇಳಿದ್ದೆನು. ಇಲ್ಲಿ ಕೊಟ್ಟ ಲಕ್ಷ್ಯಗಳನ್ನು, ವಿರುದ್ಧ ಮತ್ತು ನಿಯಮಿತ ಶ್ಲೇಷೆಗಳನ್ನು ಇದೇ ರೀತಿ ಅರಿಯಬೇಕು.

113. I have spoken above about some figures of speech, like metaphor (*rūpaka*), and similarly, types of *ślēṣa*, such as the kind that gives contradictory (*viruddha*) and conditionally restrictive (*niyama*) meanings.

ಉತ್ಪ್ರೇಕ್ಷೆ
Imaginary Ascription (*utprēkṣe*)

ತಱಿಸಂದು ಪಲವು ತೆಱದಿಂ
ತೆಱೆದಿರೆ ನೆಗೞ್ದಿರ್ದುದೊಂದು ವಸ್ತುಸ್ಥಿತಿಯಂ
ಮಱಸಿ ಪೆಱತೊಂದು ಮಾೞ್ಕೆಯಿ
ನಱಿಪುವುದುತ್ಪ್ರೇಕ್ಷೆಯೆಂಬುದಿಂತದಱ ತೆಱಂ ೧೧೪

ತಱಿಸಂದು ಪಲವು ತೆಱದಿನ್ ತೆಱೆದಿರೆ ನೆಗೞ್ದಿರ್ದುದು ಒಂದು ವಸ್ತುಸ್ಥಿತಿಯನ್ ಮಱಸಿ ಪೆಱತು ಒಂದು ಮಾೞ್ಕೆಯಿನ್ ಅಱಿಪುವುದು ಉತ್ಪ್ರೇಕ್ಷೆ ಎಂಬುದು ಇಂತು ಅದಱ ತೆಱನ್

ವಸ್ತು ಸ್ಥಿತಿ ನಾನಾಬಗೆಯಿಂದ ಬೇರೆ ಬೇರೆಯಾಗಿದ್ದರೂ ಅದನ್ನು ಮರೆಮಾಚಿ ಮತ್ತೊಂದೇ ಎಂದು ಕಲ್ಪಿಸಿ ಹೇಳುವುದು 'ಉತ್ಪ್ರೇಕ್ಷೆ' ಎಂಬ ಅಲಂಕಾರ. ಅದರ ಪರಿಗಳು ಈ ರೀತಿ ಇವೆ.

ದಂಡಿಯ ಲಕ್ಷಣ ಹೀಗಿದೆ (೨.೨೨೧) : "ಅನ್ಯಥೈವ ಸ್ಥಿತಾ ವೃತ್ತಿ ಶ್ಚೇತನಸ್ಯೇತರಸ್ಯ ವಾ । ಅನ್ಯಥೋತ್ಪ್ರೇಕ್ಷ್ಯತೇ ಯತ್ರ ತಾಮುತ್ಪ್ರೇಕ್ಷಾಂ ವಿದುರ್ಯಥಾ ॥"

114. To conceal a fact of reality and then to imagine it differently is referred to as an "imaginary" ascription (*utprēkṣe*). Below are examples.

This definition closely follows *Kāvyādarśa* 2.221.

ನಡುವಗಲ ಬಿಸಿಲ್ ತನ್ನಂ
ಸುಡೆ ವನಕರಿ ಕಮಳಬಂಧುವೊಳ್ ದಿನಕರನೊಳ್
ಕಡುಗಾಯ್ಪಿನೆ ಸರಸಿಜಮಂ
ಕಿಡಿಸಲ್ ತಾಂ ಪೊಕ್ಕುದಾಗ ಬಗೆದಾ ಕೊಳನಂ ೧೧೫

ನಡುವಗಲ ಬಿಸಿಲ್ ತನ್ನನ್ ಸುಡೆ ವನಕರಿ ಕಮಳ ಬಂಧುವೊಳ್ ದಿನಕರನೊಳ್ ಕಡುಗಾಯ್ಪಿನೆ ಸರಸಿಜಮನ್ ಕಿಡಿಸಲ್ ತಾನ್ ಪೊಕ್ಕುದಾಗ ಬಗೆದು ಆ ಕೊಳನನ್

"ನಡುಹಗಲಿನ ಬಿಸಿಲು ತನ್ನನ್ನು ಸುಡಲು ಕಾಡಾನೆಯು ಕಮಲಬಂಧುವಾದ ಸೂರ್ಯನ ಮೇಲೆ ತುಂಬಾ ದ್ವೇಷ ತಾಳಿ ಕಮಲವನ್ನು ನಾಶಮಾಡಲೋ ಎನ್ನುವಂತೆ ಕೊಳವನ್ನು ಹೊಕ್ಕಿತು."

ಆನೆ ನೀರು ಕುಡಿಯಲು ಕೊಳವನ್ನು ಹೊಕ್ಕಿದ್ದು ವಸ್ತುಸ್ಥಿತಿ. ಅದು ಕಲ್ಪನೆಯಲ್ಲಿ ಒಂದು ಊಹೆಯಾಗಿ ಮೂಡಿಬಂದಿದೆ. ಇದನ್ನು ಇದೇ ರೀತಿಯ ಉದಾಹರಣೆಯಿಂದ ಮತ್ತು ವಿವರಣೆಯಿಂದ ದಂಡಿ ಸ್ಪಷ್ಟಪಡಿಸಿದ್ದಾನೆ (೨.೨೨೨, ೨೨೩): "ಮಧ್ಯಂದಿನಾರ್ಕಸಂತಪ್ತಃ ಸರಸೀಂ ಗಾಹತೇ ಗಜಃ । ಮನ್ಯೇಮಾರ್ತಂಡಗೃಹ್ಯಾಣಿ ಪದ್ಮಾನ್ಯುದ್ಧರ್ತುಮುದ್ಯತಃ ॥", "ಸ್ನಾತುಂ ಪಾತುಂ ಬಿಸಾನ್ಯತ್ತುಂ ಕರಿಣೋಜಲಗಾಹನಮ್ । ತದ್ವೈರನಿಷ್ಕ್ರಯಾಯೇತಿ ಕವಿನೋತ್ಪ್ರೇಕ್ಷ್ಯ ವರ್ಣ್ಯತೇ ।"

115. "Having been burnt by the hot midday sun, the wild elephant was excessively hostile toward the "friend of the lotus" (*kamala-bandhu*) [i.e. the Sun]. The elephant thus entered the pond as though to destroy the lotuses."

As it is imagined that the elephant entered the pond to destroy lotuses, the trope is *utprēkṣā.* Daṇḍin gives the same example and explains it by saying that an elephant generally enters a pond to wash itself, to drink water, and to eat lotus stalks. But, the imagination is different. Daṇḍiṇ (2.222, 2.223): *madhyaṁdinārka-saṁtaptaḥ sarasīṁ gāhatē gajaḥ / manyēmārtaṇḍagṛhyāṇi padmān-yuddhartumudyataḥ // snātuṁ pātuṁ bisānyattuṁ kariṇō jala-gāhanam / tadvaira-niṣkrayāyēti kavinōtprēkṣya varṇyatē //*

ನೆಲಸಿ ಕಿವಿಯೊಳ್ ಮದಾಯತ
ವಿಲೋಕದೊಳ್ ಪೊಳೆವುದೊಳ್ಪಿನೆಂದೀ ಕರ್ಣೋ
ತ್ಪಲಮುಮನಾಕ್ರಮಿಸುವುದಿದು
ವಿಲಾಸಿನೀ ನಿನ್ನ ಲೋಲಲೋಚನಯುಗಳಂ ೧೧೬

ನೆಲಸಿ ಕಿವಿಯೊಳ್ ಮದಾಯತ ವಿಲೋಕದೊಳ್ ಪೊಳೆವುದು ಒಳ್ಪಿನ್ ಎಂದು ಈ ಕರ್ಣೋತ್ಪಲಮುಮನ್ ಆಕ್ರಮಿಸುವುದು ಇದು ವಿಲಾಸಿನೀ ನಿನ್ನ ಲೋಲ ಲೋಚನಯುಗಳಮ್

"ಕಿವಿಯಲ್ಲಿ ನೆಲಸಿ ನನ್ನ ದೀರ್ಘ ಕಟಾಕ್ಷದ ಸೊಬಗನ್ನೇ ತಾನೂ ತಳೆದಿದೆ ಎಂಬ ಭಾವನೆಯಿಂದಲೋ ಏನೋ ನಿನ್ನ ಚಂಚಲನೇತ್ರದ್ವಯವು ಕಿವಿಯಲ್ಲಿರುವ ಕನ್ನೈದಿಲೆಯನ್ನು ಆಕ್ರಮಿಸುತ್ತಿದೆ."

ಅಚೇತನಗತವಾದ ಉತ್ಪ್ರೇಕ್ಷೆಗೆ ಉದಾಹರಣೆಯಾಗಿ ದಂಡಿ ಇದೇ ರೀತಿಯ ಉದಾಹರಣೆಯನ್ನು ಕೊಟ್ಟಿದ್ದಾನೆ (೨.೨೨೪): "ಕರ್ಣಸ್ಯ ಭೂಷಣಮಿದಂ ಮಮಾಯತಿ ವಿರೋಧಿನಃ । ಇತಿ ಕರ್ಣೋತ್ಪಲಂ ಪ್ರಾಯಸ್ತವ ದೃಷ್ಟ್ಯಾ ವಿಲಂಘ್ಯತೇ ॥"

116. "Oh graceful lady! As it has the same beauty as your large eyes, it is as if your darting looks envy the lily, which is placed on your ear."

Here the imaginative element is that a woman's large (and moving) eyes are attacking, as it were, the decorative lily placed on top of the ear.

ಸೂಕ್ಷ್ಮ
Subtlety (*sūkṣma*)

ಬಗೆದಿಂಗಿತಚೇಷ್ಟಾಕಾ
ರಗತಂಗಳಿನಂತರಂಗದೊಳ್ ಮಱಸಿದುದಂ
ಮಿಗೆ ಸೂಚಿಸುವುದು ಸೂಕ್ಷ್ಮಾ
ನುಗತಳಂಕಾರಮಿಂತು ತದುದಾಹರಣಂ ೧೧೭

ಬಗೆದು ಇಂಗಿತ ಚೇಷ್ಟಾಕಾರ ಗತಂಗಳಿನ್ ಅಂತರಂಗದೊಳ್ ಮಱಸಿ-ದುದನ್ ಮಿಗೆ ಸೂಚಿಸುವುದು ಸೂಕ್ಷ್ಮ ಅನುಗತ ಅಳಂಕಾರಮ್ ಇಂತು ತತ್ ಉದಾಹರಣಮ್

ಅಂತರಂಗದಲ್ಲಿ ಗುಪ್ತವಾಗಿಟ್ಟ ವಿಷಯವನ್ನು ಇಂಗಿತವನ್ನು ಪ್ರಕಟಿಸುವ ಸನ್ನೆ ಮುಂತಾದವುಗಳಿಂದ ಸೂಚಿಸುವುದು 'ಸೂಕ್ಷ್ಮ' ಎಂಬ ಅಲಂಕಾರ. ಅದರ ಉದಾಹರಣೆ ಈ ರೀತಿಯಿದೆ.

ಇಲ್ಲಿಯ ಲಕ್ಷಣಕ್ಕೆ ಮೂಲ ದಂಡಿಯ ಶ್ಲೋಕ (೨.೨೬೦) : "ಇಂಗಿತಾಕಾರ ಲಕ್ಷ್ಯೋರ್ಥಃ ಸೌಕ್ಷ್ಮ್ಯಾತ್ ಸೂಕ್ಷ್ಮ ಇತಿ ಸ್ಮೃತಃ."

117. Expressing what is hidden in one's mind through physical movements, gestures etc., is called the "trope of subtlety" (*sūkṣmālaṅkāra*). The following is an example.

Daṇḍin also defines *sūkṣma* in a similar way (2.260): *iṅgitākāra-lakṣyōrthaḥ saukṣmyāt sūkṣma iti smṛtaḥ.*

ತಿಳಿಪಲಡಿಗೆಱಗಿದೋಪನ
ತಳಂಗಳಾ ತೀಟದಿಂ ಪದಂಗಳೊಳೊಗೆದಾ

ಪುಳಕಚಯಂಗಳ್ ಕಳೆದುವು
ಮುಳಿಸಂ ನಲ್ಲಳ್ಗೆ ಬೆಳ್ಕೊಗಂಗೆಯ್ದಿರೆಯುಂ ೧೧೮

ತಿಳಿಪಲ್ ಅಡಿಗೆ ಎಱಗಿದ ಓಪನ ತಳಂಗಳಾ ತೀಟದಿನ್ ಪದಂಗಳೊಳ್ ಒಗೆದ ಆ ಪುಳಕಚಯಂಗಳ್ ಕಳೆದುವು ಮುಳಿಸನ್ ನಲ್ಲಳ್ಗೆ ಬೆಳ್ಕೊಗಂಗೈದು ಇರೆಯುಮ್

"ಸಮಾಧಾನಪಡಿಸಲು ನಲ್ಲನು ಅವಳ ಕಾಲಿಗೆರಗಲು ತನ್ನ ಅಂಗೈಯನ್ನು ಸೋಂಕಿಸಿದ ಕೂಡಲೇ ಅವಳು ಬಿಳಿಚಿಕೊಂಡ ಮುಖದಿಂದ ಕೋಪವನ್ನು ನಟಿಸುತ್ತಿದ್ದರೂ ಅವಳ ಕಾಲಿನಲ್ಲಿ ಮೂಡಿದ ರೋಮಾಂಚನವು ಅವಳ ಕೋಪವಿಳಿಯಿತೆಂಬುದನ್ನು ಸೂಚಿಸುತ್ತಿತ್ತು."

ಪ್ರಣಯಕೋಪವನ್ನು ಶಮನಗೊಳಿಸಲು ಕಾಲು ಹಿಡಿದ ನಲ್ಲನ ಮೇಲೆ ಕೋಪವನ್ನು ನಟಿಸುತ್ತಿದ್ದರೂ ಅವಳ ರೋಮಾಂಚ ಪ್ರೇಮವನ್ನು ಸೂಚಿಸುತ್ತಿತ್ತು ಎಂಬುದು ಸೂಕ್ಷ್ಮ.

118. "As soon as he touched the feet of his beloved to console her, she acted as though she was angry at him. But, the bristling of the hair on her leg revealed that her anger was on the descent."

ಪರುಷಾಳಾಪಮುಮತಿನಿ
ಷ್ಠುರವೀಕ್ಷಣಮುಖವಿಕಾರಮುಂ ಮಱಸಿರೆಯುಂ
ತರಳಾಪಾಂಗಮುಮಾಕೆಯ
ದರಹಸಿತಮುಮಱಿಯೆ ಪೇೞ್ಗುಮೆಱಕಮನೆರ್ದೆಯೊಳ್ ೧೧೯

ಪರುಷ ಆಳಾಪಮುಮ್ ಅತಿ ನಿಷ್ಠುರ ವೀಕ್ಷಣ ಮುಖ ವಿಕಾರಮುಮ್ ಮಱಸಿರೆಯುಮ್ ತರಳ ಅಪಾಂಗಮುಮ್ ಆಕೆಯ ದರಹಸಿತಮುಮ್ ಅಱಿಯೆ ಪೇೞ್ಗುಮ್ ಎಱಕಮನ್ ಎರ್ದೆಯೊಳ್

"ಆಕೆಯ ಪರುಷವಾದ ಮಾತು, ಅತಿ ನಿಷ್ಠುರವಾದ ನೋಟ, ಮುಖದ ವಿಕಾರ ಮರೆಸುತ್ತಿದ್ದರೂ ಅವಳ ಕಿರುನಗೆ ಗಾಢಪ್ರೇಮವನ್ನು ಪ್ರಕಟಿಸುತ್ತಿದೆ."

119. "Though she tried to hide her true feelings with harsh words, cruel looks, and an agitated face, her darting looks and her smile reveal her profound love."

ವಿಶೇಷ

Distinction As Insufficiency (*viśēṣa*)

ಗುಣಜಾತ್ಯಾದಿಗಳೊಳಗನು
ಗುಣಮಾಗಿರೆ ಪೇೞದವಱವಿಕಳತೆಯಂ ಸ
ಯ್ತೆಣಿಸಿ ವಿಶೇಷಮನಱಿಪುವ
ಗಣನೆ ವಿಶೇಷಾನುಭಾವಸದಳಂಕಾರಂ ೧೨೦

ಗುಣ ಜಾತಿ ಆದಿಗಳೊಳಗೆ ಅನುಗುಣಮಾಗಿ ಇರೆ ಪೇೞದೆ ಅವಱ ವಿಕಳತೆಯನ್ ಸಯ್ತು ಎಣಿಸಿ ವಿಶೇಷಮನ್ ಅಱಿಪುವ ಗಣನೆ ವಿಶೇಷ ಅನುಭಾವ ಸದಳಂಕಾರಮ್

ವಸ್ತುವಿನ ಗುಣ, ಜಾತಿ ಮುಂತಾದವುಗಳಲ್ಲಿ ಗುಣಪೂರ್ಣತೆಯನ್ನು ಹೇಳದೆ ಅವುಗಳಲ್ಲಿ ಕಾರಣ ವೈಕಲ್ಯವನ್ನು ಹೇಳಿ ವಿಶೇಷವನ್ನು ತಿಳಿಸುವುದು 'ವಿಶೇಷೋಕ್ತಿ'

ಇದಕ್ಕೆ ಮೂಲ ದಂಡಿಯ ಶ್ಲೋಕ (೨.೩೨೩): "ಗುಣಜಾತಿಕ್ರಿಯಾ ದೀನಾಂ ಯತ್ತು ವೈಕಲ್ಯದರ್ಶನಮ್। ವಿಶೇಷದರ್ಶನಾಯ್ಯೆವ ಸಾ ವಿಶೇಷೋಕ್ತಿರಿಷ್ಯತೇ ॥"

120. When one shows "distinction" (*viśēṣa*) without explicitly mentioning qualities suited to an object but instead showing the insufficiencies (*vaikalya*) of that object's qualities, nature, etc., the trope is known as *viśēṣōkti*.

The definition closely follows the *ślōka* of Daṇḍin (2.323): *guṇa-jāti-kriyādīnāṁ yattu vaikalya-darśanam / viśēṣa-darśanāyaiva sā viśēṣōktir iṣyatē//*

ಅಲರಂಬು ಕರ್ಬುವಿಲ್ ಕೋ
ಮಲಸರಸಿಜನಾಳತಂತು ತಿರು ಮತ್ತಿವಱ
ಬಲದಿನಗಲ್ದರನೆಚ್ಚಾ
ತ್ರಿಲೋಕಮಂ ಕಂತು ಬಸಕೆ ಬರಿಸುವನೆಂತುಂ ೧೨೧

ಅಲರ್ ಅಂಬು ಕರ್ಬು ವಿಲ್ ಕೋಮಲ ಸರಸಿಜ ನಾಳ ತಂತು ತಿರು ಮತ್ತೆ ಇವಱ ಬಲದಿನ್ ಅಗಲ್ದರನ್ ಎಚ್ಚು ಆ ತ್ರಿಲೋಕಮನ್ ಕಂತು ಬಸಕೆ ಬರಿಸುವನ್ ಎಂತುಮ್

"ಬಾಣ ಹೂವಿನದು, ಬಿಲ್ಲು ಕಬ್ಬಿನದು, ಹೆದೆ ಕೋಮಲವಾದ ತಾವರೆದಂಟಿನದು. ಇವುಗಳ ಬಲದಿಂದ ವಿರಹಿಗಳನ್ನು ಬಾಣದಿಂದ ಹೊಡೆದು ಮೂರು ಲೋಕಗಳನ್ನೂ ಮನ್ಮಥನು ವಶಪಡಿಸಿಕೊಳ್ಳುವನು."

ಗುಣವೈಕಲ್ಯವನ್ನು ಹೇಳಿ ವಿಶೇಷವನ್ನು ತಿಳಿಸಿರುವುದರಿಂದ 'ವಿಶೇಷೋಕ್ತಿ'. ದಂಡಿಯ ಮೂಲ ಹೀಗಿದೆ (೨.೩೨೪): "ನ ಕಠೋರಂ ನ ವಾ ತೀಕ್ಷ್ಣ ಮಾಯುಧಃ ಪುಷ್ಪಧನ್ವನಃ।ತಥಾಪಿ ಜಿತಮೇವಾಸೀದಮುನಾ ಭುವನತ್ರಯಮ್ ॥"

121. "His arrow is a flower, the bow is sugarcane, and the bow-string is the lotus stalk. This is the strength of the god of love to win over separated lovers and to conquer the three worlds."

Here the insufficiencies of the god of love are mentioned to highlight to show his distinctive powers. Śrīvijaya follows Daṇḍin in this example (2.324): *na kaṭhōraṁ na vā tīkṣṇamāyudhaṁ puṣpa-dhanvanaḥ / tathāpi jitamēvā-sīdamunā bhuvana-trayam //*

ಸ್ಫುರಿಯಿಸದೆ ದಶನವಸನಾಂ
ತರಮಾರಕ್ತಮಾಗದೆನಸುಂ ಕಣ್ಗಳ್
ಭರಿತಭ್ರೂಕುಟಿಕಲಮಾ
ಗಿರದೆ ಮುಖಂ ಗೆಲ್ದನಿಂತುವರಿನೃಪಬಲಮಂ ೧೨೨

ಸ್ಫುರಿಯಿಸದೆ ದಶನ ವಸನಾಂತರಮ್ ಆರಕ್ತಮ್ ಆಗದೆ ಎನಸುಮ್ ಕಣ್ಗಳ್ ಭರಿತ ಭ್ರೂಕುಟಿ ಕಲಮಾಗಿರದೆ ಮುಖಮ್ ಗೆಲ್ದನ್ ಇಂತು ಅರಿ ನೃಪ ಬಲಮನ್

"ತುಟಿಗಳನ್ನು ಅದಿರಿಸದೆ, ಕಣ್ಣುಗಳನ್ನು ಕೆಂಪಾಗಿಸದೆ, ಮುಖದಲ್ಲಿ ಹುಬ್ಬು ಗಂಟಿಕ್ಕದೆ ಅವನು ಶತ್ರುರಾಜ ಸೈನ್ಯವನ್ನೆಲ್ಲ ಗೆದ್ದನು."

ಇಲ್ಲಿ ಕ್ರಿಯಾವೈಕಲ್ಯವಿದ್ದರೂ ಗೆದ್ದಿರುವುದು ವಿಶೇಷ. ಇದು ದಂಡಿಯ ಲಕ್ಷ್ಯಶ್ಲೋಕದ ಅನುವಾದ (೨.೩೨೬) : "ನ ಬದ್ಧಾ ಭ್ರುಕುಟಿರ್ನಾಪಿ ಸ್ಫುರಿತೋ ದಶನಚ್ಛದಃ । ನ ಚ ರಕ್ತಾಭವದ್ ದೃಷ್ಟಿರ್ಜಿತಂ ಚ ದ್ವಿಷತಾಂ ಕುಲಮ್ ॥"

122. "With no trembling of the lips, no redness in the eyes, and no eyebrow-knots on the face, he defeated his enemies."

Here the insufficiencies in the hero's action are mentioned to demonstrate his valor. The verse is apparently a translation of Daṇḍin's example (2.326): *na baddhā bhrukuṭirnāpi sphuritō daśanacchadaḥ / na ca raktā bhavad dṛṣṭirjitaṁ ca dviṣatāṁ kulam //*

ಸಮಾಹಿತ

Something Obtained Adventitiously *(samāhita)*

ಪರವಸದ ಬಗೆಯೊಳೊಂದಂ
ದೊರೆಕೊಳಿಸುವುದಱಿಗತರ್ಕಿತೋಪಸ್ಥಾನಂ
ನಿರುತಂ ಸಮಾಹಿತಾಳಂ
ಕರಣಾಂತರಮಕ್ಕುಮಿಂತು ತದುದಾಹರಣಂ ೧೨೩

ಪರವಸದ ಬಗೆಯೊಳ್ ಒಂದನ್ ದೊರೆಕೊಳಿಸುವುದು ಅಱಿಗೆ ಅತರ್ಕಿತ ಉಪಸ್ಥಾನಮ್ ನಿರುತಮ್ ಸಮಾಹಿತ ಅಳಂಕರಣ ಅಂತರಮ್ ಅಕ್ಕುಮ್ ಇಂತು ತತ್ ಉದಾಹರಣಮ್

ಬಗೆದ ಯಾವದಾದರೂ ಕಾರ್ಯ ದೈವವಶದಿಂದ ಅನಿರೀಕ್ಷಿತವಾಗಿ ಒದಗಿ ಬಂದಂತೆ ವರ್ಣಿಸುವುದು 'ಸಮಾಹಿತ'. ಅದರ ಉದಾಹರಣೆ ಹೀಗಿದೆ.

ಇಲ್ಲಿಯ ಲಕ್ಷಣಕ್ಕೆ ಮೂಲವಾದ ದಂಡಿಯ ಶ್ಲೋಕ ಹೀಗಿದೆ (೨.೨೯೮):
"ಕಿಂಚಿದಾರಭಮಾಣಸ್ಯ ಕಾರ್ಯಂ ದೈವವಶಾತ್ ಪುನಃ । ತತ್ಸಾಧನಸಮಾಪತ್ತಿರ್ಯಾ ತದಾಹುಃ ಸಮಾಹಿತಮ್ ॥"

123. A trope that presents something as "adventitious" (*samāhita*) – happening unexpectedly or suddenly or by chance – is called *samāhita.* The following is an example.

This definition closely follows Daṇḍin's *ślōka* (2.298): *kiñcid ārabhamāṇasya kāryam daiva-vaśāt punaḥ / tatsādhana-samāpattir yā tad āhuḥ samāhitam //*

ಮುಳಿದಿರ್ದ ನಲ್ಲಳಲ್ಲಿಗೆ
ತಿಳಿಪಲ್ ಪೋಪೆನ್ನ ಬಗೆಗೆ ದೊರೆಕೊಳೆ ಮತ್ತಿಂ
ತೆಳವೆಱೆ ಗಗನಾಂತರದೊಳ್
ಪೊಳೆದತ್ತೆತ್ತಂ ವಸಂತಸಮಯೋತ್ತಂಸಂ ೧೨೪

ಮುಳಿದು ಇರ್ದ ನಲ್ಲಳಲ್ಲಿಗೆ ತಿಳಿಪಲ್ ಪೋಪ ಎನ್ನ ಬಗೆಗೆ ದೊರೆಕೊಳೆ ಮತ್ತೆ ಇಂತು ಎಳವೆಱೆ ಗಗನ ಅಂತರದೊಳ್ ಪೊಳೆದತ್ತು ಎತ್ತಮ್ ವಸಂತ ಸಮಯ ಉತ್ತಂಸಮ್

"ಕೋಪಗೊಂಡ ಪ್ರಿಯೆಯನ್ನು ಶಾಂತವಾಗಿಸಲೆಂದು ಹೊರಟಿರುವ ನನಗೆ ಅನುಕೂಲವಾಗಿ ಈಗ ವಸಂತ ಮಾಸದ ಶಿರೋಭೂಷಣನಾದ ಬಾಲಚಂದ್ರನು ಆಕಾಶದಲ್ಲಿ ಉದಯಿಸಿರುವನು."

124. "When I set out to pacify my beloved, the young Moon, which is the crown-jewel of Spring, rose in the sky."

As the thought of carrying out the action was made possible by the grace of rising moon, it is *samāhita.*

ತಡೆತಡೆದು ಕಾಂತನಲ್ಲಿಗೆ
ನಡೆಯಲ್ ಬಗೆದೆನಗೆ ಕಾರ ಕಾರಿರುಳೊಳ್ ಸ
ಯ್ತ್ತಡವಡಿಕೆಗಳಂ ತೊಡೆದ
ತ್ತೆಡೆವಱಿಯದೆ ಪೊಳೆವ ಮಿಂಚು ಮುಗಿಲೆಡೆಯೆಡೆಯೊಳ್ ೧೨೫

ತಡೆತಡೆದು ಕಾಂತನಲ್ಲಿಗೆ ನಡೆಯಲ್ ಬಗೆದು ಎನಗೆ ಕಾರ ಕಾರಿರುಳೊಳ್ ಸಯ್ತು ಅಡವಡಿಕೆಗಳನ್ ತೊಡೆದತ್ತು ಎಡೆವಱಿಯದೆ ಪೊಳೆವ ಮಿಂಚು ಮುಗಿಲ್ ಎಡೆಯೆಡೆಯೊಳ್

"ಈ ಮಳೆಗಾಲದ ಕಗ್ಗತ್ತಲೆಯಲ್ಲಿ ತಡವರಿಸುತ್ತ ಕಾಂತನ ಬಳಿಗೆ ನಡೆದು ಹೋಗಲು ಯೋಚಿಸಿದ ನನಗೆ ಮೋಡಗಳ ನಡುವೆ ಹೊಳೆಯುತ್ತಿರುವ ಮಿಂಚು ಅಡೆತಡೆಗಳನ್ನೆಲ್ಲ ಹೋಗಲಾಡಿಸಿತು."

ಪ್ರಯತ್ನವಿಲ್ಲದೆಯೇ ಮಿಂಚು ಸಹಾಯವನ್ನು ಒದಗಿಸಿದೆ ಎಂದು ಹೇಳಿರುವುದರಿಂದ ಇದು 'ಸಮಾಹಿತ'.

125. "In the darkest part of rainy night, I wanted to meet my enraged boyfriend. In the midst of the thick clouds, a glow of lightning appeared and removed my distress."

Here also, there is an unexpected occurrence (lightning) that gives aid to the subject of the verse. A similar example is found in *Kāvyādarśa* 2.299.

ತಱಿಸಂದು ಮನದೊಳೊಂದಂ
ಪೆಱತಂ ಮತ್ತದನೆ ಪೋಲ್ವುದಂ ಕುಱಿಪುಗಳಂ
ಕುಱಿಮಾಡಿಮಾಡಿ ಪೇಱ್ವುದು
ನೆಱೆಯೆ ಸಮಾಸೋಕ್ತಿಯೆಂಬುದಿಂತದಱ ತೆಱಂ ೧೨೬

ತಱಿಸಂದು ಮನದೊಳ್ ಒಂದನ್ ಪೆಱತನ್ ಮತ್ತೆ ಅದನೆ ಪೋಲ್ವುದನ್ ಕುಱಿಪುಗಳನ್ ಕುಱಿಮಾಡಿ ಮಾಡಿ ಪೇಱ್ವುದು ನೆಱೆಯೆ ಸಮಾಸೋಕ್ತಿ ಎಂಬುದು ಇಂತು ಅದಱ ತೆಱನ್

ಮನಸ್ಸಿನಲ್ಲಿ ಒಂದು ವಸ್ತುವನ್ನು ನಿಶ್ಚಯಿಸಿ ಅದಕ್ಕೆ ಸಮಾನವಾದ ಇನ್ನೊಂದು ವಸ್ತುವನ್ನು ಕುರುಹುಗಳ ಮೂಲಕ ಲಕ್ಷಿಸಿ ಹೇಳುವುದು 'ಸಮಾಸೋಕ್ತಿ'.

ಎರಡು ವಸ್ತುಗಳನ್ನು ಒಂದು ಉಕ್ತಿಯಲ್ಲಿ ಸಂಕ್ಷೇಪಿಸಿ ಹೇಳುವುದರಿಂದ ಸಮಾಸೋಕ್ತಿ. ಇದನ್ನೆ ದಂಡಿ ಹೀಗೆ ಹೇಳಿದ್ದಾನೆ (೨.೨೦೫) : "ವಸ್ತು ಕಿಂಚಿದಭಿಪ್ರೇತ್ಯ ತತ್ತುಲ್ಯಸ್ಯಾನ್ಯವಸ್ತುನಃ । ಉಕ್ತಿಃ ಸಂಕ್ಷೇಪರೂಪತ್ವಾತ್ ಸಾ ಸಮಾಸೋಕ್ತಿರಿಷ್ಯತೇ ॥"

126. Having something in mind and understanding something else that was not intended, expressed in a single "condensed (or concise) expression," is called *samāsōkti*).

Daṇḍin's definition is more explanatory, speaking to the aim and result of the "condensed" expression" (2.205): *vastu kiñcidabhiprētya tattulyasyānyavastu-naḥ / uktiḥ saṁkṣēpa-rūpatvāt sā samāsōktiriṣyatē //*

ಸಮಾಸೋಕ್ತಿ
Condensed Expression *(samāsōkti)*

ತಾಮರೆಯರಲೊಳ್ ಸರಸನಿ
ಜಾಮೋದದೊಳೊಂದಿ ನಲಿದು ಮಕರಂದರಜೋ
ವ್ಯಾಮುಗ್ಧದೊಳೀ ಮುಗುಳೊಳ
ಮಾ ಮಾಟ್ಕೆಯಿನಱಿಸಿ ಸುೞಿವುದಳಿ ಕೆಲಗೆಲದೊಳ್ ೧೨೭

ತಾಮರೆ ಅರಲೊಳ್ ಸರಸ ನಿಜ ಆಮೋದದೊಳ್ ಒಂದಿ ನಲಿದು ಮಕರಂದ ರಜೋವ್ಯಾಮುಗ್ಧದೊಳ್ ಈ ಮುಗುಳೊಳಮ್ ಆ ಮಾಟ್ಕೆಯಿನ್ ಅಱಿಸಿ ಸುೞಿವುದು ಅಳಿಕೆಲಗೆಲದೊಳ್

"ದುಂಬಿಯು ತಾವರೆ ಹೂವಿನಲ್ಲಿ ಸರಸಲೀಲೆಯಿಂದ ಬೇಕಾದಂತೆ ಕೂಡಿ ಸಂತೋಷಗೊಂಡು, ಅದರ ಮಕರಂದ ಮತ್ತು ಪುಷ್ಪರಜದಲ್ಲಿ

ವ್ಯಾಮೋಹಗೊಂಡು ಈ ಮೊಗ್ಗಿನಲ್ಲಿಯೂ ಅದೇ ರೀತಿ ಹುಡುಕಿಕೊಂಡು ಅದರ ಬಳಿಯಲ್ಲೇ ಸುಳಿದಾಡುತ್ತಿದೆಯಲ್ಲ!"

ಇದರ ಮೂಲ ದಂಡಿಯಲ್ಲಿ ಹೀಗಿದೆ (೨.೨೦೬) : "ಪಿಬನ್ ಮಧು ಯಥಾಕಾಮಂ ಭ್ರಮರಃ ಫುಲ್ಲಪಂಕಜೇ । ಅಪ್ಯಸಂನದ್ಧ ಸೌರಭ್ಯಂ ಪಶ್ಯ ಚುಂಬತಿ ಕುಡ್ಮಲಮ್ ॥"

127. "Having enjoyed playfully in the blossomed lotus, the bee is still searching near this bud which is not mature with nectar and pollen."

This example is a translation of the one given by Daṇḍin (2.206): *piban madhu yathā-kāmam bhramaraḥ phulla-pankajē / apyasannaddha saurabhyam paśya cumbati kuḍmalam //* As the example needs explanation (with double-meaning words), the author explains it in the next verse.

ನೆರೆದತಿವಿದಗ್ಧಗಣಿಕಾ
ಸುರತಾಸವಸೇವನಾಕೃತೂದರನಾಗಿ
ರ್ದಿರದೆ ತರುಣೀರತಾಂತರ
ಸರಾಗಮಂ ಪೇೞ್ವುದಲ್ಲಿ ತುಂಬಿಯ ನೆವದಿಂ ೧೨೮

ನೆರೆದು ಅತಿ ವಿದಗ್ಧ ಗಣಿಕಾ ಸುರತಾಸವ ಸೇವನಾಕೃತ ಉದರನಾಗಿ ಇರ್ದಿರದೆ ತರುಣೀ ರತಾಂತರ ಸರಾಗಮನ್ ಪೇೞ್ವುದು ಅಲ್ಲಿ ತುಂಬಿಯ ನೆವದಿನ್

ಇಲ್ಲಿ ದುಂಬಿಯ ನೆಪದಿಂದ, ಮೊದಲು ಬಹುಪ್ರೌಢೆಯಾದ ವೇಶ್ಯೆಯೊಂದಿಗೆ ಸಂಭೋಗಿಸಿ, ಆಕೆಯ ಸುರತರಸದಿಂದ ತುಂಬಿದ ಹೊಟ್ಟೆಯಿಂದ ಸುಮ್ಮನಾಗದೆ ಈಗ ಬಾಲೆಯೊಬ್ಬಳ ರತಿಯಲ್ಲಿ ಆಸಕ್ತನಾಗಿರುವನೆಂದು ಹೇಳುವ ಅಭಿಪ್ರಾಯವಿದೆ.

128. "In the guise of a bee, he enjoyed sexual union with a mature courtesan, and now, he seeks union

with a young girl" – this is what is being said here.

The same explanation is found in *Kāvyādarśa* 2.207: *iti prauḍhāṅganā-baddha-ratilīlasya rāgiṇaḥ / kasyāñcid iha bālāyām icchā-vṛttir vibhāvyatē //*

ದಾನಪರನಂ ನಿಜೋನ್ನತ
ಮಾನನನಾರೂಢವಿಪುಳವಂಶನನಂತೊಂ
ದಾನೆಯನಪಾಯಪಂಕದೊ
ಳೇನುಂ ತಳ್ವಿಲ್ಲದಿರ್ದುದಂ ಕಾಣಿಸಿದಂ ೧೨೯

ದಾನಪರನನ್ ನಿಜೋನ್ನತ ಮಾನನನ್ ಆರೂಢ ವಿಪುಳ ವಂಶನನ್ ಅಂತು ಒಂದು ಆನೆಯನ್ ಅಪಾಯ ಪಂಕದೊಳ್ ಏನುಮ್ ತಳ್ವ ಇಲ್ಲದೆ ಇರ್ದುದನ್ ಕಾಣಿಸಿದನ್

"ದಾನಪರನು, ಉನ್ನತ ಮಾನವಂತನು, ಉತ್ತಮ ವಂಶದವನು ಎನಿಸಿದ ಆನೆಯೊಂದು ಯಾವ ನೆರವೂ ಇಲ್ಲದೆ ಅಪಾಯವೆಂಬ ಕೆಸರಿನಲ್ಲಿ ಬಿದ್ದಿರುವುದನ್ನು ತೋರಿಸಿದನು."

ಇಲ್ಲಿ 'ಆನೆಯನ್ನು' ಎಂದು ಹೇಳಿದ್ದರೂ ಒಬ್ಬ ರಾಜನಿಗೆ ಮತ್ತು ಆನೆಗೆ ಅನ್ವಯವಾಗುವಂತೆ ಶ್ಲೇಷೆಯನ್ನು ಬಳಸಲಾಗಿದೆ. ದಾನ ಜಲದಿಂದ ಕೂಡಿರುವ, ದರ್ಪವುಳ್ಳ, ಹೆಬ್ಬಿದಿರಿನ ಮೆಳೆಯಲ್ಲಿರುವ, ಅಪಾಯಕಾರಿ ಕೆಸರಿನಲ್ಲಿರುವ ಆನೆಯೆಂಬ ಅರ್ಥವೂ ಇದೆ

129. "The rutting elephant in the bamboo grove, arrogant and oozing fluid from it temples, is now in danger of falling into the deep mud."

As this verse also refers to a great donor (*dānapara),* an explanation is given in the next verse.

ತ್ಯಾಗಾದಿಗುಣಗಣೋದಯ
ಭಾಗಿಯನೇನಾನುಮೊಂದುಪಾಯಾಂತರದಿಂ

ನೀಗಲ್ ನೆಱೆಯದೆಯನುಪಮ
ಮೀಗಣೆದದಿನಾನೆಮಾಡಿ ನುಡಿದಂ ಬಗೆಯಂ ೧೩೦

ತ್ಯಾಗಾದಿ ಗುಣಗಣ ಉದಯ ಭಾಗಿಯನ್ ಏನಾನುಮ್ ಒಂದು ಉಪಾಯಾಂತರದಿನ್ ನೀಗಲ್ ನೆಱೆಯದೆ ಅನುಪಮಮ್ ಈ ಗಣೆದದಿನ್ ಆನೆ ಮಾಡಿ ನುಡಿದನ್ ಬಗೆಯನ್

ಇಲ್ಲಿ ಯಾವ ಉಪಾಯದಿಂದಲೂ ಪಾರಾಗಲು ಸಾಧ್ಯವಾಗದ ದುರವಸ್ಥೆಯಲ್ಲಿ ಸಿಕ್ಕಿರುವ ತ್ಯಾಗಾದಿ ಗುಣಗಣಶೀಲನಾದ (ರಾಜನಂತಹ) ವ್ಯಕ್ತಿಯೊಬ್ಬನನ್ನು ಈ ರೀತಿ ಆನೆಯ ಅವಸ್ಥೆಗೆ ಹೋಲಿಸಿ ಅನುಪಮವಾಗಿ ಹೇಳಿದನು.

130. Here, a great man having noble qualities like generosity is said to have been involved in a dangerous situation. He is figuratively described as an elephant.

ಪರ್ಯಾಯೋಕ್ತಿ

Alternative Expression *(paryāyōkti)*

ಬಗೆದರ್ಥಮನಱಿಪದೆ ಮೆ
ಲ್ಲಗೆ ತಿರ್ದುವ ಬಗೆಯಿನದಱ ನೆವದಿಂ ಪೆಱತಂ
ನಿಗದಿಸುವುದು ಪರ್ಯಾಯೋ
ಕ್ತಗತಾಳಂಕಾರಮದಱ ಪಾಂಗಿತಕ್ಕುಂ ೧೩೧

ಬಗೆದ ಅರ್ಥಮನ್ ಅಱಿಪದೆ ಮೆಲ್ಲಗೆ ತಿರ್ದುವ ಬಗೆಯಿನ್ ಅದಱ ನೆವದಿನ್ ಪೆಱತನ್ ನಿಗದಿಸುವುದು ಪರ್ಯಾಯೋಕ್ತ ಗತ ಅಳಂಕಾರಮ್ ಅದಱ ಪಾಂಗು ಇಂತು ಅಕ್ಕುಮ್

ವಿವಕ್ಷಿತವಾಗಿರುವ ಅರ್ಥವನ್ನು ತಿಳಿಸದೆ ಉಪಾಯವಾಗಿ ನೆರವೇರುವ ರೀತಿಯನ್ನು ಸೂಚಿಸಲು ಇನ್ನೊಂದನ್ನು ಹೇಳುವುದು 'ಪರ್ಯಾಯೋಕ್ತಿ'

ಈ ಅಲಂಕಾರದ ಲಕ್ಷಣ ದಂಡಿಯ ಕಾವ್ಯಾದರ್ಶದಲ್ಲಿ ಹೀಗಿದೆ (೨.೨೯೫):"ಅರ್ಥಮಿಷ್ಟಮನಾಖ್ಯಾಯ ಸಾಕ್ಷಾತ್ ತಸ್ಯೈವ ಸಿದ್ಧಯೇ । ಯತ್ ಪ್ರಕಾರಾಂತರಾಖ್ಯಾನಂ ಪರ್ಯಾಯೋಕ್ತಂ ತದಿಷ್ಯತೇ ॥"

131. Without saying the intended meaning directly but rather designing the expression in an "alternative" way is called *paryāyōkti*.

This definition closely follows Daṇḍin (2.295): *artham iṣṭam anākhyāya sākṣāt tasyaiva siddhayē / yat prakārāntar ākhyānam paryāyōktam tadiṣyatē //*

ನೀಮಿರ್ವರುಮನ್ನೆಗಮಿಂ
ತೀ ಮಾಟ್ಕೆಯೊಳಿನಿಸು ಪೊೞ್ತು ನುಡಿವುತ್ತಿರಿಮಾ
ನಾಮೋದಕುಸುಮಸಮಿತಿಯ
ನಾ ಮರಗಳೊಳಾಯ್ದು ಕೊಯ್ದುಮಿಲ್ಲಿಗೆ ಬರ್ಪೆಂ ೧೩೨

ನೀಮ್ ಇರ್ವರುಮ್ ಅನ್ನೆಗಮ್ ಇಂತು ಈ ಮಾಟ್ಕೆಯೊಳ್ ಇನಿಸು ಪೊೞ್ತು ನುಡಿವುತ್ತಿರಿಮ್ ಆನ್ ಆಮೋದ ಕುಸುಮ ಸಮಿತಿಯನ್ ಆ ಮರಗಳೊಳ್ ಆಯ್ದು ಕೊಯ್ದುಮ್ ಇಲ್ಲಿಗೆ ಬರ್ಪೆನ್

"ನೀವಿಬ್ಬರೂ ಹೀಗೆಯೇ ಸ್ವಲ್ಪಕಾಲ ಮಾತನಾಡುತ್ತಿರಿ. ಅಷ್ಟರಲ್ಲಿ ನಾನು ಸುಗಂಧಯುಕ್ತವಾದ ಹೂಗಳನ್ನು ಆ ಮರಗಳಿಂದ ಆಯ್ದು ಕೊಯ್ದು ಇಲ್ಲಿಗೆ ಬರುತ್ತೇನೆ."

132. "Both of you converse. I will collect fragrant flowers from those trees and come back."

ಕೆಳದಿಯನಭಿಮತನುಮನೊ
ರ್ಬುಳಿಗೂಡೆ ವಿದಗ್ಧೆ ಸುರತಸೇವನಮಂ ಮೊ
ಕ್ಕಳಮವರ್ಗೆ ಮಾಡಲೆಂದಾ
ಗಳೆ ಪೋಗಲ್ಬಗೆದು ನುಡಿದಳಿಂತೀ ಮಾತಂ ೧೩೩

ಕೆಳದಿಯನ್ ಅಭಿಮತನುಮನ್ ಒರ್ಬುಳಿಗೂಡೆ ವಿದಗ್ಧೆ ಸುರತ ಸೇವನಮನ್ ಮೊಕ್ಕಳಮ್ ಅವರ್ಗೆ ಮಾಡಲೆಂದು ಆಗಳೆ ಪೋಗಲ್ ಬಗೆದು ನುಡಿದಳ್ ಇಂತು ಈ ಮಾತನ್

ಗೆಳತಿಯನ್ನು ಅವರ ನಲ್ಲನನ್ನು ಒಂದುಗೂಡಿಸಿ ಅವರಿಗೆ ಸುರತ ಸುಖವನ್ನು ಒದಗಿಸಲೆಂಬ ಬಯಕೆಯಿಂದ ತಾನು ಹೋಗಬೇಕೆಂದು ಭಾವಿಸಿ ಈ ಮಾತನ್ನು ಹೇಳಿದಳು.

ದಂಡಿ ಕೊಟ್ಟ ಉದಾಹರಣೆಯಲ್ಲಿ "ಈ ಕೋಗಿಲೆ ಮಾವಿನ ಹೂಗೊಂಚಲನ್ನು ತಿನ್ನುತ್ತಿದೆ. ಅದನ್ನು ಓಡಿಸುತ್ತೇನೆ" (೨.೨೯೬) ಎಂದು ಹೇಳಿ ಸಖಿ ಹೊರಟು ಹೋದಳು. ಅದಕ್ಕೆ ಇನ್ನೊಂದು ಶ್ಲೋಕದಲ್ಲಿ ದಂಡಿ ನೀಡಿದ ವಿವರಣೆಯನ್ನೇ ಕವಿರಾಜಮಾರ್ಗದಲ್ಲಿ ಅನುಸರಿಸಲಾಗಿದೆ (ಕಾವ್ಯಾದರ್ಶ, ೨.೨೯೭): "ಸಂಗಮಸ್ಯ ಸಖೀಂ ಯೂನಾ ಸಂಕೇತೇ ತದ್ರತೋತ್ಸವಮ್ । ನಿರ್ವರ್ತಯಿತು ಮಿಚ್ಛಂತ್ಯಾ ಕಯಾಪ್ಯಪಸೃತಂ ತತಃ ॥"

133. To allow her friend to enjoy with her lover, she expresses her wish to leave them alone in this way.

Daṇḍin gives a different example (2.296), but the explanation (2.297) is very much similar to the one given by Śrīvijaya: *saṅgamasya sakhīm yūnā sankētē tadratōtsavam / nirvartayitum icchantyā kayāpyapasṛtam tataḥ //*

ವಿರೋಧ

Contradiction (*virōdha)*

ಒಂದೊಂದಱೊಳೊಂದದುವಂ
ತಂದೊರ್ಬುಳಿಮಾಡಿ ತದ್ವಿಶೇಷಾಂತರಮಂ
ಸಂದೇಹಮಿಲ್ಲದಱಿಪುವು
ದೊಂದೆ ವಿರೋಧಾಭಿಧಾನಮದು ವಿಂತಕ್ಕುಂ ೧೩೪

ಒಂದೊಂದಱಿಕೊಳ್ ಒಂದದುವನ್ ತಂದು ಒರ್ಬುಳಿ ಮಾಡಿ ತತ್ ವಿಶೇಷಾಂತರಮನ್ ಸಂದೇಹಮ್ ಇಲ್ಲದೆ ಅಱಿಪುವುದು ಒಂದೆ ವಿರೋಧ ಅಭಿಧಾನಮ್ ಅದು ಇಂತು ಅಕ್ಕುಮ್

ಒಂದಕ್ಕೆ ಒಂದು ಹೊಂದದ (ವಿರುದ್ಧ ಪದಾರ್ಥಗಳನ್ನು) ತಂದು ಒಂದುಗೂಡಿಸುವ ಮೂಲಕ ಅವುಗಳ ವೈಶಿಷ್ಟ್ಯವನ್ನು ಸ್ಪಷ್ಟವಾಗಿ ತಿಳಿಸುವುದೇ 'ವಿರೋಧ' ಎಂಬ ಅಲಂಕಾರ.

ಇದಕ್ಕೆ ಮೂಲವಾದ ದಂಡಿಯ ಶ್ಲೋಕ (೨.೩೩೩): "ವಿರುದ್ಧಾನಾಂ ಪದಾರ್ಥಾನಾಂ ಯತ್ರ ಸಂಸರ್ಗದರ್ಶನಮ್ । ವಿಶೇಷ ದರ್ಶನಾಯೈವ ಸ ವಿರೋಧಃ ಸ್ಮೃತೋಯಥಾ ॥"

134. Highlighting a *contradiction* or *opposition* to make clear a distinction between two things is referred to as *virōdha*.

Daṇḍin has given a similar definition (2.333): *viruddhānām padārthānām yatra saṁsarga-darśanam / viśēṣa-darśanāyaiva sa virōdhaḥ smṛtō yathā //*

ಶರದಾಗಮದೊಳ್ ಕಳಹಂ
ಸರವಂ ಪೆರ್ಚಿತ್ತು ಕಿವಿಗೆ ಸೊಗಯಿಸಿ ಪೀನಂ
ವಿರಳತರಮಾಯ್ತು ಬರ್ಹಿಣ
ವಿರಾವಮುರು ಮುದವಿರಾಮವಿರಸವಿರಾಗಂ ೧೩೪

ಶರತ್ ಆಗಮದೊಳ್ ಕಳಹಂಸ ರವಮ್ ಪೆರ್ಚಿತ್ತು ಕಿವಿಗೆ ಸೊಗಯಿಸಿ ಪೀನಮ್ ವಿರಳತರಮ್ ಆಯ್ತು ಬರ್ಹಿಣ ವಿರಾವಮ್ ಉರು ಮುದ ವಿರಾಮ ವಿರಸ ವಿರಾಗಮ್

"ಶರತ್ಕಾಲದ ಆಗಮನದಲ್ಲಿ ಕಿವಿಗೆ ಇಂಪಾಗಿ ಕಲಹಂಸಗಳ ಧ್ವನಿ ಹೆಚ್ಚಾಯಿತು. ನವಿಲುಗಳ ನಲಿವೆಲ್ಲ ಅಡಗಿದ್ದರಿಂದ ಅವುಗಳ ಧ್ವನಿ ವಿರಸವೂ ರಾಗಹೀನವೂ ವಿರಳವೂ ಆಯಿತು."

ಶರತ್ಕಾಲದಲ್ಲಿ ಹಂಸಮಯೂರಗಳ ಸ್ವಭಾವವನ್ನು ಒಟ್ಟಿಗೆ ನಿರೂಪಿಸಿ ಅವುಗಳ ವಿಶೇಷಗುಣವನ್ನು ತೋರಿಸಲಾಗಿದೆ. ಮೂಲದಲ್ಲಿ ಶರತ್ಕಾಲವನ್ನು

ಹೆಸರಿಸದೆ ದಂಡಿ ಹಂಸಮಯೂರಗಳ ಅಂತರವನ್ನು ತಿಳಿಸಿದ್ದಾನೆ (೨.೩೩೪) : "ಕೂಜಿತಂ ರಾಜಹಂಸಾನಾಂ ವರ್ಧತೇ ಮದಮಂಜುಲಮ್। ಕ್ಷೀಯತೇ ಚ ಮಯೂರಾಣಾಂ ರುತಮುತ್ಕ್ರಾಂತ ಸೌಷ್ಠವಮ್ ॥"

135. "Upon the arrival of autumn, the melodious sound of swans became very loud. The sound from the peacocks subsided, with no charm or passion, as they were displeased."

As peacocks are said to enjoy the monsoon season, they lose interest at the advent of autumn. This is the contradictory situation depicted here. It can be compared with the example in *Kāvyādarśa* 2.334*: kūjitam rāja-haṁsānām vardhatē mada-manjulam / kṣīyatē ca mayūrāṇām rutam utkrānta-sauṣṭhavam //*

ಮಲಯಾನಿಳನೆಸಕದಿನುದಿ
ರ್ವಲರ್ಗಳ ಮಕರಂದಮಾಲೆಗಳ್ ಪರೆದೆತ್ತಂ
ನೆಲದೊಳ್ ಬಿಟ್ಟುಂ ಪಡೆದುವು
ವಿಲೋಚನಾಂಬುಗಳನಗ್ಗಳಂ ವಿರಹಿಗಳಾ ೧೩೬

ಮಲಯಾನಿಳನ ಎಸಕದಿನ್ ಉದಿರ್ವ ಅಲರ್ಗಳ ಮಕರಂದ ಮಾಲೆಗಳ್ ಪರೆದು ಎತ್ತಮ್ ನೆಲದೊಳ್ ಬಿಟ್ಟುಮ್ ಪಡೆದುವು ವಿಲೋಚನ ಅಂಬುಗಳನ್ ಅಗ್ಗಳಮ್ ವಿರಹಿಗಳಾ

"ಮಲಯಮಾರುತನ ಕಾರ್ಯದಿಂದ ಉದುರುವ ಹೂಗಳ ಮಕರಂದದ ಹನಿಗಳ ಮಾಲೆಗಳು ಎಲ್ಲೆಲ್ಲಿಯೂ ಹರಡಿ ನೆಲದ ಮೇಲೆ ಬೀಳುತ್ತಿದ್ದರೂ ವಿರಹಿಗಳಲ್ಲಿ ಕಣ್ಣೀರನ್ನು ಉಂಟುಮಾಡಿದುವು."

ಕಣ್ಣಲ್ಲಿ ಏನೂ ಬೀಳದೆ ಕಣ್ಣೀರು ಬಂತೆಂದು ವರ್ಣಿಸಿರುವುದರಿಂದ ವಿರೋಧಾಲಂಕಾರ. ಈ ಉದಾಹರಣೆಗೆ ಮೂಲದಂತಿರುವ ದಂಡಿ ಶ್ಲೋಕ (೨.೩೩೮): "ಉದ್ಯಾನಮಾರುತೋದ್ಧೂತಾಶ್ಚೂತಚಂಪಕರೇಣವಃ । ಉದಶ್ರಯನ್ತಿ ಪಾಂಥಾನಾಮಸ್ಪೃಶಂತೋಽಪಿ ಲೋಚನೇ ॥"

136. "The fragrant nectar from the flowers mixed with pollen was falling everywhere on the earth, as the wind from the Malaya mountain blew. There were also tears in the eyes of the separated lovers."

The author wants to show that the tears being shed by the lovers are unrelated (since the dust has fallen on the earth and not in their eyes) and gives this as an example of *virodha*. It can be compared with the example in Daṇḍin (2.338): *udyāna-mārutōddhūtaścūta-campaka-rēṇavaḥ / udaśrayanti pānthānām aspṛśamtōpi lōcanē //*

ದೊರೆಕೊಳ್ವಂತಿರೆ ಮುನ್ನಂ
ವಿರೋಧಗತಮಾರ್ಗಭೇದಮಂ ತೋಱಿದೆನಾ
ದರದಿನುಪಮಾದಿಗಳೊಳಂ
ನಿರುತಮನುಕ್ತಮುಮನಱಿಗೆ ಲಕ್ಷ್ಯಾಂತರದೊಳ್ ೧೩೭

ದೊರೆಕೊಳ್ವಂತೆ ಇರೆ ಮುನ್ನಮ್ ವಿರೊಧಗತ ಮಾರ್ಗಭೇದಮ್ ತೋಱಿದೆನ್ ಆದರದಿನ್ ಉಪಮಾದಿಗಳೊಳಮ್ ನಿರುತಮ್ ಅನುಕ್ತಮುಮನ್ ಅಱಿಗೆ ಲಕ್ಷ್ಯಾಂತರದೊಳ್

ಈ ಮೊದಲೇ, ಉಪಮಾದಿ ಅಲಂಕಾರಗಳನ್ನು ವಿವರಿಸುವಾಗಲೇ ಕೆಲವೊಂದು ವಿರೋಧಾಲಂಕಾರ ಪ್ರಕಾರಗಳನ್ನು ಉದಾಹರಿಸಿ ತೋರಿಸಿದೆನು. ಇಲ್ಲಿ ಈಗ ಬಿಟ್ಟಿರುವುವನ್ನು ಬೇರೆ ಲಕ್ಷ್ಯಗಳಿಂದ ತಿಳಿದುಕೊಳ್ಳಬೇಕು.

137. While dealing with simile (*upamā*) and other figures of speech, I have shown some types of *virōdha* with examples. Whatever is not shown here can be grasped from other examples.

ಅಪ್ರಸ್ತುತಪ್ರಶಂಸೆ

Mentioning the Unrelated *(aprastutapraśaṁse)*

ಪ್ರಸ್ತುತಮಲ್ಲದುದನೆ ಮಿಗೆ
ವಿಸ್ತಾರಿಸಿ ನೆಗೞ್ಚಿ ಪೇೞ್ದೊಡಕ್ಕುಂ ಮತ್ತ
ಪ್ರಸ್ತುತಮೆಂಬುದಳಂಕೃತಿ
ವಿಸ್ತರಮಿಂತಕ್ಕುಮದಱ ಲಕ್ಷ್ಯವಿಭಾಗಂ ೧೩೮

ಪ್ರಸ್ತುತಮ್ ಅಲ್ಲದುದನೆ ಮಿಗೆ ವಿಸ್ತಾರಿಸಿ ನೆಗೞ್ಚಿ ಪೇೞ್ದೊಡೆ ಅಕ್ಕುಮ್ ಮತ್ತೆ ಅಪ್ರಸ್ತುತಮ್ ಎಂಬುದು ಅಳಂಕೃತಿ ವಿಸ್ತರಮ್ ಇಂತು ಅಕ್ಕುಮ್ ಅದಱ ಲಕ್ಷ್ಯ ವಿಭಾಗಮ್

ಪ್ರಸ್ತುತವಲ್ಲದ ವಸ್ತುವನ್ನೇ ವಿಸ್ತಾರವಾಗಿ ವರ್ಣಿಸಿ ಹೇಳಿದರೆ ಅದು 'ಅಪ್ರಸ್ತುತಪ್ರಶಂಸೆ' ಎಂಬ ಅಲಂಕಾರವಾಗುತ್ತದೆ. ಅದರ ಉದಾಹರಣೆ ಹೀಗಿದೆ.

ದಂಡಿ ಕೂಡ ಇದೇ ರೀತಿಯ ಲಕ್ಷಣವನ್ನು ಕೊಟ್ಟಿದ್ದಾನೆ (೨.೩೪೦): "ಅಪ್ರಸ್ತುತ ಪ್ರಶಂಸಾ ಸ್ಯಾದಪಕ್ರಾಂತೇಷು ಯಾ ಸ್ತುತಿಃ"

138. When an "unrelated" subject (*aprastuta*) is given undue mention, it is *aprastuta-praśaṁse.* An example of this *alaṅkāra* follows.

This definition can be compared with Daṇḍin's (2.340): *aprastuta-praśaṁsā syāt apakrāntēṣu yā stutiḥ.*

ಮೃಗಗಣಮೆ ಸುಖಂ ಬಾೞ್ಗುಂ
ಸೊಗಯಿಸುವ ವನಾಂತರದೊಳ್ ಬಹುತೃಣದೊಳ್
ಬಗೆದಳಿಪಿ ಸುೞಿದು ನೋಡದೆ
ಮೊಗಮಂ ವಸುಮದವಿರಾಮಕಲುಷಾಯತರಾ ೧೩೯

ಮೃಗಗಣಮೆ ಸುಖಮ್ ಬಾೞ್ಗುಮ್ ಸೊಗಯಿಸುವ ವನಾಂತರದೊಳ್ ಬಹು ತೃಣದೊಳ್ ಬಗೆದು ಅಳಿಪಿ ಸುೞಿದು ನೋಡದೆ ಮೊಗಮನ್ ವಸು ಮದ ವಿರಾಮ ಕಲುಷಾಯಿತರಾ

“ಐಶ್ವರ್ಯ ಮದದ ಸುಖಜೀವನದಿಂದ ಕಲುಷಿತರಾದವರ ಬಳಿ ಸುಳಿಯದೆ, ಆಸೆಪಟ್ಟು ಅವರ ಮುಖವನ್ನು ಕೂಡ ನೋಡದೆ ಹುಲುಸಾಗಿ ಬೆಳೆದ ಹುಲ್ಲಿನಿಂದ ತುಂಬಿರುವ ಕಾಡಿನ ನಡುವೆ ಜಿಂಕೆಗಳ ಬಳಗವೇ ಸುಖವಾಗಿ ಬಾಳುತ್ತದೆ.”

ಸೇವಾವೃತ್ತಿಯಲ್ಲಿರುವ ಶೋಚನೀಯ ಸ್ಥಿತಿಯನ್ನು ತಿಳಿಸುವುದೇ ಪ್ರಸ್ತುತ ವಿಷಯ. ಇಲ್ಲಿ ಮೃಗಜೀವನದ ಅಪ್ರಸ್ತುತ ಸ್ಥಿತಿಯನ್ನು ತರಲಾಗಿದೆ. ಈ ಲಕ್ಷಪದ್ಯದ ಮೂಲ ದಂಡಿಯಲ್ಲಿ ಹೀಗಿದೆ (೨.೩೪೧) : “ಸುಖಂ ಜೀವಂತಿ ಹರಿಣಾ ವನೇಷ್ವಪರಸೇವಿನಃ।ಅನ್ನೈರಯತ್ನ ಸುಲಭೈಸ್ತೃಣದರ್ಭಾಂಕುರಾದಿಭಿಃ ॥”

139. “Without ever seeing the face of people contaminated with an intoxication for money, the flock of deer lives happily in the forest, eating grass in abundance.”

Daṇḍin gives a similar example (2.341): *sukham jīvanti hariṇā vanēṣv apara-sēvinaḥ / anyair ayatna-sulabhais tṛṇa-darbhāṅkurādibhiḥ //*

ಸಂತಂ ಮೃಗಗಣವೃತ್ತಿಯ
ನಿಂತಪ್ರಸ್ತುತಮನಱಿಪಿದಂ ಪರಸೇವಾ
ಚಿಂತಾವಿಷಾದಿತಾಂತ
ಸ್ಸ್ವಾಂತಂ ಸಂತಯ್ಸಲೆಂದು ತನ್ನಂ ತಾನೇ ೧೪೦

ಸಂತಮ್ ಮೃಗಗಣ ವೃತ್ತಿಯನ್ ಇಂತು ಅಪ್ರಸ್ತುತಮನ್ ಅಱಿಪಿದನ್ ಪರಸೇವಾ ಚಿಂತಾ ವಿಷಾದಿತ ಅಂತಸ್ಸ್ವಾಂತಮ್ ಸಂತಯ್ಸಲೆಂದು ತನ್ನನ್ ತಾನೇ

ಇಲ್ಲಿ ಪರಸೇವಾಚಿಂತೆಯಿಂದ ವಿಷಾದಿತ ಮನಸ್ಕನಾದವನು ತನ್ನನ್ನು ತಾನೇ ಸಂತೈಸಿಕೊಳ್ಳಲು ಅಪ್ರಸ್ತುತವಾದ ಜಿಂಕೆಗಳ ಜೀವನವನ್ನು ಕುರಿತು ಹೇಳಿರುವುದರಿಂದ ಇದು ‘ಅಪ್ರಸ್ತುತ ಪ್ರಶಂಸೆ’.

140. To console himself for being frustrated at the thought of serving others (the drunken

wealthy), he (the subject) refers here to the lifestyle of the deer in the forest.

This analysis again can be compared with Daṇḍin (2.342): *sēyam aprastutaivātra mṛgavṛttiḥ praśasyatē / rājānuva-rtana-klēśanirviṇṇēna manasvinā //*

This trope is also called "saying one thing but referring to 'another' (*anya*)" (*anyōkti* or *anyāpadēśa*).

ನಿದರ್ಶನ

Exemplification (*nidarśana*)

ಗುಣದೋಷಾದಿಗಳಿಂದನು
ಗುಣಮಾಗಿರೆ ಪೇಳ್ದು ತದನುಸದೃಶದಿನೊಂದಂ
ಪ್ರಣಿಹಿತನಿದರ್ಶನಕ್ರಮ
ದೆಣಿಸುವುದಕ್ಕುಂ ನಿದರ್ಶನಾಲಂಕಾರಂ ೧೪೧

ಗುಣ ದೋಷಾದಿಗಳಿಂದೆ ಅನುಗುಣಮ್ ಆಗಿರೆ ಪೇಳ್ದು ತತ್ ಅನುಸದೃಶದಿನ್ ಒಂದನ್ ಪ್ರಣಿಹಿತ ನಿದರ್ಶನ ಕ್ರಮದೆ ಎಣಿಸುವುದು ಅಕ್ಕುಮ್ ನಿದರ್ಶನ ಅಲಂಕಾರಮ್

ಒಂದು ವಿಷಯವನ್ನು ಹೇಳುವಾಗ ಅದರದೇ ಗುಣದೋಷಗಳಿಗೆ ಅನುಗುಣವಾಗಿರುವ ಇನ್ನೊಂದನ್ನು ನಿದರ್ಶನವಾಗಿ ಪರಿಗಣಿಸುವುದು 'ನಿದರ್ಶನ' ಎಂಬ ಅಲಂಕಾರ.

ಇದಕ್ಕೆ ದಂಡಿಯ ಮೂಲ ಹೀಗಿದೆ (೨.೩೪೮): "ಅರ್ಥಾಂತರಪ್ರವೃತ್ತೇನ ಕಿಂಚಿತ್ ತತ್ಸದೃಶಮ್ ಫಲಮ್ । ಸದಸದ್ವಾ ನಿದರ್ಶ್ಯೇತ ಯದಿ ತತ್ ಸ್ಯಾತ್ ನಿದರ್ಶನಮ್ ॥"

141. Relating one thing to another in terms of its merits or demerits by providing an illustration is called the figure of "exemplification" (*nidarśana*).

This definition can be compared with the Daṇḍin's (2.348): *arthāntara-pravṛttēna kiñcit tatsadṛśam phalam / sadasad vā nidarśyēta yadi tat syāt nidarśanam //*

ಅಮಳಿನಗುಣವೃತ್ತಿಗಳಿಂ
ಸಮುಪಸ್ಥಿತಸಕಳಜನಗತೋಚಿತಗುಣಮಂ
ಸಮನಾಗಿಸುವರ್ ಕನ್ನಡಿ
ಕಮನೀಯಾಕಾರಬಿಂಬಮಂ ತಾಳ್ದುವವೋಲ್ ೧೪೨

ಅಮಳಿನ ಗುಣವೃತ್ತಿಗಳಿನ್ ಸಮುಪಸ್ಥಿತ ಸಕಳ ಜನಗತ ಉಚಿತಗುಣಮನ್ ಸಮನಾಗಿಸುವರ್ ಕನ್ನಡಿ ಕಮನೀಯ ಆಕಾರ ಬಿಂಬಮನ್ ತಾಳ್ದುವವೋಲ್

"ಕನ್ನಡಿ ಕಮನೀಯ ಆಕಾರದ ಬಿಂಬವನ್ನು ತನ್ನಲ್ಲಿ ತಳೆಯುವ ಹಾಗೆ (ಉತ್ತಮರ) ನಿರ್ಮಲವಾದ ಸದ್ಗುಣ ಹಾಗು ಸದಾಚಾರಗಳಿಂದ ಸಕಲ ಜನರೂ ಆ ಸ್ವಚ್ಛಗುಣಗುಣಗಳನ್ನೆ ತಮ್ಮಲ್ಲಿ ಸಮಗೊಳಿಸಿಕೊಳ್ಳುವರು."

ರಾಜನ ಅಥವಾ ಉತ್ತಮರ ಸದ್ಗುಣಗಳೇ ಪ್ರಜೆಗಳ ಗುಣಗಳನ್ನು ರೂಪಿಸುತ್ತವೆ ಎಂಬುದನ್ನು ನಿದರ್ಶನದ ಮೂಲಕ ಸ್ಪಷ್ಟಪಡಿಸಲಾಯಿತು.

142. "Along with a pure character and virtuous conduct, people will adopt noble qualities (of the king), like a mirror that holds a beautiful image."

As the qualities of people follow that of the king, exemplified through the mirror, the trope here is *nidarśana.*

ಜನಮಱಿಯದನ್ನೆಗಂ ಮು
ನ್ನೆ ನಯಮನಱಿದಱಿಪಲಾರ್ಪೊಡದು ಮಂತ್ರಿಗುಣಂ
ಜನಮಾದಂ ನೆಗೞೆ ನಗ
ಧ್ವನಿವೋಲನುಕರಣವಾರ್ತೆ ಮಂತ್ರಿಗುಣಮೇ ೧೪೩

ಜನಮ್ ಅಱಿಯದೆ ಅನ್ನೆಗಮ್ ಮುನ್ನೆ ನಯಮನ್ ಅಱಿದು ಅಱಿಪಲ್ ಆರ್ಪೊಡೆ ಅದು ಮಂತ್ರಿ ಗುಣಮ್ ಜನಮ್ ಆದಮ್ ನೆಗೞೆ ನಗಧ್ವನಿವೋಲ್ ಅನುಕರಣ ವಾರ್ತೆ ಮಂತ್ರಿ ಗುಣಮೆ

"ಜನ ತಿಳಿಯುವುದಕ್ಕೆ ಮುನ್ನವೇ ನೀತಿಯನ್ನರಿತು (ರಾಜನಿಗೆ) ತಿಳಿಸಬಲ್ಲ ಸಾಮರ್ಥ್ಯವೇ ಮಂತ್ರಿಯ ಗುಣ. ಜನರಲ್ಲಿ ಬಹಳಷ್ಟು ತಿಳಿದ ಮೇಲೆ ಅದನ್ನೇ ಅನುಕರಿಸಿ ಬೆಟ್ಟದ ಮಾರ್ದನಿಯಂತೆ ನುಡಿದರೆ ಅದು ಮಂತ್ರಿಯ ಗುಣವಾಗುವುದೇ?"

143. "A minister's job is to bring policies to the notice of the king before the people know them. If already known to people, it is like an echo in the mountain. Is it the nature of a minister to imitate in this way?"

Here, the example of an echo in a mountain is given to show the appropriate action to be taken by a minister, which is not to be an echo but to be the original sound.

ತಲೆಸೂಡಿ ಮುನ್ನೆ ಕಜ್ಜದ
ಫಲಮಂ ಬೆಸಗೊಂಡುಮೇವನಲ್ಲಿಂ ಬೞಿಯಂ
ತಲೆಯಂ ಕಿರಿಯಿಸಿ ದಿವಸಮ
ನಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ ೧೪೪

ತಲೆಸೂಡಿ ಮುನ್ನೆ ಕಜ್ಜದ ಫಲಮನ್ ಬೆಸಗೊಂಡುಮ್ ಏವನಲ್ಲಿಮ್ ಬಳಿಯನ್ ತಲೆಯನ್ ಕಿರಿಯಿಸಿ ದಿವಸಮನ್ ಅಲಸದೆ ಬೆಸಗೊಳ್ವನ್ ಅಂತು ಗಾವಿಲನ್ ಅಕ್ಕುಮ್

ಮೊದಲು ಯಾವದಾದರೂ ಕಾರ್ಯಕ್ಕೆ ತಲೆಯೊಡ್ಡಿ ಆ ಮೇಲೆ ಅದರ ಫಲವನ್ನು ಕುರಿತು ಕೇಳಿ ಪ್ರಯೋಜನವೇನು? ತಲೆಯನ್ನು ಬೋಳಿಸಿಕೊಂಡು ದಿನಶುದ್ಧಿ ಹೇಗೆಂದು ಕೇಳುವವನಂತೆಯೇ ಅವನೂ ಹೆಡ್ಡನಾಗುತ್ತಾನೆ.

144. "After already being absorbed in a task completely, what is the use in asking about its

result at that point? He will be like a country bumpkin asking about auspicious day after already having his head shaven clean."

Traditionally, the custom is to have a shave on an auspicious day. To ask about the auspicious day. after the shave, is to show the stupidity of wondering about the result after it has already come about.

ಪ್ರತಿಕೂಲನಾಗಿ ನಿಲೆ ವಿಧಿ
ಮತನಯಮನುಕೂಲಮಾಗಿ ನಿಲೆಯುಂ ಕಾರ್ಯ
ಸ್ಥಿತಿಯಂ ಸಾಧಿಸಲಾಗದು
ಮೃತಕಕೃತೋಪಕೃತಿಯ ವೊಲನರ್ಥಾಯಾಸಂ ೧೪೫

ಪ್ರತಿಕೂಲನಾಗಿ ನಿಲೆ ವಿಧಿ ಮತನಯಮ್ ಅನುಕೂಲಮ್ ಆಗಿ ನಿಲೆಯುಮ್ ಕಾರ್ಯ ಸ್ಥಿತಿಯನ್ ಸಾಧಿಸಲ್ ಆಗದು ಮೃತಕಕೃತ ಉಪಕೃತಿಯವೊಲ್ ಅನರ್ಥ ಆಯಾಸಮ್

"ವಿಧಿ ಪ್ರತಿಕೂಲನಾಗಿದ್ದರೆ ಹಿತವಾದ ನೀತಿಯೂ ಅನುಕೂಲವಾಗಿದ್ದರೂ ಕಾರ್ಯಸಫಲವಾಗುವುದಿಲ್ಲ. ಮೃತದೇಹಕ್ಕೆ ಉಪಚಾರ ಮಾಡಿದಂತೆ ಅದು ವ್ಯರ್ಥವಾದ ಆಯಾಸ."

ನಿದರ್ಶನಾಲಂಕಾರದಲ್ಲಿ ಕೆಲವು ಲಕ್ಷ್ಯಗಳಲ್ಲಿ 'ತಾಳ್ದುವವೋಲ್' (೧೪೨), 'ಧ್ವನಿವೋಲ್' (೧೪೩). 'ಮೃತಕಕೃತೋಪಕೃತಿಯವೊಲ್' (ಪ್ರಸ್ತುತ ಪದ್ಯ) ಎಂಬಂತೆ ಸಾದೃಶ್ಯವಾಚಕವನ್ನು ಬಳಸಲಾಗಿದೆ. ಹೀಗಿದ್ದರೂ ಇದನ್ನು ಉಪಮಾಲಂಕಾರವೆಂದು ತಿಳಿಯಬಾರದು. ಆದರೆ ಭಾಮಹನು ನಿದರ್ಶನಾಲಂಕಾರದಲ್ಲಿ ಈ ರೀತಿಯ ಉಪಮಾವಾಚಕಗಳನ್ನು ನಿಷೇಧಿಸಿದ್ದಾನೆ (೩.೩೩): "ಕ್ರಿಯಯೈವ ವಿಶಿಷ್ಟಸ್ಯ ತದರ್ಥಸ್ಯೋಪದರ್ಶನಾತ್ । ಜ್ಞೇಯಾ ನಿದರ್ಶನಾ ನಾಮ ಯಥೇವವತಿಭಿರ್ವಿನಾ॥"

145. "Even if it is according to policy, action is not fruitful if fate is adverse to it. It is useless to pay attention to a corpse."

ಪದೆದುದಯಿಸಲೆಂದುಂ ಕಾ
ಲದೊಳಲ್ಲದುದಾರತೇಜನರ್ಕನುಮಲ್ಲಂ
ಸದುದಿತಗುಣನದಱಿಂ ನಯ
ವಿದನಪ್ಪಂ ಕಾಲಮಂ ನೆರಂ ತೋರ್ಕೆ ನೃಪಂ ೧೪೬

ಪದೆದು ಉದಯಿಸಲ್ ಎಂದುಮ್ ಕಾಲದೊಳ್ ಅಲ್ಲದೆ ಉದಾರ ತೇಜನ್ ಅರ್ಕನುಮ್ ಅಲ್ಲನ್, ಸದುದಿತ ಗುಣನ್ ಅದಱಿನ್ ನಯವಿದನಪ್ಪನ್ ಕಾಲಮನ್ ನೆರಮ್ ತೋರ್ಕೆ ನೃಪನ್

"ಅಪಾರ ತೇಜಸ್ಸುಳ್ಳ ಸೂರ್ಯನೇ ಆದರೂ ಉದಯಿಸಬೇಕಾದ ಕಾಲದಲ್ಲಿ ಉದಯಿಸದೆ ಯಾವಾಗಲೋ ಸಂತೋಷದಿಂದ ಉದಯಿಸಿದರೂ ಅವನು ಸೂರ್ಯನೇ ಅಲ್ಲ. ಅದರಿಂದ ಗುಣೋದಯನೂ ನಯವಿದನೂ ಆದ ರಾಜನು ಕಾಲವನ್ನು ಸರಿಯಗಿ ಪಾಲಿಸಲಿ".

146. "Even the most bright sun cannot rise if it is not its time. Hence, a king with great qualities and impeccable grace should wait for his time to prosper."

ಪಡೆಯಱಿಯಲಾದೊಡರಿಯಂ
ಕಿಡಿಸುಗುಮಂತಃಕಳಂಕನೃಪಮಂಡಲಮಂ
ತಡೆಯದೆ ತಮಸ್ಸ್ವಭಾವಂ
ಕಿಡಿಸುವವೋಲಱಿದು ರಾಹು ಶಶಿಮಂಡಳಮಂ ೧೪೭

ಪಡೆ ಅಱಿಯಲಾದೊಡೆ ಅರಿಯನ್ ಕಿಡಿಸುಗುಮ್ ಅಂತಃಕಳಂಕ ನೃಪ ಮಂಡಲಮನ್ ತಡೆಯದೆ ತಮಃ ಸ್ವಭಾವನ್ ಕಿಡಿಸುವವೋಲ್ ಅಱಿದು ರಾಹು ಶಶಿಮಂಡಳಮ್

"ರಾಜಮಂಡಲದಲ್ಲಿರುವ ಅಂತಃಕಲಂಕವನ್ನು ಸೈನ್ಯ ತಿಳಿಯುವುದಾದರೆ ತಮೋಗ್ರಹವಾದ ರಾಹು ನಾಶಮಾಡುವಂತೆ (ಚಂದ್ರಮಂಡಲವನ್ನು ನುಂಗಿ ಬಿಡುವಂತೆ) ವೈರಿಯು (ಅಂತಹ ರಾಜನನ್ನು) ನಾಶಮಾಡುವನು."

147. "As the demon Rāhu, with his destructive nature, swallows the moon, so to does a knowledgeable king destroy the other king through sowing internal discord."

According to Indian mythology, Rāhu is said to swallow the Moon, leading to a lunar eclipse. Rāhu has enmity for the Moon, which obstructed Viṣṇu from unwittingly serving Rāhu the ambrosia that was churned from the milk-ocean.

ಕಿಱಿದೆಂದೇಳಿಸಿ ಪಗೆಯಂ
ಪಱಿಪಡೆ ಕಿಡಿಸದೊಡೆ ಪೆತ್ತು ಕಾಲದ ಬಲಮಂ
ನೆಱೆದಿಱೆಗುಂ ನೆರೆದನುವಿಂ
ಮಱಸುವ ವೊಲ್ ದಿವಸಕರನನಂಬುದನಿವಹಂ ೧೪೮

ಕಿಱಿದು ಎಂದು ಏಳಿಸಿ ಪಗೆಯನ್ ಪಱಿಪಡೆ ಕಿಡಿಸದೊಡೆ ಪೆತ್ತು ಕಾಲದ ಬಲಮನ್ ನೆಱೆದು ಇಱೆಗುಮ್ ನೆರೆದು ಅನುವಿನ್ ಮಱಸುವವೊಲ್ ದಿವಸಕರನನ್ ಅಂಬುದ ನಿವಹಮ್

"ವೈರಿ ಅಲ್ಪನೆಂದು ಉದಾಸೀನ ಮಾಡುತ್ತ ಅವನನ್ನು ತುಂಡುತುಂಡು ಮಾಡದೆ ಬಿಟ್ಟರೆ, ಅವನು ತನಗೆ ಅನುಕೂಲವಾದ ಸಂದರ್ಭವನ್ನು ನೋಡಿ ಮೇಘವೃಂದ ಒಮ್ಮೊಮ್ಮೆ ಸೂರ್ಯನನ್ನೇ ಮುಚ್ಚಿಬಿಡುವ ಹಾಗೆ ಇವನನ್ನೇ ಇರಿಯಲು ಶಕ್ತನಾಗುವನು"

148. "If an enemy is taken lightly, spared and not cut to pieces, he will bounce back at an appropriate time. It is like clouds that obstruct even the Sun at an appropriate time."

ಒಳಗಿರ್ದ ವೈರಿಗಳ್ ಮೊ
ಕ್ಕಳಮೀಯರ್ ಪೆರ್ಚಲಧಿಕವಿಭವರ್ಕಳುಮಂ

ತಳರದೊಡನಿರ್ದು ಬಡಬಾ
ನಳನೆಂದುಂ ಪೆರ್ಚಲೀಯದಂತಂಬುಧಿಯಂ ೧೪೯

ಒಳಗೆ ಇರ್ದ ವೈರಿಗಳ್ ಮೊಕ್ಕಳಮ್ ಈಯರ್ ಪೆರ್ಚಲ್ ಅಧಿಕ ವಿಭವರ್ಕಳುಮನ್ ತಳರದೆ ಒಡನ್ ಇರ್ದು ಬಡಬಾನಳನ್ ಎಂದುಮ್ ಪೆರ್ಚಲ್ ಈಯದಂತೆ ಅಂಬುಧಿಯನ್

"ಬಡಬಾಗ್ನಿ ಸಮುದ್ರದೊಳಗೆ ಇದ್ದುಕೊಂಡು ಅಲ್ಲಿಂದ ಹೊರಡದೆ ಅದು ಹೆಚ್ಚಲು ಅವಕಾಶ ಕೊಡದಿರುವಂತೆ ರಾಜರು ಎಷ್ಟೇ ವೈಭವದಿಂದಿದ್ದರೂ ಒಳವೈರಿಗಳು ಆ ರಾಜನು ಅಭಿವೃದ್ಧಿ ಹೊಂದಲು ವಿಶೇಷವಾಗಿ ಅವಕಾಶ ಕೊಡುವುದಿಲ್ಲ."

149. "Whatever be the glory of a person, his internal enemies do not allow him to rise. It is like the fire inside an ocean that prevents its swell."

The ocean is said to have a fire within it, which is called *vaḍavānala* or *baḍabānala.*

ಪರಪಕ್ಷಮುಳ್ಳಿನಂ ತನ
ಗಿರವುಬ್ಬಸಮದಱಿನಱಿವುದದನೇಗೆಯ್ದುಂ
ಪರೆದ ಪುಡಿಯೆಲ್ಲಮಂ ನೀರ್
ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೇ ೧೫೦

ಪರಪಕ್ಷಮ್ ಉಳ್ಳಿನಮ್ ತನಗೆ ಇರವು ಉಬ್ಬಸಮ್ ಅದಱಿನ್ ಅಱಿವುದು ಅದನ್ ಏಗೆಯ್ದುಮ್ ಪರೆದ ಪುಡಿ ಎಲ್ಲಮನ್ ನೀರ್ ನೆರೆದು ಕೆಸರ್ ಮಾಡದ ಅನ್ನೆಗಮ್ ನೆಲಸುಗುಮೇ

"ಶತ್ರುಪಕ್ಷ ಇರುವವರೆಗೂ ತನ್ನ ಉಳಿವು ಕ್ಲೇಶಕರ. ಆದುದರಿಂದ ಅದನ್ನು ಹೇಗಾದರೂ ನಾಶಮಾಡಬೇಕು. ಹರಡಿಕೊಂಡಿರುವ ಮಣ್ಣಿನ ಪುಡಿಯೆಲ್ಲವನ್ನೂ ನೀರು ಕೆಸರು ಮಾಡದೆ ಸುಮ್ಮನಿರುತ್ತದೆಯೇ."

150. "As long as there are enemies, his life awaits disaster. Hence, enemies are to be wiped out.

Does water remain still – not mixing with dirt to make mud?"

This verse is virtually a translation of a *ślōka in* Māgha's *Śiśupālavadhā* (2.34): *vipakṣam akhilīkṛtya pratiṣṭhā khalu durlabhā / anītvā paṅkatām dhūlim udakam nāv atiṣṭhatē //*

ಕುಱಿಗೊಂಡು ನೆಗಟ್ದನಿಚ್ಚೆಯ
ನಱಿಯದೆ ತನ್ನಿಚ್ಚೆಯಿಂದೆ ಕಜ್ಜಂಬೇಟ್ವಂ
ತಱಿಸಲಿಸಲಾಱನಾರ್ತನ
ತೆಱನಱಿಯದೆ ಮರ್ದುವೇಟ್ವಬೆಜ್ಜನ ತೆಱದಿಂ ೧೫೧

ಕುಱಿಗೊಂಡು ನೆಗಟ್ದನ ಇಚ್ಚೆಯನ್ ಅಱಿಯದೆ ತನ್ನ ಇಚ್ಚೆಯಿಂದೆ ಕಜ್ಜಂಬೇಟ್ವನ್ ತಱಿ ಸಲಿಸಲ್ ಆಱನ್ ಆರ್ತನ ತೆಱನ್ ಅಱಿಯದೆ ಮರ್ದುವೇಟ್ವ ಬೆಜ್ಜನ ತೆಱದಿನ್

"ಪ್ರಭುವಿನ ಇಚ್ಛೆಯನ್ನು ಅರಿಯದೆ ತನ್ನ ಇಚ್ಛೆಗೆ ಅನುಸಾರವಾಗಿ ಕಾರ್ಯದ ಸಲಹೆ ಹೇಳುವವನು ಅದನ್ನು ಸಫಲಗೊಳಿಸಲಾರನು. ಆರ್ತನ ಸ್ಥಿತಿಯನ್ನು ಅರಿಯದೆ ಮದ್ದನ್ನು ಹೇಳುವ ವೈದ್ಯನಂತೆ ಅವನ ಪರಿ ಇರುವುದು."

151. "If anyone advises his lord without knowing the specific desire of the lord, the action will not be fruitful. It is like a doctor prescribing medicine without knowing the condition of the patient."

ಪರಿಣಾಮಪಥ್ಯಮಂ ಸುಖ
ಪರಿಕರಮಂ ಮೆಚ್ಚದನ್ನರಾರೀ ಮಾತಂ
ನಿರತಿಶಯರಸಸಮೇತಮ
ನರೋಚಕಂ ಮೆಚ್ಚದಂತೆ ಸೊಗಯಿಸುವುಣಿಸಂ ೧೫೨

ಪರಿಣಾಮ ಪಥ್ಯಮನ್ ಸುಖ ಪರಿಕರಮ್ ಮೆಚ್ಚದನ್ನರಾರ್ ಈ ಮಾತನ್ ನಿರತಿಶಯ ರಸ ಸಮೇತಮನ್ ಅರೋಚಕಮ್ ಮೆಚ್ಚದಂತೆ ಸೊಗಯಿಸುವ ಉಣಿಸನ್

"ಪರಿಣಾಮದಲ್ಲಿ ಹಿತಕರವೂ ಸುಖಕರವೂ ಆದ ಈ ಮಾತನ್ನು ಮೆಚ್ಚವರಾರು? ನಿರತಿಶಯ ರಸಸಮೇತವಾದ ಸೊಗಸಾದ ಊಟವನ್ನು ಅರೋಚಕ ರೋಗದಿಂದ ನರಳುತ್ತಿರುವವನು ಮಾತ್ರ ಮೆಚ್ಚಲಾರನು."

152. "Is there anyone who does not appreciate a word which is pleasant and beautiful? Only a person without any taste does not relish a meal."

ಇಂತುದಿತಭೇದಮಂ ದೃ
ಷ್ಟಾಂತಾಳಂಕಾರಮಾರ್ಗಮಂ ಕನ್ನಡದೊಳ್
ಸಂತತಗುಣಮಂ ಕೈಕೊ
ಳ್ವಂತಾಗಿರೆ ಬಗೆದು ಪೇೞ್ಗೆ ಪರಮಕವೀಶರ್ ೧೫೩

ಇಂತು ಉದಿತ ಭೇದಮನ್ ದೃಷ್ಟಾಂತ ಅಳಂಕಾರ ಮಾರ್ಗಮನ್ ಕನ್ನಡದೊಳ್ ಸಂತತ ಗುಣಮನ್ ಕೈಕೊಳ್ವಂತೆ ಆಗಿರೆ ಬಗೆದು ಪೇೞ್ಗೆ ಪರಮ ಕವೀಶರ್

ಹೀಗೆ ವಿವಿಧ ಪ್ರಕಾರಗಳನ್ನೊಳಗೊಂಡ ದೃಷ್ಟಾಂತಾಲಂಕಾರದ ಗುಣವನ್ನು ಜನ ಮೆಚ್ಚುವಂತೆ ಕವೀಶ್ವರರು ಪ್ರಯೋಗಿಸಬೇಕು.

153. Let great poets use, in a commendable way, the merit-conferring trope *nidarśana* (*dṛṣṭāntā-laṅkāra*) in its various forms."

ಸಹೋಕ್ತಿ

Associative Expression *(sahōkti)*

ಗುಣಜಾತ್ಯಾದಿಗಳಿಂ ದೊರೆ
ಯೆಣಿಸುವುದು ಸಹೋಕ್ತಿಯೆಂಬುದಕ್ಕುಂ ನಾನಾ

ಗಣನಾವಿಶೇಷಮಾಗೀ
ಗಣಿದದಿನಾರ್ಯೆದುಕೊಳ್ಗೆ ಲಕ್ಷ್ಯಮನದಱಿ ೧೫೪

ಗುಣ ಜಾತಿ ಆದಿಗಳಿನ್ ದೊರೆ ಎಣಿಸುವುದು ಸಹೋಕ್ತಿ ಎಂಬುದು ಅಕ್ಕುಮ್ ನಾನಾ ಗಣನಾ ವಿಶೇಷಮ್ ಆಗಿ ಈ ಗಣಿದದಿನ್ ಆರ್ಯೆದುಕೊಳ್ಗೆ ಲಕ್ಷ್ಯಮನ್ ಅದಱಿ

ಗುಣಜಾತಿ ಮೊದಲಾದುವುಗಳ ಸಂಬಂಧವಿದ್ದು ಅವು ಒಂದನ್ನೊಂದು ಹೋಲುವ ಸ್ಥಿತಿಯನ್ನು ಹೇಳುವುದೇ 'ಸಹೋಕ್ತಿ' ಎಂಬ ಅಲಂಕಾರ. ಅದರಲ್ಲಿಯೂ ಅನೇಕಪ್ರಕಾರ ವಿಶೇಷಗಳಿವೆ. ಅದರ ಲಕ್ಷ್ಯವನ್ನು ಹೀಗೆ ಅರಿಯಬೇಕು.

ಇದರ ಲಕ್ಷಣವನ್ನು ದಂಡಿ ಹೀಗೆ ಹೇಳಿದ್ದಾನೆ (೨.೩೫೧) : "ಸಹೋಕ್ತಿಃ ಸಹಭಾವೇನ ಕಥನಂ ಗುಣಕರ್ಮಣಾಮ್ । ಅರ್ಥಾನಾಂ ಯೋ ವಿನಿಮಯಃ ಪರಿವೃತ್ತಿಸ್ತು ಸಾ ಸ್ಮೃತಾ॥"

154. To associate two things, in terms of its quality and characteristic features, is called an "associative expression" (*sahōkti*). There are several types of this figure, each with special features. The following is an example.

The definition given here can be compared with Daṇḍin's (2.351): *sahōktiḥ sahabhāvēna kathanam guṇa-karmaṇām.*

ಅತಿಧವಳಮಾಯ್ತು ಗುಣಸಂ
ತತಿಯೊಡನೆ ಯಶೋವಿತಾನಮಾಶಾಧೀನಂ
ಸತತಂ ಪೆರ್ಚಿತ್ತು ನಿಜಾ
ಯತಿಯೊಡನೆ ಮಹಾವಿಭೂತಿ ಪರಮೋದಯನಾ ೧೫೫

ಅತಿಧವಳಮ್ ಆಯ್ತು ಗುಣಸಂತತಿಯೊಡನೆ ಯಶೋವಿತಾನಮ್ ಆಶಾಧೀನಮ್ ಸತತಮ್ ಪೆರ್ಚಿತ್ತು ನಿಜಾಯತಿಯೊಡನೆ ಮಹಾವಿಭೂತಿ ಪರಮೋದಯನಾ

"ಪರಮೋದಯನ ಗುಣಸಂತತಿಯೊಡನೆ ದಿಗಂತವ್ಯಾಪ್ತವಾದ ಯಶೋರಾಶಿಯು ಅತಿಧವಳವಾಯಿತು. ಅವನ ಹಿರಿಮೆಯ ಜತೆಗೆ ವೈಭವವೂ ನಿರಂತರವಾಗಿ ಹೆಚ್ಚಿತು."

ಜತೆಜತೆಯಾಗಿ ಎರಡೆರಡನ್ನು ಹೇಳಿರುವುದರಿಂದ ಇದು 'ಸಹೋಕ್ತಿ.'

155. "Along with his meritorious qualities and wide fame, the directions became excessively bright (*atidhavaḷaṁ*). Along with the greatness of the one who is rising *(paramōdaya*), there was a rise in his glory and wealth."

As *atiśaya-dhavaḷa* and *paramōdaya* are epithets of Nṛpatuṅga, this verse seems to be an appreciation of the king.

ಸಂಕೀರ್ಣಮೆಂಬುದುಕ್ತಾ
ಳಂಕಾರಸಮೂಹಸಂಕರಕ್ರಮಮಕ್ಕುಂ
ಶಂಕಾವಿರಹಿತಚಿತ್ತರ
ದಂ ಕಾವ್ಯದೊಳಿಂತು ಪೇಟ್ಗೆ ಕವಿವೃಷಭರ್ಕಳ್ ೧೫೬

ಸಂಕೀರ್ಣಮ್ ಎಂಬುದು ಉಕ್ತ ಅಳಂಕಾರ ಸಮೂಹ ಸಂಕರ ಕ್ರಮಮ್ ಅಕ್ಕುಮ್ ಶಂಕಾವಿರಹಿತ ಚಿತ್ತರ್ ಅದನ್ ಕಾವ್ಯದೊಳ್ ಇಂತು ಪೇಟ್ಗೆ ಕವಿವೃಷಭರ್ಕಳ್

ಮೇಲೆ ಹೇಳಿದ ಅಲಂಕಾರಗಳಲ್ಲಿ ಒಂದನ್ನೊಂದು ಮಿಶ್ರಣ ಮಾಡಿದರೆ ಅದು 'ಸಂಕೀರ್ಣ' ಅಥವಾ 'ಸಂಕರ' ಆಗುತ್ತದೆ. ಶಂಕೆ ಇಲ್ಲದೆ ಮಹಾಕವಿಗಳು ಕಾವ್ಯದಲ್ಲಿ ಅದನ್ನು ಹೀಗೆ ಬಳಸಬೇಕು.

ಇದನ್ನು ದಂಡಿ 'ಸಂಸೃಷ್ಟಿ' ಎಂದಿದ್ದಾನೆ ("ನಾನಾಲಂಕಾರ ಸಂಸೃಷ್ಟಿಃ" ೨.೩೫೯). ಭಾಮಹ ಕೂಡ ಇದನ್ನು 'ಸಂಸೃಷ್ಟಿ' ಎಂದು ಕರೆದದ್ದಲ್ಲದೆ ಅದರಲ್ಲಿ ಅಲಂಕಾರಗಳು ರತ್ನಮಾಲೆಯಂತೆ ಸೇರಿರುತ್ತವೆಂದು ಹೇಳಿದ್ದಾನೆ (೩.೪೯) : "ವರಾವಿಭೂಷಾ ಸಂಸೃಷ್ಟಿರ್ಬಹ್ವಲಂಕಾರಯೋಗತಃ । ರಚಿತಾ ರತ್ನಮಾಲೇವ ಸಾ ಚೈವಮುದಿತಾ ಯಥಾ ॥"

156. Let poets use complex tropes that are intermixed or blended (*saṅkīrṇa/saṅkara*) in various ways in their poems without any trepidation.

Daṇḍin calls this trope *saṁsṛṣṭi* (2.359). Bhāmaha calls it by the same name, saying that it is a group of *alaṅkāras* in a garland of gems (*Kāvyālaṅkāra, 3.49)*: *varā-vibhūṣā saṁsṛṣṭirbahvalaṅkārayōgataḥ / racitā ratnamālēva sā caivamuditā yathā //*

ಸಂಕೀರ್ಣ

"Intermixed" (*saṅkara*) or "Complex" Metaphor (*saṅkīrṇa*)

ಅಪರಾಗಂ ಮುನಿಪತಿವೋ
ಲುಪಗತಗುಣನಾಗಿಯುಂ ನಿಜಾಯತದೋಷಂ
ವಿಪುಳಯಶೋಧನಲೋಭಂ
ನೃಪವೃಷಭನರಾತಿನಿಕರತರುದವದಹನಂ ೧೫೭

ಅಪರಾಗಮ್ ಮುನಿಪತಿವೋಲ್ ಉಪಗತ ಗುಣನ್ ಆಗಿಯುಮ್ ನಿಜಾಯತ ದೋಷಮ್ ವಿಪುಳ ಯಶೋಧನ ಲೋಭಮ್ ನೃಪ ವೃಷಭನ್ ಅರಾತಿ ನಿಕರ ತರು ದವ ದಹನಮ್

"ಈ ನೃಪಶ್ರೇಷ್ಠನು ಮುನಿಪತಿಯಂತೆ ಅಪರಾಗನು (ರಾಗಕ್ಕೆ ದೂರವಾಗಿರುವವನು; ಅಕಲಂಕನು), ಉಪಗತಗುಣನು (ಗುಣಾನ್ವಿತನು) ಆದರೂ ನಿಜಾಯತದೋಷನು (ಬಹುದೋಷವುಳ್ಳವನು; ನಿಡಿದಾದ ತೋಳ್ಗಳುಳ್ಳವನು), ವಿಶಾಲವಾದ ಕೀರ್ತಿಯೆಂಬ ಧನಲೋಭವುಳ್ಳವನು, ಶತ್ರುಸಮೂಹವೆಂಬ ಮರಗಳಿಗೆ ಕಾಳ್ಗಿಚ್ಚು ಆಗಿರುವವನು."

'ನಿಜಾಯತದೋಷ' ಎಂದಾಗ 'ದೋಷ' ಎಂಬುದಕ್ಕೆ 'ತೋಳು' ಎಂಬ ಅರ್ಥವನ್ನು ಧನಂಜಯಕೋಶ ಹೇಳುತ್ತಿದೆ (ಕೆ. ಕೃಷ್ಣಮೂರ್ತಿ, ಕವಿರಾಜಮಾರ್ಗಂ, ಪು. ೧೪೨). ಪ್ರಸ್ತುತ ಉದಾಹರಣೆಯಲ್ಲಿ 'ಮುನಿಪತಿ ಯಂತೆ' ಎಂದಾಗ ಉಪಮೆ, 'ಅಪರಾಗ', 'ನಿಜಾಯತ ದೋಷ' ಎಂದಾಗ

ಶ್ಲೇಷೆ, 'ಉಪಗತಗುಣನಾದರೂ ನಿಜಾಯತ ದೋಷ' ಎಂದಾಗ ವಿರೋಧ, 'ಯಶೋಧನ' ಎಂದಾಗ ರೂಪಕ ಇರುವುದರಿಂದ ಇದು 'ಸಂಕೀರ್ಣ'.

157. "This great king is dispassionate (*aparāga)* like a sage. Even though he has meritorious qualities (*upagata-guṇa*), he has some faults (*nijāyata-dōṣa*). He is greedy for wealth-in-the-form-of-fame (*yaṣōdhana*). He is a fire for the enemies-that-are-trees (*arāti-nikara-taru-dava-dahana*)."

The example here has four *alaṅkāras*: "like a sage" is *upamā* (simile)*;* "he has some faults" (*nijāyata-dōṣa*) is a fusion of meanings or *ślēṣa* [*dōṣa* here means both "faults" and "strong arms"]; having "meritorious qualities" and "faults" is *virōdha* (contradicton); "wealth-in-the-form-of-fame" and "enemies-that-are-trees" are *rūpakas* (metaphors).

ಪರಿವೃತ್ತಿ

Interchange *(parivṛtti)*

ಪರಿವೃತ್ತಿಯೆಂಬುದಕ್ಕುಂ
ನಿರುಪಮಮರ್ಥಸ್ವರೂಪವಿನಿಮಯವಚನಂ
ಪರಮಗುಣೋದಯಮದಱಾ
ಸ್ವರೂಪಮಂ ಬಗೆದು ಕೊಳ್ಗೆ ಮತ್ತೀ ತೆಱದಿಂ ೧೫೮

ಪರಿವೃತ್ತಿ ಎಂಬುದು ಅಕ್ಕುಮ್ ನಿರುಪಮಮ್ ಅರ್ಥ ಸ್ವರೂಪ ವಿನಿಮಯ ವಚನಮ್ ಪರಮ ಗುಣೋದಯಮ್ ಅದಱಾ ಸ್ವರೂಪಮನ್ ಬಗೆದು ಕೊಳ್ಗೆ ಮತ್ತೆ ಈ ತೆಱದಿನ್

ಅರ್ಥಗಳು ವಿನಿಮಯ ಆಗುವ ರೀತಿ ವರ್ಣಿತವಾದರೆ ಅದು 'ಪರಿವೃತ್ತಿ' ಎಂಬ ಪರಮಗುಣಾನ್ವಿತವಾದ ಅಲಂಕಾರ. ಅದರ ಉದಾಹರಣೆಯನ್ನು ಮುಂದಿನಂತೆ ತಿಳಿಯಬೇಕು.

ದಂಡಿ ಇದೇ ರೀತಿಯ ಲಕ್ಷಣವನ್ನು ಹೇಳಿದ್ದಾನೆ (೨.೩೫೧) : "ಅರ್ಥಾನಾಂ ಯೋ ವಿನಿಮಯಃ ಪರಿವೃತ್ತಿಸ್ತು ಸಾ ಸ್ಮೃತಾಃ"

158. When two meanings are presented as interchangeable, the incomparable figure is called *parivṛtti.* Let it be understood in the following way.

In the *Kāvyādarśa, parivṛtti* is defined thus (2.351): *arthānām yō vinimayaḥ parivṛttistu sā smṛtā.*

ಅರಿಗೆ ದುರಾಹವರಂಗಾಂ
ತರದೊಳಭೀತಂ ನಿಜಾರಿಸಮಿತಿಗಳಿಂದಂ
ನೆರೆದ ಜಯಂಗೊಂಡಾಗಡೆ
ಸುರಾಂಗನಾಸುರತವಿಷಯಸುಖಮಂ ಕೊಟ್ಟಂ ೧೫೯

ಅರಿಗೆ ದುರಾಹವರಂಗಾಂತರದೊಳ್ ಅಭೀತಮ್ ನಿಜಾರಿ ಸಮಿತಿಗಳಿಂದನ್ ನೆರೆದ ಜಯಂಗೊಂಡಾಗಡೆ ಸುರಾಂಗನಾ ಸುರತ ವಿಷಯ ಸುಖಮನ್ ಕೊಟ್ಟನ್

"ಶತ್ರುವಿಗೆ ಯುದ್ಧಮಾಡಲು ಕಷ್ಟವಾದ ರಣರಂಗದಲ್ಲಿ ಭೀತಿಯಿಲ್ಲದ ಇವನು ಆ ಶತ್ರುವಿನೊಡನೆ ಯುದ್ಧಗಳಿಂದ ಒದಗಿಬಂದ ಜಯವನ್ನು ತೆಗೆದುಕೊಂಡು ಅವನಿಗೆ ಆಗಲೇ ಸುರಾಂಗನೆಯರ ಸುರತಸುಖವನ್ನು ಕೊಟ್ಟನು."

ವಿಜಯಕ್ಕೆ ವಿನಿಮಯವಾಗಿ ಸುರಾಂಗನಾ ಸುರತ ಸುಖವನ್ನು ಕೊಟ್ಟಿರುವುದರಿಂದ ಇದು 'ಪರಿವೃತ್ತಿ'.

159. "In the battlefield, with no fear, he obtained victory and then gave it back to the enemy in the form of sexual pleasure with divine damsels."

It is a belief that whoever dies a heroic death in battle will go to heaven, which is filled with divine women.

ವ್ಯಾಜಸ್ತುತಿ
Pretense of Praise (*vyāja-stuti*)

ಅತಿಶಯವಾಗಿರೆ ಗುಣಸಂ
ತತಿಯಾದೋಷಮನೆ ಪೇೞ್ವವೋಲ್ ಪೇೞ್ವುದು ನಿ
ಶ್ಚಿತಶಬ್ದಾರ್ಥಂ ವ್ಯಾಜ
ಸ್ತುತಿಯೆಂಬುದುಮದಱ ಮಾೞ್ಕೆಮತ್ತಿಂತಕ್ಕುಂ ೧೬೦

ಅತಿಶಯಮ್ ಆಗಿರೆ ಗುಣಸಂತತಿ ಆ ದೋಷಮನೆ ಪೇೞ್ದವೋಲ್ ಪೇೞ್ವುದು ನಿಶ್ಚಿತ ಶಬ್ದಾರ್ಥಮ್ ವ್ಯಾಜಸ್ತುತಿ ಎಂಬುದುಮ್ ಅದಱ ಮಾೞ್ಕೆ ಮತ್ತೆ ಇಂತು ಅಕ್ಕುಮ್

"ಅತಿಶಯವಾಗಿರುವ ಗುಣಗಣವನ್ನೇ ದೋಷವೆನ್ನುವ ಹಾಗೆ ಹೇಳುವುದು 'ವ್ಯಾಜಸ್ತುತಿ'. ಹೀಗೆ ಇದು ನಿಶ್ಚಿತವಾದ ಶಬ್ದಾರ್ಥ ಇರುವುದು. ಇದರ ಪರಿ ಹೀಗಿರುತ್ತದೆ."

ಇದರ ಮೂಲ ದಂಡಿಯಲ್ಲಿ ಹೀಗಿದೆ (೨.೩೪೩) : "ಯದಿ ನಿಂದನ್ನಿವ ಸ್ತೌತಿ ವ್ಯಾಜಸ್ತುತಿರಸೌ ಸ್ಮೃತಾ । ದೋಷಾಭಾಸಾ ಗುಣಾ ಏವ ಲಭಂತೇ ಹ್ಯತ್ರ ಸಂನಿಧಿಮ್ ॥"

160. Exaggerating a meritorious quality as though it is a fault in order to render meaningful praise is referred to as *vyāja-stuti*. The following examples highlight its characteristic feature.

ಜಲರಾಶಿಪ್ರಭವೆಯನವಿ
ಕಲಕೃಷ್ಣಗುಣಾನುರಕ್ತೆಯಂ ಮಿಗೆ ಲಕ್ಷ್ಮೀ
ಲಲನೆಯನಾಂತುಂ ವಕ್ಷಃ
ಸ್ಥಲದೊಳ್ ಪೇೞೆಂತುದಾರಚರಿತನೆಯಪ್ಪಯ್ ೧೬೧

ಜಲರಾಶಿ ಪ್ರಭವೆಯನ್ ಅವಿಕಲ ಕೃಷ್ಣ ಗುಣ ಅನುರಕ್ತೆಯನ್ ಮಿಗೆ ಲಕ್ಷ್ಮೀ ಲಲನೆಯನ್ ಆಂತುಮ್ ವಕ್ಷಃಸ್ಥಲದೊಳ್ ಪೇೞ್ ಇಂತು ಉದಾರ ಚರಿತನೆಯಪ್ಪಯ್

"ಜಲರಾಶಿಯಲ್ಲಿ ಹುಟ್ಟಿದವಳು (ಜಲ = ಜಡ. ನೀರಿನಲ್ಲಿ ಹುಟ್ಟಿದವಳು, ಜಡವಾದ ಸಮುದ್ರದಲ್ಲಿ ಹುಟ್ಟಿದವಳು), ಯಾವಾಗಲೂ ಕೃಷ್ಣಗುಣವನ್ನು ಪ್ರೀತಿಸುವವಳು (ಕೃಷ್ಣ ಎಂದರೆ ಕಪ್ಪು. ಕೃಷ್ಣಗುಣಾನುರಕ್ತೆ ಎಂದರೆ ದೋಷಗಳನ್ನು ಪ್ರೀತಿಸುವವಳು ಅಥವಾ ಕೃಷ್ಣನನ್ನು ಒಲಿದವಳು ಎಂದರ್ಥ). ಆದ ಲಕ್ಷ್ಮಿಯನ್ನು ವಕ್ಷಸ್ಥಲದಲ್ಲಿ ಧರಿಸಿಯೂ ನೀನು ಉದಾರ ಚರಿತನಾಗುವುದು ಹೇಗೆ?

ನಿಂದೆಯ ನೆಪದಲ್ಲಿ ರಾಜನನ್ನು ಸ್ತುತಿಸಿರುವುದರಿಂದ ಇದು 'ವ್ಯಾಜಸ್ತುತಿ'. 'ಶ್ರೀತಳ್ತುರದೊಳ್' ಎಂದು ಮೊದಲನೆಯ ಪದ್ಯದಲ್ಲೇ ನೃಪತುಂಗನನ್ನು ಸ್ಮರಿಸಿರುವುದರಿಂದ ಈ ಪದ್ಯವೂ ನೃಪತುಂಗನಿಗೇ ಅನ್ವಯವಾಗುತ್ತದೆ.

161. "You bear Lakṣmi, who is born in the waters *(jala-rāśi)* and who is impassioned by dark qualities (*kṛṣṇa-guṇa).* How can you become a noble person?

Jala-rāśi (the ocean*)* is also rendered *jaḍarāśi*, which means either the ocean or dumbness/motionlessness. Similarly *kṛṣṇa-guṇa* means both "dark quality" as well as the "qualities of Lord *Kṛṣṇa*." The example here is of praise in the form of reproach.

ಸತತಂ ಭುಜಂಗಭೋಗಾ
ಶ್ರಿತೆ ನಿನ್ನ ಕಳತ್ರಮೀ ಧರಾವಧು ಮತ್ತೆಂ
ತತಿಶಯದೆ ಮಹಾಪುರುಷ
ಬ್ರತಮಂ ತಾಳ್ದುವಳುದಾರಚರಿತಕ್ರಮದಿಂ ೧೬೨

ಸತತಮ್ ಭುಜಂಗ ಭೋಗಾಶ್ರಿತೆ ನಿನ್ನ ಕಳತ್ರಮ್ ಈ ಧರಾವಧು ಮತ್ತೆ ಎಂತು ಅತಿಶಯದೆ ಮಹಾಪುರುಷ ಬ್ರತಮನ್ ತಾಳ್ದುವಳ್ ಉದಾರ ಚರಿತಕ್ರಮದಿನ್

"ನಿನ್ನ ಹೆಂಡತಿಯಾದ ಭೂದೇವಿ 'ಭುಜಂಗ ಭೋಗಾಶ್ರಿತೆ' (ಆದಿಶೇಷನ ಹೆಡೆಯನ್ನು ಆಶ್ರಯಿಸಿದವಳು; ವಿಟಪುರುಷರ ಭೋಗವನ್ನು

ಆಶ್ರಯಿಸಿದವಳು). ಮತ್ತೆ ಉದಾರಚರಿತಕ್ರಮದ ಮಹಾಪುರುಷ ಸೇವಿಸುವ ಪವಿತ್ರವ್ರತವನ್ನು ಆಕೆ ಕೈಗೊಳ್ಳುವುದಾದರೂ ಹೇಗೆ?"

ಇದು ದಂಡಿಯ ಶ್ಲೋಕವನ್ನು ಅನುಸರಿಸುತ್ತದೆ (೨.೩೪೬) : "ಭುಜಂಗ ಭೋಗಸಂಸಕ್ತಾ ಕಲತ್ರಂ ತವ ಮೇದಿನೀ । ಅಹಂಕಾರಃ ಪರಾಂ ಕೋಟಿ ಮಾರೋಹತಿ ಕುತಸ್ತವ ॥"

162. "The maiden Earth who always takes shelter on the snake-hood (*bhujaṅga-bhōgāśrite)* is your wife. How can she claim that she follows the custom of great people in observing fidelity to her noble husband?"

The example here is meaningless if we take the meaning of *bhujaṅga-bhōgāśrite*, which literally means, "the earth taking shelter on the snake-hood" since the the divine serpent *Ādiśēṣa* is said to carry the earth on its head). The word *bhujaṅga* can also, however, mean a libertine. Taken this way, it becomes an example of *vyāja-stuti.*

ಹೇತೂಕ್ತಿ

Expressions of Causality (*hētūkti*)

ಕಾರಣಮಾಗಿರ್ಪುದಳಂ
ಕಾರಂ ಹೇತೂಕ್ತಿಯೆಂಬುದದು ತಾಂ ನಾನಾ
ಕಾರಂ ಜ್ಞಾಪಕಸದಳಂ
ಕಾರಸುಮಾರ್ಗಪ್ರಯೋಗಮೀ ತೆಱನದಱಾ ೧೬೩

ಕಾರಣಮ್ ಆಗಿರ್ಪುದು ಅಳಂಕಾರಮ್ ಹೇತೂಕ್ತಿ ಎಂಬುದು ಅದು ತಾನ್ ನಾನಾಕಾರಮ್ ಜ್ಞಾಪಕ ಸದಳಂಕಾರ ಸುಮಾರ್ಗ ಪ್ರಯೋಗಮ್ ಈ ತೆಱನ್ ಅದಱಾ

"ಕಾರಣವಾಗಿರುವ ಅಲಂಕಾರವು ಹೇತೂಕ್ತಿ. ಇದು ನಾನಾಬಗೆ ಯಾಗಿರುತ್ತದೆ. ಜ್ಞಾಪಕವೆಂಬ ಹೇತು ಪ್ರಭೇದದ ಲಕ್ಷ್ಯ ಈ ರೀತಿಯಿದೆ."

ದಂಡಿ ಹೇತೂಕ್ತಿಯಲ್ಲಿ ಕಾರಕ ಮತ್ತು ಜ್ಞಾಪಕ ಎಂಬ ಎರಡು ಪ್ರಭೇದಗಳನ್ನು ಹೇಳಿದ್ದಾನೆ (೨.೨೩೫).

163. The *alaṅkāra* that gives a *reason* or *cause* (*hētu*) is called *hētūkti.* It has many types. The following is an example of the type *jñāpaka*.

ಇಂದುಕಿರಣಂಗಳಿಂದಂ
ಚಂದನರಸದಿಂದೆ ಮಾಗಿಯಾ ನೀರಿಂದಂ
ನಂದದು ಪರಿತಾಪಾನಳ
ನೆಂದಱಿದೆಂ ನಿನ್ನ ಮೆಯ್ಯ ಕಾಮಜ್ವರಮಂ ೧೬೪

ಇಂದು ಕಿರಣಂಗಳಿಂದಮ್ ಚಂದನ ರಸದಿಂದೆ ಮಾಗಿಯಾ ನೀರಿಂದಮ್ ನಂದದು ಪರಿತಾಪ ಅನಳನ್ ಎಂದು ಅಱಿದೆನ್ ನಿನ್ನ ಮೆಯ್ಯ ಕಾಮ ಜ್ವರಮನ್

"ನಿನ್ನ ಕಾಮಜ್ವರ ಚಂದ್ರಕಿರಣಗಳಿಂದ, ಚಂದನ ರಸದಿಂದ, ಚಳಿಗಾಲದ ನೀರಿನಿಂದ ನಿನ್ನ ಶರೀರದ ತಾಪದ ಬಿಸಿ ಕಡಮೆಯಾಗದೆ ಇರುವುದರಿಂದ ನಿನ್ನದು ಕಾಮಜ್ವರವೇ ಎಂದು ತಿಳಿದೆನು."

ಇದು ಜ್ಞಾಪಕ ಹೇತೂಕ್ತಿಗೆ ಉದಾಹರಣೆ. ದಂಡಿಯ ಮೂಲ ಶ್ಲೋಕ ಹೀಗಿದೆ (೨.೨೪೫) : "ಅವಧ್ಯೈರಿಂದುಪಾದಾನಾಮ ಸಾಧ್ಯೈಶ್ಚಂದನಾಂಭಸಾಮ್ । ದೇಹೋಷ್ಮಭಿಃ ಸುಬೋಧಂ ತೇ ಸಖಿ ಕಾಮಾತುರಂ ಮನಃ ॥"

164. "As your body's heat does not subside with the moon's rays, sandal paste, or cold water, I understand that it is a love-fever that has taken over your body."

As the images are suggestive or leading one to understand some particular cause for the heat, this type is called a *jñāpaka*. It follows the example in *Kāvyādarśa* (2.245): *avadhair indupādānāma sādhaiścandanāmbhasām / dēhōṣmabhiḥ subōdham tē sakhi kāmāturam manaḥ //*

ಅಱಿವುಳ್ಳವರೊಳ್ ಬೆರಸದು
ದಱಿಂದಮಱಿಯದರೊಳಪ್ಪ ಪರಿಚಯದಿಂದಂ
ನೆಱೆಯಿಂದ್ರಿಯಮಂ ಗೆಲ್ಲದು
ದಱಿಂದಮಕ್ಕುಂ ಜನಕ್ಕೆ ಪೀನಂ ಬೆಸನಂ ೧೬೫

ಅಱಿವುಳ್ಳವರೊಳ್ ಬೆರಸದುದಱಿಂದಮ್ ಅಱಿಯದರೊಳಪ್ಪ ಪರಿಚಯದಿಂದಮ್ ನೆಱೆ ಇಂದ್ರಿಯಮನ್ ಗೆಲ್ಲದುದಱಿಂದಮ್ ಅಕ್ಕುಮ್ ಜನಕ್ಕೆ ಪೀನಮ್ ಬೆಸನಮ್

"ಜ್ಞಾನಿಗಳ ಜತೆ ಬೆರೆಯದಿರುವುದರಿಂದ, ಅಜ್ಞಾನಿಗಳ ಪರಿಚಯದಿಂದ, ಚೆನ್ನಾಗಿ ಇಂದ್ರಿಯಗಳನ್ನು ಗೆಲ್ಲದಿರುವುದರಿಂದ ಜನಕ್ಕೆ ಹೆಚ್ಚಾಗಿ ವ್ಯಸನ ಉಂಟಾಗುತ್ತದೆ."

ಇದು ಜ್ಞಾಪಕ ಹೇತೂಕ್ತಿಯ ಇನ್ನೊಂದು ಪ್ರಕಾರ. ದಂಡಿಯ ಮೂಲ (೨.೨೪೭) : "ಅನಭ್ಯಾಸೇನ ವಿದ್ಯಾನಾಮಸಂಸರ್ಗೇಣ ಧೀಮತಾಮ್ । ಅನುಗ್ರಹೇಣ ಚಾಕ್ಷಾಣಾಂ ಜಾಯತೇ ವ್ಯಸನಂ ನೃಣಾಮ್ ॥"

165. "Not associating with wise people, acquaintance with the ignorant and lack of self-control leads to distress."

This is another example of *jñāpaka-hētu*. It is comparable to the example in Daṇḍin (2.247): *anabhyāsēna vidyānām asaṁsargēṇa dhīmatām / anugrahēṇa cākṣāṇām jāyatē vyasanam nṛṇām //*

ಬೆಳೆದೊಱಗಿದ ಕೞವೆಗಳುಂ
ತಿಳಿಗೊಳದೊಳಗಲರ್ದ ಸರಸಿಜಪ್ರತತಿಗಳುಂ
ಕಳಹಂಸೆಗಳ್ಗೆ ಕೋಮಳ
ವಿಳಾಸವತಿಗಳ್ಗೆ ಪಡೆಗುಮೊಸಗೆಯನಾಗಳ್ ೧೬೬

ಬೆಳೆದು ಒಱಗಿದ ಕೞವೆಗಳುಮ್ ತಿಳಿಗೊಳದೊಳಗೆ ಅಲರ್ದ ಸರಸಿಜ ಪ್ರತತಿಗಳುಮ್ ಕಳಹಂಸೆಗಳ್ಗೆ ಕೋಮಳ ವಿಳಾಸವತಿಗಳ್ಗೆ ಪಡೆಗುಮ್ ಒಸಗೆಯನ್ ಆಗಳ್

"ಬೆಳೆದು ಬಾಗಿದ ಬತ್ತದ ತೆನೆಗಳೂ ತಿಳಿಗೊಳದಲ್ಲಿ ಅರಳಿದ ಕಮಲಗಳೂ ಕಲಹಂಸಗಳಿಗೆ ಹಾಗು ಕೋಮಲೆಯರಾದ ವಿಲಾಸಿನಿಯರಿಗೆ ಸಂತೋಷವನ್ನು ಕೊಡುತ್ತಿದ್ದುವು."

ವಿಲಾಸವತಿಯರ ಸಂತೋಷಕ್ಕೆ ಕಾರಣವನ್ನು ಹೇಳುವುದರಿಂದ ಇದು **"ಕಾರಕಹೇತು"** ಅಲಂಕಾರಕ್ಕೆ ಉದಾಹರಣೆ.

166. "The ear of corn bent with growth and lotuses blossoming in a clear pond make swans and graceful ladies exited with joy."

This is an example of a causality based on "initiation" (*pravartaka-hētu*). It can be compared with Daṇḍin's example (2.236).

ತಿಳಿಗೊಳಗಳುಮಮಳಾಶಾ
ವಳಯಮುಮತಿಧವಳಜಳದಜಳಧರಪಥಮುಂ
ತೊಳಪೆಳವೆಱೆಯುಂ ಕಳೆದುವು
ಮುಳಿಸಂ ಕಾಮಿಗಳ ಚಿತ್ತದೊಳ್ ನೆಲಸಿದುದಂ ೧೬೭

ತಿಳಿಗೊಳಗಳುಮ್ ಅಮಳ ಆಶಾ ವಳಯಮುಮ್ ಅತಿಧವಳ ಜಳದ ಜಳಧರ ಪಥಮುಮ್ ತೊಳಪ ಎಳವೆಱೆಯುಮ್ ಕಳೆದುವು ಮುಳಿಸಮ್ ಕಾಮಿಗಳ ಚಿತ್ತದೊಳ್ ನೆಲಸಿದುದನ್

"ತಿಳಿಗೊಳಗಳು, ನಿರ್ಮಲವಾದ ದಿಗಂತಗಳು, ಬಹಳ ಬೆಳ್ಳಗಿರುವ ಮೋಡಗಳ ಮಾರ್ಗ ಬೆಳಗುವ ಬಾಲಚಂದ್ರ ಕಾಮಿಗಳ ಚಿತ್ತದಲ್ಲಿ ನೆಲಸಿದ್ದ ಪ್ರಣಯಕೋಪವನ್ನು ಕಳೆದುವು."

167. "The clean ponds, the clear directions, the bright clouds in the sky, and the shining young Moon have removed the angry mood of the lustful lovers."

This is an example of a causality built on "turning back" or "removing" (*nivartaka hētu*) The previous

example took the form of initiating lovers while this one is about relieving the subjects of their bad mood.

ವಿಭಾವನೆ

Manifestation (*vibhāvane)*

ಕಾರಣಮನುಳಿಪಿ ನಿಜಸಂ
ಸ್ಕಾರಗುಣಾತಿಶಯದೊಳ್ ತಗುಳ್ಚುವುದಕ್ಕುಂ
ಸಾರಂ ವಿಭಾವನಾಳಂ
ಕಾರಂ ಮತ್ತದಱ ಲಕ್ಷ್ಯಮೀ ತೆಱನಕ್ಕುಂ ೧೬೮

ಕಾರಣಮನ್ ಉಳಿಪಿ ನಿಜಸಂಸ್ಕಾರ ಗುಣಾತಿಶಯದೊಳ್ ತಗುಳ್ಚುವುದು ಅಕ್ಕುಮ್ ಸಾರಮ್ ವಿಭಾವನಾ ಅಳಂಕಾರಮ್ ಮತ್ತೆ ಅದಱ ಲಕ್ಷ್ಯಮ್ ಈ ತೆಱನಕ್ಕುಮ್

"ಕಾರಣವನ್ನು ಬಯಸಿ ನಿಜಸಂಸ್ಕಾರಗುಣ ವಿಶೇಷದಿಂದ (ಕಾರ್ಯವನ್ನು) ಭಾವಿಸುವುದು 'ವಿಭಾವನೆ'. ಅದರ ಉದಾಹರಣೆ ಹೀಗಿರುತ್ತದೆ."

ಕಾರಣದ ಅಭಾವವನ್ನು ಹೇಳುವ ಮೂಲಕ ಕಾರಣಾಂತರವನ್ನು ಅಥವಾ ಕಾರ್ಯದ ಸ್ವಭಾವವನ್ನು ಭಾವಿಸುವುದು ವಿಭಾವನೆಯೆಂದು ದಂಡಿ ಹೇಳಿದ್ದಾನೆ (೨.೧೯೯).

168. A trope that "manifests" (*vibhāvana*) an effect by replacing a conventional cause for one based on another quality, clearly perceived or natural to the subject, is called *vibhāvane.* The following is an example.

Here, Śrīvijaya follows the definition of Daṇḍin (2.199): *prasiddha-hētu vyavṛttyā yatkiñcit kāraṇāntaram / yatra svābhāvikatvam vā vibhāvyam sā vibhāvanā //*

ಸಮಱುಗೆಯಿಲ್ಲದ ಮುಱುಕಮು
ಮಮರ್ದಿರೆ ಕೆಯ್ಗೆಯ್ಯದೊಪ್ಪುವಂದಮುಮವಳಾ
ನೆವಮಿಲ್ಲದ ದರಹಸಮುಂ
ಸಮದಾಲಸಲಲಿತಗಮನಮುಂ ಸೊಗಯಿಸುಗುಂ ೧೬೯

ಸಮಱುಗೆ ಇಲ್ಲದ ಮುಱುಕಮುಮ್ ಅಮರ್ದು ಇರೆ ಕೆಯ್ಗೆಯ್ಯದೆ ಒಪ್ಪುವ ಅಂದಮುಮ್ ಅವಳಾ ನೆವಮ್ ಇಲ್ಲದ ದರಹಸಮುಮ್ ಸಮದಾಲಸ ಲಲಿತ ಗಮನಮುಮ್ ಸೊಗಯಿಸುಗುಮ್

"ಚೆನ್ನಾಗಿ ಕಾಣಬೇಕೆಂಬ ಪ್ರಯತ್ನವಿಲ್ಲದೆಯೇ ಸಹಜವಾಗಿರುವ ಮುಖಭಂಗಿ, ಸಿಂಗರಿಸಿಕೊಳ್ಳದಿದ್ದರೂ ಒಪ್ಪುವ ಚೆಲುವು, ಕಾರಣವಿಲ್ಲದ ನಸುನಗೆ, ಸೊಕ್ಕಿನಿಂದ ಕೂಡಿದ ಲಲಿತ ಗಮನ ಒಂದುಗೂಡಿರಲು ಸೊಗಯಿಸುವುವು."

ಬಾಹ್ಯಕಾರಣಗಳು ಯಾವುವೂ ಇಲ್ಲದೆ ಕಾರ್ಯೋತ್ಪತ್ತಿಯನ್ನು ಮಾಡಿರುವುದರಿಂದ ವಿಭಾವನಾಲಂಕಾರ.

169. "Her passion lacks artifice, her natural beauty lacks decoration, her smile is without reason, and her walk shows a slow and beautiful style fit for a lustful young woman."

A similar example is given by Daṇḍin (2.201) to indicate a figure that "manifests natural qualities" (*svābhāvika vibhāvanā*):

ಲೇಶ (ಲವ)

Trace *(Lēśa)*

ಗುಣದೊಳಮಱಿಪುವುದಿನಿಸವ
ಗುಣಮಂ ದೋಷದೊಳಮಿನಿಸು ಗುಣಮಂ ತಂದಿ
ರ್ದಣಿಸುವುದು ಲೇಶಮೆಂಬುದು
ಗಣಿದದಿನಿಂತಕ್ಕುಮದಱ ಲಕ್ಷ್ಯವಿಭಾಗಂ ೧೭೦

ಗುಣದೊಳಮ್ ಅಱಿಪುವುದು ಇನಿಸು ಅವಗುಣಮನ್ ದೋಷದೊಳಮ್ ಇನಿಸು ಗುಣಮನ್ ತಂದಿರ್ದು ಎಣಿಸುವುದು ಲೇಶಮ್ ಎಂಬುದು ಗಣಿದದಿನ್ ಇಂತು ಅಕ್ಕುಮ್ ಅದಱ ಲಕ್ಷ್ಯವಿಭಾಗಮ್

ಗುಣದಲ್ಲಿ ಒಂದಿಷ್ಟು ಅವಗುಣವನ್ನು, ದೋಷದಲ್ಲಿ ಸ್ವಲ್ಪ ಗುಣವನ್ನು ತಂದಿಟ್ಟುಕೊಂಡು ವರ್ಣಿಸುವುದು 'ಲೇಶ' ಎಂಬ ಅಲಂಕಾರ.

ದಂಡಿ ಇದನ್ನು ಕುರಿತು ಹೇಳುತ್ತಾ ಗುಪ್ತ ವಿಷಯದ ನಿಜವನ್ನು ಮರೆಸುವುದು 'ಲೇಶ' ಎಂದಿದ್ದಾನೆ ("ಲೇಶೋಲೇಶೇನ ನಿರ್ಭಿನ್ನವಸ್ತುರೂಪನಿಗೂಹನಮ್," ೨.೨೬೫). ಭಾಮಹ ಈ ಅಲಂಕಾರವನ್ನು ಒಪ್ಪುವುದಿಲ್ಲ.

170. A figure of speech in which something with merit is shown to have a trace of faults and something with faults is shown to have a trace of merit is called *lēśa*.

Daṇḍin defines this trope as hiding a fact through some pretext, or praising with reproach, or reproaching with praise: *lēśō lēśēna nirbhinna-vasturūpa-nigūhanam* (2.265), *lēśam ēkē vidur nindām stutim vā lēśataḥ kṛtām* (2.268).

ಮಾನಿಯುಮುದಾರಚರಿತನು
ಮಾನತರಿಪುನಿಕರನುಂ ಮನಸ್ವಿಯುಮಂತಾ
ಮಾನಸರನಾರುಮಂ ಮನ
ಕೇನುಂ ಮುಟ್ಟಲ್ಲದಂತು ಬಗೆವುದು ದೋಷಂ ೧೭೧

ಮಾನಿಯುಮ್ ಉದಾರ ಚರಿತನುಮ್ ಆನತ ರಿಪು ನಿಕರನುಮ್ ಮನಸ್ವಿಯುಮ್ ಅಂತು ಆ ಮಾನಸರನ್ ಆರುಮನ್ ಮನಕೆ ಏನುಮ್ ಮಟ್ಟು ಅಲ್ಲದಂತು ಬಗೆವುದು ದೋಷಮ್

"ಸ್ವಾಭಿಮಾನಿಯು, ಉದಾರಚರಿತನು, ಶತ್ರುಗಳನ್ನು ಬಗ್ಗಿಸಿದವನು, ಸಹೃದಯನು ಆದವನು ಬೇರೆ ಮನುಷ್ಯರ ಸ್ಪರ್ಶ ತನ್ನ ಮನಸ್ಸಿಗೆ ಇಲ್ಲ ಎಂದು ಭಾವಿಸುವುದು ದೋಷ."

ಅನೇಕ ಗುಣಗಳಿದ್ದರೂ ಬೇರೆಯವರ ಜತೆ ತನಗೇನೂ ಸಂಬಂಧವಿಲ್ಲ ಎಂದು ಭಾವಿಸುವುದು ದೋಷವಾದುದರಿಂದ ಇದು 'ಲೇಶ'.

171. "A generous and noble-minded person, full of self-respect who, having humbled his enemies, thinks that no other person can reach his level is at fault."

ಕುಲಜನುಮಲ್ಲಂ ನಣ್ಪಿನ
ಬಲಮುಂ ತನಗಿಲ್ಲ ಕಣ್ಗಮೇಳಿದನಾರೊಳ್
ನೆಲಸಿರನೆಲ್ಲಿಯುಮವನಂ
ಚಲವೆಂದುಂ ಪತ್ತುವಿಡದದೊಂದುಂಟು ಗುಣಂ ೧೭೨

ಕುಲಜನುಮ್ ಅಲ್ಲನ್ ನಣ್ಪಿನ ಬಲಮುಮ್ ತನಗೆ ಇಲ್ಲ ಕಣ್ಗಮ್ ಏಳಿದನ್ ಆರೊಳ್ ನೆಲಸಿರನ್ ಎಲ್ಲಿಯುಮ್ ಅವನನ್ ಚಲಮ್ ಎಂದುಮ್ ಪತ್ತುವಿಡದು ಅದು ಒಂದು ಉಂಟುಗುಣಮ್

"ಅವನು ಕುಲೀನನೂ ಅಲ್ಲ, ಅವನಿಗೆ ನಂಟಸ್ತಿಕೆಯ ಬಲವೂ ಇಲ್ಲ, ನೋಡಲು ಕುರೂಪಿ, ಯಾರ ಜತೆಗೂ ಸ್ಥಿರವಾಗಿ ಇರುವುದಿಲ್ಲ. ಆದರೆ ಅವನಲ್ಲಿ ಚಲವೆಂದೂ ಕುಗ್ಗುವುದಿಲ್ಲ. ಈ ಗುಣ ಮಾತ್ರ ಅವನಲ್ಲಿದೆ."

172. "He is not noble. He has no support of kinsmen. He is ugly to look at. He does not stay with anyone for long. Still, he has the quality of resoluteness that does not diminish."

ಉದಾತ್ತ

Magnanimity (*udātta*)

ಮಿಗೆ ಮನದ ಪೆಂಪುಮಂ ಕೆ
ಯ್ಮಿಗ ವಿಭವದ ಪೆಂಪುಮಂ ವಿಶೇಷಿಸಿ ಪೇೞಲ್
ಬಗೆವುದುದಾತ್ತಾಲಂಕಾ
ರಗುಣೋದಯಮುದಱದಿಂತು ಸದುದಾಹರಣಂ ೧೭೩

ಮಿಗೆ ಮನದ ಪೆಂಪುಮಮ್ ಕೆಯ್ಮಿಗೆ ವಿಭವದ ಪೆಂಪುಮಮ್ ವಿಶೇಷಿಸಿ ಪೇೞಲ್ ಬಗೆವುದು ಉದಾತ್ತ ಅಲಂಕಾರ ಗುಣೋದಯಮ್ ಅದಱದು ಇಂತು ಸದುದಾಹರಣಮ್

ಆಶಯದ ಹಿರಿಮೆಯನ್ನೂ ವಿಭವದ ಮಹತ್ತ್ವವನ್ನೂ ವಿಶೇಷವಾಗಿ ಹೇಳಿದರೆ ಅದು 'ಉದಾತ್ತ' ಎಂಬ ಅಲಂಕಾರ. ಅದರ ಒಳ್ಳೆಯ ಉದಾಹರಣೆ ಹೀಗಿದೆ.

ದಂಡಿ ಹೇಳಿದ ಲಕ್ಷಣ ಹೀಗಿದೆ (೨.೩೦೦): "ಆಶಯಸ್ಯ ವಿಭೂತೇರ್ವಾ ಯನ್ಮಹತ್ತ್ವಮನುತ್ತಮಮ್ । ಉದಾತ್ತಂ ನಾಮ ತಂ ಪ್ರಾಹುರಲಂಕಾರಂ ಮನೀಷಿಣಃ ॥"

173. If a figure of speech represents greatness of mind and the greatness of glory is highlighted, it is called *udātta*. An appropriate example follows.

Daṇḍin also gives a similar definition (2.300): *āśayasya vibhūtērvā yanmahattvam anuttamam / udāttam nāma tam prāhur alaṅkāram manīṣiṇaḥ //*

ಚಲದೆಡೆಗೆ ಪಿರಿದು ರಜಮುಂ
ನೆಲನುಂ ಪ್ರಿಯದೆಡೆಗೆ ಕಿಱಿದು ಕೊಳಲುಂ ಕುಡಲುಂ
ಚಲಮುಂ ಪ್ರಿಯಮುಂ ಬೞಿ ಸಮ
ಬಲಮಾಗಿರೆ ನೆಗಟ್ಬ ಬಗೆಗೆ ಕಿಱಿದೇಂ ಪಿರಿದೇಂ ೧೭೪

ಚಲದೆಡೆಗೆ ಪಿರಿದು ರಜಮುಮ್ ನೆಲನುಮ್ ಪ್ರಿಯದೆಡೆಗೆ ಕಿಱಿದು ಕೊಳಲುಮ್ ಕುಡಲುಮ್ ಚಲಮುಮ್ ಪ್ರಿಯಮುಮ್ ಬೞಿ ಸಮಬಲಮ್ ಆಗಿರೆ ನೆಗಟ್ಬ ಬಗೆಗೆ ಕಿಱಿದು ಏನ್ ಪಿರಿದು ಏನ್

"ಚಲ ಹಿಡಿದಾಗ ಒಂದು ಧೂಳಿನ ಕಣ ಕೂಡ ದೊಡ್ಡದು ಎನ್ನುತ್ತಾನೆ. ತನಗೆ ಪ್ರಿಯವೆನಿಸಿದಾಗ ದಾನಕೊಡಲು ಇಡಿಯ ಭೂಮಂಡಲವೇ ಕಿರಿದೆನ್ನುತ್ತಾನೆ. ಹೀಗೆ ಚಲ, ಪ್ರಿಯ ಎಂಬ ಎರಡೂ ಅವನ ಬಳಿ ಸಮಬಲವಾಗಿರುವಾಗ ಅವನ ದೃಷ್ಟಿಗೆ ಯಾವುದು ತಾನೆ ಕಿರಿದು, ಯಾವುದು ತಾನೆ ಹಿರಿದು?"

ಇಲ್ಲಿ ಆಶಯದ ಮಹತ್ತ್ವವನ್ನು ಹೇಳುತ್ತಿರುವುದರಿಂದ 'ಉದಾತ್ತ'.

174. "When he is firm in his wealth, he says that even a dust particle is too big. If he is intent to give something, he says that even the earth is too small to donate. When for him both wealth and generosity are in balance, what is small and what is big?"

ಅೞಿದೞಿಪಿ ಬೞಿಯನುೞಿಯದೆ
ಪೞಿವರುಮಂ ತವಿಸಿ ಕಳೆಯದುೞಿವಳನಾದಂ
ಪೞಿಕೆಯ್ದು ತೊೞ್ತನುೞಿದಂ
ತುೞಿದ ಮಹಾಪುರುಷರಱಿಯದುೞಿದರೆ ಸಿರಿಯಂ ೧೭೪

ಅೞಿದು, ಅೞಿಪಿ ಬೞಿಯನ್ ಉೞಿಯದೆ ಪೞಿವರುಮನ್ ತವಿಸಿ ಕಳೆಯದೆ ಉೞಿವಳನ್ ಆದಮ್ ಪೞಿಕೆಯ್ದು ತೊೞ್ತಿನ್ ಉೞಿದಂತೆ ಉೞಿದ ಮಹಾಪುರುಷರ್ ಅಱಿಯದೆ ಉೞಿದರೆ ಸಿರಿಯನ್

"ತಾವೂ ನಾಶವಾಗಿ, ಇತರರನ್ನೂ ನಾಶಮಾಡಿ, ಹತ್ತಿರದೆಡೆಯನ್ನು ಬಿಡದೆ, ನಿಂದಿಸಿದವರನ್ನು ಕೂಡ ಕಳೆಯದೆ ಇರುವ ಲಕ್ಷ್ಮಿಯನ್ನು ತೊತ್ತನ್ನು ಬಿಟ್ಟುಬಿಡುವಂತೆ ಬಿಟ್ಟ ಮಹನೀಯರು ತಿಳಿವಳಿಕೆಯಿಲ್ಲದೆ ಬಿಟ್ಟು ಬಿಟ್ಟರೆ?"

175. "Lakṣmi (the goddess of wealth) serves equally the people who destroy others and those who get themselves destroyed. She serves those who are very close and also those who are at a distance. Can any great man be considered ignorant if he discards Lakṣmi as one would leave a (fickle) servant?"

ಕಸವರಮೆಂಬುದು ನೆಱಿಸೈ
ರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ

ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವುವೆಲ್ಲಂ ೧೭೬

ಕಸವರಮ್ ಎಂಬುದು ನೆಱಿ ಸೈರಿಸಲ್ ಆರ್ಪೊಡೆ ಪರ ವಿಚಾರಮನ್ ಧರ್ಮಮುಮನ್ ಕಸವೇನ್ ಕಸವರಮೇನ್ ಉಬ್ಬಸಮನ್ ಬಸಮ್ ಅಲ್ಲದೆ ಇರ್ದು ಮಾಡುವುವು ಎಲ್ಲಮ್

"ಇತರರ ವಿಚಾರವನ್ನು ಧರ್ಮವನ್ನು ಚೆನ್ನಾಗಿ ಸಹಿಸುವ ಸಾಮರ್ಥ್ಯವನ್ನು ಹೊಂದಿದ್ದರೆ ಅಂತಹ ಸಹನಾಗುಣವನ್ನು ಚಿನ್ನವೆಂದು ಹೇಳಬೇಕು. (ಇಂತಹ ಗುಣ ಇಲ್ಲದವರಿಗೆ) ಕಸವಿರಲಿ, ಹೊನ್ನಿರಲಿ ಕ್ಲೇಶವನ್ನೇ ಉಂಟು ಮಾಡುತ್ತವೆ."

176. "If someone tolerates the ideas and the religion of others, that is equal to gold. For those who cannot win over the senses, both dirt and gold cause distress."

ಪಾೞಿ ನಿಲೆ ನೆಗೞ್ದಿ ಬಾೞ್ವುದು
ಬಾೞೆಂಬುದು ನಿಕ್ಕುವಂ ಗುಣಗ್ರಾಮಣಿಗಳ್
ಪಾೞಾಗೆ ತೆಗೞ್ದಿ ಬಾೞ್ಕೆ
ಬಾೞೇನಾಚಂದ್ರತಾರಮೋ ಮಾನಸರಾ ೧೭೭

ಪಾೞಿ ನಿಲೆ ನೆಗೞ್ದಿ ಬಾೞ್ವುದು ಚಾೞ್ ಎಂಬುದು ನಿಕ್ಕುವಮ್ ಗುಣ ಗ್ರಾಮಣಿಗಳ್ ಪಾೞಾಗೆ ತೆಗೞ್ದಿ ಬಾೞ್ವಿ ಆ ಬಾೞ್ ಏನ್ ಆಚಂದ್ರತಾರಮೋ ಮಾನಸರಾ

"ಗುಣವಂತರು ಕ್ರಮತಪ್ಪದಂತೆ ನಡೆಸುವ ಜೀವನವೇ ಜೀವನವೆಂಬುದು ನಿಶ್ಚಿತ. ಎಲ್ಲರೂ ತೆಗಳುವ ಹಾಳಾದ ಜೀವನ ಚಂದ್ರತಾರೆಗಳಂತೆ ಶಾಶ್ವತವೇನು?"

177. "The life of meritorious people who follow custom is the real life. If one leads a life that is

open to blame from others, will it achieve permanence, like the moon and the stars?"

ಪೊಲ್ಲಮೆಯುಂ ಗುಣಮುಂ ತಮ
ಗಲ್ಲದೆ ಪುದುವಲ್ತು ಮತ್ತೆ ತನಗಂ ಪೆಱರ್ಗಂ
ನಿಲ್ಲದೆ ಜನಮಂತಾಗಿಯು
ಮೆಲ್ಲಂ ಮುನಿಸೊಸಗೆವೆರಸು ಪೞಿಗುಂ ಪೊಗೞ್ಗುಂ ೧೭೮

ಪೊಲ್ಲಮೆಯುಮ್ ಗುಣಮುಮ್ ತಮಗೆ ಅಲ್ಲದೆ ಪುದುವಲ್ತು ಮತ್ತೆ ತನಗಮ್ ಪೆಱರ್ಗಮ್ ನಿಲ್ಲದೆ ಜನಮ್ ಅಂತಾಗಿಯುಮ್ ಎಲ್ಲಮ್ ಮುನಿಸು ಒಸಗೆವೆರಸು ಪೞಿಗುಮ್ ಪೊಗೞ್ಗುಮ್

"ಕೆಟ್ಟತನವೂ ಗುಣವೂ ತಮಗೆ ಸೇರಿದ್ದಲ್ಲದೆ ತನಗೂ ಇತರರಿಗೂ ಸೇರಿದ್ದಲ್ಲ. ಹಾಗಿದ್ದರೂ ಜನರೆಲ್ಲರೂ ಕೋಪಬಂದಾಗ ಬಿಡದೆ ಹಳಿಯುತ್ತಾರೆ. ಸಂತೋಷವಾದಾಗ ಹೊಗಳುತ್ತಾರೆ."

ಈ ಪದ್ಯದ ಜತೆಗೆ ಮುಂದಿನ ಪದ್ಯವನ್ನೂ ಅನ್ವಯಿಸಿದಾಗ ಅರ್ಥವಿಶದ ವಾಗುತ್ತದೆ.

ಮಿಗೆ ಪೞಿವರೆನ್ನನೆನ್ನದೆ
ಪೊಗೞ್ವರ್ ನೆರೆದೆಲ್ಲರೆನ್ನನೆನ್ನದೆ ತನ್ನೊಳ್
ಬಗೆದುಭಯಲೋಕಹಿತದೊಳ್
ನೆಗೞ್ಗೆ ಜನಂ ಪೞಿಗೆ ಪೊಗೞ್ಗೆ ತನಗೇನದಱಿಂ ೧೭೯

ಮಿಗೆ ಪೞಿವರ್ ಎನ್ನನ್ ಎನ್ನದೆ ಪೊಗೞ್ವರ್ ನೆರೆದೆಲ್ಲರ್ ಎನ್ನನ್ ಎನ್ನದೆ ತನ್ನೊಳ್ ಬಗೆದು ಉಭಯ ಲೋಕ ಹಿತದೊಳ್ ನೆಗೞ್ಗೆ ಜನಮ್ ಪೞಿಗೆ ಪೊಗೞ್ಗೆ ತನಗೇನ್ ಅದಱಿಂ

"ಎಲ್ಲರೂ ನನ್ನನ್ನು ತೆಗಳುವರು ಎಂದುಕೊಳ್ಳದೆ, ಅವರೆಲ್ಲರೂ ನನ್ನನ್ನು ಹೊಗಳುವರೆಂದೂ ಎಣಿಸದೆ, ಇಹಪರಗಳೆರಡಕ್ಕೂ ಹಿತವಾದುದನ್ನು ಮಾತ್ರ ತಾನು ಆಚರಿಸಬೇಕು. ಜನ ಹಳಿಯಲಿ, ಹೊಗಳಲಿ, ಅದರಿಂದ ತನಗೇನು?"

178-179. "Vice and virtue are both associated with the person who has them. People abuse others when they are angry and praise them when they are happy. Without thinking about those who abuse or praise others, one should practice that which is beneficial in this world and in the next. What is there to consider if one praises or abuses?"

ಪ್ರಣತಾರಿತ್ರುಟಿತಮುಕ್ತಾ
ಮಣಿಗಣಮುತ್ತಂಸದಿಂ ಕಟಿಲ್ದುದಿರೆ ಸಭಾಂ
ಗಣಮೊಪ್ಪೆ ವೀರನಾರಾ
ಯಣನಾ ತಾರಕಿತನಭದ ವೋಲ್ ಸೊಗಯಿಸುಗುಂ ೧೮೦

ಪ್ರಣತ ಅರಿ ತ್ರುಟಿತ ಮುಕ್ತಾಮಣಿ ಗಣಮ್ ಉತ್ತಂಸದಿನ್ ಕಟಿಲ್ದು ಉದಿರೆ ಸಭಾಂಗಣಮ್ ಒಪ್ಪೆ ವೀರನಾರಾಯಣನ್ ಆ ತಾರಕಿತ ನಭದವೋಲ್ ಸೊಗಯಿಸುಗುಮ್

"ನಮಸ್ಕರಿಸಿದ ಶತ್ರುಗಳ ಮುತ್ತಿನ ಮಣಿಗಳು ಶಿರೋಭೂಷಣದಿಂದ ಕಳಚಿಕೊಂಡು ಕೆಳಗುದುರಲು ವೀರನಾರಾಯಣನ ಸಭಾಂಗಣವೆಲ್ಲ ನಕ್ಷತ್ರಗಳಿಂದ ಕೂಡಿದ ಗಗನದಂತೆ ಸೊಗಯಿಸುತ್ತದೆ."

180. "As pearls and gems from the crowns of prostrated enemies fall down, the court of Vīranārāyaṇa looks like the sky embedded with stars."

The author uses *udāttālaṅkāra* here to glorify the king Nṛpatuṅga. He identifies Nṛpatuṅga with Vīranārāyaṇa and speaks about figures at his court.

ಪರಚಕ್ರಭೂಪರಟ್ಟಿದ
ಕರಿಗಳ್ ಬಿಡುತರ್ಪ ಮದದ ಪೊನಲಿಂದೆತ್ತಂ

ನರಲೋಕಚಂದ್ರನಾ ಮಂ
ದಿರದೊಳಗೊಳಗೆಲ್ಲ ಕಾಲಮುಂ ಕೆಸಱಿಕ್ಕುಂ ೧೮೧

ಪರ ಚಕ್ರ ಭೂಪರ್ ಅಟ್ಟಿದ ಕರಿಗಳ್ ಬಿಡುತರ್ಪ ಮದದ ಪೊನಲಿಂದೆ ಎತ್ತಮ್ ನರಲೋಕ ಚಂದ್ರನಾ ಮಂದಿರದೊಳಗೊಳಗೆ ಎಲ್ಲ ಕಾಲಮುಮ್ ಕೆಸಱಿಕ್ಕುಮ್

"ಇತರ ರಾಜರು (ಕಾಣಿಕೆಯಾಗಿ) ಕಳುಹಿಸಿದ ಆನೆಗಳು ಸುರಿಸುವ ಮದಜಲದ ಪ್ರವಾಹದಿಂದ ನರಲೋಕ ಚಂದ್ರನ ಅರಮನೆಯೊಳಗಿನ ನೆಲ ಎಲ್ಲ ಕಾಲವೂ ಕೆಸರಾಗಿಯೇ ಇರುತ್ತದೆ.

ಮೇಲಿನ ಎರಡು ಪದ್ಯಗಳಲ್ಲಿ ಕವಿ ನೃಪತುಂಗನ ವೈಭವವನ್ನು ವರ್ಣಿಸಿರುವುದು ಸ್ಪಷ್ಟವಾಗಿದೆ.

181. "The flow of liquid from the temples of rutting elephants sent as a gift by other kings always fills the grounds of the palace of the *naralōkacandra* (the Moon in the world of men) with mud."

The epithet *naralōkacandra* and the image is a poetic convention used by poets to describe the glory of great kings.

ಅಪಹ್ನುತಿ

Denial or Presenting Something as Otherwise (*apahnuti*)

ಅತಿಶಯಿತವಸ್ತುವಿಷಯ
ಪ್ರತೀತಿಯಂ ಮಱಿಸಿ ನಿಱಿಸಿ ಪೇಱ್ವುದು ಪೆಱತಂ
ಸತತಮಪಹ್ನುತಿಸದಳಂ
ಕೃತಿ ಮತ್ತಿಂತಕ್ಕುಮದಱ ಲಕ್ಷ್ಯವಿಕಲ್ಪಂ ೧೮೨

ಅತಿಶಯಿತ ವಸ್ತು ವಿಷಯ ಪ್ರತೀತಿಯನ್ ಮಱಸಿ ನಿಱಸಿ ಪೇೞ್ವುದು ಪೆಱತನ್ ಸತತಮ್ ಅಪಹ್ನುತಿ ಸದಳಂಕೃತಿ ಮತ್ತೆ ಇಂತು ಅಕ್ಕುಮ್ ಅದಱ ಲಕ್ಷ್ಯ ವಿಕಲ್ಪಮ್

ಅತಿಶಯವಾಗಿ ಕಾಣುವ ವಸ್ತುವಿನ ಸ್ವರೂಪವನ್ನು ಮರೆಯಿಸಿ ಇನ್ನೊಂದು ಅರ್ಥವನ್ನು ಹೇಳುವುದು 'ಅಪಹ್ನುತಿ' ಎಂಬ ಒಳ್ಳೆಯ ಅಲಂಕಾರ. ಅದರ ಲಕ್ಷ್ಯ ಪ್ರಭೇದಗಳು ಹೀಗಿರುತ್ತವೆ.

'ಮನ್ಮಥನಿಗೆ ಇರುವ ಬಾಣಗಳು ಐದಲ್ಲ; ಸಾವಿರಾರು' ಎಂಬುದಾಗಿ ಇರುವ ಅಂಶವನ್ನು ಮರೆಸಿ ಇನ್ನೊಂದನ್ನು ಹೇಳುವುದು 'ಅಪಹ್ನುತಿ' ಎಂದು ದಂಡಿ ಹೇಳಿದ್ದಾನೆ (೨.೩೦೪).

182. Denying the superlative nature of the subject and holding the object as superior is called *apahnuti*. The following are the types of *apahnuti*.

Daṇḍin gives a similar definition with an example saying that the God of Love has one thousand arrows and not five (2.304): *apahnutir apahnutya kiñcidanyārtha-darśanam / na pañcēṣu smarastasya sahasram patriṇāmiti //*

ಅಮೃತಮಯಕಿರಣನೆಂಬುದು
ಮಮರದು ಶಿಶಿರಾಂಶುವೆಂಬುದುಂ ಶಶಿಗೆಂದುಂ
ಸಮನಿಸಿ ವಿಷಕಿರಣನುಮನ
ಲಮರೀಚಿಯುಮೆಂದೆನಲ್ಕೆ ಮೋಹಾಪೋಹಂ ೧೮೩

ಅಮೃತಮಯ ಕಿರಣನ್ ಎಂಬುದುಮ್ ಅಮರದು ಶಿಶಿರ ಅಂಶುವೆಂಬುದುಮ್ ಶಶಿಗೆ ಎಂದುಮ್ ಸಮನಿಸಿ ವಿಷಕಿರಣನುಮ್ ಅನಲ ಮರೀಚಿಯುಮ್ ಎಂದು ಎನಲ್ಕೆ ಮೋಹಾಪೋಹಮ್

"ಚಂದ್ರನಿಗೆ ಅಮೃತಕಿರಣನೆಂದೂ ಶೀತಕಿರಣನೆಂದೂ (ಹೇಳುವುದು) ಸಲ್ಲದು. ಸರಿಯಾಗಿ ಹೇಳಬೇಕಾದರೆ ಅವನಿಗೆ ವಿಷಕಿರಣ, ಅಗ್ನಿಕಿರಣ

ಎಂದು ಕರೆಯಬೇಕು. ಹೀಗೆ ಹೇಳುವುದು ಮೋಹದಿಂದ ಮಾಡುವ ಅಪೋಹ.

ಈ ರೀತಿ ಹೇಳುವುದು ಕಾಮಪೀಡಿತನೆಂದು ದಂಡಿ ತನ್ನ ಲಕ್ಷಣದಲ್ಲಿ ಹೇಳಿದ್ದಾನೆ (೨.೩೦೭) : "ಅಮೃತಸ್ಯಂದಿ ಕಿರಣಶ್ಚಂದ್ರಮಾ ನಾಮತೋ ಮತಃ । ಅನ್ಯ ಏವಾಯಮರ್ಥಾತ್ಮಾ ವಿಷನಿಷ್ಯಂದಿದೀಧಿತಿಃ ॥" ವಿವರಣೆ ಹೀಗಿದೆ (೨.೩೦೮) : "ಇತಿ ಚಂದ್ರತ್ವ ಮೇವೇಂದೌ ನಿವರ್ತ್ಯಾರ್ಥಾಂತರಾತ್ಮತಾ । ಉಕ್ತಾ ಸ್ಮರಾರ್ತೇ ನೇತ್ಯೇಷಾ ಸ್ವರೂಪಾಪಹ್ನುತಿರ್ಮತಾ ॥"

183. "The moon cannot be said to have cool rays of nectar. He should be rightly called as one with fiery rays of poison."

Daṇḍin also gives a similar example (2.307): *amṛta-syandi-kiraṇaścandramā nāmatō mataḥ / anya ēvāyam arthātmā viṣa-niṣyandi-dīdhitiḥ //*

ಕುಸುಮಂಗಳೆಂಬ ಮಾತದು
ಪುಸಿ ದಹನಮಯಂಗಳಂಬುಗಳ್ ಮನಸಿಜನಾ
ಜಸಮಱಿಯೆ ಸುಡುವುವೆರ್ದೆಯಂ
ಬಿಸಿಯವಿವೆಂದಿಂತೆ ಪೇೞೆ ಧರ್ಮಾಪೋಹಂ ೧೮೩

ಕುಸುಮಂಗಳ್ ಎಂಬ ಮಾತು ಅದು ಪುಸಿ ದಹನ ಮಯಂಗಳ್ ಅಂಬುಗಳ್ ಮನಸಿಜನಾ ಜಸಮ್ ಅಱಿಯೆ ಸುಡುವುವು ಎರ್ದೆಯನ್ ಬಿಸಿಯವು ಇವು ಎಂದು ಇಂತೆ ಪೇೞೆ ಧರ್ಮಾಪೋಹಮ್

"ಇವು ಹೂಗಳೆಂಬ ಮಾತು ಸುಳ್ಳು. ಮನ್ಮಥನ ಬಾಣಗಳು ನಿಜವಾಗಿ ಬೆಂಕಿಗಳು. ಕಳೆಗುಂದಿಸಿ ಅವು ಎದೆಯನ್ನು ಸುಡುವುವು, ತುಂಬಾ ಬಿಸಿಯಾದುವು" ಎಂದು ಹೇಳಿದರೆ ಅದು 'ಧರ್ಮಾಪೋಹ'.

'ಅಪಹ್ನುತಿ'ಯ ಇನ್ನೊಂದು ಪ್ರಭೇದವಾದ 'ಧರ್ಮಾಪೋಹ'ಕ್ಕೆ ಇದು ಉದಾಹರಣೆ.

184. “It is false to say that flowers are the arrows of the God of Love (*manmatha*). Actually, they are flames. They are very hot and burn the heart.” Such a description is a *denial of a particular characteristic* (*dharmāpōha*).

ಸ್ಮರನಸ್ತ್ರಸಮಿತಿಯದು ನಿ
ರ್ಭರಮಂಗಮನುರ್ಚಿ ಪೋಗೆಯುಂ ಪೋಬಟಿಯಂ
ದೊರೆಕೊಳಿಸಲಾಗದದಱಿಂ
ಶರತತಿಯಲ್ತೆಂಬುದಿಂತು ಧರ್ಮಾಪೋಹಂ ೧೮೫

ಸ್ಮರನ ಅಸ್ತ್ರಸಮಿತಿ ಅದು ನಿರ್ಭರಮ್ ಅಂಗಮನ್ ಉರ್ಚಿ ಪೋಗೆಯುಮ್ ಪೋಬಟಿಯನ್ ದೊರೆಕೊಳಿಸಲ್ ಆಗದು ಅದಱಿನ್ ಶರತತಿ ಅಲ್ತು ಎಂಬುದು ಇಂತು ಧರ್ಮಾಪೋಹಮ್

“ಮನ್ಮಥನ ಬಾಣಸಮೂಹವು ರಭಸದಿಂದ ಶರೀರವನ್ನು ಭೇದಿಸಿಕೊಂಡು ಹೋದರೂ ಅದು ಹೋದ ಮಾರ್ಗವನ್ನು ಹಿಡಿಯಲಾಗುವುದಿಲ್ಲ. ಅದರಿಂದ ಇದು ಬಾಣಸಮೂಹವೇ ಅಲ್ಲ” ಎನ್ನುವುದು ‘ಧರ್ಮಾಪೋಹ’.

185. “The arrows of the God of Love pierce the body very fast but their route cannot be identified. Hence they are not arrows.”

This is also an example of *dharmāpōha* as a comment is made on the nature of arrows.

ಸ್ಮರನಯ್ದಂಬುಗಳಲ್ತಿವು
ಶರಕೋಟಿಗಳಿಲ್ಲದಾಗಳಿಂತೀ ಲೋಕಾಂ
ತರವರ್ತಿ ವಿರಹಿಗಣಮಂ
ನಿರುತಂ ಮರ್ದಿಸವವುಯೆನೆ ಸುಗುಣಾಪೋಹಂ ೧೮೬

ಸ್ಮರನ ಅಯ್ದು ಅಂಬುಗಳ್ ಅಲ್ತು ಇವು ಶರಕೋಟಿಗಳ್ ಇಲ್ಲದಾಗಳ್ ಇಂತು ಈ ಲೋಕಾಂತರವರ್ತಿ ವಿರಹಿ ಗಣಮನ್ ನಿರುತಮ್ ಮರ್ದಿಸವು ಅವು ಎನೆ ಸುಗುಣಾಪೋಹಮ್

"ಇವು ಮನ್ಮಥನ ಐದು ಬಾಣಗಳಲ್ಲ; ಶರಕೋಟಿಗಳು. ಇಲ್ಲದಿದ್ದರೆ ಈ ರೀತಿ ಲೋಕದಲ್ಲೆಲ್ಲ ವಿರಹಿ ಜನವನ್ನು ಯಾವಾಗಲೂ ಇಷ್ಟೊಂದು ಪೀಡಿಸುತ್ತಿರಲಿಲ್ಲ" ಎಂದರೆ ಅದು 'ಸುಗುಣಾಪೋಹ.'

ಐದು ಹೂಬಾಣಗಳಿಗೆ ಇರಬೇಕಾದ ಸುಗುಣವನ್ನು ನಿರಾಕರಿಸುತ್ತಿರುವುದರಿಂದ ಇದು ಸುಗುಣಾಪೋಹ.

186. "These are not five arrows of the God of Love. There are one crore (ten million) arrows. Otherwise how can they trouble the innumerable lovers in separation?" Such a description is a *denial of a quality* (*guṇāpōha*).

ನವವಿಧರಸಂಗಳಂ ಮನ
ಕೆ ವರೆ ನಿರೂಪಿಸುವ ವಚನವಿರಚನೆ ರಸವ
ದ್ವಿವಿಧಾಳಂಕಾರಂ ಕುಱಿ
ತು ವಿಕಲ್ಪಿಸಿ ತೋರ್ಪೆನದಱ ಲಕ್ಷ್ಯಕ್ರಮಮುಂ ೧೮೭

ನವ ವಿಧ ರಸಂಗಳನ್ ಮನಕೆ ವರೆ ನಿರೂಪಿಸುವ ವಚನ ವಿರಚನೆ ರಸವದ್ ವಿವಿಧ ಅಳಂಕಾರಮ್ ಕುರಿತು ವಿಕಲ್ಪಿಸಿ ತೋರ್ಪೆನ್ ಅದಱ ಲಕ್ಷ್ಯ ಕ್ರಮಮನ್

ಒಂಬತ್ತು ಬಗೆಯ ರಸಗಳು ಮನದಟ್ಟಾಗುವಂತೆ ನಿರೂಪಿಸುವ ವಚನ ವಿರಚನೆ ರಸವದಲಂಕಾರ. ಅದರ ಪ್ರಭೇದಗಳನ್ನು ಉದಾಹರಣೆಗಳಿಂದ ತೋರಿಸುವೆನು.

ದಂಡಿ 'ರಸವದ್ ರಸಪೇಶಲಮ್' (೨.೨೭೫) ಎಂಬ ಮಾತುಗಳಿಂದ ರಸವದಲಂಕಾರವನ್ನು ಪ್ರೇಯಸ್ ಮತ್ತು ಊರ್ಜಿತಾಲಂಕಾರಗಳ ಜತೆ ಸೇರಿಸಿ ಹೇಳಿದ್ದಾನೆ.

187. A poetic composition that presents one of nine *rasas* (aestheticized emotion) that touch the heart in a figure of speech is called *rasavad*. I show here the types of it, with examples.

Daṇḍin simply defines *rasavad* as "decorated with rasa" (2.275): *rasavad rasapēśalam.*

ರಸವದಲಂಕಾರ

A Figure Based in Aestheticized Emotion or Rasa (*rasavadalaṅkāra*)

ವೀರಾದ್ಭುತ ಕರುಣಾಶೃಂ
ಗಾರ ಭಯಾನಕ ಸರೌದ್ರ ಬೀಭತ್ಸ ಮಹಾ
ಸಾರತರಹಾಸ್ಯ ಶಾಂತಾ
ಧಾರಂ ನವವಿಧವಿಕಲ್ಪಮಾ ರಸಮಾರ್ಗಂ ೧೮೮

ವೀರ ಅದ್ಭುತ ಕರುಣಾ ಶೃಂಗಾರ ಭಯಾನಕ ಸರೌದ್ರ ಬೀಭತ್ಸ ಮಹಾಸಾರತರ ಹಾಸ್ಯ ಶಾಂತ ಆಧಾರಮ್ ನವ ವಿಧ ವಿಕಲ್ಪಮ್ ಆ ರಸ ಮಾರ್ಗಮ್

ವೀರ, ಅದ್ಭುತ, ಕರುಣೆ, ಶೃಂಗಾರ, ಭಯಾನಕ, ರೌದ್ರ, ಬೀಭತ್ಸ, ಮಹಾಸಾರತರವಾದ ಹಾಸ್ಯ, ಶಾಂತಗಳಿಂದ ಕೂಡಿದ ರಸಮಾರ್ಗವು ಒಂಬತ್ತು ಬಗೆಗಳಿಂದ ಕೂಡಿದೆ.

ಇಲ್ಲಿ ಒಂಬತ್ತು ರಸಗಳನ್ನು ಹೇಳಿರುವುದು ಗಮನಿಸತಕ್ಕ ವಿಷಯ. ಭರತಮುನಿಯ ನಾಟ್ಯಶಾಸ್ತ್ರದಲ್ಲಿ ಎಂಟು ರಸಗಳ ವಿವರಣೆಯಿದೆ. ಶಾಂತರಸದ ಉಲ್ಲೇಖ ಮೊದಲು ಉದ್ಭಟನ ಕಾವ್ಯಾಲಂಕಾರ ಸಂಗ್ರಹದಲ್ಲಿ (೮ನೆಯ ಶತಮಾನ) ಬಂದಿದೆ. ಬಹುಶಃ ಕ್ರಿ.ಶ. ೨ನೆಯ ಶತಮಾನಕ್ಕೆ ಸೇರಿದ 'ಅಣುಓಗದಾರಸುತ್ತ' (ಅನುಯೋಗದ್ವಾರಸೂತ್ರ) ಎಂಬ ಪ್ರಾಕೃತ ಧಾರ್ಮಿಕ ಗ್ರಂಥಗದಲ್ಲಿ 'ಪ್ರಸಂತ' (ಪ್ರಶಾಂತ) ರಸದ ಲಕ್ಷ್ಯ ಲಕ್ಷಣಗಳಿವೆ. ಜೈನಧರ್ಮಗ್ರಂಥದಲ್ಲಿ 'ಪ್ರಶಾಂತ' ಹೆಸರಿನ ರಸ ಸೇರಿರುವುದು ಶ್ರೀವಿಜಯನಿಗೆ

ಸ್ಫೂರ್ತಿಯಾಗಿರಬಹುದು. ಭರತಾದಿಗಳು ಹೇಳಿರುವುದು ಶೋಕಸ್ಥಾಯಿಯ ಕರುಣರಸವನ್ನೇ ಹೊರತು ಕರುಣಾರಸವನ್ನಲ್ಲ. ಬೌದ್ಧರು ಮತ್ತು ಜೈನರು ಕಾರುಣ್ಯವನ್ನು ರಸವೆಂದು ಭಾವಿಸಿರುವಂತೆ ತೋರುತ್ತದೆ (ನೋಡಿ. ೩.೧೯೧ ಪದ್ಯದ ವಿವರಣೆ).

188. The nine *rasas* are: *vīra* (heroism), *adbhuta* (wonder), *karuṇā* (compassion), *śṛṅgāra* (love), *bhayānaka* (terror), *raudra* (wildness), *bībhatsa* (the macabre), *hāsya* (humor), *śānta* (tranquility).

Though the author gives the feminine form *karunā* (compassion) as the *rasa* here, it is the masculine form *karuna* (pathos brought on by a sense of permanent separation). *Karunā* or *dayā* (compassion) also finds a place among *rasas*, as a sub-type of *vīra-rasa*.

ರಾವಣನಂ ಕೊಂದು ಜಯ
ಶ್ರೀವಧುವಂ ತಾಳ್ದಿ ಮುಯ್ಪಿನೊಳ್ ವರ ಸೀತಾ
ದೇವತೆಯಂ ತರ್ಪನ್ನೆಗ
ಮೋವದೆ ಪುರುಷಬ್ರತೋಚಿತಂ ವೀರರಸಂ ೧೮೯

ರಾವಣನನ್ ಕೊಂದು ಜಯ ಶ್ರೀವಧುವನ್ ತಾಳ್ದಿ ಮುಯ್ಪಿನೊಳ್ ವರ ಸೀತಾ ದೇವತೆಯನ್ ತರ್ಪ ಅನ್ನೆಗಮ್ ಓವದೆ ಪುರುಷ ಬ್ರತ ಉಚಿತಮ್ ವೀರ ರಸಮ್

"ರಾವಣನನ್ನು ಕೊಂದು ಜಯಲಕ್ಷ್ಮಿಯನ್ನು ವರಿಸಿ ಉಡುಗೊರೆಯಾಗಿ ಸೀತಾದೇವಿಯನ್ನು ಕರೆತರುವವರೆಗೂ ಮಹಾಪುರುಷವ್ರತದಲ್ಲಿದ್ದ (ರಾಮನಿಗೆ) ವೀರರಸ ಉಚಿತವಾಗಿದೆ."

ರಾಮನ ಉತ್ಸಾಹ ಸ್ಥಾಯಿ ಭಾವವಾಗಿರುವುದರಿಂದ ಇಲ್ಲಿ ವೀರರಸ.

189. "Up until he killed Rāvaṇa, acquiring wealth-in-the-form-of-victory (*jaya-lakṣmi*) and recovering

the goddess Sītā, Rāma followed the vow of a great man." This expresses *vīra-rasa*.

ಜಲನಿಧಿಯಂ ಪಾಯ್ದೊರ್ವನೆ
ನಿಲಿಕಿ ದಶಾನನನ ಪೊಟಿಲನಾ ಲಂಕೆಯನಾ
ಕುಲಮಿಲ್ಲದಿಱಿದು ನಿಂದಂ
ಕಲಿಯಾದಂ ಬಗೆದು ನೋೞ್ಪೊಡದ್ಭುತಮಾದಂ ೧೯೦

ಜಲನಿಧಿಯನ್ ಪಾಯ್ದು ಒರ್ವನೆ ನಿಲಿಕಿ ದಶಾನನನ ಪೊಟಿಲನ್ ಆ ಲಂಕೆಯನ್ ಆ ಕುಲಮ್ ಇಲ್ಲದೆ ಇಱಿದು ನಿಂದನ್ ಕಲಿಯಾದನ್ ಬಗೆದು ನೋೞ್ಪೊಡೆ ಅದ್ಭುತಮ್ ಆದಮ್

"ಸಾಗರವನ್ನು ದಾಟಿ, ರಾವಣನ ರಾಜಧಾನಿಯಾದ ಲಂಕೆಯನ್ನು ನಿರಾತಂಕವಾಗಿ ಆಕ್ರಮಿಸಿ ಕಲಿಯಾಗಿ ನಿಂತವನನ್ನು ಕುರಿತು ಯೋಚಿಸಿದರೆ ತುಂಬಾ ಅದ್ಭುತ."

ವಿಸ್ಮಯವನ್ನು ಉಂಟುಮಾಡುವ ಹನುಮಂತನ ಕಾರ್ಯಗಳ ನಿರೂಪಣೆ ಅದ್ಭುತರಸ.

190. "After crossing over the ocean to reach Lanka, the city of the demon with ten heads (*Daśakaṇṭha*), and fighting with demons unobstructed, he (Hanumān) became a hero." Said in this way, it is an expression of *adbhuta* (wonder).

ಕರೆಕರೆದು ಮನೋಧೃತಿಯಿಂ
ನೆರೆವಾಸೆಯೊಳಿರ್ದಳಲ್ಲದುೞಿದೊಡೆ ನಿನ್ನಾ
ವಿರಹಾನಳನಾ ತಾಪದೆ
ಕೊರಗುಗುಮಿನ್ನಾಕೆಗಿನಿಸು ಕರುಣಿಸು ಮನದೊಳ್ ೧೯೧

ಕರೆಕರೆದು ಮನೋಧೃತಿಯಿನ್ ನೆರೆವ ಆಸೆಯೊಳ್ ಇರ್ದಳ್ ಅಲ್ಲದೆ ಉಟಿದೊಡೆ ನಿನ್ನಾ ವಿರಹ ಅನಳನಾ ತಾಪದೆ ಕೊರಗುಗುಮ್ ಇನ್ನು ಆಕೆಗೆ ಇನಿಸು ಕರುಣಿಸು ಮನದೊಳ್

"ಹೇಗೋ ಮನೋಧೃತಿಯನ್ನು ಕರೆದು ತಂದುಕೊಂಡು, ನಿನ್ನನ್ನು ಸೇರುವ ಆಸೆಯಿಂದ ಬದುಕಿದ್ದಾಳೆ. ಇಲ್ಲದಿದ್ದರೆ ನನ್ನ ವಿರಹತಾಪದಿಂದ ಕರಗಿಯೇ ಹೋಗುತ್ತಿದ್ದಳು. ಆಕೆಯ ಮೇಲೆ ನಿನ್ನ ಮನಸ್ಸಿನಲ್ಲಿ ಸ್ವಲ್ಪವಾದರೂ ಕರುಣೆ ತೋರಿಸು."

ಈ ಉದಾಹರಣೆ ಕರುಣೆಗೆ ಸಂಬಂಧಿಸಿದ್ದೇ ಹೊರತು ಕರುಣರಸಕ್ಕೆ ಸಂಬಂಧಿಸಿದ್ದಲ್ಲ. ದಂಡಿ ಕೂಡ ರಸವದಲಂಕಾರವನ್ನು ಕುರಿತು ಹೇಳುವಾಗ ಹೂವಿನ ಹಾಸಿಗೆ ಕೂಡ ನೋವನ್ನು ತರುವ ಸುಕುಮಾರಿ ಅಗ್ನಿಯ ಚಿತೆಯ ಮೇಲೆ ಮಲಗಿರುವ ಉದಾಹರಣೆಯನ್ನು ಕೊಟ್ಟಿದ್ದಾನೆ ("ಯಸ್ಯಾಃ ಕುಸುಮ ಶಯ್ಯಾಪಿ ಕೋಮಲಾಂಗ್ಯಾ ರುಜಾಕರೀ ಸಾಧಿಶೇತೇ ಕಥಂ ತನ್ವೀ ಹುತಾಶನವತೀಂ ಚಿತಾಮ್", ೨.೨೮೬). ಈ ಸಂದರ್ಭ ಸಾವಿಗೆ ಸಂಬಂಧಿಸಿ ದ್ದಾದ್ದರಿಂದ ಶೋಕಸ್ಥಾಯಿಯಾದ ಕರುಣರಸಕ್ಕೆ ಉದಾಹರಣೆ ಆಗಬೇಕಾಗಿತ್ತು. ಆದರೆ ಇಲ್ಲಿ ಮರುಕವೂ ಸೇರಿದೆ. ಅಲ್ಲದೆ ದಂಡಿ ಇದು ಕಾರುಣ್ಯವೆಂದೇ ಸ್ಪಷ್ಟಪಡಿಸಿದ್ದಾನೆ ("ಇತಿ ಕಾರುಣ್ಯಮುದ್ರಿಕ್ತಮಲಂಕಾರತಯಾ ಸ್ಮೃತಮ್", ೨.೨೮೭). ಕವಿರಾಜಮಾರ್ಗದ ಉದಾಹರಣೆ ಮಾತ್ರ ಸ್ಪಷ್ಟವಾಗಿ ಕರುಣೆ ಅಥವಾ ದಯೆಯೇ ಹೊರತು ಶೋಕ ಮೂಲದ್ದಲ್ಲ.

191. "With a firm mind, she has been living only on the hope of uniting with you. Otherwise, she would have melted from the heat of separation. Have at least some compassion towards her."

This is an example of *karuṇā* (compassion) and not *karuṇa-rasa* (pathos), which has *śōka* (grief brought on by permanent separation) as the primary feeling.

ಪುಳಕಿತಕಪೋಳಫಳಕಂ

ವಿಳಸಿತಮದಿರಾರುಣೇಕ್ಷಣಂ ಸ್ಫುರಿತೋಷ್ಠಂ

ಕೆಳದೀ ನಿನ್ನ ಮುಖಂ ತಳ
ಮಳಗೊಳಿಸುಗುಮಿಂತು ನಿಭೃತಶೃಂಗಾರರಸಂ ೧೯೨

ಪುಳಕಿತ ಕಪೋಳ ಫಳಕಮ್ ವಿಳಸಿತ ಮದಿರಾರುಣ ಈಕ್ಷಣಮ್ ಸ್ಫುರಿತ ಓಷ್ಠಮ್ ಕೆಳದೀ ನಿನ್ನ ಮುಖಮ್ ತಳಮಳಗೊಳಿಸುಗುಮ್ ಇಂತು ನಿಭೃತ ಶೃಂಗಾರ ರಸಮ್.

"ಗೆಳತಿ! ರೋಮಾಂಚಗೊಂಡ ಕಪೋಲಗಳಿಂದ, ಮತ್ತೇರಿದ ಕೆಂಪಾದ ಕಣ್ಣಿನಿಂದ, ಕಂಪಿಸುವ ತುಟಿಗಳಿಂದ ಕೂಡಿರುವ ನಿನ್ನ ಮುಖ ತಳಮಳಗೊಳಿಸುವುದು" ಎಂಬುದು ಶೃಂಗಾರರಸಪೂರ್ಣವಾಗಿದೆ.

ಇಲ್ಲಿ ರತಿಯೆಂಬ ಸ್ಥಾಯಿಭಾವಕ್ಕೆ ಹೊಂದಿಕೆಯಾಗುವ ಅನುಭಾವಗಳ ವರ್ಣನೆಯಿದೆ.

192. "My friend! Your pretty face – with a thrill in the cheeks and bright red looks of infatuation – shakes everybody." Said thus, it expresses *śṛṅgāra* (love).

ತಾಳತರುವಿತತಿಯೊಳ್ ಬೇ
ತಾಳಂಗಳ್ ಮೊಱೆದು ತೆಱೆದು ಬಾಯ್ಗಳನಾ ಪಾ
ತಾಳಬಿಲಂಗಳ ವೋಲ್ ತಳ
ತಾಳಲಯಕ್ರಮದೆ ಕುಣಿಯೆ ಭಯಮಯನಾದೆಂ ೧೯೩

ತಾಳ ತರು ವಿತತಿಯೊಳ್ ಬೇತಾಳಂಗಳ್ ಮೊಱೆದು ತೆಱೆದು ಬಾಯ್ಗಳನ್ ಆ ಪಾತಾಳ ಬಿಲಂಗಳವೋಲ್ ತಳ ತಾಳ ಲಯ ಕ್ರಮದೆ ಕುಣಿಯೆ ಭಯಮಯನ್ ಆದೆನ್

"ತಾಳೆಯ ಮರಗಳ ಸಮೂಹದಲ್ಲಿ ಬೇತಾಳಗಳು ಆರ್ಭಟಿಸುತ್ತ, ಪಾತಾಳ ಬಿಲಗಳ ಹಾಗೆ ಬಾಯಿಗಳನ್ನು ಬಿಟ್ಟು ಅಂಗೈಯ ತಾಳಲಯಗಳಿಗೆ ಅನುಗುಣವಾಗಿ ಕುಣಿಯುತ್ತಿರಲು ನಾನು ಭಯಗ್ರಸ್ತನಾದೆನು."

ಭಯವನ್ನು ಹುಟ್ಟಿಸುವ ವಿಭಾವಗಳನ್ನು ಹೇಳಿರುವುದರಿಂದ ಇಲ್ಲಿ ಭಯಾನಕ ರಸವಿದೆ.

193. "I was frightened to see the ghosts shouting in the palm grove—opening, like a mouth, to a hole leading to the nether world (*pātāḷa-bila*)– and dancing to the tunes of clapping hands."

This is an example of *bhayānaka-rasa* with *bhaya* (fear) as the primary, underlying feeling (*bhāva*).

ಕೊಂದು ಜಟಾಯುವನಾತಂ
ಮುಂದಿಟ್ಟಾ ಜನಕಸುತೆಯನೊಯ್ದಂ ಮತ್ತಾ
ಪಂದೆಯನಂತಕಮುಖದೊಳ್
ತಂದಿಟ್ಟಂದಲ್ಲದುಱಿಗುಮೇ ರೌದ್ರರಸಂ ೧೯೪

ಕೊಂದು ಜಟಾಯುವನ್ ಆತನ್ ಮುಂದಿಟ್ಟು ಆ ಜನಕ ಸುತೆಯನ್ ಒಯ್ದನ್ ಮತ್ತೆ ಆ ಪಂದೆಯನ್ ಅಂತಕ ಮುಖದೊಳ್ ತಂದು ಇಟ್ಟಂದು ಅಲ್ಲದೆ ಉಱಿಗುಮೇ ರೌದ್ರ ರಸಮ್

"ಜಟಾಯುವನ್ನು ಕೊಂದು, ಆ ಸೀತೆಯನ್ನು ಮುಂದಿಟ್ಟುಕೊಂಡು ಅವನು ಒಯ್ದಿರುವನು. ಆ ಹೇಡಿಯನ್ನು ಮೃತ್ಯು ಮುಖದಲ್ಲಿ ತಂದಿಡದೆ ಬಿಡುವೆನೇ" ಎಂಬುದು ರೌದ್ರರಸ.

ರಾಮಾಯಣದ ಈ ಕ್ರೋಧ ಪ್ರಸಂಗವೂ ಕವಿರಾಜಮಾರ್ಗ ಕವಿಯ ಸ್ವತಂತ್ರ ಕಲ್ಪನೆ.

194. "He killed Jaṭāyu, the vulture, lifted Sītā (to his chariot), and took her away. Can I leave that coward without sending him to the clutches of death?"

This is the rasa of *raudra*, with *krōdha* (anger) as the primary feeling.

ನವವಿವರಾವೃತಪೂತಿ
ದ್ರವತ್ವಗಾವೃತವಿಮಿಶ್ರಮಾಂಸೋಪಚಿತಮು

ಧ್ರುವಮಸು ಚಿತ್ರಭ್ರಮಿತಾ
ಸ್ಥಿವಹಂ ಮೆಯ್ ಬಗೆವೊಡಿಂತು ಕಿಸುಗುಳಮಾದಂ ೧೯೫

ನವ ವಿವರಾವೃತ ಪೂತಿ ದ್ರವ ತ್ವಕ್ ಆವೃತ ವಿಮಿಶ್ರ ಮಾಂಸ ಉಪಚಿತಮ್ ಅಧ್ರುವಮ್ ಅಸು ಚಿತ್ರಭ್ರಮಿತ ಅಸ್ಥಿವಹಮ್ ಮೆಯ್ ಬಗೆವೊಡೆ ಇಂತು ಕಿಸುಗುಳಮ್ ಆದಮ್

"ದೇಹವೆಂಬುದು ಒಂಬತ್ತು ದ್ವಾರಗಳಿಂದ, ಹೊಲಸು ನಾರುವ ಕೀವಿನಿಂದ, ಚರ್ಮ ಆವರಿಸಿದ ಮಾಂಸ ಮಿಶ್ರಣದಿಂದ, ಮೂಳೆಗಳಿಂದ ಕೂಡಿದ ಅಸ್ಥಿರವಾದ ವಿಕಾರದ ಪದಾರ್ಥ."

ದೇಹವನ್ನು ಜುಗುಪ್ಸಾವಹವಾಗಿ ವರ್ಣಿಸಿರುವುದರಿಂದ ಇದು 'ಬೀಭತ್ಸರಸ'.

195. "This body is unreliable, ugly, disgusting with its nine openings emitting fluids that smell foul; it is a mixture of flesh covered by skin, within which wander insects. It is nothing but filth."

This is an example of the *bībhatsa-rasa* with *jugupsā* (disgust) as the primary feeling.

ಪರಪುರುಷಸೇವನಾಕೃತ
ಸುರತವಿಕಾರಂಗಳೆಲ್ಲಮಂ ನಿಜಪತಿಯೊಳ್
ನೆರೆದಾಗಳೆ ಮಱೆಯಲ್ ಬಗೆ
ದಿರವದು ನಗಿಸಿತ್ತು ಪೀನಮಭಿಸಾರಿಕೆಯಾ ೧೯೬

ಪರ ಪುರುಷ ಸೇವನಾಕೃತ ಸುರತ ವಿಕಾರಂಗಳ್ ಎಲ್ಲಮನ್ ನಿಜಪತಿಯೊಳ್ ನೆರೆದಾಗಳೆ ಮಱೆಯಲ್ ಬಗೆದ ಇರವು ಅದು ನಗಿಸಿತ್ತು ಪೀನಮ್ ಅಭಿಸಾರಿಕೆಯಾ

"ಪರಪುರುಷನೊಡನೆ ಸುರತದಲ್ಲಿ ಇದ್ದ ಕಾರಣ ಸಂಭವಿಸಿದ ವಿಕಾರಗಳೆಲ್ಲವನ್ನೂ ತನ್ನ ಪತಿಯೊಡನೆ ಕೂಡಿದಾಗ ಮರೆಮಾಡಲು ಅಭಿಸಾರಿಕೆ ಮಾಡಿದ ಪ್ರಯತ್ನಗಳು ತುಂಬಾ ನಗಿಸಿದ್ದುವು."

ಅಭಿಸಾರಿಕೆ ತಾನು ಮಾಡಿದ ತಪ್ಪನ್ನು ಮರೆಸಲು ಮಾಡಿದ ಪ್ರಯತ್ನಗಳು ನಗಿಸುತ್ತಿರುವುದರಿಂದ ಇಲ್ಲಿ 'ಹಾಸ್ಯರಸ'.

196. "The *abhisārikā's* efforts to hide the signs of sexual union with another person from her husband resulted in laughter."

This is *hāsya-rasa*, with *hāsa* (laughter) as primary feeling. An *abhisārikā* is type of leading lady in drama who goes to meet her lover for (often illicit) trysts.

ಮೃಗಗಣದೊಳ್ ಪರಿಚಿತಮುಂ
ದ್ವಿಗುಣಮದೋರಂತೆ ಮಟ್ಟಮಿರ್ದುದುಮತ್ತಂ
ವಿಗತವಿಕಾರಾಕಾರಂ
ಸೊಗಯಿಸುಗುಂ ನಿನ್ನ ರೂಪು ಶಾಂತಾಧಾರಂ ೧೯೭

ಮೃಗಗಣದೊಳ್ ಪರಿಚಿತಮುಮ್ ದ್ವಿಗುಣಮ್ ಅದು ಓರಂತೆ ಮಟ್ಟಮ್ ಇರ್ದುದು ಮತ್ತಮ್ ವಿಗತ ವಿಕಾರ ಆಕಾರಮ್ ಸೊಗಯಿಸುಗುಮ್ ನಿನ್ನ ರೂಪು ಶಾಂತ ಆಧಾರಮ್

"ಮೃಗಗಣದಲ್ಲಿ ಪರಿಚಿತವಾದುದು, ದ್ವಿಗುಣಗಳಿಂದ (ಎರಡು ಹಗ್ಗದ ಹುರಿಗಳಿಂದ) ಒಂದೇ ಸಮನಾಗಿ ಮಟ್ಟವಾಗಿ ಇರುವುದು, ಯಾವದೇ ವಿಕಾರವಿಲ್ಲದೆ ಇರುವ ನಿನ್ನ ಆಕಾರ, ಶಾಂತವೇ ಆಧಾರವಾಗಿರುವ ರೂಪದಿಂದ ಸೊಗಯಿಸುತ್ತಿದೆ."

ಇದು ಮೃಚ್ಛಕಟಿಕ ನಾಟಕದ ಮಂಗಳಶ್ಲೋಕದಲ್ಲಿರುವ ಶಿವನ 'ಪರ್ಯಂಕಬಂಧ'ದ ವರ್ಣನೆಯನ್ನು ನೆನಪಿಸುತ್ತದೆ ("ಪರ್ಯಂಕ ಗ್ರಂಥಿ ಬಂಧದ್ವಿಗುಣಿತ ಭುಜಗಾಶ್ಲೇಷಸಂವೀತಜಾನೋಃ"). ಅಲುಗಾಡದಂತೆ ಎರಡು ಮಂಡಿಗಳನ್ನು ಎರಡೆಳೆಯ ಹುರಿಯಿಂದ ಗಂಟನ್ನು ಹಾಕಿ ಮಾಡುವ ಪರ್ಯಂಕಬಂಧದ ವರ್ಣನೆಯೇ ಕವಿರಾಜಮಾರ್ಗದಲ್ಲಿ ಶಾಂತನಾದ ಯೋಗಿಯ ಯೋಗ ಮುದ್ರೆಯಾಗಿ ಮೂಡಿಬಂದಿದೆ.

197. "Your body, tied with two strings, is in a balanced position. Your posture, a form

conducive for removing all mental and bodily ailments, is the source of tranquility."

This is *śānta-rasa* with *śama* (pacifying self-restraint) as the primary feeling. The description in the example refers to a *yōga* posture called *paryaṅka-bandha*, which involves tying two ropes together to connect the ankles. The invocation in Śūdraka's play, *Mṛcchakaṭika,* depicts Lord Śiva's posture as in the *paryaṅka-bandha (paryaṅka-granthi-bandhadviguṇita-bhujagāślēṣa-saṁvijānōḥ).*

ಊರ್ಜಿತ

Overstating Excellence *(ūrjita)*

ಆರೂಢನಿಜಮನೋಹಂ
ಕಾರೋತ್ಕರ್ಷಪ್ರಕಾಶಮೂರ್ಜಿತಸದಳಂ
ಕಾರಂ ತದೀಯ ಭೇದವಿ
ಚಾರಮನೀ ತೆಱದಿನಱಿದುಕೊಳ್ಗೆ ಕವೀಶರ್ ೧೯೮

ಆರೂಢ ನಿಜಮನೋಹಂಕಾರ ಉತ್ಕರ್ಷ ಪ್ರಕಾಶಮ್ ಊರ್ಜಿತ ಸದಳಂಕಾರಮ್ ತದೀಯ ಭೇದ ವಿಚಾರಮ್ ಈ ತೆಱದಿನ್ ಅಱಿದುಕೊಳ್ಗೆ ಕವೀಶರ್

ಯಾರಾದರೊಬ್ಬರ ಅಹಂಕಾರದ ಏರಿಕೆಯ ಅತಿಶಯವನ್ನು ಪ್ರಕಟಿಸುವುದೇ 'ಊರ್ಜಿತ' ಎಂಬ ಅಲಂಕಾರ. ಕವೀಶ್ವರರು ಅದರ ಭೇದಗಳನ್ನು ಈ ರೀತಿ ತಿಳಿದುಕೊಳ್ಳಲಿ.

ದಂಡಿ ಇದನ್ನು 'ಊರ್ಜಸ್ವಿ' ಎಂದು ಕರೆದಿದ್ದಾನೆ. "ಊರ್ಜಸ್ವಿ ರೂಢಾಹಂಕಾರಮ್" (೨.೨೭೫) ಎಂದು ಅದರ ಲಕ್ಷಣವನ್ನು ಹೇಳಿದ್ದಾನೆ.

198. "If one represents oneself in an excessively egotistical way, overstating one's *excellence*, it is *ūrjitālaṅkāra.* Let the best poets understand

examples of this figure in the following manner.”

Daṇḍin defines it along with *prēyas* and *rasavad* and says that *ūrjasvi* is more beautiful than the other two*: prēyaḥ priyatarākhyānam rasavad rasapēśalam / ūrjasvi rūḍhāhaṅkāram yuktōtkarṣam ca tattrayam* //(2.275).

ಕೊಲ್ಲೆಂ ಬಿಸುಡಾಯುಧಮಂ
ಪುಲ್ಲಂ ಕರ್ಚೇಱು ಪುತ್ತನಡಿಗೆಱಗೆನ್ನಾ
ನಿಲ್ಲದೆ ತೊಲಗಿದಿರಿಂದಂ
ತಲ್ಲದೊಡೆೞ್ದಾರ್ದು ಕೆಯ್ದುಗೆಯ್ ನೀನೀಗಳ್ ೧೯೯

ಕೊಲ್ಲೆನ್ ಬಿಸುಡು ಆಯುಧಮನ್ ಪುಲ್ಲನ್ ಕರ್ಚು ಏಱು ಪುತ್ತನ್ ಅಡಿಗೆ ಎಱಗು ಎನ್ನಾ ನಿಲ್ಲದೆ ತೊಲಗು ಇದಿರಿಂದೆ ಅಂತು ಅಲ್ಲದೊಡೆ ಎೞ್ದು ಆರ್ದು ಕೆಯ್ದುಗೆಯ್ ನೀನ್ ಈಗಳ್

“ನಿನ್ನನ್ನು ಕೊಲ್ಲುವುದಿಲ್ಲ. ಆಯುಧವನ್ನು ಬಿಸಾಡು. ಹುಲ್ಲನ್ನು ಕಚ್ಚು, ಹುತ್ತವನ್ನು ಏರು, ನನ್ನ ಅಡಿಗೆರಗು. ಎದುರಲ್ಲಿ ನಿಲ್ಲದೆ ತೊಲಗು. ಹಾಗಲ್ಲದಿದ್ದರೆ ಎದ್ದು ಆರ್ಭಟಿಸಿ ಈಗ ನೀನು ಆಯುಧವನ್ನು ಹಿಡಿ.”

ಇವು ಒಬ್ಬ ವೀರನ ಅಹಂಕಾರದ ಮಾತುಗಳು. ಹೀಗಾಗಿ ಇದು ‘ಊರ್ಜಿತ’ ಎಂಬ ಅಲಂಕಾರವಾಗಿದೆ.

199. “Throw away the weapons. I will not kill you. Bite the grass. Step on to the anthill. Prostrate before me. Either get out of this place, or roar like a lion and take up a weapon.”

The hero’s self-confidence is expressed here in glowing terms and is thus an example of the figure of *ūrjita.* “Bite the grass” alludes to an enemy’s bending in submission before the hero, like an animal that bends to eat grass.

"Stepping on the anthill" refers to taking a dangerous risk and showing valor.

ವ್ಯಾವೃತ್ತಿ

Distinctive Repetition (*vyāvṛtti*)

ಮಗುೞ್ದುಂ ಮಗುೞ್ದಾ ಮಾತಂ
ನೆಗೞ್ದಿರೆ ಪೇೞ್ದಾಗಳಕ್ಕುಮಾ ವ್ಯಾವೃತ್ತಿ
ಸ್ವಗತಾಳಂಕಾರಂ ಬಗೆ
ಗಗಾಧಮನರದಱ ತೆಱನನೀ ಕುಱಿಪುಗಳಿಂ ೨೦೦

ಮಗುೞ್ದುಮ್ ಮಗುೞ್ದು ಆ ಮಾತನ್ ನೆಗೞ್ದಿರೆ ಪೇೞ್ದು ಆಗಳ್ ಅಕ್ಕುಮ್ ಆ ವ್ಯಾವೃತ್ತಿ ಸ್ವಗತ ಅಳಂಕಾರಮ್ ಬಗೆಗೆ ಅಗಾಧಮನರ್ ಅದರ ತೆಱನನ್ ಈ ಕುಱಿಪುಗಳಿನ್

ಮತ್ತೆ ಮತ್ತೆ ಮೊದಲು ಹೇಳಿದ ಮಾತನ್ನೇ ಉಚ್ಚರಿಸುವುದು 'ವ್ಯಾವೃತ್ತಿ' (ವಿಶೇಷವಾದ ಆವೃತ್ತಿ). ಅದರ ಪರಿಯನ್ನು ವಿವೇಕವಂತರು ಕೆಳಗಿನ ಕುರುಹುಗಳಿಂದ ಅರಿಯಬೇಕು.

ದಂಡಿ ಭಾಮಹರು ಇದನ್ನು ಹೇಳಿಲ್ಲ. ಕಾವ್ಯಾವಲೋಕನದಲ್ಲಿ ನಾಗವರ್ಮ ಇದನ್ನು 'ಆವಳಿ' ಎಂದಿದ್ದಾನೆ. ಇದನ್ನೆ ಕೆಲವರು 'ಏಕಾವಳಿ' ಎಂದಿದ್ದಾರೆ. ಇನ್ನೂ ಕೆಲವರು ಇದನ್ನು 'ಮುಕ್ತಪದಗ್ರಸ್ತ' ಎಂದು ಕರೆದಿದ್ದಾರೆ. ಇದರಲ್ಲಿ ಎರಡೆರಡು ಪದಗಳಲ್ಲಿ ಎರಡನೆಯ ಪದ ಮುಂದಿನ ಪೂರ್ವಪದ ಆಗುತ್ತದೆ.

200. *Repeating* the same word, but in a praise-worthy manner, is the figure of *vyāvṛtti*. The nature of this figure should be understood the following way.

This *alaṅkāra* is known as *vyāvṛtti* or *āvṛtti*. Here, the repetition of the word must add something appreciable to the verse and not just be repetitive, which would result in a

poetic flaw (*punar-ukti*). This figure is also called *ēkāvalī* or *muktapada-grasta*. In this *alaṅkāra*, the second word of the twin words is taken again as the first word of the next set of twin words. *Āvṛtti* in *Kāvyādarśa* is comparable to *dīpaka* (2.116) and is different from *muktapada-grasta* (taking up the word that is left behind): *arthāvṛttiḥ padāvṛttir ubhayāvṛttir ēva ca / dīpakasthāna ēvēṣṭam alaṅkāra-trayam yathā //*

ವಿರಹಂ ಪರಿತಾಪಮನಾ
ಪರಿತಾಪಮುಮಳಿಪನಳಿಪುಮಾ ವಲ್ಲಭನೊಳ್
ನೆರೆದಿರ್ಪ ಬಗೆಯನಾ ನೆರೆ
ದಿರವುಂ ಸುರತಾನುರಾಗಮಮಂ ಪೆರ್ಚಿಸುಗುಂ ೨೦೧

ವಿರಹಮ್ ಪರಿತಾಪಮನ್ ಆ ಪರಿತಾಪಮುಮ್ ಅಳಿಪನ್ ಅಳಿಪುಮ್ ಆ ವಲ್ಲಭನೊಳ್ ನೆರೆದು ಇರ್ಪ ಬಗೆಯನ್ ಆ ನೆರೆದ ಇರವುಮ್ ಸುರತ ಅನುರಾಗಮನ್ ಪೆರ್ಚಿಸುಗುಮ್

"ವಿರಹವು ಪರಿತಾಪವನ್ನು, ಪರಿತಾಪವು ಉತ್ಕಂಠೆಯನ್ನು, ಉತ್ಕಂಠೆಯು ವಲ್ಲಭನಲ್ಲಿ ಕೂಟದ ಯತ್ನವನ್ನು, ಆ ಕೂಟದ ಯತ್ನ ಸುರತಾನುರಾಗವನ್ನು ಹೆಚ್ಚಿಸುವುದು."

ಕರ್ತೃಕರ್ಮಪದಗಳಲ್ಲಿ ಕರ್ಮವೇ ಮುಂದೆ ಕರ್ತೃವಾಗುತ್ತ ಹೋಗುವುದನ್ನು ಇಲ್ಲಿ ನೋಡಬಹುದು.

201. "Separation increases sorrow, sorrow increases anxiety, anxiety increases the effort to meet her lover, and an effort to meet her lover increases the desire to have sexual union."

ನುಡಿಯಂ ತಗುಳ್ಚಿ ನೋಟಂ
ನುಡಿ ಪರಿಚಯಮಂ ತಗುಳ್ಚಿ ಪರಿಚಯಮಳಿಪಂ

ತಡೆಯದೆ ತಗುಳ್ಚಿ ಮನದಳಿ
ಪೊಡಗೂಡಿದುದಂ ತಗುಳ್ಚುಗುಂ ಕಾಮಿಗಳಾ ೨೦೨

ನುಡಿಯನ್ ತಗುಳ್ಚಿ ನೋಟಮ್ ನುಡಿ ಪರಿಚಯಮನ್ ತಗುಳ್ಚಿ ಪರಿಚಯಮ್ ಅಳಿಪನ್ ತಡೆಯದೆ ತಗುಳ್ಚಿ ಮನದ ಅಳಿಪು ಒಡಗೂಡಿದುದನ್ ತಗುಳ್ಚುಗುಮ್ ಕಾಮಿಗಳಾ

"ಕಾಮಿಗಳ ನೋಟವು ನುಡಿಯನ್ನು ಪ್ರೇರಿಸಿದರೆ ನುಡಿ ಪರಿಚಯವನ್ನು, ಪರಿಚಯವು ಉತ್ಕಂಠೆಯನ್ನು, ಉತ್ಕಂಠೆಯು ಒಡಗೂಡುವುದನ್ನು ಪ್ರೇರಿಸುತ್ತದೆ."

202. "Looks of lust between lovers instigate speech, speech instigates acquaintance, acquaintance instigates a longing desire, and a longing desire instigates union."

ಪ್ರಿಯತರ

Pleasing Words (*priyatara*)

ಪ್ರಿಯಕುಶಲಪೂರ್ವಕೋಚಿತ
ನಯವಿನಯೋದಾರರುಚಿರವಚನಪ್ರಾಯಂ
ಪ್ರಿಯತರಮೆಂಬುದು ಸಕಳ
ಕ್ರಿಯಾನುಗಮಿತಾರ್ಥಮಿಂತು ತದುದಾಹರಣಂ ೨೦೩

ಪ್ರಿಯಕುಶಲಪೂರ್ವಕ ಉಚಿತ ನಯ ವಿನಯ ಉದಾರ ರುಚಿರ ವಚನಪ್ರಾಯಮ್ ಪ್ರಿಯತರಮ್ ಎಂಬುದು ಸಕಳ ಕ್ರಿಯಾನುಗಮಿತ ಅರ್ಥಮ್ ಇಂತು ತತ್ ಉದಾಹರಣಮ್

ಪ್ರಿಯವೂ ಕುಶಲಪೂರ್ವಕವೂ ಉಚಿತ, ನಯ, ವಿನಯ ಗುಣಗಳಿಂದ ಕೂಡಿದ ಮಧುರ ವಚನ ಇರುವುದು 'ಪ್ರಿಯತರ' ಎಂಬ ಅಲಂಕಾರ. ಅದರ ಉದಾಹರಣೆ ಹೀಗಿರುತ್ತದೆ.

ದಂಡಿ ಇದನ್ನು 'ಪ್ರೇಯಸ್' ಎಂದು ಕರೆದಿದ್ದಾನೆ. "ಪ್ರೇಯಃ ಪ್ರಿಯತರಾಖ್ಯಾನಮ್" (೨.೨೭೫) ಎಂದಿದ್ದಾನೆ.

203. The figurative use of sweet and *pleasing* words – skillfully presented, invoking modesty and charm – is called *priyatara*.

Daṇḍin defines it thus (2.275): *prēyaḥ priyatarākhyānam*.

ಗುರುಜನದ ಪರಕೆಯುಂ ಬಂ
ಧುರ ಪುಣ್ಯಫಲಾನುಬಂಧಮುಂ ನೆರೆದೆನ್ನೊಳ್
ಪರಮಾನುಭಾವಭರಮುಂ
ದೊರೆಕೊಂಡುವವಿಂದು ಬರವಿನೊಳ್ ನಿಮ್ಮಡಿಯಾ ೨೦೪

ಗುರುಜನದ ಪರಕೆಯುಮ್ ಬಂಧುರ ಪುಣ್ಯ ಫಲ ಅನುಬಂಧಮುಮ್ ನೆರೆದು ಎನ್ನೊಳ್ ಪರಮ ಅನುಭಾವ ಭರಮುಮ್ ದೊರೆಕೊಂಡುವು ಅವು ಇಂದು ಬರವಿನೊಳ್ ನಿಮ್ಮಡಿಯಾ

"ಇಂದು ನಿಮ್ಮಡಿಗಳ ಆಗಮನದಿಂದ ನನಗೆ ಗುರುಜನರ ಹರಕೆಯು ಮನೋಹರವಾದ ಪುಣ್ಯಫಲದ ಅನುಬಂಧವೂ ಪರಮ ಮಹಿಮಾತಿಶಯವೂ ಫಲಸಿದಂತಾಯಿತು."

ಮಹನೀಯನಾದ ಯೋಗಿಯ ಆಗಮನದಿಂದ ಆದ ಸಂತೋಷಾತಿಶಯವನ್ನು ಇಲ್ಲಿ ಉದಾಹರಣೆಯಾಗಿ ಕೊಡಲಾಗಿದೆ. ಕೃಷ್ಣನ ಆಗಮನದಿಂದಾದ ಸಂತೋಷವನ್ನು ದಂಡಿ ವರ್ಣಿಸಿದ್ದಾನೆ (೨.೨೭೬). ಅದೇ ಸಂತೋಷ ವಿದುರನಿಗೆ ಆದಂತೆ ಭಾಮಹ ವರ್ಣಿಸಿದ್ದಾನೆ. (೩.೫).

204. "With the arrival of your auspicious feet, good results came – the blessings of teachers, fruitful association with virtues, the best of all experiences."

This example probably alludes to the arrival of a great sage. Daṇḍin and Bhāmaha give examples depicting the

arrival of Kṛṣṇa to the house of Vidura: *adya yā mama gōvinda jātā tvayi gṛhāgatē / kālēnaiṣā bhavētprītistavaivāgamanāt punaḥ* //(Daṇḍin, 2.276); *prēyō gṛhāgatam kṛṣṇam avādīt vidurō yathā / adya yā mama gōvinda jātā tvayi gṛhāgatē / kālēnaiṣā bhavēt-prītiḥ tavaivāgamanāt punaḥ* // (Bhāmaha, 3.5)

ಆಶೀರಲಂಕಾರ

Benediction (*āśīḥ*)

ದೊರೆಕೊಂಡು ಮನದ ಬಗೆಯುಂ
ಪಿರಿದಾಗಿರೆ ಪಿರಿಯರೊಸಗೆಯಂ ಬೀಱುವುದುಂ
ಪರಮಾಶೀರರ್ಥಾಳಂ
ಕರಣಾಂತರಮದಱ ಲಕ್ಷ್ಯಮೀ ತೆಱನಕ್ಕುಂ **೨೦೫**

ದೊರೆಕೊಂಡು ಮನದ ಬಗೆಯುಮ್ ಪಿರಿದು ಆಗಿರೆ ಪಿರಿಯರ ಒಸಗೆಯನ್ ಬೀಱುವುದುಮ್ ಪರಮ ಆಶೀರರ್ಥ ಅಳಂಕರಣ ಅಂತರಮ್ ಅದಱ ಲಕ್ಷ್ಯಮ್ ಈ ತೆಱನ್ ಅಕ್ಕುಮ್

ಮನಸ್ಸಿನ ಇಷ್ಟಾರ್ಥ ಹಿರಿದಾಗಿ ಒದಗಿ ಬರಲಿ ಎಂದು ಹಿರಿಯರು ಶುಭವನ್ನು ಕೋರುವುದು 'ಆಶೀಃ' ಎಂಬ ಶ್ರೇಷ್ಠವಾದ ಅರ್ಥಾಂಲಂಕಾರ. ಅದರ ಲಕ್ಷ್ಯ ಹೀಗಿದೆ.

ದಂಡಿಯ ಪ್ರಕಾರ ಆಶೀರಲಂಕಾರದಲ್ಲಿ ಹಿರಿಯರು ಶುಭವನ್ನು ಕೋರುವುದು ಮಾತ್ರವಲ್ಲದೆ ಇಷ್ಟವಾದ ವಿಷಯದಲ್ಲಿ ಹಾರೈಕೆಯು ಆಶೀರಲಂಕಾರವೇ (೨.೩೫೭): "ಆಶೀರ್ನಾಮಾಭಿಲಷಿತೇ ವಸ್ತುನ್ಯಾಶಂಸನಂ ಯಥಾ । ಪಾತು ವಃ ಪರಮಂ ಜ್ಯೋತಿರವಾಙ್ಮಾನಸಗೋಚರಮ್ ॥"

205. Blessings of elders – that all wishes dear to the heart be obtained – represented in a figure of speech is referred to as *āśīralaṅkāra.* The following is an example.

A similar definition is found in *Kāvyādarśa* (2.357): *āśīrnāmābhilaṣitē vastunyāśaṁsanam ythā / pātu vaḥ paramam jyōtiravāṅmānasa-gōcaram //*

ಆಯುಂ ಶ್ರೀಯುಂ ವಿಜಯಮು
ಮಾಯತಿಯುಂ ನೃಪತಿ ನಿನಗೆ ನಿಜಸಂತತಿಯುಂ
ನ್ಯಾಯದೆ ಪೆರ್ಚುವುದಕ್ಕೀ
ತೋಯಧಿಧರಣೀಧರಾಧರಾಸ್ಥಿತಿವರೆಗಂ ೨೦೬

ಆಯುಮ್ ಶ್ರೀಯುಮ್ ವಿಜಯಮುಮ್ ಆಯತಿಯುಮ್ ನೃಪತಿ ನಿನಗೆ ನಿಜ ಸಂತತಿಯುಮ್ ನ್ಯಾಯದೆ ಪೆರ್ಚುವುದಕ್ಕೆ ಈ ತೋಯಧಿ ಧರಣೀ ಧರಾಧರ ಸ್ಥಿತಿವರೆಗಮ್

"ರಾಜನೇ ! ಈ ಸಮುದ್ರ, ಪರ್ವತಗಳಿರುವವರೆಗೆ ನಿನಗೆ ಆಯುಸ್ಸು, ಸಂಪತ್ತು, ವಿಜಯ, ಅಭ್ಯುದಯ, ಸಂತತಿಗಳು ಹೆಚ್ಚುತ್ತಿರಲಿ."

206. "Oh, king! So long as the ocean and the mountains exist, let there be an increase in your life span, in your wealth, and in your success and prosperity."

ಭಾವಿಕ

Manifesting an Imagined Idea *(bhāvika)*

ಗೀ. ಭಾವಮೆಂಬುದಕ್ಕುಂ ಕವಿಗಳಾ
ಭಾವಿಸಿ ಮನದ ಬಗೆಯೊಂದಿದರ್ಥಂ
ಕೇವಲಮದಱೊಳಳಂಕೃತಿ
ಭಾವಿಕಮೆಂಬುದಕ್ಕುಂ ನೃಪತುಂಗದೇವಮತದಿಂ ೨೦೭

ಭಾವಮ್ ಎಂಬುದು ಅಕ್ಕುಮ್ ಕವಿಗಳಾ ಭಾವಿಸಿ ಮನದ ಬಗೆಯೊಂದು ಇದು ಅರ್ಥಮ್ ಕೇವಲಮ್ ಅದಱೊಳ್ ಅಳಂಕೃತಿ ಭಾವಿಕಮ್ ಎಂಬುದು ಅಕ್ಕುಮ್ ನೃಪತುಂಗ ದೇವ ಮತದಿನ್

ಕವಿಗಳು ಪರಿಭಾವಿಸಿ ಮನದಲ್ಲಿ ತಂದುಕೊಂಡ ಅರ್ಥ. 'ಭಾವ'. ನೃಪತುಂಗದೇವನ ಮತದಂತೆ ಅದರಲ್ಲಿ ತೋರುವ ಅಲಂಕಾರ 'ಭಾವಿಕ' ಎಂಬುದು.

ಇದು ಕೇವಲ ಒಂದು ಪದ್ಯಕ್ಕೆ ಸಂಬಂಧಿಸಿದ್ದಲ್ಲ. ದಂಡಿ ಇದನ್ನು ಸ್ಪಷ್ಟಪಡಿಸುತ್ತಾ ಇಡಿಯ ಪ್ರಬಂಧದ ವ್ಯಾಪ್ತಿ ಇರುವ ಗುಣವೇ 'ಭಾವಿಕ' ಎಂದಿದ್ದಾನೆ (೨.೩೬೪) : "ತದ್ಭಾವಿಕಮಿತಿ ಪ್ರಾಹುಃ ಪ್ರಬಂಧವಿಷಯಂ ಗುಣಮ್ । ಭಾವಃ ಕವೇರಭಿಪ್ರಾಯಃ ಕಾವ್ಯೇಷ್ವಾಸಿದ್ಧಿ ಸಂಸ್ಥಿತಃ ॥"

207. The figure of an imagined idea (*bhāva*) manifested by poets is, according to the opinion of Nṛpatuṅga, a verbal ornament known as *bhāvika.*

According to Daṇḍin, this is an idea prevalent throughout a poem. He explains in three *ślōkas* how *bhāvika* is not limited to one or two verses in a poem (2.364-366). Śrīvijaya also holds the same opinion and hence does not give an example for the figure *bhāvika.*

ಧ್ವನ್ಯಲಂಕಾರ

The Figure of Suggestion (*dhvani)*

ಕಂ. ಧ್ವನಿಯೆಂಬುದಳಂಕಾರಂ
ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ
ನೆನೆವುದಿದನಿಂತು ಕಮಳದೊ
ಳನಿಮಿಷಯುಗವೊಪ್ಪಿತೋರ್ಪುದಿಂತಿದು ಚೋದ್ಯಂ ೨೦೮

ಧ್ವನಿ ಎಂಬುದು ಅಳಂಕಾರಮ್ ಧ್ವನಿಯಿಸುಗುಮ್ ಶಬ್ದದಿಂದಮ್ ಅರ್ಥದೆ ದೂಷ್ಯಮ್ ನೆನೆವುದು ಇದನ್ ಇಂತು ಕಮಳದೊಳ್ ಅನಿಮಿಷಯುಗಮ್ ಒಪ್ಪಿತೋರ್ಪುದು ಇಂತು ಇದು ಚೋದ್ಯಮ್

'ಧ್ವನಿ' ಎಂಬುದು ಒಂದು ಅಲಂಕಾರ. ಅದು ಶಬ್ದದಿಂದ ಸೂಚಿತವಾಗುತ್ತದೆ. ಅರ್ಥದಿಂದಾದರೆ ಅದು ದೋಷಯುಕ್ತವಾಗಿರುತ್ತದೆ. ಇದನ್ನು ಈ ರೀತಿ

ತಿಳಿಯಬೇಕು : "ಕಮಲದಲ್ಲಿ ಮೀನುಗಳೆರಡು ಸೊಗಸಾಗಿ ಕಾಣುತ್ತಿವೆ. ಇದೇನು ಆಶ್ಚರ್ಯ !"

ಧ್ವನಿಯನ್ನು ಒಂದು ಅಲಂಕಾರವೆಂದು ಹೇಳುವ ಈ ಪದ್ಯಕ್ಕೆ ದಂಡಿ ಭಾಮಹರಲ್ಲಿ ಮೂಲವಿಲ್ಲ. ಧ್ವನಿಯನ್ನು ಕುರಿತಂತೆ ಒಂಬತ್ತನೆಯ ಶತಮಾನದಲ್ಲೇ ಶ್ರೀವಿಜಯನು ಹೇಳಿರುವುದು ಆಶ್ಚರ್ಯವೇ ಸರಿ. ಅಲಂಕಾರಗಳ ಪಟ್ಟಿಯಲ್ಲಿ 'ಧ್ವನಿ' ಸೇರಿಲ್ಲವಾದುದರಿಂದ ಇದು ಅನಂತರಕಾಲದಲ್ಲಿ ಸೇರಿದೆಯೇನೋ ಎಂದೆನಿಸುತ್ತದೆ. ಆದರೆ ಮಹಾಕಾವ್ಯದ ಲಕ್ಷಣವನ್ನು ಹೇಳುವ ಮೊದಲು ವಿಶೇಷವಾಗಿ ಈ ಧ್ವನಿಯ ವಿಷಯವನ್ನು ಹೇಳಿರುವುದರಿಂದ ಇದನ್ನು ಶ್ರೀವಿಜಯನು ಬೇಕೆಂದೇ ಈ ಸ್ಥಳದಲ್ಲಿ ಹೇಳಿದ್ದಾನೆಂದು ಭಾವಿಸಬೇಕಾಗುತ್ತದೆ.

208. *Dhvani* is a figure of speech that *suggests* through a word. The meaning looks to be faulty (but is not). An example to understand the figure: "Two fish are beautifully found in the lotus. What a wonder!"

The suggestion here is that of a beautiful woman's face: two eyes shaped like fish on a lotus-like face. It seems interesting to note that Śrīvijaya, who was a contemporary of Ānandavardhana (author of the famous book about *dhvani* called *Dhvanyāloka*) from northerly Kashmir, mentions *dhvani* as an *alaṅkāra* in a far off place in South India. The *Kavirājamārga* considers the importance of *dhvani* (suggestion) as an *alaṅkāra*, for the lexical meaning consists only of sound, but does not go as far as Ānandavardhana to see *dhvani* as the "soul" of poetry or a poem.

ಮಹಾಕಾವ್ಯಲಕ್ಷಣ

Characteristics of a "Grand and Elaborate" Poem (*mahākāvya-lakṣaṇa)*

ಮಾಲಿನೀ ಅತಿಶಯಮಿತಿಹಾಸೋಪಾಶ್ರಯಂ ಮೇಣ್ ಕಥಾವಿ
ಶ್ರುತಚತುರವಿಕಾಶೋತ್ಪಾದಿತಾರ್ಥೋತ್ಕರಂ ಮೇ

ಣತಿಕುಶಲಸುಲೀಲಾಚಾರಲೋಕೋಪಕಾರೋ
ದಿತಪರಮಗುಣೈಕೋದಾರಧೀರಾಧಿಕಾರಂ ೨೦೯

ಅತಿಶಯಮ್ ಇತಿಹಾಸ ಉಪಾಶ್ರಯಮ್ ಮೇಣ್ ಕಥಾವಿಶ್ರುತ ಚತುರ ವಿಕಾಶ ಉತ್ಪಾದಿತ ಅರ್ಥೋತ್ಕರಮ್ ಮೇಣ್ ಅತಿಕುಶಲ ಸುಲೀಲ ಆಚಾರ ಲೋಕೋಪಕಾರ ಉದಿತ ಪರಮ ಗುಣೈಕ ಉದಾರ ಧೀರ ಅಧಿಕಾರಮ್

ಅತಿಶಯವಾದುದು, ಇತಿಹಾಸವನ್ನು ಆಶ್ರಯಿಸಿದ ಕಥಾವಸ್ತು ಇರುವಂತಹುದು, ವಿಶ್ರುತವೂ ಚತುರವೂ ಆದ ವಿಸ್ತೃತಿಯಿಂದ ಅರ್ಥಗರ್ಭಿತವಾಗಿರುವುದು, ಅತಿ ಕುಶಲವಾಗಿ, ಲೀಲಾವಿನೋದವಾಗಿ ಇರುವುದು, ಆಚಾರಗಳನ್ನು ಲೋಕೋಪಕಾರಿಯಾಗಿ ಹೇಳುತ್ತಾ ಶ್ರೇಷ್ಠಗುಣಗಳಿಂದ, ಉನ್ನತವಾಗಿ ಮೂಡಿ ಬರುವುದು, ಅಧಿಕಾರಗಳಿಂದ ಕೂಡಿರುವುದು 'ಮಹಾಕಾವ್ಯ'.

ದಂಡಿ 'ಕಾವ್ಯಾದರ್ಶ'ದ ಪ್ರಾರಂಭದಲ್ಲಿ ಹೇಳಿರುವ ಮಹಾಕಾವ್ಯ ಲಕ್ಷಣವನ್ನು ಶ್ರೀವಿಜಯನು ತನ್ನ ಕೃತಿಯ ಕೊನೆಯಲ್ಲಿ ಹೇಳಿರುವುದು ಗಮನಿಸತಕ್ಕ ವಿಷಯ. ಮಹಾಕಾವ್ಯ ಸರ್ಗಗಳಿಂದ ಕೂಡಿರುವುದೆಂದು, ಆಶೀರ್ನಮಸ್ಕ್ರಿಯಾ ವಸ್ತುನಿರ್ದೇಶಗಳಿಂದ ಕೂಡಿರುತ್ತದೆಂದು ದಂಡಿ ಹೇಳಿದ್ದಾನೆ (೧.೧೪). ಅಲ್ಲದೆ "ಇತಿಹಾಸ ಕಥೋದ್ಭೂತಮಿತರದ್ವಾ ಸದಾಶ್ರಯಮ್ । ಚತುರ್ವರ್ಗಫಲಾಯತ್ತಂ ಚತುರೋದಾತ್ತನಾಯಕಮ್ ॥" (೧.೧೫) ಎಂದೂ ಹೇಳಿದ್ದಾನೆ.

209. A *mahākāvya* should be superlative in all regards, based on a legendary theme or a well-known story that skillfully develops profound and clever meanings. Edifying to people, it contains chapters (*adhikāra*) that artistically depict the charming and noble practices of characters with majestic qualities.

Sometimes called a "court epic," the *mahākāvya* has been theorized as containing a series of characteristics, first proposed by Daṇḍin (1.14-15): *sargabandhō mahākāvya-mucyatē tasya lakṣaṇam / āśīrnamaskriyāvastunirdēśōvāpi*

tanmukham //; itihāsa-kathōdbhūtamitaradvā sadāśrayam / caturvarga-phalāyattam caturōdātta-nāyakam //

ಮಾ. ಪರಮಸುಖಪರದಶ್ರೀಧರ್ಮಕಾಮಾರ್ಥಮೋಕ್ಷ
ಸ್ಥಿರವಿಷಯವಿಶೇಷಾಖ್ಯಾನವಿಖ್ಯಾತತತ್ತ್ವಂ
ಪುರ ಜನಪದ ಶೈಲಾದಿತ್ಯ ಚಂದ್ರೋದಯಾಸ್ತಾಂ
ತರ ಸಮ್ಮೃಗಗಣವ್ಯಾವರ್ಣನಾನಿರ್ಣಯಾರ್ಥಂ ೨೧೦

ಪರಮ ಸುಖಪದ ಶ್ರೀ ಧರ್ಮಕಾಮ ಅರ್ಥ ಮೋಕ್ಷ ಸ್ಥಿರ ವಿಷಯ ವಿಶೇಷ ಆಖ್ಯಾನ ವಿಖ್ಯಾತ ತತ್ತ್ವಮ್ ಪುರಜನಪದ ಶೈಲ ಆದಿತ್ಯ ಚಂದ್ರೋದಯ ಅಸ್ತಾಂತರ ಸಮ್ಮೃಗ ಗಣ ವ್ಯಾವರ್ಣನಾ ನಿರ್ಣಯಾರ್ಥಮ್

ಪರಮ ಸುಖಸಂಪತ್ತನ್ನು ನೀಡುವ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳ ವಿಷಯವನ್ನು ವಿಶೇಷವನ್ನು ತಿಳಿಸುವ ಆಖ್ಯಾನಗಳಿಂದ ಕೂಡಿರಬೇಕು. ಪುರ, ದೇಶ, ಪರ್ವತ, ಸೂರ್ಯಚಂದ್ರರ ಉದಯಾಸ್ತಗಳು, ಮೃಗಗಣಗಳ ವರ್ಣನೆಗಳು ನಿರ್ಣಯಾತ್ಮಕವಾಗಿ ಬರಬೇಕು.

ಪ್ರಾಚೀನ ಆಲಂಕಾರಿಕರ ಲಕ್ಷಣಗಳನ್ನು ಪರಿಶೀಲಿಸಿ ಶ್ರೀವಿಜಯನು ತನ್ನದೇ ಆದ ರೀತಿಯಲ್ಲಿ ಮಹಾಕಾವ್ಯ ಲಕ್ಷಣವನ್ನು ನಿರೂಪಿಸಿದ್ದಾನೆ. ಧರ್ಮಾರ್ಥಕಾಮ ಮೋಕ್ಷಗಳ ವಿಷಯವನ್ನು ಭಾಮಹ ಹೇಳಿದ್ದಾನೆ (೧-೨): "ಧರ್ಮಾರ್ಥ ಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸು ಚ । ಪ್ರೀತಿಂ ಕರೋತಿ ಕೀರ್ತಿಂಚ ಸಾಧುಕಾವ್ಯ ವನಿಷೇವಣಮ್ ॥"

210. A *mahākāvya* should contain distinctive episodes depicting well-known truths and the four goals of life leading to the highest happiness (the cultivation of virtues, a meaningful life, sensual pleasure, and spiritual salvation). For the purpose of narrating the events of the story, the poem should have descriptions of the city, the

countryside, mountains, the rising of the Sun and Moon, and also of different animals.

ಮಾ. ಸಮುದಿತುಕುಸುಮಾಮೋದೋದಯೋದ್ಯಾನಲೀಲಾ
ಕ್ರಮವಿಹಿತಜಲಕ್ರೀಡಾವಿನೋದಾದಿ ನೀತಂ
ಪ್ರಮದಮದನಮಾದ್ಯದ್ಯೌವನೋದ್ಯಾನರಾಮಂ
ರಮಣರಣಿತಗೋಷ್ಠೀಬಂಧಸಂಧಿಪ್ರಬಂಧಂ ೨೧೧

ಸಮುದಿತ ಕುಸುಮ ಆಮೋದ ಉದಯ ಉದ್ಯಾನ ಲೀಲಾಕ್ರಮ ವಿಹಿತ ಜಲಕ್ರೀಡಾ ವಿನೋದಾದಿ ನೀತಮ್ ಪ್ರಮದ ಮದನಮ್ ಆದ್ಯದ್ಯೌವನ ಉದ್ಯಾನ ರಾಮಮ್ ರಮಣ ರಣಿತ ಗೋಷ್ಠೀ ಬಂಧ ಸಂಧಿ ಪ್ರಬಂಧಮ್

ಅರಳಿದ ಹೂಗಳ ಪರಿಮಳ ಹರಡಿರುವ ಉದ್ಯಾನಗಳಲ್ಲಿ ಲೀಲಾವಿಹಾರ, ಕ್ರಮವಿಹಿತವಾದ ಜಲಕ್ರೀಡಾವಿನೋದ, ಸೊಕ್ಕಿದ ಯೌವನಮದದವರ ಕಾಮಕ್ರೀಡಾವಿಲಾಸಗಳಿಂದ ರಮಣೀಯವಾಗಿರಬೇಕು. ಪ್ರೇಮಿಗಳ ಇಂಪಾದ ಧ್ವನಿಗಳಿಂದ ಕೂಡಿದ ಗೋಷ್ಠಿಗಳ ವರ್ಣನೆ ಇರಬೇಕು. ಕಥಾಬಂಧದಲ್ಲಿ ಸಂಧಿಗಳು ಸೇರಿರಬೇಕು.

ದಂಡಿ ಸರ್ಗಬಂಧವನ್ನು ಕುರಿತು ಹೇಳಿರುವನಾದರೂ ("ಸರ್ಗಬಂಧೋ ಮಹಾಕಾವ್ಯಮುಚ್ಯತೇ ತಸ್ಯ ಲಕ್ಷಣಮ್", ೧–೧೪) ಸಂಧಿಗಳಿಂದ ಕೂಡಿದ ಮಹಾಕಾವ್ಯವನ್ನು 'ಪ್ರಬಂಧ' ಎಂದು ಕರೆದಿರುವ ಕವಿರಾಜಮಾರ್ಗ ಅನಂತರ ಕಾಲದ ಮಹಾಕಾವ್ಯಗಳಿಗೆ ಮಹಾಪ್ರಬಂಧವೆಂಬ ಹೆಸರು ಬರಲು ಸ್ಫೂರ್ತಿ ಯನ್ನು ನೀಡಿರಬಹುದು.

211. The poem should describe pleasant excursions in gardens filled with fragrant flowers and entertainments like playing in the pond . It should be beautified with descriptions of the lovemaking of intoxicated lovers. An excellent composition with a series of well-connected chapters that bring out themes should also describe the meeting of lovers.

In Kannada, *mahākāvya* has the name of *mahāprabandha*. The word *prabandha* may take the following etymology: *prakṛṣṭa-bandha* = "excellent composition." Daṇḍin's *sarga-bandhō mahākāvyam* (1.14) may have inspired the author here to coin the word *prabandha*, which was used later by great Kannada poets like Pampa (10th c.). The word *sandhi* – referring to the "connections" or "junctures" (*sandhi)* in the chapters of a poem – is a term used by Bharata in the *Nāṭyaśāstra* to denote five well-connected junctures whereby the themes in a drama are brought out.

ಮಾ. ವಿವಿಧವಿಭವಶೋಭಾರಂಭಲಂಭಪ್ರಲಂಭೋ
ದ್ಭವವಿಹಿತವಿವಾಹೋತ್ಸಾಹಸಾಕಲ್ಯಕಲ್ಪಂ
ಪ್ರವರನೃಪಕುಮಾರಾತ್ತೋದಯಾದಿ ಪ್ರಮೋದಾ
ಸವಸಮುದಿತಸೇವಾರಾತಿವೃತ್ತಾಂತವೃತ್ತಂ ೨೧೨

ವಿವಿಧ ವಿಭವ ಶೋಭಾರಂಭ ಲಂಭ ಪ್ರಲಂಭ ಉದ್ಭವ ವಿಹಿತ ವಿವಾಹ ಉತ್ಸಾಹ ಸಾಕಲ್ಯ ಕಲ್ಪಮ್ ಪ್ರವರ ನೃಪ ಕುಮಾರಾತ್ತ ಉದಯಾದಿ ಪ್ರಮೋದ ಆಸವ ಸಮುದಿತ ಸೇವಾರಾತಿ ವೃತ್ತಾಂತ ವೃತ್ತಮ್

ವಿವಿಧ ವಿಭವಾನ್ವಿತ ಶೋಭಾರಂಭಗಳು, ಸಮಾಗಮ, ವಿರಹಗಳ ಮೂಲಕ ಕೊನೆಗೆ ನಡೆಯುವ ವಿವಾಹೋತ್ಸವ ಮೊದಲಾದವನ್ನು ಸಮಗ್ರವಾಗಿ ವರ್ಣಿಸಬೇಕು. ಶ್ರೇಷ್ಠರಾದ ರಾಜಕುಮಾರನ ಜನನ ಹಾಗೂ ವಿನೋದಗಳನ್ನು, ಮಧುಪಾನ, ಶತ್ರುವೃತ್ತಾಂತ ಮೊದಲಾದ ಪ್ರಸಂಗಗಳಿಂದ ಕೂಡಿರಬೇಕು.

212. There should be extensive descriptions of glorious and auspicious occasions (descriptions of marriage etc.), preceded by unions and separations. The descriptions should celebrate the birth and entertainments (such as drinking

parties) of an exalted prince as well as episodes about his enemies.

ಮಾ. ನಯವಿನಿಮಯ ನಾನಾ ಮಂತ್ರದೂತಪ್ರಯಾಣ
ಕ್ಷಯಸಮಯವಿಳಾಸೋಲ್ಲಾಸಿಸಂಗ್ರಾಮಿಕಾಂಗಂ
ಭಯವಿರಹಿತವೀರ್ಯೌದಾರ್ಯ ಗಂಭೀರಕಾರ್ಯಾ
ಶ್ರಯವಿಶದಗುಣಶ್ರೀ ನಾಯಕೋತ್ಕರ್ಷವೇದ್ಯಂ ೨೧೩

ನಯ ವಿನಿಮಯ ನಾನಾ ಮಂತ್ರ ದೂತ ಪ್ರಯಾಣ ಕ್ಷಯ ಸಮಯ ವಿಳಾಸ ಉಲ್ಲಾಸಿ ಸಂಗ್ರಾಮಿಕ ಅಂಗಮ್ ಭಯ ವಿರಹಿತ ವೀರ್ಯ ಔದಾರ್ಯ ಗಂಭೀರ ಕಾರ್ಯ ಆಶ್ರಯ ವಿಶದ ಗುಣಶ್ರೀ ನಾಯಕ ಉತ್ಕರ್ಷ ವೇದ್ಯಮ್

ರಾಜನೀತಿಯ ವಿಚಾರಗಳ ವಿನಿಮಯದಿಂದ ಕೂಡಿದ ಮಂತ್ರಾಲೋಚನೆಗಳು, ದೂತ ವೃತ್ತಾಂತ, (ಸೈನ್ಯದ) ಪ್ರಯಾಣ, ಕ್ಷಯ ಸಮಯದಲ್ಲಿ ಉಲ್ಲಾಸ ನೀಡುವ ಯುದ್ಧರಂಗ ಕಥಾಂಗಗಳಾಗಿರಬೇಕು. ಭಯವಿರಹಿತನು, ವೀರ್ಯ, ಔದಾರ್ಯ, ಗಂಭೀರ ಕಾರ್ಯಗಳಿಗೆ ಮೂಲವಾದವನು, ವಿಶದಗುಣ ಸಂಪದ್ಭರಿತನು ಆದ ನಾಯಕನ ಉತ್ಕರ್ಷವನ್ನು ತಿಳಿಸುವಂತಿರಬೇಕು.

213. It should also include political matters: mutual consultations, accounts of envoys, journeys abroad, the heroic aspects of war. It should depict the greatness of a hero who is fearless, strong, compassionate, and possessed of qualities that attain success.

ಮಾ. ವಿಳಸಿತಸದಳಂಕಾರಾದಿಸಂಸಾಧಿತಾರ್ಥಂ
ಕುಳವಿದಿತಪದೋದ್ಯತ್ಕೋಮಳಾಳಾಪಶೀಲಂ
ಸುಳಲಿತಗುಣನಾನಾವೃತ್ತಜಾತಿಪ್ರವೃತ್ತಾ
ಸ್ಖಳಿತರಸವಿಶೇಷೋಪಾಶ್ರಯಂ ಶ್ರೀನಿವೇಶಂ ೨೧೪

ವಿಳಸಿತ ಸದಳಂಕಾರಾದಿ ಸಂಸಾಧಿತ ಅರ್ಥಮ್ ಕುಳ ವಿದಿತ ಪದ ಉದ್ಯತ್ ಕೋಮಳ ಆಳಾಪ ಶೀಲಮ್ ಸುಳಲಿತ ಗುಣ ನಾನಾ ವೃತ್ತ ಜಾತಿ ಪ್ರವೃತ್ತ ಅಸ್ಖಳಿತ ರಸ ವಿಶೇಷ ಉಪಾಶ್ರಯಮ್ ಶ್ರೀ ನಿವೇಶಮ್

ಚೆಲುವಿನ ಅಲಂಕಾರಗಳಿಂದ ಸಾಧಿತವಾದ ಅರ್ಥ, ಶುದ್ಧವಾದ ಪದಬಂಧ ಗಳಿಂದ ಸುಕುಮಾರವಾಗಿರಬೇಕು. ಸುಲಲಿತವಾದ ಗುಣಗಳಿಗೂ, ನಾನಾ ವೃತ್ತ ಜಾತಿ ಪದ್ಯಗಳಿಗೂ ನಿರಂತರ ರಸಾಭಿವ್ಯಕ್ತಿಗೂ ಆಶ್ರಯವಾಗಿರುವ ರಚನೆ (ಮಹಾಕಾವ್ಯ).

214. Charming figures of speech should make the poem meaningful. The composition should be soft with clarity of words. It should be a source of different types of *vṛtta* and *jāti* meters. It should be made beautiful with *rasa*.

Vṛttas are borrowed Sanskrit meters with four metrical lines. *Jāti* is a native metrical form.

ಮಾ. ನಯವಿದುದಿತಯುಕ್ತಿವ್ಯಕ್ತಿಲೋಕಪ್ರತೀತ್ಯಾ
ಶ್ರಯಸಕಳಕಳಾಲೀಲಾಕರಾಲ್ಪೋಪಜಲ್ಪಂ
ನಿಯತಸಮಯಸಾರಾಸಾಧನೀಯಾಧಿಕಾರಾ
ನ್ವಯಪರಮತಪೋನುಷ್ಠಾನಮಿಷ್ಟಾರ್ಥಸಿದ್ಧಂ ೨೧೪

ನಯವಿದ್ ಉದಿತ ಯುಕ್ತಿ ವ್ಯಕ್ತಿ ಲೋಕ ಪ್ರತೀತಿ ಆಶ್ರಯ ಸಕಳ ಕಳಾ ಲೀಲಾ ಆಕರ ಅಲ್ಪ ಉಪಜಲ್ಪಮ್ ನಿಯತ ಸಮಯ ಸಾರಾ ಸಾಧನೀಯ ಅಧಿಕಾರ ಅನ್ವಯ ಪರಮ ತಪೋನುಷ್ಠಾನಮ್ ಇಷ್ಟಾರ್ಥ ಸಿದ್ಧಮ್

ರಾಜನೀತಿ ವಿದರಾದವರ ಯುಕ್ತಿಗಳನ್ನು ಲೋಕ ಪ್ರತೀತಿಯನ್ನು ಆಶ್ರಯಿಸಿದ ಸಕಲ ಕಲಾಕಲಾಪಗಳ ಪರಿಯನ್ನೊಳಗೊಂಡ ಮಿತಶಬ್ದ ಗಳಿಂದ ಕೂಡಿರಬೇಕು. ನಿಯತವಾದ ಧರ್ಮಶಾಸ್ತ್ರಗಳ ತತ್ತ್ವಸಾರಕ್ಕೆ ಅನುಗುಣವಾಗಿ ಅಧಿಕಾರಾರ್ಹರಿಗೆ ಸಾಧನೀಯವಾದ, ಪರಮ ತಪೋನಿಷ್ಠಾನುಗುಣವಾದ ಇಷ್ಟಾರ್ಥಸಿದ್ಧಿ ಇರಬೇಕು.

215. The *mahākāvya* should contain the strategies of political experts and the artistic expressions of all the grace-bestowing arts that are famous in the world. Its meanings should conform to custom and confer a special merit obtainable by the power of penance.

ಮಾ. ವಿಗತಮಳಮುಪಾತ್ತಾರಾತಿಸಾರ್ಥಾರ್ಥವೀರಂ
ಸ್ಥಗಿತಮಮಿತನಾನಾಶಬ್ದವೀಚೀಪ್ರಪಂಚಂ
ನಿಗದಿತಗುಣರತ್ನೈಕಾಕರಂ ಸಾಗರಂಬೋಲ್
ಸೊಗಯಿಸಿ ಧರಣೀಚಕ್ರಾಂಬರಾಕ್ರಾಂತಮಕ್ಕುಂ ೨೧೬

ವಿಗತ ಮಳಮ್ ಉಪಾತ್ತಾರಾತಿ ಸಾರ್ಥ ಅರ್ಥ ವೀರಮ್ ಸ್ಥಗಿತಮ್ ಅಮಿತ ನಾನಾ ಶಬ್ದ ವೀಚೀ ಪ್ರಪಂಚಮ್ ನಿಗದಿತ ಗುಣ ರತ್ನ ಏಕಾಕರಮ್ ಸಾಗರಂಬೋಲ್ ಸೊಗಯಿಸಿ ಧರಣೀ ಚಕ್ರ ಅಂಬರ ಆಕ್ರಾಂತಮ್ ಅಕ್ಕುಮ್

ನಿರ್ಮಲವಾದುದು, ಶತ್ರುಗಳಿಂದ ಸೆಳೆದುಕೊಂಡ ಐಶ್ವರ್ಯದಿಂದ ಸಾರ್ಥಕವಾದ ವೀರದಿಂದ ಕೂಡಿದ್ದು, ಅಪರಿಮಿತವಾದ ವಿಧವಿಧವಾದ ಶಬ್ದಗಳೆಂಬ ಅಲೆಗಳಿಂದ ಕೂಡಿದ್ದು, ನಿಗದಿತ ಗುಣಗಳೆಂಬ ರತ್ನಗಳಿಗೆ ಸಾಗರದಂತೆ ಆಕರವಾದುದು, ಭೂಮ್ಯಾಕಾಶಗಳನ್ನು ಆಕ್ರಮಿಸಿಕೊಂಡಿರು ವುದು (ಈ ಮಹಾಕಾವ್ಯ).

216. The *mahākāvya* should be devoid of poetic faults. It should contain a heroic account of defeating the enemy. Filled with unlimited waves of words, it should be a source of usages that are like high-quality gems. The beautiful poem bridges the distance between earth and sky.

ಗೀ. ಇಂತು ಮಿಕ್ಕ ವರ್ಣನೆಗಳ್
ಸಂತತಮೊಂದಾಗಿ ಪೇೞ್ದ ಕಾವ್ಯಂ ಧರೆಯೊಳ್
ಸಂತತಿ ಕೆಡದೆ ನಿಲ್ಕುಮಾಕ
ಲ್ಪಾಂತಂಬರಮಮೋಘವರ್ಷಯಶಂಬೋಲ್ ೨೧೭

ಇಂತು ಮಿಕ್ಕ ವರ್ಣನೆಗಳ್ ಸಂತತಮ್ ಒಂದಾಗಿ ಪೇೞ್ದ ಕಾವ್ಯಮ್ ಧರೆಯೊಳ್ ಸಂತತಿ ಕೆಡದೆ ನಿಲ್ಕುಮ್ ಆಕಲ್ಪಾಂತಂಬರಮ್ ಅಮೋಘವರ್ಷ ಯಶಂಬೋಲ್

ಹೀಗೆ ವಿವಿಧ ವರ್ಣನೆಗಳನ್ನು ಒಂದುಗೂಡುವಂತೆ ಹೇಳಿದ ಕಾವ್ಯವು ಅಮೋಘವರ್ಷ ನೃಪತುಂಗನ ಯಶಸ್ಸಿನಂತೆ ಕಲ್ಪಾಂತದವರೆಗೂ ನಿರಂತರವಾಗಿ ಚಿರಸ್ಥಾಯಿಯಾಗಿ ನಿಲ್ಲುವುದು.

217. In this way, if many such descriptions are put together in a poem, it will exist in this earthly realm till the end of the *kalpa,* like the fame of Nṛpatuṅga.

A *kalpa* is one thousand *yugas,* used to count time comprising of thousands of years. Even though Śrīvijaya follows Daṇḍin, for the most part, while giving the definition of characteristic features of *mahākāvya,* he adds his own views to suggest the grand nature of *mahākāvya* and places them at the end of his work.

ನೃಪತುಂಗಸಭಾಸದರು

ದ್ರುತವಿಳಂಬಿತ

ಸಕಳಲೌಕಿಕಸಾಮಯಿಕೋರುವೈ
ದಿಕವಿಶೇಷವಿವೇಕಪರಾಯಣಂ
ಪ್ರಕಟಿತೋಕ್ತಿವಿವಿಕ್ತಕಳಾಕಳಾ
ಪಕನುಪಾಹಿತಸಾಹಿತವಿದ್ಯೆಯೊಳ್ ೨೧೮

ಸಕಳ ಲೌಕಿಕ ಸಾಮಯಿಕ ಉರು ವೈದಿಕ ವಿಶೇಷ ವಿವೇಕ ಪರಾಯಣಮ್ ಪ್ರಕಟಿತ ಉಕ್ತಿ ವಿವಿಕ್ತ ಕಳಾಕಳಾಪಕನ್ ಉಪಾಹಿತ ಸಾಹಿತ ವಿದ್ಯೆಯೊಳ್

ಸಕಲ ಲೌಕಿಕ, ದಾರ್ಶನಿಕ, ವೈದಿಕ ವಿಷಯಗಳಲ್ಲಿ ವಿವೇಕ ಪರಾಯಣನು, ಸಾಹಿತ್ಯ ವಿದ್ಯೆಯಲ್ಲಿ ಸೇರುವ ಉಕ್ತಿ ಪ್ರಕಾರಗಳ ಕಲಾಕಲಾಪಗಳನ್ನೆಲ್ಲ ವ್ಯಕ್ತಮಾಡಬಲ್ಲವನು.

ನೃಪತುಂಗನ ಸಭೆಯಲ್ಲಿರುವ ತಾತ್ತ್ವಿಕರು, ಕವಿಗಳು ಮೊದಲಾದವರ ಬಗೆಗೆ ಅಭಿಮಾನದಿಂದ ಹೇಳುವ ಪದ್ಯಗಳಿವು. ಇವು ಶ್ರೀವಿಜಯನಿಗೆ ಮತ್ತಿತರ ಕವಿಗಳಿಗೆ ಅನ್ವಯವಾಗುವ ಪದ್ಯಗಳಿರಬಹುದು.

218. One who is in the court of Nṛpatuṅga has distinguished powers in all worldly, philosophical, and *vēdic* matters. He has the ability to express his artistry in literary compositions.

ದ್ರುತ. ಅತಿಶಯಪ್ರತಿಭಾವಿಭವಂ ಮಹಾ
ಚತುರವೃತ್ತಿನಿತಾಂತಮನಾಕುಳಂ
ಪ್ರವಿತರ್ಕಿಲಕ್ಷಣಲಕ್ಷ್ಯನಾ
ಶ್ರಿತಮಹಾನೃಪತುಂಗಸಭಾಸದಂ ೨೧೯

ಅತಿಶಯ ಪ್ರತಿಭಾ ವಿಭವನ್ ಮಹಾಚತುರ ವೃತ್ತಿ ನಿತಾಂತನ್ ಅನಾಕುಳನ್ ಪ್ರವಿತರ್ಕಿತ ಲಕ್ಷಣ ಲಕ್ಷ್ಯನ್ ಆಶ್ರಿತ ಮಹಾನೃಪತುಂಗ ಸಭಾಸದನ್

ನೃಪತುಂಗನನ್ನು ಆಶ್ರಯಿಸಿದ ಸಭಾಸದನು ಅತಿಶಯ ಪ್ರತಿಭಾವೈಭವವುಳ್ಳವನು, ಯಆವಾಗಲೂ ಮಹಾಚಾತುರ್ಯದಿಂದ ವರ್ತಿಸುವವನು, ವ್ಯಾಕುಲವಿಲ್ಲದವನು, ಲಕ್ಷಣ ಲಕ್ಷ್ಯಗಳನ್ನು ವಿವೇಚಿಸಬಲ್ಲವನು.

219. In the royal court of Nṛpatuṅga, one has an enormous amount of creativity and uninterrupted clarity. He can thus be discriminating in crafting the characteristics and examples of poetry in an appropriate manner.

ಮಣಿವಿಭೂಷಣ

ಭಾವಿಸಲ್ ಬಗೆದವಂ ಮಿಗೆ ಜಾಣನಶೇಷಭಾ
ಷಾವಿಶೇಷವಿಷಯಾತಿಶಯಾಮಳಕೌಶಳಂ

ದೇವತಾಗುರುಗುಣೋದಯವೃದ್ಧ ಜನೋಪಸಂ
ಸೇವನಾಪರನಪಾಕೃತವೈಕೃತಚಾಪಳಂ ೨೨೦

ಭಾವಿಸಲ್ ಬಗೆದವನ್ ಮಿಗೆ ಜಾಣನ್ ಅಶೇಷ ಭಾಷಾವಿಶೇಷ ವಿಷಯ ಅತಿಶಯ ಅಮಳ ಕೌಶಳನ್ ದೇವತಾ ಗುರು ಗುಣೋದಯ ವೃದ್ಧಜನ ಉಪಸಂಸೇವನಾಪರನ್ ಅಪಾಕೃತ ವೈಕೃತ ಚಾಪಳನ್

(ನೃಪತುಂಗನ ಸಭಾಸದನು) ಭಾವಿಸಿದರೆ ವಿಚಾರಪರನು, ತುಂಬಾ ಜಾಣನು, ಸಮಸ್ತ ಭಾಷಾವಿಷಯಗಳಲ್ಲಿ ಅತಿಶಯವೂ ನಿರ್ದುಷ್ಟವೂ ಆದ ಕೌಶಲವುಳ್ಳವನು, ದೇವತೆಗಳು, ಗುರುಗಳು, ಗುಣವಂತರು, ಹಿರಿಯರು– ಇವರ ಸೇವಾತತ್ಪರನು, ವಿಕಾರಗಳನ್ನು ಚಾಪಲ್ಯಗಳನ್ನು ತೊರೆದವನು.

220. If you observe the court poet of Nṛpatuṅga, you would notice his cleverness and his great skill in dealing with several languages. He serves gods, teachers, meritorious people, and the aged ones. He does not long for novel and unusual things.

ಮಂಗಳ ಪರಮಕಾರುಣಿಕನಪ್ಪನಪಾಕೃತದೋಷನಾ
ದರಮನಾಗಿಸುವನಪ್ಪನಶೇಷಜನಂಗಳೊಳ್
ಪರಗುಣಾಸಹನನಲ್ಲದನಾತ್ಮಗುಣೋದಯಾಂ
ತರಸರೂಪನಖಿಲಾಗಮಪಾರಪರಾಯಣಂ ೨೨೧

ಪರಮ ಕಾರುಣಿಕನಪ್ಪನ್ ಅಪಾಕೃತ ದೋಷನ್ ಆದರಮನ್ ಆಗಿಸುವನಪ್ಪನ್ ಅಶೇಷ ಜನಂಗಳೊಳ್ ಪರಗುಣ ಅಸಹನನಲ್ಲದನ್ ಆತ್ಮ ಗುಣೋದಯಾಂತರ ಸರೂಪನ್ ಅಖಿಲ ಆಗಮ ಪಾರ ಪರಾಯಣನ್

(ಆ ಸಭಾಸದನು) ಪರಮ ಕಾರುಣಿಕನು, ದೋಷವಿದೂರನು, ಅಶೇಷ ಜನಗಳಲ್ಲಿ ಆದರವನ್ನು ಗಳಿಸತಕ್ಕವನು, ಪರಗುಣದಲ್ಲಿ ಅಸಹನೆ ಯಿಲ್ಲದವನು, ಸ್ವಗುಣದ ಅಭ್ಯುದಯದಮೂರ್ತಿಯಾದವನು, ಎಲ್ಲಾ ಆಗಮಗಳಲ್ಲಿ ಪಾರಂಗತನು.

221. He is compassionate, lacking faults, an object of affection among all people. He is not impatient with the negative qualities of other people but rather interested in developing his own good qualities. He is well-versed in traditional doctrines.

ಮಂಗಳ ಬಗೆದು ಮೇಣ್ ಪರಮಧರ್ಮಮನೞ್ತಿಯಿನನ್ವಯ
ಪ್ರಗಣಿತಾಭ್ಯುದಯಮೋಕ್ಷಸುಖಾಶ್ರಯಹೇತುವಂ
ನೆಗೞ್ತೆ ಮೇಣುದಿತನಿರ್ಮಳಕೀರ್ತಿವಿತಾನಮಂ
ಜಗದಗಾಧವಿವರೋದರದೀಪವಿಕಲ್ಪಮಂ ೨೨೨

ಬಗೆದು ಮೇಣ್ ಪರಮ ಧರ್ಮಮನ್ ಅೞ್ತಿಯಿನ್ ಅನ್ವಯ ಪ್ರಗಣಿತ ಅಭ್ಯುದಯ ಮೋಕ್ಷ ಸುಖಾಶ್ರಯ ಹೇತುವನ್ ನೆಗೞ್ತೆ ಮೇಣ್ ಉದಿತ ನಿರ್ಮಳ ಕೀರ್ತಿ ವಿತಾನಮನ್ ಜಗತ್ ಅಗಾಧ ವಿವರ ಉದರ ದೀಪ ವಿಕಲ್ಪಮ್

ವಂಶದ ಏಳಿಗೆಗೂ ಮೋಕ್ಷಸುಖಕ್ಕೂ ಕಾರಣವಾದ ಪರಮಧರ್ಮವನ್ನು ಪ್ರೀತಿಯಿಂದ ವಿಚಾರಮಾಡಿ, ಜಗತ್ತೆಂಬ ಅಗಾಧ ಗುಹಾಮಧ್ಯದಲ್ಲಿ ದೀಪಕ್ಕೆ ಸಮಾನವಾಗಿ ಬೆಳಗುವ ತನ್ನ ನಿರ್ಮಲ ಕೀರ್ತಿ ವಿಸ್ತರಿಸುತ್ತಿರಲು,

ಮಣಿಭೂಷಣ
ಕೂಡೆ ಪೇೞ್ದನುರು ಕಾವ್ಯಮನಿಂತಭಿಮಾನಿ ತಾಂ
ನಾಡಿಗೀಡಿತಮಹಾಪುರುಷವ್ರತನಿಶ್ಚಿತಂ
ಕೂಡದಂತೆ ಪೆಱರಚ್ಚಿನೊಳೇತೆಱನಪ್ಪೊಡಂ
ನೋಡದಂತೆ ಪೆಱತಂ ಕುಱಿತಾವನುಮೇನುಮಂ ೨೨೩

ಕೂಡೆ ಪೇೞ್ದನ್ ಉರು ಕಾವ್ಯಮನ್ ಇಂತು ಅಭಿಮಾನಿತಾನ್ ನಾಡಿಗೆ ಈಡಿತ ಮಹಾಪುರುಷ ವ್ರತ ನಿಶ್ಚಿತನ್ ಕೂಡದಂತೆ ಪೆಱರ ಅಚ್ಚಿನೊಳ್ ಏತೆಱನಪ್ಪೊಡಮ್ ನೋಡದಂತೆ ಪೆಱತನ್ ಕುಱಿತು ಆವನುಮ್ ಏನುಮನ್

ಅಭಿಮಾನಿಯು, ನಾಡಿಗೆಲ್ಲ ಪ್ರಖ್ಯಾತನಾದ ಮಹಾಪುರುಷನು, ವ್ರತನಿಷ್ಠನು ಆದ ಆತನು ಇತರರ ಅಚ್ಚಿನಲ್ಲಿ ಯಾವ ತೆರದಲ್ಲೂ ಕೂಡದ ಹಾಗೆ, ಯಾರೂ ಇನ್ನೊಂದೆಡೆ ನೋಡುವ ಅಗತ್ಯವಿಲ್ಲದಂತೆ ಮಹಾಕಾವ್ಯಲಕ್ಷಣವನ್ನು ಈ ರೀತಿ ಹೇಳಿರುವನು.

222-223 He knows that the cultivation of the highest virtue is the only source for lifting up one's community and achieving the pleasure of ultimate freedom. In order to widen his fame, shining like a lamp in the deep world-which-is like-a-cave, the poet at court has given the characteristics of *mahākāvya* in this way. A man of self-respect, he is well known in the land as a person pursuing the vow of becoming great. He has composed this work so that no one need consult any other work.

ಮಣಿಭೂಷಣ

ಅಂತು ಪೇೞ್ದ ತೆಱದಿಂ ವರಗೀತಗುಣೋದಯೈ
ಕಾಂತಕಾಂತವಿಷಯಾಶಯರಾಗಿ ನಿರಾಕುಳಂ
ಸಂತತಂ ನುಡಿಗಳೊಳ್ ಬಗೆ ಪೆರ್ಚಿರೆ ಪೇೞ್ದವರ್
ಸಂತಸಂಬಡಿಸುವರ್ ನೃಪತುಂಗಸಭಾಸದರ್ ೨೨೪

ಅಂತು ಪೇೞ್ದ ತೆಱದಿನ್ ವರಗೀತ ಗುಣೋದಯ ಏಕಾಂತ ಕಾಂತ ವಿಷಯ ಆಶಯರಾಗಿ ನಿರಾಕುಳಮ್ ಸಂತತಮ್ ನುಡಿಗಳೊಳ್ ಬಗೆ ಪೆರ್ಚಿರೆ ಪೇೞ್ದವರ್ ಸಂತಸಮ್ ಬಡಿಸುವರ್ ನೃಪತುಂಗ ಸಭಾಸದರ್

ಹೀಗೆ ಹೇಳಿದ ರೀತಿಯಲ್ಲಿ ಹಾಡಿಹೊಗಳಲು ಯೋಗ್ಯವಾದ ಕಾವ್ಯಗುಣೋದಯವೊಂದರಿಂದಲೇ ಆಕರ್ಷಿತರಾದ ವಿಷಯವನ್ನು ನೆನೆದು, ಹೇಳುವ ಮಾತಿನಲ್ಲಿ ಮನಸ್ಸು ತುಂಬಿಬರಲು ನೃಪತುಂಗನ ಸಭಾಸದರು ನಿಸ್ಸಂದಿಗ್ಧವಾಗಿ ಯಾವಾಗಲೂ ಹೇಳಿ ಸಂತೋಷಪಡಿಸುವರು.

224. It is said that the court poets of Nṛpatuṅga take deep interest in describing great qualities that are fit to be sung in praise of the king and compose poems with words that make us think.

ಕೃತಿಕರ್ತೃಮಾಹಾತ್ಮ್ಯ

ಗೀ. ಪಾರ್ಥಿವಲೋಕನಪ್ಪನೆಂದುಂ ಕವಿ ವರ್ಣಿಕುಂ
ಸಾರ್ಥಚಯಂ ನುತಸರಸ್ವತೀ
ತೀರ್ಥಾವತಾರಮಾರ್ಗನೆಸಕಂ
ಸಾರ್ಥಮಪ್ಪಂತು ಚಿಂತಿತಕಾರ್ಯತತ್ಪರಂ ೨೨೫

ಪಾರ್ಥಿವಲೋಕನಪ್ಪನ್ ಎಂದುಮ್ ಕವಿ ವರ್ಣಿಕುಮ್ ಸಾರ್ಥಚಯನ್ ನುತ ಸರಸ್ವತೀ ತೀರ್ಥ ಅವತಾರ ಮಾರ್ಗನ್ ಸಾರ್ಥಮಪ್ಪ ಅಂತು ಚಿಂತಿತ ಕಾರ್ಯ ತತ್ಪರನ್

ರಾಜಲೋಕದಲ್ಲಿ ಅರ್ಥಪೂರ್ಣವಾದ (ಬಾಳನ್ನು) ನಡೆಸುವವನೆಂದು ಕವಿಗಳು ವರ್ಣಿಸುವರು. ಅವನು 'ನುತಸರಸ್ವತೀತೀರ್ಥಾವತಾರ' (ಸರಸ್ವತಿಯ ಪವಿತ್ರ ಅವತಾರ). ಕಾರ್ಯವು ಸಾರ್ಥಕವಾಗುವಂತೆ ಆಲೋಚಿಸಿ ಕಾರ್ಯತತ್ಪರನಾಗುವವನು.

ನೃಪತುಂಗನ ಬಗೆಗೆ ಕವಿ ಅಭಿಮಾನದಿಂದ ಹೇಳುತ್ತಿರುವ ಮಾತುಗಳಿವು.

225. Besides being a king, poets describe Nṛpatuṅga as a worthy person who follows the way of the auspicious Sarasvatī and the personification of Sanctity. His thoughtful deeds lead to a meaningful result.

ಋಷಭ ಕುಲಜಾತಿದೇಶವಿಶದಂ ವಿನಯೋಪಚಾರಂ
ನಿಲಯೈಕವೃತ್ತಿವಿಹಿತೋರ್ಜಿತಸತ್ತ್ವಸಾರಂ
ವಿಲಸದ್ಗುಣಾಗುಣವಿವರ್ತಿಗುರೂಪದೇಶಾ
ಮಲಿನಾವಬೋಧವಿದಿತಾಖಿಳಚೋದ್ಯವಿದ್ಯಂ ೨೨೬

ಕುಲ ಜಾತಿ ದೇಶ ವಿಶದನ್ ವಿನಯ ಉಪಚಾರನ್ ನಿಲಯೈಕ ವೃತ್ತಿ ವಿಹಿತ ಊರ್ಜಿತ ಸತ್ತ್ವಸಾರನ್ ವಿಲಸತ್ ಗುಣ ಅಗುಣ ವಿವರ್ತಿ ಗುರು ಉಪದೇಶ ಅಮಲಿನ ಅವಬೋಧ ವಿದಿತ ಅಖಿಳ ಚೋದ್ಯ ವಿದ್ಯನ್

ಸ್ವಚ್ಛವಾದ ಕುಲ, ಜಾತಿ ಹಾಗು ದೇಶಗಳುಳ್ಳವನು, ವಿನಯೋಪಚಾರ ನಿರತನು, ಗೃಹಸ್ಥಾಶ್ರಮದಿಂದ ಗಳಿಸಿದ ಉದಾತ್ತ ಸತ್ತ್ವಸಮೇತನು, ಗುಣಾವ ಗುಣಗಳನ್ನು ಬೇರ್ಪಡಿಸಿ ತೋರಿಸುವ ಶಕ್ತಿಯುಳ್ಳವನು, ಗುರೂಪದೇಶ ದಿಂದ ನಿರ್ಮಲಜ್ಞಾನವನ್ನು ಪಡೆದು ಆಶ್ಚರ್ಯಜನಕ ವಿದ್ಯೆಗಳನ್ನು ತಿಳಿದುಕೊಂಡವನು.

ಇಲ್ಲಿಂದ ನಾಲ್ಕು ಪದ್ಯಗಳು ಋಷಭವೃತ್ತದಲ್ಲಿವೆ. ಇದೊಂದು ವಿಶೇಷವೃತ್ತ. ಇದರ ಹೆಸರು ಮತ್ತು ಲಕ್ಷಣಗಳು ಗಂಗಾದಾಸನ ಛಂದೋಮಂಜರಿಯಲ್ಲಿವೆ. ಇದರ ಗಣಗಳು ಸ–ಜ–ಸ–ಸ–ಯ.

226. There is purity associated with his clan, his descent, and his country. Though a man of great strength, he is humble and relishes staying at home. He obtained knowledge to distinguish between merits and demerits, gaining a wonderful knowledge of everything.

ಋಷಭ ಮದಮಾನಮಾಯಭಯಲೋಭವಿಷಾದಹರ್ಷಾ
ಭ್ಯುದಿತಾಂತರಂಗರಿಪುವರ್ಗಜಯಾವತಾರಂ
ವಿದಿತ ಸ್ವಧೀವಿಭವಭಾವಿತವಿಶ್ವಲೋಕಂ
ಬುಧರ್ಗೋತು ಕಾವನನುನೀತಗೃಹೀತವಾಕ್ಯಂ ೨೨೭

ಮದ ಮಾನ ಮಾಯ ಭಯ ಲೋಭ ವಿಷಾದ ಹರ್ಷ ಅಭ್ಯುದಿತ ಅಂತರಂಗ ರಿಪು ವರ್ಗ ಜಯಾವತಾರಮ್ ವಿದಿತ ಸ್ವಧೀವಿಭವ ಭಾವಿತ ವಿಶ್ವ ಲೋಕಮ್ ಬುಧರ್ಗೆ ಓರ್ತು ಕಾವನ್ ಅನುನೀತ ಗೃಹೀತ ವಾಕ್ಯಮ್

ಮದ, ಮಾನ, ಮಾಯೆ, ಭಯ, ಲೋಭ, ವಿಷಾದ, ಹರ್ಷ ಎಂಬ ಅಂತರಂಗದ ಶತ್ರುಗಳನ್ನು ಗೆದ್ದಿರುವ ಅವತಾರ ಪುರುಷನು. ಪ್ರಸಿದ್ಧವಾದ

ತನ್ನ ಬುದ್ಧಿ ವೈಭವದಿಂದ ವಿಶ್ವಲೋಕವನ್ನು ಪ್ರಭಾವಿಸಿದವನು. ಕೊಟ್ಟಮಾತಿನಂತೆ ನಡೆಯುವವನು, ವಿದ್ವಾಂಸರನ್ನು ಕಾಪಾಡುವವನು.

227. He is an incarnation of Victory over internal enemies that grow up from intoxication, egotism, cheating, fear, greed, dejection and excessive delight. He influenced the world with his intelligence, acts as he speaks, and affectionately protects scholars.

ಋಷಭ ಪರಮಾನುಭಾವನಭಿಮಾನಿ ವಿನೋದಶೀಲಂ
ವರನತ್ಯುದಾರಚರಿತೋದಯನೇಕರೂಪಂ
ಸರಸಾಶ್ರಯಪ್ರವರಮೂರ್ತಿ ಪರೋಪಕಾರಂ
ನಿರತಂ ಗುಣೋದಯನಕಾರಣಧುರ್ಯಮಿತ್ರಂ ೨೨೮

ಪರಮ ಅನುಭಾವನ್ ಅಭಿಮಾನಿ ವಿನೋದಶೀಲನ್ ವರನ್ ನತ್ಯುದಾರ ಚರಿತ ಉದಯನ್ ಏಕರೂಪನ್ ಸರಸ ಆಶ್ರಯ ಪ್ರವರ ಮೂರ್ತಿ ಪರೋಪಕಾರನ್ ನಿರತಮ್ ಗುಣೋದಯನ್ ಅಕಾರಣ ಧುರ್ಯ ಮಿತ್ರನ್

ಮಹಾನುಭಾವನು, ಅಭಿಮಾನವಂತನು, ವಿನೋದಶೀಲನು, ಶ್ರೇಷ್ಠನು, ಅತ್ಯುದಾರಚರಿತೋದಯನು, ಏಕರೂಪನು, ಸರಸರಿಗೆ ಆಶ್ರಯದಾತನಾದ ಉತ್ತಮ ಪುರುಷನು, ಪರೋಪಕಾರಿ, ಎಲ್ಲರಿಗೂ ಗುಣೋದಯನು, ಅಕಾರಣ ಮಿತ್ರವರ್ಯನು.

228. He is a great man, a person with great self-respect, who likes entertainment, is superior to others in good qualities and is compassionate. He follows custom and patronizes deserving people. He is a man of charity and a friend to all.

ಋಷಭ ಅಸಹಾಯಸಾಹಸವಿನೋದಿ ವಿವಿಕ್ತಚಿತ್ರ
ಪ್ರಸವಪ್ರಕಾಶಿತಮಹೋದಯ ತತ್ತ್ವಸತ್ತ್ವಂ

ವ್ಯಸನವ್ಯಪೇತನುಪನೀತಕಲಾಕಲಾಪಂ
ಶಶಿಖಂಡನಿರ್ಮಲಯಶೋವಿವಿಧಾವತಂಸಂ ೨೨೯

ಅಸಹಾಯ ಸಾಹಸ ವಿನೋದಿ ವಿವಿಕ್ತ ಚಿತ್ರ ಪ್ರಸವ ಪ್ರಕಾಶಿತ ಮಹೋದಯ ತತ್ತ್ವ ಸತ್ತ್ವನ್ ವ್ಯಸನ ವ್ಯಪೇತನ್ ಉಪನೀತ ಕಲಾಕಲಾಪನ್ ಶಶಿಖಂಡ ನಿರ್ಮಲ ಯಶೋ ವಿವಿಧ ಅವತಂಸನ್

ಅಸಹಾಯ ಸಾಹಸ ವಿನೋದಿ, ನಾನಾ ರೀತಿಯಲ್ಲಿ ವಿಚಿತ್ರ ರೂಪದಿಂದ ಪ್ರಕಟವಾಗುವ ಮಹಾಭ್ಯುದಯ ತತ್ತ್ವದ ಸತ್ತ್ವವುಳ್ಳವನು, ವ್ಯಸನವಿಲ್ಲದ ವನು, ಕಲಾಕಲಾಪಗಳನ್ನು ವಶಮಾಡಿಕೊಂಡವನು, ಚಂದ್ರರೇಖೆಯಂತೆ ನಿರ್ಮಲವಾದ ಯಶಸ್ಸೇ ಶಿರೋಭೂಷಣವಾಗಿರುವವನು.

229. He delights in adventure and does not seek the help of others. He is a powerful being who exhibits his accomplishments vividly and wondrously. He is devoid of bad habits and has full control over his artistic abilities. Fame, as an ornament on his head, looks like the crescent moon.

ಪುಷ್ಪಿತಾಗ್ರ ಪರಿವೃತನೃಪತುಂಗದೇವಮಾರ್ಗಾಂ
ತರಗತಬೋಧವಿಶೇಷಯಾನಪಾತ್ರಂ
ಪರಮಗುಣಪರೀತಕಾವ್ಯರತ್ನಾ
ಕರದುರು ಪಾರಮನೆಯ್ದುಗುಂ ಮಹಾತ್ಮಂ ೨೩೦

ಪರಿವೃತ ನೃಪತುಂಗದೇವ ಮಾರ್ಗಾಂತರ ಗತ ಬೋಧ ವಿಶೇಷಯಾನ ಪಾತ್ರಮ್ ಪರಮ ಗುಣ ಪರೀತ ಕಾವ್ಯರತ್ನಾಕರದುರು ಪಾರಮನ್ ಎಯ್ದುಗುನ್ ಮಹಾತ್ಮನ್

ನೃಪತುಂಗದೇವನ ಮಾರ್ಗದ ಅಂತರ್ವಿವೇಕದಿಂದ ವ್ಯಾಪ್ತವಾದ ವಿಶೇಷವಾದ ನೌಕೆಯ ರೂಪದ ಈ ಮಹಾತ್ಮನು ಪರಮಗುಣಗಳಿಂದ ತುಂಬಿರುವ ಕಾವ್ಯವೆಂಬ ಸಾಗರವನ್ನು ದಾಟಿ ದಡ ಸೇರುವನು.

230. A great person who could steer Nṛpatuṅgadēva's special ship, enlightening as it is, is able to reach the farther shore of poetry-like-an-ocean, which is filled with the best qualities.

ಮ.ವಿ. ನಿರವದ್ಯಾನ್ವಯಮುದ್ಧಮುದ್ಧತಮಹಾಕ್ಷೀರಾಬ್ಧಿಡಿಂಡೀರಪಾಂ
ಡುರಮಾಕ್ರಾಂತಸುಶೈಲಸಾಗರಧರಾಶಾಚಕ್ರವಾಳಾಂಬರಂ
ಪರಮ ಶ್ರೀವಿಜಯಪ್ರಭೂತಿಜಯಶಂ ಸ್ತ್ರೀಬಾಲವೃದ್ಧಾಹಿತಂ
ಪರಮಾನಂದಿತಲೋಕಮೊಪ್ಪೆ ನೆಲೆಗೊಳ್ಗಾಚಂದ್ರತಾರಂಬರಂ ೨೩೧

ನಿರವದ್ಯ ಅನ್ವಯಮ್ ಉದ್ಧಮ್ ಉದ್ಧತ ಮಹಾಕ್ಷೀರಾಬ್ಧಿ ಡಿಂಡೀರ ಪಾಂಡುರಮ್ ಆಕ್ರಾಂತ ಸುಶೈಲ ಸಾಗರ ಧರಾಶಾ ಚಕ್ರವಾಳ ಅಂಬರಮ್ ಪರಮ ಶ್ರೀವಿಜಯ ಪ್ರಭೂತಿಜಯಶಮ್ ಸ್ತ್ರೀ ಬಾಲ ವೃದ್ಧಾ ಹಿತಮ್ ಪರಮ ಆನಂದಿತ ಲೋಕಮ್ ಒಪ್ಪೆ ನೆಲೆಗೊಳ್ಗೆ ಆ ಚಂದ್ರತಾರಂಬರಮ್

ನಿಷ್ಕಳಂಕ ಸ್ವರೂಪವಿರುವ, ಶ್ರೇಷ್ಠವಾದ, ವಿಸ್ತಾರವಾದ ಮಹಾಕ್ಷೀರಸಾಗರದ ನೊರೆಯಂತೆ ಬೆಳ್ಳಗಿರುವ, ಪರ್ವತ, ಸಾಗರ, ಭೂಮಿ, ದಿಗಂತ, ಅಂತರಿಕ್ಷಗಳಲ್ಲಿ ವ್ಯಾಪಿಸಿರುವ ಪರಮ ಶ್ರೀವಿಜಯಪ್ರಭೂತವಾದ ಈ ಕೃತಿಯ ಯಶಸ್ಸು ಚಂದ್ರನೂ ನಕ್ಷತ್ರಗಳೂ ಇರುವವರೆಗೆ ಶಾಶ್ವತವಾಗಿ ನೆಲೆಗೊಳ್ಳಲಿ.

231. Śrīvijaya, with an unblemished nature that shines like the wide-stretched foam of the great milky ocean, has fame that pervades the mountains, the oceans, the Earth, all the directions, and space. Let this fame permanently endure, until the existence of the moon and the stars is no more, and let it make women, children and the aged enjoy life happily in the world.

This seems to be the final verse, added by someone as an epilogue (*phalaśṛuti*), a statement of the benefits accrued for reading the work. The other end-verses, composed in meters like *mālinī, gītike* (a native Kannada meter),

drutaviḷambita, maṇi-vibhūṣaṇa, maṅgaḷa-vṛttaṁ, ṛṣabha and *puṣpitāgra*, represent the practice of using a special meter at the end of each chapter and at the end of the entire literary work.

ಇದು ಪರಮಸರಸ್ವತೀ ತೀರ್ಥಾವತಾರ ನೃಪತುಂಗದೇವಾನುಮತಮಪ್ಪ
ಕವಿರಾಜಮಾರ್ಗದೊಳ್ ಅರ್ಥಾಲಂಕಾರಪ್ರಕರಣಂ ತೃತೀಯ ಪರಿಚ್ಛೇದಂ
ಕವಿರಾಜಮಾರ್ಗಂ ಸಮಾಪ್ತಂ

This is the end of the third chapter of the *Kavirājamārgaṁ*, which, with the approval of Nṛpatuṅgadēva, the Supreme personification of the auspicious Sarasvatī, describes the characteristic features of figures of Thought and Meaning (*arthālaṅkāra*)